₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಭಾನುವಾರ 06.10.2024 ಸಂಪುಟ: 9 ಸಂಚಿಕೆ: 286 ಪುಟಗಳು: 10+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಇರಾನಿ ಕಪ್ ಗೆದ್ದ ಮುಂಬೈ

ಶೇಷ ಭಾರತ ವಿರುದ್ಧದ ಇರಾನಿಕಪ್ ಪಂದ್ಯದಲ್ಲಿ ಮುಂಬೈ ತಂಡ 27 ವರ್ಷದ ಬಳಿಕ ಚಾಂಪಿಯನ್ ಪಟ್ಟಕ್ಕೇರಿದೆ. ಮೊದಲ ಇನ್ನಿಂಗ್ಸ್ ಮುನ್ನಡೆ ಆಧಾರದ ಮೇಲೆ ಮುಂಬೈ ತಂಡಕ್ಕೆ ಗೆಲುವು ಲಭ್ಯವಾಯಿತು. ಮುಂಬೈ ತಂಡ ಮೊದಲನೇ ಇನ್ನಿಂಗ್ಸ್‌ನಲ್ಲಿ 537, 2ನೇ ಇನ್ನಿಂಗ್ಸ್‌ನಲ್ಲಿ 329 ರನ್ ಗಳಿಸಿತ್ತು.

ಪುಟ ತೆರೆದಂತೆ...

ಇಸ್ರೇಲ್ ಪ್ರತೀಕಾರ ತೆಗೆದುಕೊಂಡರೆ, ಅದೇಕೆ ಮಹಾಪರಾಧವಾಗಿ ಕಾಣುತ್ತದೆ?
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
ಸಂ.ಪುಟ | 6

ನೀ ನನಗಾದರೆ ನಾ ನಿನಗೆ, ನನ್ನ ಸುದ್ದಿಗೆ ಬಂದರೆ...
ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
ಸಂ.ಗಮ | 7

ಮಾತಂದ್ರೆ ಮಾತು

ಕರ್ನಾಟಕದಲ್ಲಿ 10,000ಕ್ಕೂ ಹೆಚ್ಚು ಜನ ವಿದೇಶಿಗರಿದ್ದಾರೆ. ಅನೇಕರು ಡ್ರಗ್ಸ್ ಜಾಲಕ್ಕೆ ಸಿಲುಕಿಕೊಂಡಿದ್ದಾರೆ. ವಿದೇಶಿಗರನ್ನ ಪರ್ಮನೆಂಟ್ ಆಗಿ ಮಾನಿಟರ್ ಮಾಡುತ್ತಿದ್ದೇವೆ. ನೂರಕ್ಕೂ ಹೆಚ್ಚು ಜನರನ್ನು ಆಯಾ ದೇಶಕ್ಕೆ ವಾಪಸ್ ಕಳುಹಿಸುತ್ತೇವೆ. ಕೇಂದ್ರ ಸರಕಾರದ ಗುಪ್ತಚರ ಸಂಸ್ಥೆಗಳು ಏನು ಮಾಡುತ್ತಿವೆ? ರಾ, ಐಬಿಯವರು ವಿದೇಶಿಗರನ್ನು ಹಿಡಿದು ಹಾಕಬೇಕು.

ಡಾ. ಜಿ. ಪರಮೇಶ್ವರ್
ಗೃಹ ಸಚಿವ

ದಾರಿದೀಪೋಕ್ತಿ

ಬ್ಲೇಡ್ ಹರಿತವಾಗಿರುತ್ತದೆ. ಹಾಗೆಂದು ಅದರಿಂದ ಮರವನ್ನು ಕತ್ತರಿಸಲಾಗುವುದಿಲ್ಲ. ಕೊಡಲಿ ಬಲಿಷ್ಠವಾಗಿರುತ್ತದೆ. ಆದರೆ ಅದರಿಂದ ಕೂದಲನ್ನು ಕತ್ತರಿಸಲಾಗುವುದಿಲ್ಲ. ಯಾವ ಕೆಲಸಕ್ಕೆ ಯಾವುದನ್ನು ಬಳಸಬೇಕೋ ಅದನ್ನೇ ಬಳಸಬೇಕು. ಏನನ್ನು ಬಳಸಬೇಕು ಎಂಬ ಜಾಣ್ಮೆ ನಮಗಿರಬೇಕು.

ವಕ್ರತುಂಡೋಕ್ತಿ

ಅತಿ ಸಾಮಾನ್ಯ ಮತ್ತು ತೀರಾ ಸಹಜವಾಗಿರುವ 'ಲೈಂಗಿಕ ಕಾಯಿಲೆ'ಗೆ ಮಕ್ಕಳು ಎಂದು ಕರೆಯಬಹುದು.

ರೈತರ ಖಾತೆಗೆ ಹಣ

ದೆಹಲಿ: ಪ್ರಧಾನ ಮಂತ್ರಿ(ಪಿಎಂ) ಕಿಸಾನ್ ಸಮ್ಮಾನ್ ನಿಧಿ ಯೋಜನೆಯ 18ನೇ ಕಂತನ್ನು ಪ್ರಧಾನಿ ನರೇಂದ್ರ ಮೋದಿ ಶನಿವಾರ ಮಹಾರಾಷ್ಟ್ರದಲ್ಲಿ ಬಿಡುಗಡೆ ಮಾಡಿದ್ದು, ದೇಶದೆಲ್ಲೆಡೆಯ 9.4 ಕೋಟಿ ರೈತರ ಬ್ಯಾಂಕ್ ಖಾತೆಗಳಿಗೆ 20,000 ಕೋಟಿ ರು. ಜಮಾ ಆಗಿದೆ.

ಪ್ರತಿ ಜಿಲ್ಲೆಗೆ ವಕ್ಫ್ ಪಿಯು ಕಾಲೇಜು

ಬೆಂಗಳೂರು: ಅಲ್ಪಸಂಖ್ಯಾತರ ಸಮುದಾಯದ ಹೆಣ್ಣು ಮಕ್ಕಳ ಉನ್ನತ ಶಿಕ್ಷಣಕ್ಕೆ ಒತ್ತು ನೀಡಲು ವಕ್ಫ್ ಬೋರ್ಡ್ ವತಿಯಿಂದ ಪ್ರತಿ ಜಿಲ್ಲೆಯಲ್ಲೂ ಪಿಯು ಕಾಲೇಜು ಸ್ಥಾಪನೆ ಮಾಡಲಾಗು ವುದು ಎಂದು ಸಚಿವ ಜಮೀರ್ ಅಹ್ಮದ್ ಹೇಳಿದರು.

ಒಂದೇ ತಾಸಿನಲ್ಲಿ 600 ಜನರ ಹತ್ಯೆ

ಬುರ್ಕಿನಾ ಫಾಸೊ: ಆಫ್ರಿಕಾ ಖಂಡದ ಪೂರ್ವ ರಾಷ್ಟ್ರವಾದ ಬುರ್ಕಿನಾ ಫಾಸೊದಲ್ಲಿ ಆಗಸ್ಟ್ 24ರಂದು ಆಲ್ ಖೈದಾ, ಐಸಿಸ್ ಬೆಂಬಲಿತ ಜೆಎನ್‌ಐಎಂ ಉಗ್ರರು ಒಂದೇ ದಿನ 600ಕ್ಕೂ ಹೆಚ್ಚು ಜನರನ್ನು ಬರ್ಬರವಾಗಿ ಹತ್ಯೆಗೈದ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಸರ್ಕಾರಿ ಅಕ್ರಮ ಪತ್ತೆಗೆ ಎಐ ತಂತ್ರಜ್ಞಾನ ಬಳಕೆ
ಸುದ್ದಿ



ಕುರಿ ಕಾಯುವವರ ಮಗ ಎರಡನೇ ಬಾರಿ ಮುಖ್ಯಮಂತ್ರಿ ಆಗಿದ್ದೇ ತಪ್ಪಾ? | ನನ್ನ ಹೆಂಡತಿ ರಾಜಕೀಯಕ್ಕೆ ಬಂದವಳಲ್ಲ, ನನ್ನ ಮೇಲಿನ ಹೊಟ್ಟೆಕಿಚ್ಚಿಗಾಗಿ ಅವಳನ್ನೇ ಬೀದಿಗೆ ತಂದ್ರಲ್ಲ: ಮಾನ್ವಿ ದಮನಿತರ ಸಮಾವೇಶದಲ್ಲಿ ಬಿಜೆಪಿ ವಿರುದ್ಧ ಸಿಎಂ ಗರಂ

ಸ್ವಾಭಿಮಾನಿ ಸಮಾವೇಶ ಸಿದ್ದರಾಮಯ್ಯ ಶಕ್ತಿ ಪ್ರದರ್ಶನ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ರಾಯಚೂರು ಜಿಲ್ಲೆಯ ಮಾನ್ವಿಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾಂಗ್ರೆಸ್ ಪಕ್ಷದ ಸ್ವಾಭಿಮಾನಿ ಸಮಾವೇಶವು ಅಕ್ಷರಶಃ ಸಿಎಂ ಶಕ್ತಿ ಪ್ರದರ್ಶನದ ವೇದಿಕೆಯಾಗಿ ಮಾರ್ಪಟ್ಟಿತ್ತು. ಸಿಎಂ ಸಿದ್ದರಾಮಯ್ಯ ಭಾಷಣ ಶುರು ಮಾಡುತ್ತಿದ್ದಂತೆ ನೆರೆದಿದ್ದ ಸುಮಾರು 40 ಸಾವಿರಕ್ಕೂ ಹೆಚ್ಚು ಜನಸ್ತೋಮದಿಂದ ಶಿಳ್ಳೆ, ಚಪ್ಪಾಳೆ ಸಂಭ್ರಮ ಮುಗಿಲು ಮುಟ್ಟಿತ್ತು.

ಸಮಾವೇಶದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬಿಜೆಪಿ-ಜೆಡಿಎಸ್ ವಿರುದ್ಧ ವಾಗ್ದಾಳಿ ನಡೆಸುವುದರೊಂದಿಗೆ ತಪ್ಪು ಮಾಡದ ನನ್ನನ್ನು ಹಾಗೂ ರಾಜಕೀಯದಲ್ಲಿ ಎಂದೂ ತಲೆಹಾಕದ ತಮ್ಮ ಪತ್ನಿಯನ್ನು ಎಳೆದು ತಂದಿರುವುದಕ್ಕೆ ಬೇಸರ ವ್ಯಕ್ತಪಡಿಸಿದರು. ಬಿಜೆಪಿ-ಜೆಡಿಎಸ್‌ನವರ ಈ ಷಡ್ಯಂತ್ರವನ್ನು ಜನರೆಂದೂ ಕ್ಷಮಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಬಿಜೆಪಿ-ಜೆಡಿಎಸ್‌ನವರು ಪದೇ ಪದೆ ರಾಜೀನಾಮೆ ನೀಡುವಂತೆ ಆಗ್ರಹಿಸುತ್ತಿರುವುದನ್ನು ಪ್ರಸ್ತಾಪಿಸಿರುವ ಮುಖ್ಯಮಂತ್ರಿಗಳು, ಯಾವುದೇ ತಪ್ಪು ಮಾಡದಿದ್ದರೂ ರಾಜೀನಾಮೆ ಕೇಳುತ್ತಿದ್ದಾರೆ. ಕಾರಣವೇ ಇಲ್ಲದೆ ರಾಜೀನಾಮೆ ಕೊಡಿ, ರಾಜೀನಾಮೆ ಕೊಡಿ ಎನ್ನುತ್ತಿದ್ದಾರೆ. ನನಗೂ ಬೇಸರವಾಗಿದೆ.. ಸಾಕಾಗಿದೆ.. ಆದರೆ, ನಿಮಗಾಗಿ ನಾನು ಹೋರಾಟ ಮುಂದುವರಿಸಿದ್ದೇನೆ. ನಾನು ಅವರ (ಬಿಜೆಪಿ-ಜೆಡಿಎಸ್) ಬೆದರಿಕೆಗಳಿಗೆ ಜಗ್ಗುವುದಿಲ್ಲ, ಬಗ್ಗುವುದಿಲ್ಲ. ಹೋರಾಟ ಮುಂದುವರಿಸುವೆ ಎಂದರು.

ನನ್ನನ್ನು ಕೆಳಗಿಳಿಸುವ ಬಿಜೆಪಿ-ಜೆಡಿಎಸ್ ಷಡ್ಯಂತ್ರವನ್ನು ಸೋಲಿಸುತ್ತೇನೆ. ನಿಮ್ಮ ಆಶೀರ್ವಾದ ನನ್ನ ಮೇಲಿರಲಿ. ಬಿಜೆಪಿಗೆ ನೀವೂ ತಕ್ಕ ಪಾಠ ಕಲಿಸಬೇಕು ಎಂದು ಕರೆ ನೀಡಿದರು.

ಕೊಟ್ಟ ಕುದುರೆ ಏರಲಾರದ ಕುಮಾರಸ್ವಾಮಿ ವೀರನೂ ಅಲ್ಲ, ಶೂರನೂ ಅಲ್ಲ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದ ಜನರಿಗೆ ಸಹಾಯ ಮಾಡುವ ಅವಕಾಶವಿತ್ತು. ರಾಜ್ಯದ ಅಭಿವೃದ್ಧಿಗೂ ಅವಕಾಶವಿತ್ತು. ಅಧಿಕಾರ, ಅವಕಾಶವಿದ್ದಾಗ ಜನಪರ ಕೆಲಸ ಮಾಡದ ಕುಮಾರಸ್ವಾಮಿ ಮತ್ತು ಬಿಜೆಪಿಯವರು ಈಗ ನಮ್ಮ ಸರಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಸುಳ್ಳು ಮತ್ತು ಅಪಪ್ರಚಾರ ಮಾಡುತ್ತಿದ್ದಾರೆ.
- ಸಿದ್ದರಾಮಯ್ಯ

ಸಿಎಂ ಹೇಳಿದ್ದೇನು?

- ಮನೆಯಿಂದ ಆಚೆಗೆ ಬರದ ನನ್ನ ಪತ್ನಿಯನ್ನು ಎಳೆದು ತಂದಿದ್ದನ್ನು ಜನ ಕ್ಷಮಿಸುವರೇ?
- ಕುರಿ ಕಾಯುವವನ ಮಗ ಎರಡನೇ ಬಾರಿಗೆ ಮುಖ್ಯಮಂತ್ರಿ ಆಗಿದ್ದೇ ತಪ್ಪಾ?
- ಬಡ ಜನರಿಗೆ ನೆರವಾಗಲು ಐದೈದು ಗ್ಯಾರಂಟಿ ಜಾರಿಗೊಳಿಸಿದ್ದು ನಮ್ಮ ತಪ್ಪೇ?

ಜನಸಾಗರ

ಕಾರ್ಯಕ್ರಮದಲ್ಲಿ ಹಿಂದುಳಿದ ವರ್ಗದವರು, ದೀನದಲಿತರ, ಅಲ್ಪಸಂಖ್ಯಾತರ ವರ್ಗದವರ ಸ್ವಾಭಿಮಾನಿ ಸಮಾವೇಶವಾಗಿತ್ತು. ಸುಮಾರು 40 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದು, ಮೂರು ಕಿಮೀ ಉದ್ದದಕ್ಕೂ ಜನ ಸೇರಿದ್ದರು.

ಜಾತಿ ಗಣತಿ ಬಗ್ಗೆ ಚರ್ಚಿಸಿ ತೀರ್ಮಾನ

ಜಾತಿಗಣತಿಗೆ ಸಂಬಂಧಿಸಿದಂತೆ, ಒಳಮೀಸಲಿನ ಬಗ್ಗೆ ಸುಪ್ರೀಂಕೋರ್ಟ್ ಆದೇಶ ಪ್ರಕಟಿಸಿದ್ದು, ಒಳ ಮೀಸಲಿಗೆ ಸರಕಾರದ ವಿರೋಧವಿಲ್ಲ. ಆದರೆ ಇದರ ಬಗ್ಗೆ ವರಿಷ್ಠರೊಂದಿಗೆ ಹಾಗೂ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಲಾಗುವುದು. ಜಾತಿಗಣತಿ ವರದಿಯನ್ನು ಈಗಾಗಲೇ ಸ್ವೀಕರಿಸಲಾಗಿದ್ದು, ಈ ಬಗ್ಗೆ ಸಚಿವ ಸಂಪುಟ ಸಭೇಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗು ವುದು. ವರದಿಯಲ್ಲಿ ದೋಷಗಳಿದ್ದರೆ ಅದನ್ನು ಸರಿಪಡಿಸುವ ಬಗ್ಗೆಯೂ ಪರಿಶೀಲಿಸಲಾಗುವುದು ಎಂದರು.

ಮತ್ತೆ ಮಳೆ ಆರ್ಭಟ

ಬಳ್ಳಾರಿಯಲ್ಲಿ ನೀರಲ್ಲಿ ಮುಳುಗಿದ ಮೈನಿಂಗ್ ಲಾರಿಗಳು
12 ಜಿಲ್ಲೆಗಳಲ್ಲಿ 4 ದಿನ ಭಾರೀ ಮಳೆ, ಯೆಲ್ಲೋ ಅಲರ್ಟ್

ಸಂಡೂರಿನಲ್ಲಿ ಗಣಿ ಲಾರಿಗಳು ಭಾಗಶಃ ನೀರಿನಲ್ಲಿ ಮುಳುಗಡೆಯಾಗಿರುವುದು.

ಬೆಂಗಳೂರು: ರಾಜ್ಯದ ಬಹುತೇಕ ಕಡೆಗಳಲ್ಲಿ ಶುಕ್ರವಾರ ರಾತ್ರಿಯಿಂದ ಧಾರಾಕಾರ ಮಳೆಯಾಗುತ್ತಿದ್ದು, ಬೆಂಗಳೂರು ಸೇರಿದಂತೆ 12 ಜಿಲ್ಲೆಗಳಲ್ಲಿ ಮುಂದಿನ ನಾಲ್ಕು ದಿನಗಳ ಕಾಲ ಭಾರೀ ಮಳೆಯಾಗಲಿದೆ. ದಕ್ಷಿಣ ಒಳನಾಡಿನಲ್ಲಿ ಯಲ್ಲೋ ಅಲರ್ಟ್ ಘೋಷಿಸಲಾಗಿದೆ.

ರಾಜ್ಯ ಹೆಚ್ಚಿನ ಜಿಲ್ಲೆಗಳಲ್ಲಿ ಶನಿವಾರ ಭಾರಿ ಮಳೆಯಾಗಿದೆ. ಕಲ್ಯಾಣ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಜನಜೀವನ ಅಸ್ತವ್ಯಸ್ತವಾಗಿದೆ. ಚಿತ್ರದುರ್ಗ, ವಿಜಯನಗರ, ದಾವಣಗೆರೆ, ಕೊಡಗು, ಮೈಸೂರು, ಚಾಮರಾಜನಗರ, ಬೆಂಗಳೂರು ನಗರ, ಹಾಸನ, ಚಿಕ್ಕಮಗಳೂರು, ಮಂಡ್ಯ, ರಾಮನಗರ, ಶಿವಮೊಗ್ಗ ಜಿಲ್ಲೆಗಳ ಬಹುತೇಕ ಕಡೆ ಗುಡುಗು-ಮಿಂಚು ಸಹಿತ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಉತ್ತರ ಒಳನಾಡು ಜಿಲ್ಲೆ ಗಳಲ್ಲಿ ಸಾಧಾರಣ ಅಥವಾ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದ್ದು, ಕರಾವಳಿ ಕರ್ನಾಟಕದ ಜಿಲ್ಲೆಗಳಲ್ಲಿ ಹಲವೆಡೆ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಕರಾವಳಿ ಕರ್ನಾಟಕದಲ್ಲಿ ಮಳೆಯ ಪ್ರಮಾಣ ತಗ್ಗಿದ್ದು, ಅಲ್ಲಲ್ಲಿ ಸಾಧಾರಣ ಮಳೆಯಾಗಬಹುದು.

ಸುಳಿಗಾಳಿ ಎಫೆಕ್ಟ್‌ನಿಂದ ಮಳೆ: ಬಂಗಾಳ ಉಪಸಾಗರದಲ್ಲಿ ಸುಳಿಗಾಳಿ ಎಫೆಕ್ಟ್‌ನಿಂದ ಬೆಂಗಳೂರು ಸೇರಿ ಕರ್ನಾಟಕದಾದ್ಯಂತ ಇನ್ನೊಂದು ವಾರ ಮಳೆಯಾಗಲಿದೆ. ನಗರದಲ್ಲಿ ಅಕ್ಟೋಬರ್ 7 ರವರೆಗೆ ಸಾಧಾರಣ ಮಳೆಯಾಗಲಿದೆ ಎಂದು ಇತ್ತೀಚೆಗೆ ಹವಾಮಾನ ಇಲಾಖೆ ಎಚ್ಚರಿಕೆ ನೀಡಿತ್ತು. ಅದರ ಬೆನ್ನಲ್ಲೇ ಇದೀಗ ಕಳೆದ ಮೂರು ದಿನಗಳಿಂದ ನಗರದಲ್ಲಿ ಮಳೆ ಆಗುತ್ತಿದ್ದು, ಜನರು ಹೈರಾಣಾಗಿದ್ದಾರೆ.

→ 4

ಎಲ್ಲೆಲ್ಲಿ ಎಷ್ಟು ಮಳೆ?

ಮೈಸೂರು	20.0 ಮಿ.ಮೀ
ಪಣಂಬೂರು	7.9 ಮಿ.ಮೀ
ಬೆಂಗಳೂರು ಎಚ್‌ಎಎಲ್	6.1 ಮಿ.ಮೀ
ಬೆಂಗಳೂರು ನಗರ	2.0 ಮಿ.ಮೀ
ಗಂಗಾವತಿ	14.0 ಮಿ.ಮೀ
ಕೊಪ್ಪಳ	1.0 ಮಿ.ಮೀ
ಹನುಮನಮಟ್ಟಿ	0.5 ಮಿ.ಮೀ
ಹಾಸನ	10.0 ಮಿ.ಮೀ
ಮೂಡಿಗೆರೆ	5.5 ಮಿ.ಮೀ
ಮಂಗಳೂರು	4.0 ಮಿ.ಮೀ
ಹರದನಹಳ್ಳಿ	2.5 ಮಿ.ಮೀ
ಬೆಂಗಳೂರು ಅರ್ಬನ್	2.0 ಮಿ.ಮೀ

ದೇಶದ 22 ಕಡೆ ಎನ್‌ಐಎ ಶೋಧ, ದಾಖಲೆಗಳ ವಶ

ಉಗ್ರರಿಗೆ ನೆರವು: ರಾಷ್ಟ್ರವ್ಯಾಪಿ ದಾಳಿ

- ಜೈಶ್-ಎ-ಮೊಹಮ್ಮದ್ ಜತೆ ಸಂಪರ್ಕ ಹೊಂದಿದ್ದ ನಾಲ್ವರ ಬಂಧನ
- ಎರಡ್ಮೂರು ದಿನ ಶೋಧ ಕಾರ್ಯಾಚರಣೆ ಮುಂದುವರಿ ಯಬಹುದು

ದೆಹಲಿ: ಭಯೋತ್ಪಾದನೆಗಾಗಿ ನಿಧಿ ಸಂಗ್ರಹಿಸುವವರ ವಿರುದ್ಧ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಜಮ್ಮು-ಕಾಶ್ಮೀರ ಮತ್ತು ದೇಶದ 4 ರಾಜ್ಯಗಳಲ್ಲಿ ಶನಿವಾರ ವ್ಯಾಪಕ ಶೋಧ ನಡೆಸಿದೆ. ಜಮ್ಮು- ಕಾಶ್ಮೀರ, ಮಹಾರಾಷ್ಟ್ರ, ಉತ್ತರ ಪ್ರದೇಶ, ದೆಹಲಿ, ಅಸ್ಸಾಂನಲ್ಲಿ 22 ಸ್ಥಳಗಳ ಮೇಲೆ ಯೋಜಿತ ದಾಳಿ ನಡೆಸಿದೆ.

ಉಗ್ರ ಸಂಘಟನೆ ಜೈಶ್-ಎ-ಮೊಹಮ್ಮದ್ ಜತೆ ಸಂಪರ್ಕ ಹೊಂದಿದ್ದ ನಾಲ್ವರನ್ನು ದಾಳಿ ವೇಳೆ ಎನ್‌ಐಎ ಬಂಧಿಸಿದೆ. ಇಬ್ಬರನ್ನು ಮಹಾರಾಷ್ಟ್ರದ ಜಲ್ನಾ ಜಿಲ್ಲೆಯಲ್ಲಿ, ಒಬ್ಬನನ್ನು ಛತ್ರಪತಿ ಸಂಭಾಜಿ ನಗರದಲ್ಲಿ ಮತ್ತು ಮತ್ತೊಬ್ಬನನ್ನು ಮಾಲೆಗಾಂವ್‌ನಲ್ಲಿ ಬಂಧಿಸಲಾಗಿದೆ. ಜಮ್ಮು-ಕಾಶ್ಮೀರದ ಬಾರಾ ಮುಲ್ಲಾ ಮೇಲೆ ಎನ್‌ಐಎ ದಾಳಿ ಕೇಂದ್ರೀಕೃತವಾಗಿತ್ತು. ಅಲ್ಲಿ ಅಧಿಕಾ ರಿಗಳು ಭಯೋತ್ಪಾದಕ ಘಟನೆಗಳ ಬಗ್ಗೆ ತನಿಖೆ ನಡೆಸಿ ದಾಗ ದೆಹಲಿ, ಮಹಾರಾಷ್ಟ್ರ, ಉತ್ತರ ಪ್ರದೇಶ, ಅಸ್ಸಾಂನಲ್ಲಿ ಜೈಶ್-ಎ-ಮೊಹಮ್ಮದ್ ಸಂಬಂಧಿಸಿದ ಉಗ್ರರ ನಿಧಿ ಜಾಲ ಹರಡಿರುವುದು ಪತ್ತೆಯಾಯಿತು. ಉಗ್ರ ಚಟುವಟಿಕೆಗಳಿಗೆ ಹಣ ಒದಗಿಸುವ ಜಾಲ ನಾಶಪಡಿಸಲು ಎನ್‌ಐಎ ದಾಳಿ ಹಮ್ಮಿಕೊಂಡಿತು.

ಪಾಕಿಸ್ತಾನ ಜತೆಗೆ ದ್ವಿಪಕ್ಷೀಯ ಮಾತು ಇಲ್ಲ: ಜೈಶಂಕರ್



ದೆಹಲಿ: ಇಸ್ಲಾಮಾಬಾದ್‌ನಲ್ಲಿ ಅ.15, 16 ರಂದು ನಡೆಯಲಿರುವ ಶಾಂಘೈ ಸಹಕಾರ ಸಂಘಟನೆ (ಎಸ್‌ಸಿಒ) ಸಮಾವೇಶದಲ್ಲಿ ಭಾಗಿಯಾಗಲು ಹೋಗುತ್ತಿರುವೆ. ಆ ದೇಶದೊಂದಿಗೆ ಅಧಿಕೃತ ಮಾತುಕತೆ ನಡೆಸುವುದಕ್ಕಲ್ಲ. ಎಸ್‌ಸಿಒ ಸದಸ್ಯ ರಾಷ್ಟ್ರ ಭಾರತದ ಪರವಾಗಿ ನಾನು ಅಲ್ಲಿಗೆ ಹೋಗುತ್ತಿದ್ದೇನೆ ಅಷ್ಟೇ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಸ್ಪಷ್ಟಪಡಿಸಿದ್ದಾರೆ. ನೆರೆಹೊರೆ ದೇಶಗಳು ಉಗ್ರ ಚಟುವಟಿಕೆ ಮುಂದುವರಿಸಿದರೆ ಸಾರ್ಕ್‌ನಲ್ಲಿ ಸಹಜ ಚಟುವಟಿಕೆ ಸಾಧ್ಯವಿಲ್ಲ. ಇತ್ತೀಚಿನ ವರ್ಷಗಳಲ್ಲಿ ಸಾರ್ಕ್ ಸಭೆ ನಡೆಯದೇ ಇರಲು ಇದುವೇ ಪ್ರಮುಖ ಕಾರಣ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಿಮಾನ ನಿಲ್ದಾಣದಲ್ಲಿ ತಾಸುಗಟ್ಟಲೇ ಜನದಟ್ಟಣೆ | ಬುಕ್ಕಿಂಗ್ ವ್ಯವಸ್ಥೆ ಏರುಪೇರು

ಸರ್ವರ್ ಸಮಸ್ಯೆ: ಇಂಡಿಗೋಡೌನ್

ಬೆಂಗಳೂರು: ಇಂಡಿಗೋ ವಿಮಾನ ಯಾನ ಸಂಸ್ಥೆಯ ಸರ್ವರ್ ಶನಿವಾರ ಕೈಕೊಟ್ಟಿದ್ದರಿಂದ ದೇಶಾದ್ಯಂತ ಸಮಸ್ಯೆಯಾಗಿದೆ. ಬೆಂಗಳೂರಿನ ಕೆಂಪೇಗೌಡ ಏರ್‌ಪೋರ್ಟ್‌ನ ಟರ್ಮಿನಲ್ 1ರಲ್ಲಿ ಚೆಕ್ ಇನ್- ಚೆಕ್ ಔಟ್ ಆಗಲು ಸಾಧ್ಯವಾಗದೇ ಪ್ರಯಾಣಿಕರು ಪರದಾಡಿದರು. ಇದರಿಂದಾಗಿ ಕೆಲ ತಾಸು ಜನದಟ್ಟಣೆ ಉಂಟಾಗಿತ್ತು.

ಇಂಡಿಗೋ ಸಂಸ್ಥೆಯ ಸರ್ವರ್‌ನಲ್ಲಿ ಉಂಟಾದ ಸಮಸ್ಯೆಯಿಂದ, ಸಿಸ್ಟಂ ಸ್ಲೋಡೌನ್‌ನಿಂದಾಗಿ ವೆಬ್‌ಸೈಟ್ ಮತ್ತು ಬುಕಿಂಗ್ ವ್ಯವಸ್ಥೆಯಲ್ಲಿ ಭಾರಿ ಸಮಸ್ಯೆಯಾಗಿತ್ತು. ಇದರಿಂದಾಗಿ ನಿಧಾನಗತಿಯಲ್ಲಿ ಚೆಕ್-ಇನ್ ಮತ್ತು ಚೆಕ್ ಔಟ್‌ನಿಂದಾಗಿ ತೀವ್ರ ಸಮಸ್ಯೆಯಾಯಿತು. ಇದರಿಂದಾಗಿ ವಿಮಾನ ನಿಲ್ದಾಣದಲ್ಲಿ ದೊಡ್ಡ ಸರತಿ ಸಾಲು ಕಂಡು ಬಂದಿತು. ಚೆಕ್‌ಇನ್ ಸಮಸ್ಯೆಯಾಗಿದ್ದರಿಂದ ವಿಮಾನಗಳ ಟೇಕಾಫ್‌ನಲ್ಲಿಯೂ ಏರುಪೇರಾಗಿದ್ದರಿಂದ ಹಲವು ವಿಮಾನಗಳು ತಡವಾದವು. ಬೆಳಗ್ಗೆ 11 ಗಂಟೆಯಿಂದ ಸರ್ವರ್ ಸಮಸ್ಯೆ ಶುರುವಾಗಿ ಸಂಜೆ 4ರವರೆಗೆ ಮುಂದುವರಿದಿದ್ದು, ಸಮಯಕ್ಕೆ ಸರಿಯಾಗಿ ಪ್ರಯಾಣ ಮಾಡಲಾಗದೇ ಪ್ರಯಾಣಿಕರು ಕಂಗಾಲಾದರು.

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಂಡುಬಂದ ಜನದಟ್ಟಣೆ.

ಇಂಡಿಗೋ ಕ್ಷಮೆ

ತಾಂತ್ರಿಕ ಸಮಸ್ಯೆಯಿಂದ ಆಗಿರುವ ಸಮಸ್ಯೆಗೆ ವಿಷಾದಿಸುತ್ತೇವೆ. ಆದರೆ ನಮ್ಮ ತಂಡವು ಈ ಸಮಸ್ಯೆ ಬಗೆಹರಿಸಿ, ಸುಗಮ ಪ್ರಯಾಣವನ್ನು ಖಚಿತಪಡಿಸಿಕೊಳ್ಳಲು ಅಗತ್ಯ ಕ್ರಮವಹಿಸಿದೆ ಎಂದು ಸರ್ವರ್ ಸಮಸ್ಯೆಗೆ ಸಂಬಂಧಿಸಿದಂತೆ ಇಂಡಿಗೋ ಪ್ರತಿಕ್ರಿಯಿಸಿದೆ.

ಇದೇ ಮೊದಲಲ್ಲ

ಜುಲೈ 19ರಂದು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣನಲ್ಲಿ ಸರ್ವರ್ ಸಮಸ್ಯೆಯಿಂದ ನಾಲ್ಕು ಗಂಟೆಗಳ ಕಾಲ ಪ್ರಯಾಣಿಕರು ಪರದಾಡಿದ್ದರು. ಇಂಡಿಗೋ, ಆಕಾಶ್, ಸ್ಪೈಸ್ ಜೆಟ್, ಏರ್ ಇಂಡಿಯಾ ಎಕ್ಸ್‌ಪ್ರೆಸ್ ಏರ್‌ಲೈನ್ಸ್ ಸಂಸ್ಥೆಗಳಲ್ಲಿ ತೊಂದರೆ ಉಂಟಾಗಿತ್ತು.

ಚುನಾವಣೋತ್ತರ ಸಮೀಕ್ಷೆ: ಎರಡು ರಾಜ್ಯಗಳಲ್ಲೂ ಇಂಡಿಯ ಪರ ಒಲವು ವ್ಯಕ್ತ

ಹರಿಯಾಣದಲ್ಲಿ ಕಾಂಗ್ರೆಸ್‌ನತ್ತ ಒಲವು ಜಮ್ಮು-ಕಾಶ್ಮೀರ ಕೈ-ಎನ್‌ಸಿಗೆ ಬೆಂಬಲ

ಹರಿಯಾಣ ರಾಜಕಾರಣ

ವಿಧಾನಸಭೆ 2019

ಒಟ್ಟು ಸ್ಥಾನಗಳು	90
ಬಿಜೆಪಿ	40
ಕಾಂಗ್ರೆಸ್	31
ಜೆಜೆಪಿ	10
ಇತರರು	09

ಲೋಕಸಭೆ 2024

ಒಟ್ಟು ಕ್ಷೇತ್ರಗಳು	10
ಬಿಜೆಪಿ	05
ಕಾಂಗ್ರೆಸ್	05

ಶ್ರೀನಗರ/ಚಂಡೀಗಢ: ಕೇಂದ್ರಾಡಳಿತ ಪ್ರದೇಶ ಜಮ್ಮು-ಕಾಶ್ಮೀರದಲ್ಲಿ 3 ಹಂತಗಳಲ್ಲಿ ಮತದಾನ ಅದಾಗಲೇ ಪೂರ್ಣಗೊಂಡಿದೆ. ಹರಿಯಾಣದಲ್ಲಿ ಶನಿವಾರ ಶೇ.63ಕ್ಕೂ ಅಧಿಕ ಪ್ರಮಾಣದಲ್ಲಿ ಮತದಾನವಾಗಿದೆ. ಅ.8ರ ಬೆಳಗ್ಗೆ 7ರ ವೇಳೆಗೆ ಎರಡೂ ಚುನಾವಣೆಗಳ ಮತ ಎಣಿಕೆ ಶುರುವಾಗಲಿದ್ದು, ಮಧ್ಯಾಹ್ನ ವೇಳೆಗೆ ಅಂತಿಮ ಫಲಿತಾಂಶ ಪ್ರಕಟವಾಗಲಿದೆ.

ಈ ಮಧ್ಯೆ, ಕೆಲವು ರಾಜಕೀಯ ಸಮೀಕ್ಷಾ ಕೇಂದ್ರಗಳು, ಮಾಧ್ಯಮ ಸಂಸ್ಥೆಗಳು ಚುನಾವಣೋತ್ತರ ಸಮೀಕ್ಷೆ ನಡೆಸಿವೆ. ಒಂದು ಸಮೀಕ್ಷೆ ಪ್ರಕಾರ ಹರಿಯಾಣದಲ್ಲಿ ಕಾಂಗ್ರೆಸ್ ಪರ ಮತದಾರರ ಒಲವು ವ್ಯಕ್ತವಾಗಿದೆ. ಜಮ್ಮು-ಕಾಶ್ಮೀರದಲ್ಲಿಯೂ ಕಾಂಗ್ರೆಸ್ ಮತ್ತು ನ್ಯಾಷನಲ್ ಕಾನ್ಫರೆನ್ಸ್ ಪಕ್ಷಗಳ ಮೈತ್ರಿಕೂಟದ ಪರವೇ ಮತದಾರರು ಆಸಕ್ತಿ ತೋರಿದ್ದಾರೆ ಎಂಬ ಸಮೀಕ್ಷಾ ವರದಿ ಲಭ್ಯವಾಗಿದೆ. ಹರಿಯಾಣದ ಪರಿಸ್ಥಿತಿ ಅವಲೋಕಿಸು ವುದಾದರೆ ಸತತ ಎರಡು ಅವಧಿಗೆ ರಾಜ್ಯವಾಳಿದ ಭಾರತೀಯ ಜನತಾ ಪಕ್ಷ(ಬಿಜೆಪಿ), ಹಿಡಿತ ಸಡಿಲವಾದಂತೆ ಕಾಣುತ್ತಿದೆ. 2019ರ ಚುನಾ ವಣೆಯಲ್ಲಿ ರಾಜ್ಯದಲ್ಲಿನ 10ಕ್ಕೆ ಹತ್ತೂ ಲೋಕಸಭಾ ಕ್ಷೇತ್ರ ಗಳಲ್ಲಿ ಜಯ ಸಾಧಿಸಿದ್ದ ಬಿಜೆಪಿ, ಈ ವರ್ಷ ನಡೆದ ಲೋಕಸಭಾ ಚುನಾ ವಣೆಯಲ್ಲಿ ಕೇವಲ 5 ಕ್ಷೇತ್ರಗಳಲ್ಲಷ್ಟೇ ಗೆಲ್ಲಲು ಸಾಧ್ಯವಾ ಯಿತು. ಉಳಿದ 5 ಲೋಕಸಭಾ ಕ್ಷೇತ್ರಗಳನ್ನು ಕಾಂಗ್ರೆಸ್ ಗೆದ್ದುಕೊಂಡಿತು.

→ 4

ಪೀಪಲ್ಸ್ ಪಲ್ಸ್ ಸಮೀಕ್ಷೆ

ಪಕ್ಷ	ಹರಿಯಾಣ	ಜಮ್ಮು-ಕಾಶ್ಮೀರ
ಕಾಂಗ್ರೆಸ್	49-61	46-50
ಬಿಜೆಪಿ	20-32	23-27

ಇಂಡಿಯ ಟುಡೆ ಸಮೀಕ್ಷೆ

ಪಕ್ಷ	ಹರಿಯಾಣ	ಜಮ್ಮು-ಕಾಶ್ಮೀರ
ಕಾಂಗ್ರೆಸ್	-	40-48
ಬಿಜೆಪಿ	-	27-32
ಪಿಡಿಪಿ	-	6-12
ಇತರರು	-	6-11

ಆಕ್ಸಿಸ್ ಮೈ ಇಂಡಿಯ ಸಮೀಕ್ಷೆ

ಪಕ್ಷ	ಹರಿಯಾಣ	ಜಮ್ಮು-ಕಾಶ್ಮೀರ
ಕಾಂಗ್ರೆಸ್	-	ಶೇ.41 ಮತ
ಬಿಜೆಪಿ	-	
ಪಿಡಿಪಿ	-	ಶೇ.18 ಮತ

ಬಿಜೆಪಿ ಹ್ಯಾಟ್ರಿಕ್ ಕನಸು ಭಗ್ನ ಸಂಭವ

ಹರಿಯಾಣ ವಿಧಾನಸಭೆಗೆ 2019ರಲ್ಲಿ ನಡೆದ ಚುನಾವಣೆಯಲ್ಲಿ ಸರಕಾರ ರಚನೆಗೆ ಬೇಕಾದ 46 ಕ್ಷೇತ್ರಗಳನ್ನು ಗೆಲ್ಲಲಾಗದ ಬಿಜೆಪಿ(40 ಸ್ಥಾನ ಜಯ), ಬಳಿಕ ಜನನಾಯಕ್ ಜನತಾ ಪಾರ್ಟಿ(ಜೆಜೆಪಿ)ಯ ಬೆಂಬಲ(10 ಸ್ಥಾನ) ಪಡೆದು ಸರಕಾರ ರಚಿಸಬೇಕಾಯಿತು. ಮನೋಹರ ಲಾಲ್ ಖಟ್ಟರ್ ಸಿಎಂ ಆದರೆ, ಜೆಜೆಪಿ ಮುಖಂಡ ದುಶ್ಯಂತ್ ಸಿಂಗ್ ಚೌತಾಲರನ್ನು ಡಿಸಿಎಂ ಸ್ಥಾನ ಪಡೆದರು. ಆದರೆ, ಇದೇ ವರ್ಷದ ಮಾರ್ಚ್‌ನಲ್ಲಿ ಖಟ್ಟರ್ ಬದಲು ನಯಾಬ್ ಸಿಂಗ್ ಸೈನಿ ಅವರನ್ನು ಬಿಜೆಪಿ ಸಿಎಂ ಪಟ್ಟಕ್ಕೇರಿಸಿದಾಗ ಜೆಜೆಪಿ ಜತೆಗಿನ ಮೈತ್ರಿ ಕೊನೆಗೊಂಡಿತು.

ಸಿಎಂ ಕಾರ್ಯದರ್ಶಿಯಾಗಿ ಬಿ.ಬಿ.ಕಾವೇರಿ ವರ್ಗಾವಣೆ

ಬೆಂಗಳೂರು: ಶಾಲಾ ಶಿಕ್ಷಣ ಇಲಾಖೆ ಆಯುಕ್ತರಾಗಿದ್ದ ಬಿ.ಬಿ. ಕಾವೇರಿ ಅವರನ್ನು ಮುಖ್ಯಮಂತ್ರಿ ಕಾರ್ಯದರ್ಶಿ ಹುದ್ದೆಗೆ ವರ್ಗಾಯಿಸಲಾಗಿದೆ. ಈ ಸ್ಥಾನದಲ್ಲಿದ್ದ ತ್ರಿಲೋಕ್‌ಚಂದ್ರ ಅವರನ್ನು ಶಾಲಾ ಶಿಕ್ಷಣ ಇಲಾಖೆ ಆಯುಕ್ತರನ್ನಾಗಿ ವರ್ಗಾಯಿಸಲಾಗಿದೆ. ತ್ರಿಲೋಕ್ ಚಂದ್ರ ಅವರಿಗೆ ಹೆಚ್ಚುವರಿಯಾಗಿ ನೀಡಲಾಗಿದ್ದ ವಾರ್ತಾ ಇಲಾಖೆಯ ಹೊಣೆಯನ್ನೂ ಕಾವೇರಿ ಅವರಿಗೆ ನೀಡಲಾಗಿದೆ. ಇನ್ನುಳಿದಂತೆ ಸುಧೀರ್ ಕುಮಾರ್‌ರೆಡ್ಡಿ ಅವರನ್ನು ಗುಪ್ತಚರ ಇಲಾಖೆ ಡಿಐಜಿಯಾಗಿ ವರ್ಗಾಯಿಸಲಾಗಿದೆ.

ಚುನಾವಣಾ ಬಾಂಡ್ ರದ್ದು ಮರುಪರಿಶೀಲನೆಗೆ ನಕಾರ

ದೆಹಲಿ: ಚುನಾವಣಾ ಬಾಂಡ್‌ಗಳ ಯೋಜನೆಯನ್ನು ರದ್ದುಪಡಿಸಿದ ಫೆ.15 ರ ತೀರ್ಪನ್ನು ಪ್ರಶ್ನಿಸುವ ಮರುಪರಿಶೀಲನಾ ಅರ್ಜಿಯನ್ನು ಸುಪ್ರೀಂಕೋರ್ಟ್ ತಿರಸ್ಕರಿಸಿದೆ. ಸಿಜೆಐ ಡಿವೈ ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಬಿ. ಆರ್.ಗವಾಯಿ, ಜೆ.ಬಿ.ಪರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರಿದ್ದ ಪೀಠವು, ವಕೀಲ ಮ್ಯಾಥ್ಯೂಸ್ ಜೆ.ನೆಡುಂಪಾರ ಅವರು ಸಲ್ಲಿಸಿದ್ದ ಮರುಪರಿಶೀಲನಾ ಅರ್ಜಿಯನ್ನು ವಜಾಗೊಳಿಸಿದೆ. ಫೆಬ್ರವರಿ 15 ರಂದು ಸುಪ್ರೀಂ ಕೋರ್ಟ್ ಚುನಾವಣಾ ಬಾಂಡ್ ಯೋಜನೆಯನ್ನು ಸರ್ವಾನುಮತದಿಂದ ರದ್ದುಗೊಳಿಸಿತ್ತು.

ವಿಶ್ವವಾಣಿ
ದಸರಾ ಸಂಭ್ರಮ

ಗೊಂಬೆ ಕೂರಿಸಿದ್ದೀರಾ?

ದಸರಾ ಹಬ್ಬದ ವೇಳೆ ಮನೆಯಲ್ಲಿ ಗೊಂಬೆಗಳನ್ನು ಕೂರಿಸುವುದು ವಿಶೇಷ. ಮೈಸೂರು ಭಾಗದ ಈ ವಿಶಿಷ್ಟ ಸಂಪ್ರದಾಯ ಈಗ ನಾಡಿನುದ್ದಕ್ಕೂ ಪ್ರಚಲಿತದಲ್ಲಿದೆ. ನೀವು ಮನೆಯಲ್ಲಿ ಗೊಂಬೆ ಕೂರಿಸಿದ್ದೀರಾ? ನಿಮ್ಮ ಮನೆಯ ಗೊಂಬೆಗಳ ಸಾಲಿನ ಅಂದವಾದ ಫೋಟೋ ತೆಗೆದು ನಮಗೆ ವಾಟ್ಸ್ ಆ್ಯಪ್ ಮಾಡಿ. ನವರಾತ್ರಿ ಸಂಭ್ರಮವನ್ನು ವಿಶ್ವವಾಣಿ ಓದುಗರೊಂದಿಗೆ ಹಂಚಿಕೊಳ್ಳಿ.

ನಿಬಂಧನೆಗಳು
1) ಗುಣಮಟ್ಟದ ಒಂದು ಫೋಟೋ ಮಾತ್ರ ಸಾಕು, ಒಂದಕ್ಕಿಂತ ಹೆಚ್ಚು ಫೋಟೋಗಳು ಬೇಡ.
2) ನಿಮ್ಮ ಫೋಟೋ ಜತೆ ಬೊಂಬೆಗಳ ಸಾಲು ಪೂರ್ತಿ ಕಾಣುವಂತಿರಲಿ,
3) ನಿಮ್ಮ ಹೆಸರು, ವಿಳಾಸದ ಜತೆ ಎಷ್ಟು ವರ್ಷಗಳಿಂದ ಬೊಂಬೆ ಇಡುತ್ತಿದ್ದೀರಿ ಎಂಬ ಮಾಹಿತಿ ಇರಲಿ
4) 8/10/2024ರ ಮಂಗಳವಾರ ಸಂಜೆ 5 ಗಂಟೆಯೊಳಗೆ ಗೊಂಬೆ ಫೋಟೋಗಳನ್ನು ಕಳುಹಿಸಿಕೊಡಿ

ವಿಶ್ವವಾಣಿ ವಾಟ್ಸ್ ಆ್ಯಪ್ ನಂಬರ್
63623 93988

ಮತ್ತೆ 14 ದಿನ ನ್ಯಾಯಾಂಗ ಬಂಧನ

ಮುನಿರತ್ನಗೆ ಜೈಲೇ ಗತಿ

ಬೆಂಗಳೂರು: ಅತ್ಯಾಚಾರ ಪ್ರಕರಣದಲ್ಲಿ ಬಂಧಿತವಾಗಿರುವ ಬಿಜೆಪಿಯ ರಾಜರಾಜೇಶ್ವರಿ ನಗರದ ಶಾಸಕ ಮುನಿರತ್ನ ಅವರನ್ನು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ಮ್ಯಾಜಿಸ್ಟ್ರೇಟ್ ನ್ಯಾಯಾಲಯ 14 ದಿನ ನ್ಯಾಯಾಂಗ ಬಂಧನಕ್ಕೆ ನೀಡಿದೆ.

ಕಳೆದ 10 ದಿನಗಳಿಂದ ವಿಶೇಷ ತನಿಖಾ ತಂಡದ (ಎಸ್‌ಐಟಿ) ಕಸ್ಟಡಿಯಲ್ಲಿದ್ದ ಮುನಿರತ್ನರನ್ನು ಮ್ಯಾಜಿಸ್ಟ್ರೇಟ್ ಕೆ.ಎನ್. ಶಿವಕುಮಾರ್ ಅವರು ಶನಿವಾರ 14 ದಿನ ನ್ಯಾಯಾಂಗ ಬಂಧನಕ್ಕೆ ನೀಡಿದರು. ಲಂಚ ಬೇಡಿಕೆ ಮತ್ತು ಜಾತಿ ನಿಂದನೆ ಪ್ರಕರಣಗಳಲ್ಲಿ ಜಾಮೀನು ಪಡೆದು ಹೊರಬರುತ್ತಿದ್ದಂತೆ ಎಸ್‌ಐಟಿ ಮುನಿರತ್ನರನ್ನು ವಶಕ್ಕೆ ಪಡೆದಿತ್ತು.

ಬಳಿಕ ನ್ಯಾಯಾಲಯ ಮುನಿರತ್ನ ಅವರನ್ನು ಹತ್ತು ದಿನ ಎಸ್‌ಐಟಿ ಕಸ್ಟಡಿಗೆ ನೀಡಿತ್ತು. ಇಂದು ಕಸ್ಟಡಿ ಅವಧಿ ಮುಗಿದ ಹಿನ್ನೆಲೆ ನ್ಯಾಯಾಲಯವು ಮುನಿರತ್ನರನ್ನು ನ್ಯಾಯಾಂಗ ಬಂಧನಕ್ಕೆ ನೀಡಿದೆ.

ಮುನಿರತ್ನ ವಿರುದ್ಧದ ಪ್ರಕರಣಗಳ ತನಿಖೆಗಾಗಿ ರಾಜ್ಯ ಸರಕಾರವು ಸೆಪ್ಟೆಂಬರ್ 21ರಂದು ಎಸ್‌ಐಟಿ ರಚಿಸಿದೆ. ಬಿಬಿಎಂಪಿ ಮಾಜಿ ಸದಸ್ಯ ವೇಲುನಾಯ್ಕರ್ ದಾಖಲಿಸಿರುವ ಜಾತಿ ನಿಂದನೆ, ಗುತ್ತಿಗೆದಾರ ಚೆಲುವರಾಜುವಿಗೆ ಲಂಚಕ್ಕೆ ಬೇಡಿಕೆ ಮತ್ತು ಬೆದರಿಕೆ ಹಾಕಿದ ಸಂಬಂಧ ಬೆಂಗಳೂರಿನ ವೈಯಾಲಿಕಾವಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅತ್ಯಾಚಾರ ಆರೋಪ ಸಂಬಂಧ ರಾಮನಗರದ ಕಗ್ಗಲೀಪುರ ಠಾಣೆಯಲ್ಲಿ ಮುನಿರತ್ನ ಮತ್ತು ಇತರ ಐವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ನಕಲಿ ಬಿಲ್ ಸೃಷ್ಟಿಸಿ ಸರಕಾರಕ್ಕೆ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ಪ್ರಕರಣಗಳನ್ನು ಎಸ್‌ಐಟಿಗೆ ನೀಡಲಾಗಿದೆ. ಜಾತಿನಿಂದನೆ ಮತ್ತು ಲಂಚಕ್ಕೆ ಬೇಡಿಕೆ ಹಾಕಿರುವ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಈಗಾಗಲೇ ಮುನಿರತ್ನಗೆ ಜಾಮೀನು ದೊರೆತಿದೆ. ಅತ್ಯಾಚಾರ ಪ್ರಕರಣದಲ್ಲಿ ಜಾಮೀನು ಕೋರಿರುವ ಅರ್ಜಿಯು ವಿಚಾರಣಾ ಹಂತದಲ್ಲಿದೆ.

ಮೆ॥ ಇಂಡಿಪೆಂಡೆಂಟ್ ಟಿವಿ ಲಿಮಿಟೆಡ್ (ಲಿಕ್ವಿಡೇಶನ್‌ನಲ್ಲಿ)
(CIN: U45203MH2005PLC153294)
ನೋಂ. ಸಿಡಿ ವಿಳಾಸ: ಹೆಚ್ ಬ್ಲಾಕ್, 1ನೇ ಮಹಡಿ, ಧೀರೂಭಾಯಿ ಅಂಬಾನಿ ನಾಲೆಡ್ಜ್ ಸಿಟಿ, ನವಿ ಮುಂಬಯಿ–400710
ಲಿಕ್ವಿಡೇಟರ್: ಅನುಪ್ ಕುಮಾರ್
ಲಿಕ್ವಿಡೇಟರ್‌ರ ನೋಂ. ವಿಳಾಸ: ಛೇಂಬರ್ ನಂ. 734, ಪಶ್ಚಿಮದ ವಿಂಗ್ ತೀಸ್ ಹಜಾರಿ ಕೋರ್ಟ್, ದೆಹಲಿ–110054
ಲಿಕ್ವಿಡೇಟರ್‌ರ ಸಂವಹನ ವಿಳಾಸ: ಸಿ–708, 1 ಥಮ್ ಟವರ್–ಸಿ, ಪ್ಲಾಟ್ ನಂ. ಎ40
ಸೆಕ್ಟರ್–62, ನೊಯ್ಡಾ, ಉಪ್ರ–201301.
ಇ–ಮೇಲ್: liq.itvl@gmail.com | ಸಂಪರ್ಕ ಸಂಖ್ಯೆ: 0120-6870711 & 8929015290

ಇ–ಹರಾಜು ಮಾರಾಟ ಸೂಚನೆ ದಿನಾಂಕ 05.09.2024 ಕ್ಕೆ ತಿದ್ದುಪಡಿ – ದಿನಾಂಕಗಳಲ್ಲಿ ಬದಲಾವಣೆ

ಐಬಿಬಿಐ ಯ ನಿಯಂತ್ರಣ, 2016ರ ನಿಯಂತ್ರಣ 32(ಎ) ಯಿಂದ (ಡಿ) (ಲಿಕ್ವಿಡೇಶನ್ ಪ್ರಕ್ರಿಯೆ) ಅಡಿ ಕಂಪನಿಯ ಸ್ವತ್ತುಗಳ ಮಾರಾಟದ ಬಗ್ಗೆ ಈ ಮೊದಲು 05.09.2024 ರಂದು ನೀಡಲಾದ ಸೂಚನೆಗೆ ಸಂಬಂಧಿಸಿದಂತೆ, ಸ್ವತ್ತುಗಳ ಮಾರಾಟ (ಹೆಚ್ ಬ್ಲಾಕ್, 1ನೇ ಮಹಡಿ ಧೀರೂಭಾಯಿ ಅಂಬಾನಿ ನಾಲೆಡ್ಜ್ ಸಿಟಿ, ನವಿ ಮುಂಬಯಿ–400710 ಮತ್ತು ವೈಟ್‌ಫೀಲ್ಡ್ ಹೌಸ್, ಬೆಂಗಳೂರು) ವು ಮೆ॥ ಇಂಡಿಪೆಂಡೆಂಟ್ ಟಿವಿ ಲಿಮಿಟೆಡ್ ನ ಇ–ಹರಾಜು ಪ್ಲಾಟ್‌ಫಾರಂ https://right2vote.in/eauction/ "ಎಲ್ಲಿ ಹೇಗಿದೆಯೋ ಹಾಗೆ", "ಏನು ಇದೆಯೋ ಹಾಗೆ", "ಏನಿದೆಯೋ ಹಾಗೆ ಆಧಾರದ ಮೇಲೆ", ಮತ್ತು "ಯಾವುದೇ ಅವಲಂಬನೆ ಇಲ್ಲದೆ", ಈ ಕೆಳಗಿನ ಪರಿಷ್ಕೃತ ಸಮಯದಲ್ಲಿ ಮಾರಾಟ ಮಾಡಲಾಗುವುದು.

ಕ್ರ ಸಂ	ವಿವರಗಳು	ಅವಧಿ (ದಿನಗಳು)	ವಿಸ್ತರಣೆಯಾಗಿರುವುದು
1.	ಸೈಟ್ ಭೇಟಿ/ಪರಿವೀಕ್ಷಣೆ, ಬಾಕಿ ಡಿಲಿಜೆನ್ಸ್ ಮತ್ತು ದಾಖಲೆ ಮತ್ತು ಮಾಹಿತಿಗೆ ಮನವಿ (ಅರ್ಹ ಬಿಡ್ಡುದಾರರಿಗೆ ಮಾತ್ರ ಬಿಡ್ಡುದಾರರಿಂದ ನೀಡಲಾದ ಬಿಡ್ ಅರ್ಜಿಯ ನಮೂನೆ ಜೊತೆಗೆ ಅಫಿಡವಿಟ್ ಕಮ್ ಅಂಡರ್‌ಟೇಕಿಂಗ್ ಮತ್ತು ಕೆವೈಸಿ ಯ ಆಕ್ಸೆಸ್ ನೀಡಲಾಗುವುದು)	29.09.2024	29.10.2024
2.	ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ಸಲ್ಲಿಕೆ	04.10.2024	04.11.2024
3.	ಇ–ಹರಾಜು ದಿನಾಂಕ	07.10.2024	07.11.2024

**ವಿವರಗಳಿಗಾಗಿ ಮಾರಾಟ ಸೂಚನೆ https://right2vote.in/eauction/ ಯನ್ನು ಆಧಾರ ಮಾಡಿಕೊಳ್ಳಿ
ಅನುಪ್ ಕುಮಾರ್
ದಿನಾಂಕ: 06.10.2024
ಲಿಕ್ವಿಡೇಟರ್, ಮೆ॥ ಇಂಡಿಪೆಂಡೆಂಟ್ ಟಿವಿ ಲಿಮಿಟೆಡ್
ಸ್ಥಳ: ದೆಹಲಿ
IBBI REGD. NO. : IBBI/IPA-002/IP-N00333/2017-18/10911

ತುಮಕೂರು ವೀರಶೈವ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಮುಖ್ಯ ಕಛೇರಿ ; ಡಾ॥ ಎಸ್. ರಾಧಾಕೃಷ್ಣನ್ ರಸ್ತೆ, ಎಸ್. ಎಸ್. ಪುರಂ, ತುಮಕೂರು–572102,
ದೂ. : 0816 – 2254027, E-Mail : tvcbank@gmail.com,Website : www.tvcbltd.com

ಇವರಿಗೆ,
(1) **ಶ್ರೀಮತಿ. ಪುನೀತ ಮುನೇಶ** ಕೋಂ ಮುನೇಶ ವೆಂಕಟ್, ನಂ.12, 11ನೇ ಕ್ರಾಸ್, ಕಗ್ಗದಾಸಪುರ ಮುಖ್ಯರಸ್ತೆ, ಸಿ.ವಿ.ರಾಮನ್ ನಗರ, ಬೆಂಗಳೂರು–560093, **ಮತ್ತೊಂದು ವಿಳಾಸ** : ನಂ.106, ತನಿಷ್ಕಾ ಮ್ಯಾನ್‌ಷನ್, ಆನಂದನಗರ, 1ನೇ ಮುಖ್ಯರಸ್ತೆ, ಮಾರತಹಳ್ಳಿ, ಬೆಂಗಳೂರು–560037
ಆತ್ಮೀಯ ಸರ್/ಮೇಡಂ,
ಷೆಡ್ಯೂಲ್ ಸ್ವತ್ತಿನ ವಿವರ: ಐಟಂ ನಂ.1 : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಭೂಮಿ ಮತ್ತು ಕಟ್ಟಡದ ನಿವೇಶನ ನಂ. 54, ಹಳೆ ನಂ. 69/2, ನಂತರ ನಂ. 205/2, ಬಿಬಿಎಂಪಿ ನಂ. 54, ಪಿಐಡಿ ನಂ. 83–53–54, ಈ ಆಸ್ತಿಯು ಕಗ್ಗದಾಸಪುರ ಮುಖ್ಯರಸ್ತೆ, ಕೆ.ಆರ್.ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಹಿಂದಿನ ಬೆಂಗಳೂರು ದಕ್ಷಿಣ ತಾಲ್ಲೂಕು, ಪ್ರಸ್ತುತ ಬೆಂಗಳೂರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ನಿವೇಶನದ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 62 ಅಡಿ, ಉತ್ತರದಿಂದ ದಕ್ಷಿಣಕ್ಕೆ: 50 ಅಡಿ, ಒಟ್ಟು ವಿಸ್ತೀರ್ಣ 3100 ಚದರ ಅಡಿ. ಜೊತೆಗೆ 10600 ಚದರ ಅಡಿ, ವಾಣಿಜ್ಯ ಕಟ್ಟಡವು ಎಲ್ಲಾ ಹಕ್ಕು ಬಾಧ್ಯತೆ ಹಾಗೂ ಎಲ್ಲಾ ನಾಗರೀಕ ಸೌಲಭ್ಯಗಳನ್ನೊಳಗೊಂಡಿರುವ ಆಸ್ತಿಯಾಗಿರುತ್ತದೆ. ಚಕ್ಕುಬಂದಿ : ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಪಾಪಣ್ಣರವರ ಆಸ್ತಿ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಗೋಪಾಲರೆಡ್ಡಿರವರ ಆಸ್ತಿ.
ಐಟಂ ನಂ.2 : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಭೂಮಿ ಮತ್ತು ಕಟ್ಟಡದ ನಿವೇಶನ ನಂ. 12, ಹಳೆ ನಂ. 69/2, ನಂತರ ನಂ. 205/2, ಬಿಬಿಎಂಪಿ ನಂ. 12, ಪಿಐಡಿ ನಂ. 83–65–12, ಈ ಆಸ್ತಿಯು ಕಗ್ಗದಾಸಪುರ ಮುಖ್ಯರಸ್ತೆ, ಕೆ.ಆರ್.ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಹಿಂದಿನ ಬೆಂಗಳೂರು ದಕ್ಷಿಣ ತಾಲ್ಲೂಕು, ಪ್ರಸ್ತುತ ಬೆಂಗಳೂರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ನಿವೇಶನದ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 66 ಅಡಿ, ಉತ್ತರದಿಂದ ದಕ್ಷಿಣಕ್ಕೆ: 42 ಅಡಿ, ಒಟ್ಟು ವಿಸ್ತೀರ್ಣ 2772 ಚದರ ಅಡಿ. ಜೊತೆಗೆ 1089 ಚದರ ಅಡಿ ಆರ್‌ಸಿಸಿ ಕಟ್ಟಡವನ್ನು ಹೊಂದಿದ್ದು, ಎಲ್ಲಾ ನಾಗರೀಕ ಸೌಲಭ್ಯಗಳನ್ನೊಳಗೊಂಡಿರುವ ಆಸ್ತಿಯಾಗಿರುತ್ತದೆ. ಚಕ್ಕುಬಂದಿ : ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಪಾಪಣ್ಣರವರ ಆಸ್ತಿ, ಉತ್ತರಕ್ಕೆ: ಗೋಪಾಲರೆಡ್ಡಿರವರ ಆಸ್ತಿ, ದಕ್ಷಿಣಕ್ಕೆ: ಗೋಪಾಲರೆಡ್ಡಿರವರ ಆಸ್ತಿ.
ಪ್ರಸ್ತುತವಾಗಿ X Addl. Chief. ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್, ಬೆಂಗಳೂರು Vide Crl. Misc.ಅವರ ಆದೇಶದ ಅನುಸಾರ. ನಂ. 50303/2020 ನ್ಯಾಯಾಲಯದ ಆದೇಶದಂತೆ ಪೊಲೀಸರ ಸಮ್ಮುಖದಲ್ಲಿ ಮತ್ತು ಸಹಾಯದೊಂದಿಗೆ ಮೇಲ್ಕಂಡ ಆಸ್ತಿಯನ್ನು **ದಿನಾಂಕ: 15.10.2022** ರಂದು ಭೌತಿಕವಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆ.
ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವ ಸಮಯದಲ್ಲಿ ಮತ್ತು ಹೇಳಲಾದ ಆಸ್ತಿಯೊಳಗೆ ಕೆಲವು ಯಂತ್ರೋಪಕರಣಗಳು ಮತ್ತು ಚರಾಸ್ತಿ ವಸ್ತುಗಳಿದ್ದವು ವಸ್ತುಗಳು/ಚರಾಸ್ತಿ ಅನೇಕ ಸಂಖ್ಯೆಯಲ್ಲಿದ್ದುದರಿಂದ ಮತ್ತು ಅಂತಹ ಎಲ್ಲಾ ವಸ್ತುಗಳನ್ನು ಇನ್ನೂ ಅವುಗಳನ್ನು ತಕ್ಷಣವೇ ಸಾಗಿಸಲು ಸಮಯವಿರಲಿಲ್ಲ ಆದ್ದರಿಂದ ಅಂತಹ ಎಲ್ಲಾ ವಸ್ತುಗಳನ್ನು ಇನ್ನೂ ಅಲ್ಲಿಯೇ ಇರಿಸಲಾಗಿದೆ.
ಕೆಳಸಹಿದಾರರು ಕನಿಷ್ಠ ಒಂದು ದಿನದ ಪೂರ್ವ ಲಿಖಿತ ಸೂಚನೆಯಡಿಯಲ್ಲಿ ಹೇಳಲಾದ ವಸ್ತುಗಳನ್ನು ಆಸ್ತಿಯಿಂದ ತೆಗೆದುಹಾಕಲು ನಿಮ್ಮಲ್ಲಿ ವಿನಂತಿಸಲಾಗಿದೆ, ಇದರಿಂದ ನೀವು ವಸ್ತುಗಳನ್ನು ತೆಗೆದುಹಾಕಲು ಅಗತ್ಯ ವ್ಯವಸ್ಥೆಗಳನ್ನು ಮಾಡಬಹುದು. ಈ ಸೂಚನೆಯ ಸ್ವೀಕೃತಿಯಿಂದ 7 ದಿನಗಳ ಒಳಗಾಗಿ ಹೇಳಲಾದ ವಸ್ತುಗಳನ್ನು ತೆಗೆದುಹಾಕಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಿ ಇಲ್ಲದಿದ್ದರೆ ನಿಮ್ಮ ವೆಚ್ಚದಲ್ಲಿ ಸಾರ್ವಜನಿಕ ಸೂಚನೆಯ ಮೂಲಕ ಮಾರಾಟ ಮಾಡಲು ಬ್ಯಾಂಕ್ ಗಮನಕ್ಕೆ ತರಲಾಗುತ್ತದೆ.
ಆದುದರಿಂದ ದಯವಿಟ್ಟು ಬಂದು ನಿಮ್ಮ ಚರಾಸ್ತಿಗಳನ್ನು ತೆಗೆದು ಹಾಕಬೇಕೆಂದು ವಿನಂತಿಸುತ್ತೇವೆ. ಇದು ಬ್ಯಾಂಕಿನ ಇತರ ಹಕ್ಕುಗಳು ಮತ್ತು ಹಿತಾಸಕ್ತಿಗಳಿಗೆ ಯಾವುದೇ ಪೂರ್ವಾಗ್ರಹವಿಲ್ಲದೆ.
ದಿನಾಂಕ: 05.10.2024
ಸ್ಥಳ: ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ
ತುಮಕೂರು ವೀರಶೈವ ಕೋ–ಆಪ್ ಬ್ಯಾಂಕ್ ಲಿಮಿಟೆಡ್,

ಇ–ಹರಾಜು ಮಾರಾಟ ಸೂಚನೆ
ಮೆ॥ ಶ್ರೀ ದಿಯಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್
ನೋಂ. ಕಚೇರಿ : ನಂ. 180, 1ನೇ ಮಹಡಿ, 8ನೇ ಕ್ರಾಸ್, 14ನೇ ಮುಖ್ಯ ರಸ್ತೆ
6ನೇ ಸೆಕ್ಟರ್, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು, ಕರ್ನಾಟಕ, ಭಾರತ–560102.
ಲಿಕ್ವಿಡೇಟರ್: ಶ್ರೀ ಅಮರ್‌ಪಾಲ್
ಸಂವಹನ ವಿಳಾಸ: 905, 9ನೇ ಮಹಡಿ, ಬಾರ್ಟನ್ ಸೆಂಟರ್, ಎಂಜಿ ರಸ್ತೆ,
ಬೆಂಗಳೂರು, ಕರ್ನಾಟಕ –560001
ಇ–ಮೇಲ್ : cirp.shridiya@gmail.com, ಮೊಬೈಲ್ ಸಂ: 9717105008

ಐಬಿಬಿಐ ಯ ನಿಯಂತ್ರಣ, 2016ರ ನಿಯಂತ್ರಣ 32ಎ ಯ ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಸಿ ಬೋರ್ಡ್ ಆಫ್ ಇಂಡಿಯ (ಲಿಕ್ವಿಡೇಶನ್ ಪ್ರಕ್ರಿಯೆ) ಅಡಿ ಕಾರ್ಪೊರೇಟ್ ಸಾಲಗಾರನಾಗಿ ಹೋಗುವ ಕಾಳಜಿಯಿಂದ ಕಂಪನಿಯ ಸ್ವತ್ತುಗಳ ಮಾರಾಟ

ಹರಾಜಿನ ದಿನಾಂಕ ಮತ್ತು ಸಮಯ	4 ನವೆಂಬರ್, 2024, ಮಧ್ಯಾಹ್ನ 3:00 ರಿಂದ (ಭಾ.ಕಾ.) ಸಂಜೆ 5:00 ಗಂಟೆ (ಭಾ.ಕಾ.) ಅನಿಯಮಿತ 5 ನಿಮಿಷಗಳ ವಿಸ್ತರಣೆಯೊಂದಿಗೆ)
ಇಎಂಡಿ ಸಲ್ಲಿಕೆಗೆ ಕೊನೆಯ ದಿನಾಂಕ	31 ಅಕ್ಟೋಬರ್, 2024, ಮಧ್ಯಾಹ್ನ 2:00 (ಭಾ.ಕಾ.) ರವರೆಗೆ
ಅಪೇಕ್ಷಿತ ಬಿಡ್ಡುದಾರರ ಅರ್ಹತಾ ದಾಖಲೆಗಳ ಸಲ್ಲಿಕೆಗೆ ಕೊನೆಯ ದಿನಾಂಕ	19 ಅಕ್ಟೋಬರ್, 2024, ಸಂಜೆ 6:00 (ಭಾ.ಕಾ.) ಗಂಟೆಗೆ

ಮೆ॥ ಶ್ರೀ ದಿಯಾ ಪ್ರಾಜೆಕ್ಟ್ಸ್ ಪ್ರೈ. ಲಿ., (ಲಿಕ್ವಿಡೇಶನ್‌ನಲ್ಲಿ) ಸಿಐಎನ್ ನಂ. ಯು70109ಕೆಎ2010ಪಿಟಿಸಿ055085, ಮಾಲೀಕತ್ವದಲ್ಲಿರುವ ಸ್ವತ್ತುಗಳನ್ನು ಲಿಕ್ವಿಡೇಶನ್ ಎಸ್ಟೇಟ್‌ನ ಭಾಗವಾಗಿ ಗೌರವಾನ್ವಿತ ರಾಷ್ಟ್ರೀಯ ಕಂಪನಿ ಕಾನೂನು ಮಂಡಳಿ ಬೆಂಗಳೂರು ಪೀಠವು ತನ್ನ ಆದೇಶ ದಿನಾಂಕ 31.07.2024 (ಸ್ವೀಕೃತವಾದುದು 08.08.2024) ರಂತೆ ಸ್ವತ್ತುಗಳ ಮಾರಾಟ.

ಸ್ವತ್ತುಗಳು	ಮೀಸಲು ಬೆಲೆ	ಇಎಂಡಿ	ಹೆಚ್ಚಳ ಮೌಲ್ಯ
ಯೋಜನೆಯ ಹೆಸರು : ಶ್ರೀ ದಿಯಾ ಆರ್ನೇಟ್ (ಹೋಗುವ ಕಾಳಜಿಯಿಂದ)			
ಶ್ರೀ ದಿಯಾ ಆರ್ನೇಟ್ ಮೂರು ಭಾಗಗಳಾಗಿ ವಿಂಗಡಿತವಾಗಿದೆ. 1. ಸರ್ವೆ ನಂ. 445–ವಿಸ್ತೀರ್ಣ 1 ಎಕರೆ 05 ಗುಂಟೆಗಳು 2. ಸರ್ವೆ ನಂ. 448/1 – ವಿಸ್ತೀರ್ಣ 2 ಗುಂಟೆಗಳು 3. ಸರ್ವೆ ನಂ. 448/1 ವಿಸ್ತೀರ್ಣ 01 ಗುಂಟೆಗಳು ಯೋಜನೆಯ ಸ್ಥಳ : ಸರ್ಜಾಪುರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲೂಕು, ಬೆಂಗಳೂರು, ಕರ್ನಾಟಕ.	24,00,65,280/-	2,40,06,528/-	1.00 (ಲಕ್ಷಗಳಲ್ಲಿ) ಅಥವಾ ಗುಣಾಕಾರದಲ್ಲಿ

ಇ–ಹರಾಜು ಸೂಚನೆಯ ನಿಯಮ ಮತ್ತು ನಿಬಂಧನೆಗಳು ಈ ಕೆಳಗಿನಂತಿವೆ.
1. ಇ–ಹರಾಜನ್ನು "ಎಲ್ಲಿ ಹೇಗಿದೆಯೋ "ಹಾಗಿನ ಆಧಾರದ ಮೇಲೆ" , "ಯಾವುದೇ ಅವಲಂಬನೆ ಇಲ್ಲದೆ" ಅನುಮೋದಿತ ಸೇವಾ ಪೂರೈಕೆದಾರ ಅಂದರೆ ರೈಟ್2ವೋಟ್ ಮೂಲಕ ಮಾರಾಟ ಮಾಡಲಾಗುವುದು.
2. ಈ ನೋಟೀಸನ್ನು ಮಾರಾಟ ಪ್ರಕಟಣೆ ಕನ್‌ಜಂಕ್ಷನ್‌ನೊಂದಿಗೆ ಸಂಪೂರ್ಣ ಇ–ಹರಾಜು ಪ್ರಕ್ರಿಯೆ ದಾಖಲೆಯೊಂದಿಗೆ ಓದಿಕೊಳ್ಳಬೇಕು ಸ್ವತ್ತುಗಳ ವಿವರ, ಆನ್‌ಲೈನ್ ಇ–ಹರಾಜು ಬಿಡ್ ನಮೂನೆ, ಇದರಲ್ಲಿ ಆನ್‌ಲೈನ್ ಇ–ಹರಾಜು ಬಿಡ್ ನಮೂನೆ, ಬಿಡ್ ಘೋಷಣೆ ಮತ್ತು ಒಳಗೊಳ್ಳುವಿಕೆ ಮತ್ತು ಇ–ಹರಾಜಿನ ಸಾಮಾನ್ಯ ನಿಯಮ ಮತ್ತು ನಿಬಂಧನೆಗಳು ಇವುಗಳ ವಿವರಗಳು ವೆಬ್‌ಸೈಟ್ https://www.shridiyacirp.n/ ನಲ್ಲಿ ಲಭ್ಯವಿದೆ. ಮತ್ತು ಸಂಪರ್ಕಿಸಿ: ಶ್ರೀ ಅಮರ್‌ಪಾಲ್ ಇ–ಮೇಲ್ ಐಡಿ : cirp.shridiya@gmail.com ಅಥವಾ 9717105008.
3. ಆಸಕ್ತ ಬಿಡ್ಡುದಾರರು ಸ್ವತ್ತಿನ ಟೈಟಲ್ ಬಗ್ಗೆ ಯಾವುದೇ ರೀತಿಯಿಂದ ತಮ್ಮ ಸ್ವಂತ ವೆಚ್ಚದಲ್ಲಿ ತಮಗೆ ತೃಪ್ತಿಕರವಾಗುವಂತೆ ಸ್ವತಃ ಪರಿಶೀಲನೆ ನಡೆಸಬಹುದು
4. ಆಸಕ್ತ ಬಿಡ್ಡುದಾರರು ಅರ್ನೆಸ್ಟ್ ಠೇವಣಿ ಹಣ (ಇಎಂಡಿ) ಯನ್ನು ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ "ಶ್ರೀ ದಿಯಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್" ಖಾತೆಯಲ್ಲಿ ಠೇವಣಿಯಾಗಿಡಬೇಕು. ಬ್ಯಾಂಕ್ ಹೆಸರು: ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್, ಖಾತಾ ಸಂ. 52105902663, ಐಎಫ್‌ಎಸ್‌ಸಿ ಕೋಡ್ : ಎಸ್‌ಸಿಬಿಎಲ್0036033.
5. ಮೇಲಿನ ಹರಾಜು ಗೌರವಾನ್ವಿತ ಎನ್‌ಸಿಎಲ್‌ಟಿ ಯ ನಿರ್ದೇಶನದಂತೆ ಆದೇಶ ದಿನಾಂಕ 31.07.2024 (ಸ್ವೀಕೃತವಾಗಿರುವುದು 06.08.2024) ನಡೆಸಲಾಗುವುದು.
ಸಹಿ/–
ಶ್ರೀ ಅಮರ್‌ಪಾಲ್
IBBI/IPA-001/IP-P-01584/2018-2019/12411
ದಿನಾಂಕ: 05.109.2024
ಲಿಕ್ವಿಡೇಟರ್, ಮೆ॥ ಶ್ರೀ ದಿಯಾ ಪ್ರಾಜೆಕ್ಟ್ಸ್ ಪ್ರೈ.ಲಿ.
ಸ್ಥಳ: ನವದೆಹಲಿ
ಎಎಫ್‌ಎ ಮಾನ್ಯತೆ: 21.11.2024
ಸಂವಹನ ವಿಳಾಸ: ಕಚೇರಿ ಸಂ.905, 9ನೇ ಮಹಡಿ, ಬಾರ್ಟನ್ ಸೆಂಟರ್, ಎಂಜಿ ರಸ್ತೆ, ಬೆಂಗಳೂರು, ಕರ್ನಾಟಕ –560001
ಇ–ಮೇಲ್ : cirp.shridiya@gmail.com

ರೇಣುಕಾಸ್ವಾಮಿ ಕೊಲೆ ಪ್ರಕರಣ: ಚಾರ್ಜ್‌ಶೀಟ್‌ನ ನ್ಯೂನತೆ ಬಗ್ಗೆ ಸಿ.ವಿ. ನಾಗೇಶ್ ಪ್ರಬಲ ವಾದ ಮಂಡನೆ

ದರ್ಶನ್ ಜಾಮೀನು ಅರ್ಜಿ ಮುಂದೂಡಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟ ದರ್ಶನ್ ಜಾಮೀನು ಅರ್ಜಿಯ ವಿಚಾರಣೆಯನ್ನು ಮತ್ತೆ ಮುಂದೂಡಲಾಗಿದೆ.

ಆರೋಪಿ ದರ್ಶನ್ ಪರ ಹಿರಿಯ ವಕೀಲ ಸಿ.ವಿ.ನಾಗೇಶ್ ಪ್ರಬಲ ವಾದ ಮಂಡಿಸಿದರು. ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಿದ ಅಂಶಗಳ ನ್ಯೂನತೆ ಬಗ್ಗೆ ಬಿಡಿಬಿಡಿಯಾಗಿ ಪ್ರಸ್ತಾಪಿಸಿದರು. ಸಮಯ ಕೊರತೆ ಹಿನ್ನೆಲೆಯಲ್ಲಿ ಅರ್ಜಿ ವಿಚಾರಣೆ ಅ.8ಕ್ಕೆ 57ನೇ ಸಿಸಿಎಚ್ ನ್ಯಾಯಾಲಯ ಮುಂದೂಡಿದೆ.

ಮರಣೋತ್ತರ ಪರೀಕ್ಷೆ ವಿಳಂಬಕ್ಕೆ ಆಕ್ಷೇಪ: ಪ್ರಕರಣದ ಎರಡನೇ ಆರೋಪಿ ದರ್ಶನ್ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿ.ವಿ. ನಾಗೇಶ್, ಪೊಲೀಸರ ತನಿಖೆಯ ಲೋಪ ದೋಷಗಳನ್ನು ನ್ಯಾಯಾಲಯದ ಮುಂದಿಟ್ಟಿದ್ದಾರೆ. ರೇಣುಕಾಸ್ವಾಮಿಯ ಮೃತದೇಹ ಜೂನ್ 9ರಂದು ಪತ್ತೆಯಾಗಿರುವುದಾಗಿ ಅಪಾರ್ಟ್‌ಮೆಂಟ್‌ನ ಸೆಕ್ಯುರಿಟಿ ನೀಡಿರುವ ದೂರಿನಲ್ಲಿ ಸ್ಪಷ್ಟವಾಗಿದೆ. ಆದರೆ ಪೊಲೀಸರು ಜೂನ್ 11ರಂದು ಮಧ್ಯಾಹ್ನ 2:45ರ ಸುಮಾರಿಗೆ ಮೃತದೇಹದ ಮರಣೋತ್ತರ ಪರೀಕ್ಷೆ ಮಾಡಿಸಿದ್ದಾರೆ. ಮೃತನ ವಿವರ ಲಭ್ಯವಾಗಿದಿದ್ದರಿಂದ ಮರಣೋತ್ತರ ಪರೀಕ್ಷೆ ವಿಳಂಬವಾಗಿದೆ ಎಂದು ಪೊಲೀಸರು ಕಾರಣ ನೀಡಿದ್ದಾರೆ. ಆದರೆ ಯಾವುದೇ ಮೃತದೇಹದ ಪೋಸ್ಟ್ ಮಾರ್ಟಂ ಮಾಡಲು ಮೃತನ ವಿವರ ಲಭ್ಯವಿರಬೇಕು ಎಂದಿಲ್ಲವೆಂದು ಸಿಆರ್‌ಪಿಸಿ 174 ಸ್ಪಷ್ಟವಾಗಿ ಹೇಳಿದೆ. ಹಾಗಾದರೆ ಪೊಲೀಸರು ಮೃತದೇಹದ ಮರಣೋತ್ತರ ಪರೀಕ್ಷೆಗೆ ವಿಳಂಬ ಮಾಡಿದ್ದೇಕೆ ಎಂದು ನಾಗೇಶ್ ವಾದಿಸಿದರು.

ನಗದು ಜಪ್ತಿ ಬಗ್ಗೆಯೂ ಪ್ರಶ್ನೆ: ಅಲ್ಲದೆ ಜೂನ್ 18ರಂದು ದರ್ಶನ್ ಅವರ ಮನೆಯಲ್ಲಿ 37.5 ಲಕ್ಷ ರು. ಹಣ ಜಪ್ತಿ ಮಾಡಿದ ಪೊಲೀಸರು, ಪ್ರಕರಣದ ಇತರ ಆರೋಪಿಗಳಿಗೆ ನೀಡಲು ಹಣ ಸಂಗ್ರಹಿಸಿಟ್ಟ ಹೇಳಿಕೆ ಪಡೆದಿದ್ದಾಗಿ ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಿದ್ದಾರೆ. ಆದರೆ ಮೋಹನ್‌ರಾಜ್ ಎಂಬುವರು ತಮ್ಮ ಮಗಳ ಆಲ್ಬಂ ಸಾಂಗ್ ಮಾಡಿಸಲು ದರ್ಶನ್ ಅವರಿಂದ ಫೆಬ್ರವರಿಯಲ್ಲಿ ಹಣ ಪಡೆದಿದ್ದರು. ಆ ಸಾಲದ ಹಣ ಮೇ 2ರಂದೇ ವಾಪಸ್ ನೀಡಿದ್ದಾರೆ. ಹಾಗಾದರೆ ದರ್ಶನ್ ಅವರು ಸಾಕ್ಷಿಗಳಿಗೆ ಕೊಡಲೆಂದೇ ಹಣ ಸಂಗ್ರಹಿಸಿಟ್ಟಿದ್ದರು ಎನ್ನಲು ಹೇಗೆ ಸಾಧ್ಯ? ಮುಂದೆ ರೇಣುಕಾಸ್ವಾಮಿ ಎಂಬ ವ್ಯಕ್ತಿ ಬರಲಿದ್ದಾನೆ ಅವನ ಹತ್ಯೆಯಾಗಲಿದೆ, ಅದನ್ನ ಮುಚ್ಚಿಹಾಕಲು ಸಾಕ್ಷಿಗಳಿಗೆ ಹಣ ನೀಡಬೇಕಾಗುತ್ತದೆ ಎಂದು ದರ್ಶನ್ ಊಹಿಸಿರಲು ಸಾಧ್ಯವೇ ಎಂದು ವಕೀಲರು ಪ್ರಶ್ನೆ ಎತ್ತಿದ್ದಾರೆ.

ಹೇಳಿಕೆಗಳಲ್ಲಿ ವ್ಯತ್ಯಾಸ

ಜೂನ್ 18 ಹಾಗೂ 19ರಂದು ಎರಡೆರಡು ಸ್ವಇಚ್ಛಾ ಹೇಳಿಕೆ ಪಡೆದುಕೊಳ್ಳಲಾಗಿದೆ. ಆದರೆ ಎರಡೂ ಹೇಳಿಕೆಗಳಲ್ಲಿ ಕೆಲ ಅಂಶಗಳು ವ್ಯತಿರಿಕ್ತವಾಗಿವೆ. ಪೊಲೀಸರಿಗೆ ಮಿಡ್‌ನೈಟ್ ಹೇಳಿಕೆ ದಾಖಲಿಸುವ ಅಭ್ಯಾಸವಿದೆ. ಮಲಗುವಾಗ ಓದಬಹುದಾದ ಅರೇಬಿಯನ್ ನೈಟ್ಸ್ ರೀತಿ ಕಥೆಯಿದೆ.

ಸಾಕ್ಷಿದಾರರಾಗಿ ನಟ ಚಿಕ್ಕಣ್ಣ ಹಾಗೂ ನವೀನ್ ಅವರ ಪೊಲೀಸರ ಮುಂದಿನ ಹೇಳಿಕೆ ಹಾಗೂ ನ್ಯಾಯಾಲಯದ ಮುಂದಿನ ಹೇಳಿಕೆಗಳು ವ್ಯತಿರಿಕ್ತವಾಗಿವೆ. ಶೂ ನಲ್ಲಿ ರಕ್ತದ ಗುರುತಿದೆ. ಆದರೆ ಯಾವ ಶೂ ಎಂದು ನಿಖರವಾಗಿ ತಿಳಿಸಿಲ್ಲ. ಎಫ್‌ಎಸ್‌ಎಲ್‌ನಲ್ಲಿ ಇರದ ರಕ್ತದ ಗುರುತು ಚಾರ್ಜ್‌ಶೀಟ್‌ನಲ್ಲಿ ಹೇಗೆ ಬಂತು ಎಂದು ದರ್ಶನ್ ಪರ ವಕೀಲರು ಪ್ರಶ್ನಿಸಿದರು. ರಿಮ್ಯಾಂಡ್ ಅರ್ಜಿಯಲ್ಲಿ ಕೆಲ ಸಾಕ್ಷಿಗಳ ಹೆಸರಿಲ್ಲ. ಕರೆ ವಿವರ ಆಧಾರದ ಮೇರೆಗೆ ಒಳಸಂಚು ಎಂದು ಬಿಂಬಿಸಲಾಗಿದೆ. ಆದರೆ ಪವಿತ್ರಾ ಹಾಗೂ ದರ್ಶನ್ ಇಬ್ಬರು ಸ್ನೇಹಿತರಾಗಿದ್ದು ಜನವರಿ 1ರಿಂದ ಜೂನ್ 9ವರೆಗೆ 342 ಬಾರಿ ಕರೆ ಮಾಡಿದ್ದಾರೆ. ರೇಣುಕಾಸ್ವಾಮಿ ಹತ್ಯೆಯಾದ ಬಳಿಕ ಕರೆ ಅಧಾರದ ಮೇರೆಗೆ ಸಂಚು ಎಂದು ರೂಪಿಸಿರುವುದು ಯಾವ ಆಧಾರದ ಮೇಲೆ? ಅಲ್ಲದೆ, ರೆಸ್ಟೋರೆಂಟ್‌ನಲ್ಲಿ ಒಟ್ಟಾಗಿ ಕುಳಿತು ಊಟಕ್ಕೆ ಸೇರಿದರೆ ಸಂಚು ಎಂದು ಭಾವಿಸಿಬಹುದೇ ಎಂದು ಪ್ರಶ್ನಿಸಿದ ವಕೀಲರು, ಇವೆಲ್ಲವೂ ಚಾರ್ಜ್‌ಶೀಟ್ ಆಫ್ ಗ್ರೇಟ್ ಡ್ರಾಮಾ ಎಂದು ವಾದಿಸಿದರು.

19 ಮಂದಿ ವಿರುದ್ಧ ಎಫ್‌ಐಆರ್ | ಉಪವಿಭಾಗಾಧಿಕಾರಿ ಕರ್ತವ್ಯಲೋಪ ಆರೋಪ

ನಕಲಿ ದಾಖಲೆ: 70 ಕೋಟಿ ಆಸ್ತಿಗೆ ಪರಿಹಾರಕ್ಕೆ ಯತ್ನ

ಬೆಂಗಳೂರು: ನಕಲಿ ದಾಖಲೆಗಳನ್ನು ಸೃಷ್ಟಿಸಿ ಸುಮಾರು 70 ಕೋಟಿ ರು. ಮೌಲ್ಯದ ಆಸ್ತಿಗೆ ಪರಿಹಾರ ಪಡೆಯಲು ಯತ್ನಿಸಿದ ಆರೋಪದ ಮೇಲೆ ಖಾಸಗಿ ವ್ಯಕ್ತಿಗಳು ಹಾಗೂ ಸರಕಾರಿ ಅಧಿಕಾರಿಗಳು ಸೇರಿ 19 ಮಂದಿ ವಿರುದ್ಧ ಶೇಷಾದ್ರಿಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಡಿಎ ವಿಚಕ್ಷಣ ದಳದ ಡಿವೈಎಸ್ಪಿ ಮಲ್ಲೇಶ್ ಅವರು ನೀಡಿದ ದೂರಿನ ಮೇರೆಗೆ ಚಲ್ಲಘಟ್ಟದ ಪುಟ್ಟಮ್ಮ, ಗಂಗಮ್ಮ, ನಾಗರಾಜ್, ಲಕ್ಷ್ಮಮ್ಮ, ಶ್ರೀನಿವಾಸ, ಸಂತೋಷ್, ರವಿಕುಮಾರ್, ಭರತ್, ಸುನೀತ್, ಆಶಾ, ಸ್ವಾಮಿ, ಉಮೇಶ್, ಬಿಡಿಎ ಭೂಸ್ವಾಧೀನ ಅಧಿಕಾರಿ, ವಿಶೇಷ ತಹಶೀಲ್ದಾರ್, ಕಂದಾಯ ಇಲಾಖೆ ಅಧಿಕಾರಿಗಳು, ಬಿಡಿಎ ಅಧಿಕಾರಿ ಮತ್ತು ಸಿಬ್ಬಂದಿ ವಿರುದ್ಧ ಶೇಷಾದ್ರಿಪುರ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಸಂಬಂಧಿಗಳಲ್ಲದಿದ್ದರೂ ಪರಿಹಾರ ಬೇಡಿಕೆ ಚಲ್ಲಘಟ್ಟ ಸರ್ವೆ ನಂ 13 ಮತ್ತು ಹೊಸ ಸರ್ವೆ ನಂಬರ್ 58ರಲ್ಲಿನ 6 ಎಕರೆ ಜಮೀನಿಗೆ ಸಂಬಂಧಿಸಿದಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಿರುವ ಎಲ್ಲ ಆರೋಪಿಗಳು ಹಾಗೂ ಜಮೀನಿನ ಮೂಲ ಮಾಲೀಕ ಮೂಡ್ಲಪ್ಪ ಯಾವುದೇ ರೀತಿಯಲ್ಲಿ ಸಂಬಂಧಿಗಳಲ್ಲ, ಆದರೂ ಸಂಬಂಧಿಕರೆಂದು ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಬಿಡಿಎಗೆ ಸಲ್ಲಿಸಿದ್ದಾರೆ. ಅಲ್ಲದೆ, ಈ ಆಸ್ತಿಯ ಮಾಲೀಕರು ತಾವೇ ಎಂದು ಹೇಳಿಕೊಂಡು 70 ಕೋಟಿ ರು. ಮೌಲ್ಯದ ಆಸ್ತಿಗೆ ಪರಿಹಾರ ಕೋರಿದ್ದಾರೆ ಎಂದು ಡಿವೈಎಸ್‌ಪಿ ದೂರಿನಲ್ಲಿ ತಿಳಿಸಲಾಗಿದೆ.

ಈ ಆಸ್ತಿ ಪರಿಶೀಲಿಸಿ ವರದಿ ನೀಡಲು ನೇಮಕವಾಗಿದ್ದ ಬಿಡಿಎನ ವಿಶೇಷ ಭೂಸ್ವಾಧೀನಾಧಿಕಾರಿ ಡಾ.ಸುಧಾ, ಸರ್ವೆಯರ್ ಪಿ.ಎನ್.ರವಿಪ್ರಕಾಶ್ ಈ ಆಸ್ತಿಯ ಬಳಿಗೆ ಹೋಗಿ ಸೂಕ್ತರೀತಿಯಲ್ಲಿ ಪರಿಶೀಲನೆ ಮಾಡದೆ, ಆಸ್ತಿಗೆ ಸಂಬಂಧವಿಲ್ಲದ ವ್ಯಕ್ತಿ ಉಮೇಶ್ ಎಂಬುವರು ತೋರಿಸಿದ ಮೇರೆಗೆ ಪರಿಶೀಲಿಸಿ ವರದಿ ಸಿದ್ಧಪಡಿಸಿ, ಬಿಡಿಎಗೆ ತಪ್ಪು ಮಾಹಿತಿ ನೀಡುವ ಮೂಲಕ ಕರ್ತವ್ಯಲೋಪ ಎಸಗಿದ್ದಾರೆ ಎಂದು ಆರೋಪಿಸಲಾಗಿದೆ.

ಉಪವಿಭಾಗಾಧಿಕಾರಿ ಕರ್ತವ್ಯಲೋಪ ಆರೋಪ: ಅಲ್ಲದೆ, ಈಗಾಗಲೇ ರೆವಿನ್ಯೂ ಸೈಟ್‌ಗಳಾಗಿ ಮಾರ್ಪಾಡಾಗಿದ್ದರೂ, ಆಶ್ರಯ ಯೋಜನೆಗೆ ಕಾಯ್ದಿರಿಸಿರುವ ಜಮೀನಾಗಿದ್ದರೂ ಸರ್ವೆಯರ್ ರವಿಪ್ರಕಾಶ್ ಮತ್ತು ಡಾ.ಸುಧಾ ಭೂಪರಿಹಾರಕ್ಕೆ ಅರ್ಹವಾಗಿರುವ ಜಮೀನು ಎಂದು ಸುಳ್ಳು ನಕಾಶೆ ತಯಾರಿಸಿದ್ದಾರೆ. ಆರೋಪಿಗಳು ಸಲ್ಲಿಸಿದ್ದ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸದೆ ನಿಜವಾದ ಆಸ್ತಿ ಮಾಲೀಕರ ಬಗ್ಗೆ ವಿಚಾರ ಮಾಡದೆ ದಕ್ಷಿಣ ಉಪವಿಭಾಗದ ಉಪವಿಭಾಗಾಧಿಕಾರಿ ಡಾ. ಶಿವಣ್ಣ, ಜ.19, 2021ರಲ್ಲಿ ಪುಟ್ಟಮ್ಮ ಹೆಸರಿಗೆ ಖಾತೆ ಮಾಡಲು ಬೆಂಗಳೂರು ದಕ್ಷಿಣ ತಾಲೂಕು ವಿಶೇಷ ತಹಶೀಲ್ದಾರ್‌ಗೆ ಆದೇಶ ಮಾಡಿ ಕೃತ್ಯದಲ್ಲಿ ಭಾಗಿಯಾಗಿದ್ದಾರೆ ಎಂದು ಡಿವೈಎಸ್‌ಪಿ ನೀಡಿದ ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಈ ಸಂಬಂಧ ಗೋವಿಂದರಾಜು ಎಂಬವರು ಬಿಡಿಎಗೆ ದೂರು ನೀಡಿದ್ದರು. ಈ ದೂರಿನ ಮೇರೆಗೆ ಪ್ರಾಥಮಿಕ ವಿಚಾರಣೆ ಹಾಗೂ ಬೆರಳು ಮುದ್ರೆ ತಜ್ಞರಿಂದ ಪಡೆದಿರುವ ವರದಿಗಳಿಂದ ಆರೋಪಿಗಳು ಕೃತ್ಯದಲ್ಲಿ ಭಾಗಿಯಾಗಿರುವುದು ಕಂಡುಬಂದಿದೆ. ಆಸ್ತಿಯ ಮೂಲ ಮಾಲೀಕ ಮೂಡ್ಲಪ್ಪ ಅಲಿಯಾಸ್ ಮೂಡ್ಲಯ್ಯ 1976ರಲ್ಲಿ ನಿಧನರಾಗಿದ್ದಾರೆ.

1992 ಆಸ್ತಿಯ ಪೋಡಿ ಆಗಿದೆ. 2019–2020ರಲ್ಲಿ ಆಸ್ತಿಗೆ ಸಂಬಂಧಿಸಿ ದಂತೆ ಆರೋಪಿಗಳು ರಿಲೀಸ್ ಡೀಡ್ ಮಾಡಿ ಕೊಂಡಿದ್ದಾರೆ. ಪುಟ್ಟಮ್ಮ ಹೆಸರಿಗೆ 57,498 ಚದರ ಅಡಿಗಳಿಗೆ ಭೂ ಪರಿಹಾರ ಮಂಜೂರಾತಿಗೆ ದಾಖಲೆಗಳ ಸಲ್ಲಿಕೆಯಾಗಿರುತ್ತದೆ.

ಆದರೆ, ಪರಿಹಾರ ಬಿಡುಗಡೆ ಆಗಿಲ್ಲ. ಹೀಗಾಗಿ, ವಂಚನೆ ಮಾಡಿದ ಖಾಸಗಿ ವ್ಯಕ್ತಿಗಳು ಹಾಗೂ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಡಿವೈಎಸ್ಪಿ ಮಲ್ಲೇಶ್ ದೂರಿನಲ್ಲಿ ಕೋರಿದ್ದಾರೆ.

ಗಂಗೂಬಾಯಿ ಗುರುಕುಲಕ್ಕೆ ಅನುದಾನ

ಬೆಂಗಳೂರು: ಹುಬ್ಬಳ್ಳಿಯ ಡಾ.ಗಂಗೂಬಾಯಿ ಹಾನಗಲ್ ಗುರುಕುಲಕ್ಕೆ ಅನುದಾನ ಬಿಡುಗಡೆ ಮಾಡುವ ಕುರಿತು ಪರಿಶೀಲಿಸುವಂತೆ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ್ ಸೂಚಿಸಿದ್ದಾರೆ.

ವಿಕಾಸಸೌಧದಲ್ಲಿ ಈ ಕುರಿತು ನಡೆದ ವಿಶೇಷ ಸಭೆಯಲ್ಲಿ ಮಾತನಾಡಿದ ಅವರು, ಡಾ.ಗಂಗೂಬಾಯಿ ಹಾನಗಲ್ ಗುರುಕುಲದ ನಿರ್ವಹಣೆ ಮತ್ತು ಚಟುವಟಿಕೆಗಳನ್ನು ಮುಂದುವರಿಸಿಕೊಂಡು ಹೋಗಬೇಕು. ಈ ಗುರುಕುಲ ಆರ್ಥಿಕ ಕಾರಣಕ್ಕೆ ಸ್ಥಗಿತಗೊಳ್ಳುವಂತಾಗಬಾರದು. ಅನುದಾನ ಬಿಡುಗಡೆಗೆ ಪೂರಕ ಕ್ರಮ ಕೈಗೊಳ್ಳಬೇಕು ಎಂದು ಆರ್ಥಿಕ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.ಹಿಂದೆ ಈ ಗುರುಕುಲದಲ್ಲಿ 101 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. 8.42 ಕೋಟಿ ಬಿಡುಗಡೆ ಮಾಡಲಾಗಿದ್ದು, ಉನ್ನತ ಶಿಕ್ಷಣ ಸಚಿವರು, ಕನ್ನಡ–ಸಂಸ್ಕೃತಿ ಸಚಿವರು ಹಾಗೂ ಆರ್ಥಿಕ ಇಲಾಖೆ ಕಾರ್ಯದರ್ಶಿಗಳನ್ನೊಳಗೊಂಡ ಸಭೆ ನಡೆಸುವಂತೆ ಸೂಚಿಸಿದ್ದಾರೆ.

ಕೆರೆಗಳ ರಕ್ಷಣೆ, ಸ್ವಚ್ಛತೆಗೆ ಬಿಬಿಎಂಪಿ ಅಭಿಯಾನ

ಬೆಂಗಳೂರು: ನಗರದಲ್ಲಿ ಕೆರೆಗಳ ಸಂಖ್ಯೆ ಕಡಿಮೆಯಾಗುತ್ತಿರುವ ಹಿನ್ನೆಲೆ ಬಿಬಿಎಂಪಿಯು ಬೆಂಗಳೂರಿನ ಕೆರೆಗಳ ಸಂರಕ್ಷಣೆ ಹಾಗೂ ಸ್ವಚ್ಛತೆಗೆ ಹೊಸದೊಂದು ಅಭಿಯಾನವನ್ನು ಆರಂಭಿಸಿದೆ.

ಬೆಂಗಳೂರಿನ ಕೆರೆಗಳಲ್ಲಿ ಶನಿವಾರದಿಂದ ಒಂದು ವಾರಗಳ ಕಾಲ ಸ್ವಚ್ಛತಾ ಅಭಿಯಾನ ವನ್ನು ಆಯೋಜಿಸಿದ್ದು, ವಾರ್ಷಿಕ ನಿರ್ವಹಣೆ ಯಡಿ ಈ ಕೆರೆಗಳ ಅಭಿವೃದ್ಧಿಗೆ ಮುಂದಾಗಿದೆ. ಈ ನಿಟ್ಟಿನಲ್ಲಿ ಬೆಂಗಳೂರಿನ ಕೆರೆಗಳ ಅತಿಕ್ರಮಣ, ಕೆರೆಗಳ ಸಂರಕ್ಷಣೆ ಮಾಡುತ್ತಿಲ್ಲ ಎನ್ನುವ ಆರೋಪಗಳಿಂದ ಮುಕ್ತವಾಗಲು ಬಿಬಿಎಂಪಿ ಮುಂದಾಗಿದೆ. ಈ ಕೆರೆಗಳ ಸ್ವಚ್ಛತಾ ಅಭಿಯಾನವನ್ನು ನಿರ್ವಹಣೆ ಗುತ್ತಿಗೆದಾರರ ಕಾರ್ಮಿಕರು ಹಾಗೂ ಯಂತ್ರೋಪಕರಣ ಗಳನ್ನು ಉಪಯೋಗಿಸಿಕೊಂಡು ಮಾಡಲಾಗು ತ್ತಿದ್ದು,

ತೋಟಗಾರಿಕೆ ಹಾಗೂ ಮಳೆ ನೀರು ಚರಂಡಿ ವಿಭಾಗದ ವಾರ್ಷಿಕ ನಿರ್ವಹಣಾ ತಂಡಗಳು ಸಹ ಕೈಜೋಡಿಸಲಿವೆ ಎಂದು ಬಿಬಿಎಂಪಿ ಹೇಳಿದೆ.

ವಿವಿಧ ಸ್ವಚ್ಛತಾ ಕಾರ್ಯ: ಕೆರೆಗಳ ಸ್ವಚ್ಛತಾ ಅಭಿಯಾನದ ಭಾಗವಾಗಿ ಕೆರೆಗಳ ಒಳಹರಿವು, ಹೊರಹರಿವಿನ ಭಾಗಗಳಲ್ಲಿ ಸ್ವಚ್ಛ ಮಾಡು ವುದು, ಹೂಳು ತೆಗೆಯುವುದು, ಪಾದಚಾರಿ ಮಾರ್ಗಗಳಲ್ಲಿ ಪ್ಲಾಸ್ಟಿಕ್ ತೆಗೆಯುವುದು ಸೇರಿ ದಂತೆ ಸ್ವಚ್ಛತಾ ಕಾರ್ಯ ನಡೆಯಲಿದ್ದು, ಕೆರೆಯ ನೀರಿನ ಭಾಗದಲ್ಲಿ ಬೆಳೆದಿರುವ ಕಳೆ ಗಳನ್ನು ಸ್ವಚ್ಛಗೊಳಿಸುವಂತೆ ಅರಣ್ಯ, ಪರಿಸರ ಮತ್ತು ಹವಾಮಾನ ವೈಪರೀತ್ಯ ನಿರ್ವಹಣೆ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಒತ್ತುವರಿ ಸರ್ವೆ, ತೆರವು: ಬೆಂಗಳೂರಿನಲ್ಲಿ ರುವ ಕೆರೆಗಳ ಒತ್ತುವರಿ ತೆರವು ಕಾರ್ಯಾಚರಣೆ ಯನ್ನೂ ಬಿಬಿಎಂಪಿ ಈಗ ನಡೆಸುತ್ತಿದ್ದು, ಒತ್ತು ವರಿ ಸರ್ವೆ ಹಾಗೂ ತೆರವು ಕೆಲಸ ನಡೆದಿದೆ. ಅದರಂತೆ ಪೂರ್ವ ವಲಯದ ಕಗ್ಗದಾಸಪುರ ಕೆರೆಗೆ ಸಂಬಂಧಿಸಿದಂತೆ ಕಂದಾಯ ಇಲಾಖೆ ಕೆರೆಯ ಸರ್ವೆ ಮಾಡಿದೆ. ಅದರಲ್ಲಿ 2.50 ಗುಂಟೆಯಲ್ಲಿ ಶೆಡ್ ಹಾಗೂ ಖಾಲಿ ಪ್ರದೇಶ ಒತ್ತುವರಿಯಾಗಿದೆ ಎಂದು ಹೇಳಲಾಗಿದೆ. ಇದೀಗ ಬಿಬಿಎಂಪಿಯು 2.50 ಗುಂಟೆ ಪ್ರದೇಶದ ಒತ್ತುವರಿಯನ್ನು ತೆರವುಗೊಳಿಸಿದೆ.

ವಿವಾಹಿತೆ ಟೆಕ್ಕಿ ಶವ ಪತ್ತೆ

ಬೆಂಗಳೂರು: ವಿವೇಕನಗರದ ಬಾಡಿಗೆ ಮನೆಯಲ್ಲಿ ನೇಣುಬಿಗಿದ ಸ್ಥಿತಿ ಯಲ್ಲಿ ವಿವಾಹಿತೆ ಟೆಕ್ಕಿ ಶವ ಪತ್ತೆಯಾ ಗಿದೆ. ಉಡುಪಿ ಜಿಲ್ಲೆಯ ಕುಂದಾಪುರ ಮೂಲದವರಾದ ಮೇಘನಾ ಶೆಟ್ಟಿ(27) ಮೃತ ಮಹಿಳೆ. ಮೇಘನಾ ಖಾಸಗಿ ಕಂಪನಿಯಲ್ಲಿ ಎಂಜಿನಿಯರ್ ಆಗಿ ಕಾರ್ಯನಿರ್ವಹಿಸು ತ್ತಿದ್ದರು. ಕಳೆದ 2 ವರ್ಷದ ಹಿಂದೆ ತೀರ್ಥಹಳ್ಳಿಯ ಮೂಲದ ಎಂಜಿನಿಯರ್ ಸುದೀಪ್ ಶೆಟ್ಟಿ ಜತೆ ವಿವಾಹವಾಗಿತ್ತು. ಜತೆಗೆ ದಂಪತಿಗೆ ಒಂದು ವರ್ಷದ ಹೆಣ್ಣು ಮಗು ಸಹ ಇದೆ.

ಪೋಷಕರಿಂದ ಪತಿ ವಿರುದ್ಧ ಕೊಲೆ ಆರೋಪ: ಎಲ್ಲವೂ ಚೆನ್ನಾಗಿದ್ದ ಕುಟುಂಬದಲ್ಲಿ ಇತ್ತೀಚೆಗೆ ಪದೇಪದೇ ಹಣಕ್ಕಾಗಿ ಪತಿ ಕುಟುಂಬದಿಂದ ಕಿರುಕುಳ ನೀಡುತ್ತಿದ್ದು, ಶುಕ್ರವಾರ ರಾತ್ರಿ ಇದೇ ವಿಚಾರಕ್ಕೆ ದಂಪತಿ ನಡುವೆ ಜಗಳವಾಗಿದೆ. ಶನಿವಾರ ಬೆಳಗ್ಗೆ ಕಿಟಕಿಗೆ ನೇಣು ಬಿಗಿದುಕೊಂಡ ಸ್ಥಿತಿಯಲ್ಲಿ ಶವ ಪತ್ತೆಯಾಗಿದೆ. ಸ್ಥಳಕ್ಕೆ ವಿವೇಕ ನಗರ ಪೊಲೀಸರು ಭೇಟಿ ನೀಡಿದ್ದರು. ಇತ್ತ ಮೃತ ಮೇಘನಾ ಪೋಷಕರು, ಆಕೆಯ ಪತಿ ಸುದೀಪ್ ಕೊಲೆ ಮಾಡಿದ್ದಾನೆ. ಜತೆಗೆ ಸುದೀಪ್ ಪೋಷಕರು ವರದಕ್ಷಿಣೆ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿದ್ದಾರೆ. ಮೇಘನಾ ಪತಿಯನ್ನು ವಶಕ್ಕೆ ಪಡೆದ ಪೊಲೀಸರು ವಿಚಾರಣೆ ನಡೆಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀ ಲೋಕವರಪು ಭಾಸ್ಕರ ಸಾಯಿ ಕೊಂಡಲ್ ರಾವ್** ರವರ ತಮ್ಮ ಮಾಲಿಕತ್ವಕ್ಕೊಳಪಟ್ಟ ಈ ಹಿಂದೆ **ಶ್ರೀ ಬಾಲರಾಜ್** ಮತ್ತು ಅವರ ಕುಟುಂಬಸ್ಥರಿಂದ ಹಿಂದಿನ ಮಾಲಿಕರಾದ **ಶ್ರೀಮತಿ ಲಕ್ಷ್ಮಿ ರಾಮ್ ನಾರಾಯಣ ನಿಶಾದ್** ರವರಿಗೆ ಬರೆದುಕೊಟ್ಟು ಬೆಂಗಳೂರು ಬಿದರಹಳ್ಳಿ ಉಪನೋಂದಣಾಧಿಕಾರಿಯರ ಕಛೇರಿಯಲ್ಲಿ ದಸ್ತಾವೇಜು ಸಂಖ್ಯೆ ಬಿಡಿಹೆಚ್–1–01409/2015–16 ಆಗಿ ನೋಂದಣಿಯಾಗಿ ಸಿ.ಡಿ.ಸಂಖ್ಯೆ ಬಿಡಿಹೆಚ್‌ಡಿ121 ರಲ್ಲಿ ಶೇಖರಣೆಯಾದ 04-09-2015 ನೇ ದಿನಾಂಕದ ಮೂಲ ಕ್ರಯಪತ್ರವು ಕಳೆದುಹೋಗಿರುತ್ತದೆ.

ಸದರಿ ಮೂಲ ಕ್ರಯಪತ್ರವು ಯಾರಿಗಾದರು ಸಿಕ್ಕಿದ್ದು, ಈ ಕೆಳಕಂಡವರಿಗೆ ಮಾಹಿತಿ ನೀಡಿದ್ದಲ್ಲಿ ಅಥವಾ ಹಿಂದಿರುಗಿಸಿದ್ದಲ್ಲಿ ಸೂಕ್ತ ಬಹುಮಾನ ಕೊಡಲಾಗುವುದು. ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ತೆರನಾದ ಹಕ್ಕಿದ್ದಲ್ಲಿ ಸೂಕ್ತ ಪುರಾವೆಯೊಂದಿಗೆ ಲಿಖಿತ ರೂಪದಲ್ಲಿ ಈ ಕೆಳಕಂಡವರಿಗೆ ತಕ್ಷಣ ಸಲ್ಲಿಸುವುದು.

ಸಹಿ/–
ಮೋಹನದಾಸ ಎನ್., ನ್ಯಾಯವಾದಿ,
3944/ಎ, 2ನೇ ಅಡ್ಡರಸ್ತೆ, 'ಬಿ' ಬ್ಲಾಕ್, ರಾಜಾಜಿನಗರ 2ನೇ ಹಂತ, ಸುಬ್ರಹ್ಮಣ್ಯನಗರ, ಬೆಂಗಳೂರು–560021.
ಸಂ.ದೂ: 9448129391 / 9886776714

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀ ಅಲೀಮ್ ಉದ್ದಿನ್ ಮತ್ತು ಶ್ರೀಮತಿ ವಹಿದಾ ಬಾನು** ರವರ ತಮ್ಮ ಮಾಲಿಕತ್ವಕ್ಕೊಳಪಟ್ಟ ಈ ಹಿಂದೆ **ಶ್ರೀ ಮಹಮ್ಮದ್ ಮುಸ್ತಾಫೀಝುರ್ ರಹಮಾನ್** ರವರಿಂದ ಹಿಂದಿನ ಮಾಲಿಕರಾದ **ಮೆ॥ ಸ್ವಿಚ್ಚಿಂಗ್ ಆವೋ ಎಲೆಕ್ಟ್ರೋ ಪವರ್ ಲಿಮಿಟೆಡ್‌ಗೆ** ಬರೆದುಕೊಟ್ಟು ಬೆಂಗಳೂರು ಹೆಬ್ಬಾಳ ಉಪನೋಂದಣಾಧಿಕಾರಿಯರ ಕಛೇರಿಯಲ್ಲಿ ದಸ್ತಾವೇಜು ಸಂಖ್ಯೆ ಹೆಚ್‌ಬಿಬಿ–1–03343/2011–12 ಆಗಿ ನೋಂದಣಿಯಾಗಿ ಸಿ.ಡಿ.ಸಂಖ್ಯೆ ಹೆಚ್.ಬಿಬಿಡಿ56 ರಲ್ಲಿ ಶೇಖರಣೆಯಾದ 13–12–2011 ನೇ ದಿನಾಂಕದ ಮೂಲ ಕ್ರಯಪತ್ರದ 4ನೇ ಹಾಳೆ ಎಚಿದರೆ 7ನೇ ಪುಟ ಕಳೆದುಹೋಗಿರುತ್ತದೆ.

ಸದರಿ ಮೂಲ ಕ್ರಯಪತ್ರದ 4ನೇ ಹಾಳೆಯು ಯಾರಿಗಾದರು ಸಿಕ್ಕಿದ್ದು, ಈ ಕೆಳಕಂಡವರಿಗೆ ಮಾಹಿತಿ ನೀಡಿದ್ದಲ್ಲಿ ಅಥವಾ ಹಿಂದಿರುಗಿಸಿದ್ದಲ್ಲಿ ಸೂಕ್ತ ಬಹುಮಾನ ಕೊಡಲಾಗುವುದು. ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ತೆರನಾದ ಹಕ್ಕಿದ್ದಲ್ಲಿ ಸೂಕ್ತ ಪುರಾವೆಯೊಂದಿಗೆ ಲಿಖಿತ ರೂಪದಲ್ಲಿ ಈ ಕೆಳಕಂಡವರಿಗೆ ತಕ್ಷಣ ಸಲ್ಲಿಸುವುದು.

ಸಹಿ/–
ಮೋಹನದಾಸ ಎನ್., ನ್ಯಾಯವಾದಿ,
3944/ಎ, 2ನೇ ಅಡ್ಡರಸ್ತೆ, 'ಬಿ' ಬ್ಲಾಕ್, ರಾಜಾಜಿನಗರ 2ನೇ ಹಂತ, ಸುಬ್ರಹ್ಮಣ್ಯನಗರ, ಬೆಂಗಳೂರು–560021.
ಸಂ.ದೂ: 9448129391 / 9886776714

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಶ್ರೀ. ಪುಲಿನ್ ಮಿಸ್ತ್ರಿ ಬಿನ್ ಲೇಟ್ ಉಪೇನ್ ಮಿಸ್ತ್ರಿ, ಇವರು ಕೆಳಗೆ ಷೆಡ್ಯೂಲ್‌ನಲ್ಲಿ ತಿಳಿಸಿರುವ ಸ್ಥಿರಾಸ್ತಿ ಸ್ವತ್ತಿಗೆ ಮಾಲೀಕರಾಗಿರುತ್ತಾರೆ ಮತ್ತು ಶ್ರೀ. ಎಮ್.ಶೇಕ್ ಹೈದರ್, ಮಜಾದ್ ಫಾಷಾ, ಶ್ರೀ.ಸಾದಿಕ್ ಫಾಷಾ, ಮತ್ತು ರಫೀಕ್ ಪಾಷಾ, ಇವರುಗಳನ್ನು ಪ್ರತಿನಿಧಿಸುವ ಜಿ.ಪಿ.ಎ.ದಾರರಾದ ಶ್ರೀ. ನರೇಂದ್ರ ಕುಮಾರ್ ರವರು ಶ್ರೀಮತಿ ಸಿ.ಗ್ರೇಸಿ ರೋಸರಿ ರವರ ಹೆಸರಿಗೆ ಬರೆದುಕೊಟ್ಟಿರುವ ಕ್ರಯ ಪತ್ರದ ದಿನಾಂಕ: 28–10–1996, ದಸ್ತಾವೇಜು ನಂ.3636/ 1995–96, 1ನೇ ಪುಸ್ತಕ, ಈ ಸ್ವತ್ತು, ಅನೇಕಲ್, ಬೆಂಗಳೂರು. ಉಪ ನೋಂದಣಿ ಕಛೇರಿಯಲ್ಲಿ ನೊಂದಣಿಯಾಗಿರುವ ಮೂಲ ಅಸಲಿ ಕ್ರಯ ಪತ್ರವನ್ನು ಕಳೆದುಕೊಂಡಿರುತ್ತಾರೆ. ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಾದರೂ ಸ್ವತ್ತಿನ ಮೇಲೆ ಸ್ವಾಧೀನವನ್ನು ಹೊಂದಿದ್ದರೆ, ಅದನ್ನು ಈ ದಿನಾಂಕದಿಂದ ನೋಟೀಸು ಪ್ರಕಟವಾದ **ಏಳು ದಿನಗಳ** ಒಳಗಾಗಿ ಕೆಳಸಹಿದಾರರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತು
ಬೆಂಗಳೂರು ಜಿಲ್ಲೆ, ಅನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಇಂಡ್ಲಬೆಲೆ ಗ್ರಾಮ, ಪ್ರಸ್ತುತ ಬಿದರಗುಪ್ಪೆ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬರುವ ವಸತಿ ಸ್ವತ್ತಿನ ಖಾಲಿ ಸೈಟಿನ ಬಿಯರಿಂಗ್ ಸೈಟ್ ನಂ.11, ಕನೇಷುಮಾರಿ ನಂ.194, ಜಂಜರ್ ನಂ.718, ಸ್ವತ್ತಿನ ನಂ.193/11, '11ಬಿ' ರಂತೆ ಬಿಯರಿಂಗ್ ಈ–ಖಾತಾ ನಂ.150200100200300776, ವಸತಿ ಉದ್ದೇಶಕ್ಕಾಗಿ ಪರಿವರ್ತಿತ ಸರ್ವೆ ನಂ.37/1, 37/2, 197/1 ಮತ್ತು 197/2,ರ ಆದೇಶ ಸಂಖ್ಯೆ: ನಂ.B.Dis.ALN. SR.(A)5/1992-93, ದಿನಾಂಕ: 22–09–1992, ಇದರ ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ 30 ಅಡಿಗಳು, ಮತ್ತು ಉತ್ತರದಿಂದ ದಕ್ಷಿಣದಲ್ಲಿ 40 ಅಡಿಗಳು, ಒಟ್ಟಾರೆ 1200 ಚದರ ಅಡಿಗಳು, ಈ ಸ್ವತ್ತಿಗೆ ಚಕ್ಕುಬಂದಿ:– **ಪೂರ್ವಕ್ಕೆ** : ಸೈಟ್ ನಂ.12, **ಪಶ್ಚಿಮಕ್ಕೆ** : ಸೈಟ್ ನಂ.10, **ಉತ್ತರಕ್ಕೆ** : 25 ಅಡಿಗಳ ರಸ್ತೆ, **ದಕ್ಷಿಣಕ್ಕೆ** : ಸೈಟ್ ನಂ.2.

ಎನ್ ಜಗದೀಶ್ ಕುಮಾರ್, ವಕೀಲರು
ನಂ.30/1, 2ನೇ ಮಹಡಿ, 7ನೇ ಕ್ರಾಸ್, ಎನ್.ಆರ್.ಕಾಲೋನಿ ಬಸ್ ನಿಲ್ದಾಣದ ಹತ್ತಿರ, ಹೋಟೆಲ್ ದ್ವಾರಕ ಎದುರು, ಬೆಂಗಳೂರು–560019,

ಕುಖ್ಯಾತ ಕಳ್ಳನ ಸೆರೆ

ಬೆಂಗಳೂರು: ರಾತ್ರಿ ವೇಳೆಯಲ್ಲಿ ಮನೆ ಬೀಗ ಮುರಿದು ಕಳವು ಮಾಡುತ್ತಿದ್ದ 22 ಕಳ್ಳತನ ಕೃತ್ಯಗಳಲ್ಲಿ ಭಾಗಿಯಾಗಿದ್ದ ಕುಖ್ಯಾತ ಕನ್ನಗಳ್ಳನನ್ನು ಬಂಧಿಸಿರುವ ಜ್ಞಾನಭಾರತಿ ಪೊಲೀಸರು 8.50 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಿದ್ದಾರೆ.

ರಘುವನಹಳ್ಳಿಯ ಬಾಲಾಜಿ ಲೇಔಟ್ 4ನೇ ಕ್ರಾಸ್ ನ ರಘು ಅಲಿಯಾಸ್ ಪೆಪ್ಪಿ (24) ಬಂಧಿತ ಆರೋಪಿ. ಬಂಧಿತನಿಂದ 8.50 ಲಕ್ಷ ಮೌಲ್ಯದ 120 ಗ್ರಾಂ ತೂಕದ ಚಿನ್ನಾಭರಣ, 1 ದ್ವಿಚಕ್ರ ವಾಹನವನ್ನು ಜಪ್ತಿ ಮಾಡಲಾಗಿದೆ ಎಂದು ಡಿಸಿಪಿ ಗಿರೀಶ್ ತಿಳಿಸಿದರು.

ಆರೋಪಿಯ ಬಂಧನದಿಂದ ತಮಿಳು ನಾಡಿನ ಕೊಯಮತ್ತೂರು ಠಾಣೆಯ 2 ಕನ್ನ ಕಳವು ಪ್ರಕರಣಗಳು ಮತ್ತು ಆಂಧ್ರಪ್ರದೇಶದ ಚಿತ್ತೂರು ಠಾಣೆಯ 2 ಕನ್ನಕಳವು ಪ್ರಕರಣ ಪತ್ತೆಯಾಗಿರುತ್ತವೆ. ಈತನ ವಿರುದ್ಧ ವಿವಿಧ ಪೊಲೀಸ್ ಠಾಣೆಗಳಲ್ಲಿ ಒಟ್ಟು 22 ಪ್ರಕರಣ ದಾಖಲಾಗಿರುವುದು ತನಿಖಾ ಕಾಲದಲ್ಲಿ ಕಂಡು ಬಂದಿರುತ್ತದೆ. ಕಳೆದ ಸೆ.8 ರಂದು ಮಂಗನಹಳ್ಳಿಯ ಖಾಲಿದ್ ನಯಾಜ್ ಖಾನ್ ಮನೆಯ ಮನೆಯ ಬೀಗ ಮುರಿದ 220 ಗ್ರಾಂ ತೂಕದ ಚಿನ್ನ, 50 ಸಾವಿರ ನಗದು, ಅಮೇಜಾನ್ ಕಿಂಡಲ್ ಹಾಗೂ ಒಂದು ಕೆಟಿಎಂ ಬೈಕ್ ಕಳವು ಮಾಡಿಕೊಂಡಿದ್ದ ಪ್ರಕರಣ ಬೆನ್ನತ್ತಿ ಕಾರ್ಯಾಚರಣೆ ನಡೆಸಿ ಆರೋಪಿ ಬಂಧಿಸಲಾಗಿದೆ ಎಂದರು. ಆರೋಪಿಯ ಬಂಧನದಿಂದ ಕೊಯಮತ್ತೂರು ಠಾಣೆಯ 2 ಕನ್ನಗಳವು ಪ್ರಕರಣ ಗಳು ಮತ್ತು ಆಂಧ್ರಪ್ರದೇಶದ ಚಿತ್ತೂರು ಠಾಣೆಯ 2 ಕನ್ನಕಳವು ಪ್ರಕರಣ ಪತ್ತೆಯಾಗಿವೆ.

ಗಾಳಿಯಲ್ಲಿ ಗುಂಡು: 6 ಜನರ ಬಂಧನ

ಬೆಂಗಳೂರು: ಹಣಕಾಸಿನ ವಿಚಾರಕ್ಕೆ ಪಿಸ್ತೂಲಿನಿಂದ ಗಾಳಿಯಲ್ಲಿ ಗುಂಡುಹಾರಿಸಿದ್ದ ರೌಡಿಶೀಟರ್ ಸಹಿತ ಆರು ಆರೋಪಿಗಳನ್ನು ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರೌಡಿಶೀಟರ್ ಸಿರಾಜುದ್ದೀನ್ ಅಲಿಯಾಸ್ ಬುಲ್ಲು, ಇಲಿಯಾಸ್ ಸೇರಿದಂತೆ 6 ಜನರನ್ನು ಬಂಧಿಸಲಾಗಿದೆ. ರೌಡಿಶೀಟರ್ ಸಿರಾಜುದ್ದೀನ್ ಹಾಗೂ ಪ್ಲೈವುಡ್ ಅಂಗಡಿ ಮಾಲೀಕ ಇಲಿಯಾಸ್ ನಡುವೆ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಚಿಕ್ಕ ಗಲಾಟೆಯಾಗಿತ್ತು. ಸೆ.20ರಂದು ರಾತ್ರಿ ಪಿಸ್ತೂಲ್ ಹಿಡಿದು ಬಂದಿದ್ದ ಸಿರಾಜುದ್ದೀನ್, ಇಲಿಯಾಸ್‌ನ ಎದೆಗೆ ಪಿಸ್ತೂಲ್ ಇಟ್ಟು ಬೆದರಿಸಿದ್ದ. ಅಷ್ಟರಲ್ಲಿ ಅಕ್ಕಪಕ್ಕದ ಅಂಗಡಿಯಲ್ಲಿದ್ದವರು ಜಮಾಯಿಸಿದ್ದರು. ಈ ವೇಳೆ ಯಾರೂ ಅಡ್ಡ ಬರಬಾರದೆಂದು ಬೆದರಿಸಿದ್ದ ಸಿರಾಜುದ್ದೀನ್ ಒಂದು ಸುತ್ತು ಏರ್‌ಫೈರ್ ಮಾಡಿದ್ದ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಬಳಿಕ ಸ್ಥಳದಿಂದ ಬೈಕ್‌ನಲ್ಲಿ ಪರಾರಿಯಾಗಲು ಮುಂದಾದಾಗ ಇಲಿಯಾಸ್ ಕಡೆಯವರು ಬೈಕ್ ಹಿಂಬದಿ ಕುಳಿತಿದ್ದ ಮೊಹಮ್ಮದ್ ಖುರ್ರಂ ಪಾಷಾ ಎಂಬಾತನನ್ನು ಹಿಡಿದು ಥಳಿಸಿದ್ದರು. ಬಳಿಕ ಘಟನೆ ಸಂಬಂಧ ಸ್ಥಳೀಯರು ಸುದ್ದಗುಂಟೆಪಾಳ್ಯ ಠಾಣೆಗೆ ಮಾಹಿತಿ ನೀಡಿದ್ದರು. ಈ ಹಿನ್ನೆಲೆಯಲ್ಲಿ ಸಿರಾಜುದ್ದೀನ್ ಹಾಗೂ ಇಲಿಯಾಸ್ ಇಬ್ಬರ ವಿರುದ್ಧವೂ ದೂರು ದಾಖಲಿಸಿಕೊಂಡು 6 ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೆಟ್ರೋ: ಹಸಿರು ಮಾರ್ಗ ಶೀಘ್ರ

ಬೆಂಗಳೂರು: ನಮ್ಮ ಮೆಟ್ರೋದ ಹಸಿರು ಮಾರ್ಗದಲ್ಲಿ ಮೆಟ್ರೋ ಸುರಕ್ಷತಾ ಆಯುಕ್ತರ ತಂಡ ಸುರಕ್ಷತಾ ತಪಾಸಣೆಯನ್ನು ನಡೆಸಿದ್ದು, ಈ ಮಾರ್ಗದಲ್ಲಿ ಕಾರ್ಯಾಚರಣೆಗೆ ಅನುಮತಿ ನೀಡಿದೆ. ನಮ್ಮ ಮೆಟ್ರೋದ ಅಧಿಕಾರಿಗಳು ಈ ಕುರಿತು ಮಾಹಿತಿ ಹಂಚಿಕೊಂಡಿದ್ದು, ನಮ್ಮ ಮೆಟ್ರೋ ರೇಷ್ಮೆ ಸಂಸ್ಥೆಯಿಂದ ನಾಗಸಂದ್ರ ವರೆಗಿನ ಹಸಿರು ಮಾರ್ಗವನ್ನು ನಾಗಸಂದ್ರದಿಂದ ಮಾದಾವರದವರೆಗೆ 3.7ಕಿ. ಮೀ.ವಿಸ್ತರಣೆ ಮಾಡಲಾಗಿದ್ದು, ಹಲವು ಅಡೆತಡೆಗಳ ನಡುವೆಯೂ ಕಾಮಗಾರಿ ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಪ್ರಾಯೋಗಿಕ ಸಂಚಾರವನ್ನು ನಡೆಸಲಾಗಿದೆ.

ಬಿಗ್‌ಬಾಸ್ ಸ್ಪರ್ಧಿ ಜಗದೀಶ್ ವಕೀಲರಲ್ಲ: ಸಂಘ ಪತ್ರ

ಬೆಂಗಳೂರು: ಬಿಗ್ ಬಾಸ್ 11ನೇ ಆವೃತ್ತಿಯಲ್ಲಿ ಸ್ಪರ್ಧಿಯಾಗಿರುವ ಕೆ. ಎನ್.ಜಗದೀಶ್ ಕುಮಾರ್ ಅವರ ವಕೀಲಿಕೆ ಪರವಾನಗಿ ದೆಹಲಿಯ ವಕೀಲರ ಪರಿಷತ್‌ನ ನೋಂದಣಿ ಸಮಿತಿಯು ರದ್ದುಪಡಿಸಿದ್ದು ಅದನ್ನು ಭಾರತೀಯ ವಕೀಲರ ಪರಿಷತ್ ಅನುಮೋದಿಸಿರುವುದರಿಂದ ಅವರನ್ನು ವಕೀಲರು ಎಂದು ಸಂಬೋಧಿಸಬಾರದು. ತಪ್ಪಿದಲ್ಲಿ ಕ್ರಮಕ್ಕೆಗೊಳ್ಳಲಾಗುವುದು ಎಂದು ಖಾಸಗಿ ಕನ್ನಡ ವಾಹಿನಿಯ ಮುಖ್ಯಸ್ಥರಿಗೆ ಬೆಂಗಳೂರು ವಕೀಲರ ಸಂಘ ಪತ್ರ ಬರೆದಿದೆ.

ಹಿಮಾಂಶು ಭಾಟಿ ವರ್ಸಸ್ ಕೆ.ಎನ್.ಜಗದೀಶ್ ಕುಮಾರ್ ದೂರಿನ ಪ್ರಕರಣದಲ್ಲಿ 2024ರ ಮಾರ್ಚ್ 23ರಂದು ದೆಹಲಿ ವಕೀಲರ ಪರಿಷತ್‌ನ ನೋಂದಣಿ ಸಮಿತಿಯು ಜಗದೀಶ್ ಅವರ ನೋಂದಣಿ ರದ್ದುಪಡಿಸಿದೆ. ಏಪ್ರಿಲ್ 5ರಂದು ಅದನ್ನು ಭಾರತೀಯ ವಕೀಲರ ಪರಿಷತ್ ಅನುಮೋದಿಸಿದೆ. ಜಗದೀಶ್ ಅವರ 12ನೇ ತರಗತಿ ಪ್ರಮಾಣಪತ್ರ ನಕಲಿಯಾಗಿದೆ. ಹೀಗಾಗಿ, ಅದರ ಬೆನ್ನಿಗೇ ಅವರು ಪಡೆದ ಕಾನೂನು ಪದವಿಯೂ ಅಸಿಂಧುವಾಗಲಿದೆ ಎಂದು ದೆಹಲಿ ವಕೀಲರ ಪರಿಷತ್ ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಈ ಮಾಹಿತಿಯನ್ನು ಬೆಂಗಳೂರು ವಕೀಲರ ಸಂಘವು ಪತ್ರದೊಂದಿಗೆ ಲಗತ್ತಿಸಿದೆ. ರಾಜ್ಯ ವಕೀಲರ ಪರಿಷತ್ ಬಹು ಹಿಂದೆಯೇ ಜಗದೀಶ್ ವಕೀಲಿಕೆಗೆ ನಿರ್ಬಂಧ ವಿಧಿಸಿದೆ. ಇತ್ತೀಚೆಗೆ ದೆಹಲಿ ವಕೀಲರ ಸಂಘವು ಅವರ ವಿರುದ್ಧ ಕ್ರಮಕ್ಕೈಗೊಂಡಿರುವುದರಿಂದ ಕಾರ್ಯಕ್ರಮದಲ್ಲಿ ಜಗದೀಶ್ ಅವರನ್ನು ವಕೀಲ ಅಥವಾ ವಕೀಲ್‌ಸಾಬ್ ಎಂದು ಸಂಬೋಧಿಸಬಾರದು ಎಂದು ಪತ್ರದಲ್ಲಿ ಎಚ್ಚರಿಕೆ ನೀಡಲಾಗಿದೆ.

ಅಮಾನ್ಯ ನೋಟು ವಿನಿಮಯಕ್ಕೆ ಕೇಂದ್ರದ ನಿಯಮ ಕಡ್ಡಾಯ

ಬೆಂಗಳೂರು: ಅಮಾನ್ಯಗೊಂಡ ನೋಟುಗಳ ವಿಲೇವಾರಿ ಮತ್ತು ವಿನಿಮಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರಕಾರ 2017ರಲ್ಲಿ ಹೊರಡಿಸಿರುವ ಮಾರ್ಗಸೂಚಿ ಅನುಸರಿಸಬೇಕು ಎಂದು ಅಧೀನ ನ್ಯಾಯಾಲಯಗಳು ಮತ್ತು ತನಿಖಾ ಸಂಸ್ಥೆಗಳಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಮತ್ತು ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ್ ಅವರ ವಿಭಾಗೀಯ ಪೀಠ ಈ ಆದೇಶ ನೀಡಿದೆ. ಈ ಸಂಬಂಧ ಸಲ್ಲಿಕೆಯಾಗಿದ್ದ ಅರ್ಜಿ ವಿಲೇವಾರಿ ಮಾಡಿ ಆದೇಶಿಸಿದೆ.

2016ರ ಡಿ.30ಕ್ಕೆ ಮುನ್ನ ತನಿಖಾ ಸಂಸ್ಥೆಗಳು ಸಲ್ಲಿಸಿರುವ ಅಮಾನ್ಯಗೊಂಡ ನೋಟುಗಳಿಗೆ ಕೇಂದ್ರದ ನಿಯಮ ಅನ್ವಯವಾಗಲಿದೆ. ಕೇಂದ್ರ ಹಲವು ಷರತ್ತುಗಳೊಂದಿಗೆ 2017ರ ಮೇ 12 ರಂದು ಅಮಾನ್ಯಗೊಂಡ ನೋಟುಗಳ ವಿಲೇವಾರಿ, ನ್ಯಾಯಾಲಯದಿಂದ ಬಿಡುಗಡೆ ಮತ್ತು ವಿನಿಯಮಕ್ಕೆ ಸಂಬಂಧಿಸಿದಂತೆ ವಿವರವಾದ ಮಾರ್ಗಸೂಚಿ ಹೊರಡಿಸಿದೆ. ಹಾಗಾಗಿ ತನಿಖಾ ಸಂಸ್ಥೆಗಳು ಆ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ನ್ಯಾಯಾಲಯ ನಿರ್ದೇಶನ ನೀಡಿದೆ.

ಕೇಂದ್ರಕ್ಕೆ ನೇರವಾಗಿ ಮನವಿ ಸಲ್ಲಿಸಲಿ: ವಿಚಾರಣೆ ವೇಳೆ ಆರ್‌ಬಿಐ ಪರ ವಾದಿಸಿದ್ದ ವಕೀಲರು, ಅಮಾನ್ಯಗೊಂಡ ಕರೆನ್ಸಿ ಕಾನೂನುಬದ್ಧ ಟೆಂಡರ್ ನೊಂದಿಗೆ ವಿನಿಮಯ ಮಾಡಿಕೊಳ್ಳುವ ವಿನಂತಿ ಪರಿಗಣಿಸಲಾಗುವುದಿಲ್ಲ. ಏಕೆಂದರೆ ಇದನ್ನು ಕೇಂದ್ರ ಸರಕಾರ ಮಾತ್ರ ಪರಿಗಣಿಸಬಹುದು. ಹಾಗಾಗಿ ನ್ಯಾಯಾಲಯ, ಅರ್ಜಿದಾರರು ಬೇಕಿದ್ದರೆ ತಮ್ಮ ನೋಟುಗಳ ವಿನಿಯಮ ಸಂಬಂಧ ಕೇಂದ್ರಕ್ಕೆ ನೇರವಾಗಿ ಮನವಿ ಸಲ್ಲಿಸಬಹುದು ಎಂದು ನಿರ್ದೇಶನ ನೀಡಿದೆ. ಅಲ್ಲದೆ, ಆರ್‌ಬಿಐ ನ ವಕೀಲರು ಸರಿಯಾಗಿ ಸೂಚಿಸಿದಂತೆ, ತನಿಖಾ ಅಧಿಕಾರಿಗಳು ವಶಪಡಿಸಿಕೊಂಡಿರುವ ಬ್ಯಾಂಕ್ ನೋಟುಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದೆ. 2017ರ ಮೇ 12ರಂದು ಹಣಕಾಸು ಸಚಿವಾಲಯ ಹೊರಡಿಸಿದ ಅಧಿಸೂಚನೆಯಲ್ಲಿ ಸೂಚಿಸಲಾದ ಕಾರ್ಯವಿಧಾನ ಅನುಸರಿಸುವ ಅಗತ್ಯವಿದೆ ಎಂದು ಪೀಠ ತಿಳಿಸಿದೆ. ಜತೆಗೆ, ಅಂತಹ ಕಾರ್ಯವಿಧಾನ ಅನುಸರಿಸದಿದ್ದರೆ, ಕಾನೂನುಬದ್ಧವಾಗಿ ಅಮಾನ್ಯಗೊಂಡ ನೋಟುಗಳನ್ನು ವಿನಿಮಯ ಮಾಡಿಕೊಳ್ಳಲು ವಿಳಂಬವಾದ ಪ್ರಯತ್ನದಲ್ಲಿ ಯಾವುದೇ ಪಾತ್ರ ಹೊಂದಿರದ ಅನೇಕ ದಾವೆದಾರರು ಪೂರ್ವಾಗ್ರಹ ಪೀಡಿತರಾಗಿ ನ್ಯಾಯಾಲಯದ ಮೊರೆ ಹೋಗ ಬಹುದು. ಇದರಿಂದ ದಾವೆಗಳು ಹೆಚ್ಚಾಗಲಿವೆ ಎಂದು ಹೈಕೋರ್ಟ್ ಅಭಿಪ್ರಾಯ ಪಟ್ಟಿದೆ. ಕಲಬುರಗಿ ಮೂಲದ ಸಂಜುಕುಮಾರ್ ಸಲ್ಲಿಸಿದ್ದ ಅರ್ಜಿ ಪುರಸ್ಕರಿಸಿ ಏಕಸದಸ್ಯ ಪೀಠ ನೀಡಿದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲಾಗಿದ್ದು, ನೋಟು ನಿಷೇಧಿತ ಕರೆನ್ಸಿಯ ಮೌಲ್ಯವನ್ನು ಕಾನೂನು ಬದ್ಧವಾಗಿ ವಿನಿಮಯ ಮಾಡಿಕೊಳ್ಳಲು ತಮ್ಮ ಪ್ರಾತಿನಿಧ್ಯವನ್ನು ಪರಿಗಣಿಸುವಂತೆ ಆರ್‌ಬಿಐಗೆ ಸೂಚನೆ ನೀಡಿದೆ.

ಸಮಾಚಾರ ಸಣ್ಣದಲ್ಲ

ಚಲಿಸುತ್ತಿದ್ದ ಕಾರಿನಲ್ಲಿ ಏಕಾಏಕಿ ಬೆಂಕಿ

ಬೆಂಗಳೂರು: ಚಲಿಸುತ್ತಿದ್ದ ಕಾರು ಏಕಾಏಕಿ ಹೊತ್ತಿ ಉರಿದ ಘಟನೆ ಅತ್ತಿಬೆಲೆ ಸಮೀಪದ ಯಡವನಹಳ್ಳಿ ಬಳಿ ನಡೆದಿದೆ. ಚಲಿಸುತ್ತಿದ್ದ ಕ್ರೇಟಾ ಕಾರಿನ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಕೂಡಲೇ ರಸ್ತೆ ಮಧ್ಯದಲ್ಲೇ ಕಾರು ನಿಲ್ಲಿಸಿ ಚಾಲಕ ಹಾಗೂ ಇತರ ಪ್ರಯಾಣಿಕರು ಕೆಳಗಡೆ ಇಳಿದಿದ್ದಾರೆ. ಹೊಸೂರು ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಘಟನೆ ನಡೆದಿದ್ದು, ಸ್ಥಳಕ್ಕೆ ಅತ್ತಿಬೆಲೆ ಪೊಲೀಸರು ಭೇಟಿ ಪರಿಶೀಲನೆ ನಡೆಸಿದ್ದಾರೆ.

ಪಂಚಾಯತಿ ನೌಕರರ ಪ್ರತಿಭಟನೆ ಅಂತ್ಯ

ಬೆಂಗಳೂರು: ಫ್ರೀಡಂ ಪಾರ್ಕನಲ್ಲಿ ಹಲವು ದಿನಗಳಿಂದ ಪ್ರತಿಭಟನೆಯಲ್ಲಿ ತೊಡಗಿದ್ದ ಗ್ರಾಮ ಪಂಚಾಯಿತಿ ನೌಕರರನ್ನು ಭೇಟಿ ಮಾಡಿ ಮನವೊಳಿಸುವಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್ ಯಶಸ್ವಿಯಾಗಿದ್ದು, ಸಾರ್ವಜನಿಕರಿಗೆ ತೊಂದರೆಯಾಗದಂತೆ ತಮ್ಮ ಜಿಲ್ಲೆಗಳಿಗೆ ಹಿಂತಿರುಗಿ ಕರ್ತವ್ಯಕ್ಕೆ ಹಾಜರಾಗಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ಮೂಲಕ ತಿಳಿಸಿರುವ ಅವರು, ಗ್ರಾಮ ಪಂಚಾಯಿತಿ ಸದಸ್ಯರ ಒಕ್ಕೂಟ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನೌಕರರ ವೃಂದದ ಸಂಘಗಳ ಪ್ರತಿನಿಧಿಗಳ ಜತೆ ಶುಕ್ರವಾರ ನಡೆದ ಸಭೆಯಲ್ಲಿ ಬೇಡಿಕೆಗಳ ಕುರಿತು ಸವಿಸ್ತಾರವಾಗಿ ಚರ್ಚಿಸಿದ್ದು, ಸರಕಾರ ಕೂಡ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಈ ಸಂಬಂಧ ಅಕ್ಟೋಬರ್ 10ರಂದು ಮತ್ತೆ ಸಭೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ದುರ್ಗಾಪೂಜೆ ಆಚರಣೆ ಸಿದ್ಧತೆಗೆ ಹೈಕೋರ್ಟ್ ಅಸ್ತು

ಬೆಂಗಳೂರು: ಸಂಪಂಗಿ ರಾಮನಗರದ ಬನ್ನಪ್ಪ ಪಾರ್ಕ್ ಆಟದ ಮೈದಾನದಲ್ಲಿ ದುರ್ಗಾ ಪೂಜೆ ಆಚರಣೆಗೆ ಪೂರ್ವಭಾವಿ ಸಿದ್ಧತೆಗಾಗಿ ಐದು ದಿನಗಳ ಕಾಲಾವಕಾಶ ಕೋರಿರುವ ಅರ್ಜಿದಾರರ ಮನವಿ ಪುರಸ್ಕರಿಸುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಹೈಕೋರ್ಟ್ ಆದೇಶಿಸಿದೆ. ನವರಾತ್ರಿ ಉತ್ಸವದ ಪೂಜೆಗೆ ಪೂರ್ವಭಾವಿ ಸಿದ್ಧತೆಯಾಗೆ ಇದೇ 6ರಿಂದ 8ರವರೆಗೆ ಪೆಂಡಾಲ್, ಶಾಮಿಯಾನ ಹಾಕಲು ಬಿಬಿಎಂಪಿಗೆ ನಿರ್ದೇಶಿಬೇಕು ಎಂದು ಕೋರಿ ನವಜಾಗರಣ ಸಾರ್ವಜನಿಕ ಶ್ರೀ ದುರ್ಗಾಪೂಜಾ ಸಮಿತಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಎಸ್.ಆರ್. ಕೃಷ್ಣಕುಮಾರ್ ಮತ್ತು ಎಂ ಜಿ ಉಮಾ ನೇತೃತ್ವದ ರಜಾಕಾಲೀನ ವಿಭಾಗೀಯ ಪೀಠವು ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರರ ಹೈಕೋರ್ಟ್ ವಕೀಲ ಬ್ರಿಜೇಶ್ ಪಾಟೀಲ್ ಅವರು ಅರ್ಜಿದಾರರು ಅಕ್ಟೋಬರ್ 9ರಿಂದ 13ರವರೆಗೆ ಸಾರ್ವಜನಿಕ ನವರಾತ್ರಿ ಉತ್ಸವ ಆಚರಿಸಲಿದ್ದಾರೆ. ಇದರ ಸಿದ್ಧತೆಗಾಗಿ 6ರಿಂದ 8ರವರೆಗೆ ಪೆಂಡಾಲ್, ಮಳೆ ರಕ್ಷಣಾ ಶಾಮಿಯಾನ ಹಾಕಲು ಅವಕಾಶ ನೀಡುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ನಿರ್ದೇಶಿಸಬೇಕು ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ಪೀಠವು ಅರ್ಜಿದಾರರ ಮನವಿ ಪುರಸ್ಕರಿಸುವಂತೆ ಬಿಬಿಎಂಪಿ ಆಯುಕ್ತರಿಗೆ ನಿರ್ದೇಶಿಸಿ ಅರ್ಜಿ ವಿಲೇವಾರಿ ಮಾಡಿತು.

ಅರ್ಜಿ ಆಹ್ವಾನ

ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ 2024-25ನೇ ಸಾಲಿನ ಸೆರೆಬ್ರಲ್ ಪಾಲ್ಸಿ, ಪಾರ್ಕಿನ್ಸನ್, ಕಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಗಳ ಆರೈಕೆದಾರರಿಗೆ ಪ್ರತಿತಿಂಗಳು ಸಾವಿರು ರು. ಪ್ರೋತ್ಸಾಹಧನವನ್ನು ನೀಡುವ ಯೋಜನೆಯಡಿಯಲ್ಲಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲು ಆಫ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಅ.7ರಿಂದ ಅರ್ಜಿಯನ್ನು ಪ್ರಾರಂಭಿಸಲಾಗುತ್ತದೆ. ಅರ್ಜಿ ಸಲ್ಲಿಸಲು ಅ.30 ರಂದು ಕೊನೆಯ ದಿನಾಂಕವಾಗಿದೆ. ಹೆಚ್ಚಿನ ಮಾಹಿತಿಗಾಗಿ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರನ್ನು, ನಗರ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ನಗರ ಪುನರ್ವಸತಿ ಕಾರ್ಯಕರ್ತರನ್ನು ಸಂಪರ್ಕಿಸಲು ತಿಳಿಸಲಾಗಿದೆ

ಆನೇಕಲ್ಲಿನ ಕಲ್ಯಾಣ ಮಂಟಪ ರಸ್ತೆಯಲ್ಲಿರುವ ಶ್ರೀ ಕಾಳಿಕಾ ಕಾಮಟೇಶ್ವರ ಸ್ವಾಮಿ ದೇವಾಲಯದಲ್ಲಿ ಶರನ್ನವರಾತ್ರಿ ಅಂಗವಾಗಿ ಕಾಳಿಕ ಮಾತೆಗೆ ಚಂದ್ರಘಂಟಾ ದೇವಿ ಅಲಂಕಾರ ಮಾಡಲಾಗಿತ್ತು.

{ ಸಿ.ಟಿ.ರವಿ } ಮಾಜಿ ಸಚಿವ

ಭ್ರಷ್ಟಾಚಾರ ಭ್ರಷ್ಟಾಚಾರವೇ. ಉಪ್ಪು ತಿಂದವರು ನೀರು ಕುಡಿಯಲೇಬೇಕು . ಹಿಂದೆ ರಾಕ್ಷಸರು ನಾವು ಯಾರಿಗೂ ಹೆದರುವುದಿಲ್ಲ ಎಂದು ಹೇಳುತ್ತಿದ್ದರಂತೆ. ಸಿಎಂ ಸಿದ್ದರಾಮಯ್ಯನವರು ನಾನು ಯಾರಿಗೂ ಹೆದರಲ್ಲ, ಬಿಜೆಪಿ-ಜೆಡಿಎಸ್‌ಗೆ ಹೆದರಲ್ಲ, ರಾಜೀನಾಮೆ ಕೊಡಲ್ಲ ಎಂದು ಹೇಳುತ್ತಿದ್ದಾರೆ. ಹಾಗಾದರೆ, ನಾವು ನಿಮ್ಮನ್ನ ಏನೆಂದು ಕರೆಯಬೇಕು.

ಹಲವು ಪ್ರದೇಶಗಳಲ್ಲಿ ಸಂಚಾರ ದಟ್ಟಣೆ | ವಾಹನ ಸವಾರರ ಪರದಾಟ | ಮನೆಗಳಿಗೆ ನುಗ್ಗಿದ ನೀರು

ಬೆಂಗಳೂರಿನಲ್ಲಿ ಭಾರಿ ಮಳೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜಧಾನಿ ಬೆಂಗಳೂರಿನಲ್ಲಿ ಶನಿವಾರವೂ ವರುಣನ ಆರ್ಭಟ ಮುಂದುವರಿದಿದ್ದು, ಬೆಳಗ್ಗೆಯಿಂದ ಮೋಡ ಕವಿದ ವಾತಾವರಣವಿದ್ದು ಮಧ್ಯಾಹ್ನ ವೇಳೆಗೆ ಭಾರೀ ಮಳೆಯಾಗಿದೆ.

ಬೆಳಗ್ಗೆಯಿಂದಲೂ ಅಲ್ಲಲ್ಲಿ ತುಂತುರು ಮಳೆಯಾಗುತ್ತಿದ್ದರೂ, ಸಂಜೆ ವೇಳೆಗೆ ಭಾರೀ ಮಳೆಯಿಂದ ನಗರದ ರಸ್ತೆಗಳು ಕೆರೆಯಂತಾಗಿ ವಾಹನ ಸವಾರರು ಪರದಾಡುವಂತಾಗಿದೆ. ಹಲವು ಪ್ರದೇಶಗಳಲ್ಲಿ ಸಂಚಾರ ದಟ್ಟಣೆಯುಂಟಾಗಿದ್ದು, ವಾಹನ ಸವಾರರು ನಿಂತಲ್ಲೇ ನಿಂತಿರಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಎಲೆಕ್ಟ್ರಾನಿಕ್ ಸಿಟಿ ಟೋಲ್ ಬಳಿ ರಸ್ತೆ ತುಂಬೆಲ್ಲಾ ನೀರು ನಿಂತಿತ್ತು. ವಾಹನ ಸವಾರರು ಗಂಟೆಗಟ್ಟಲೇ ಪರದಾಡುವ ಪರಿಸ್ಥಿತಿ ನಿರ್ಮಾಣವಾಯಿತು.

ಇನ್ನು ತಗ್ಗು ಪ್ರದೇಶಗಳಲ್ಲಿ ಮನೆಗೆ ನೀರು ನುಗ್ಗಿದ್ದು ನಿವಾಸಿಗಳು ರಾತ್ರಿಯಿಡೀ ಮನೆಯಿಂದ ನೀರು ಹೊರಹಾಕುವ ಕಾರ್ಯದಲ್ಲಿ ನಿರತರಾಗಿದ್ದರು. ಬಸವೇಶ್ವರ ನಗರದಲ್ಲಿ ಸುರಿದ ಭಾರೀ ಮಳೆಗೆ ಮನೆಯೊಳಗೆ ನೀರು ನುಗ್ಗಿದ್ದು ನೀರು ಹೊರ ಹಾಕಲು ಹರಸಾಹಸ ಪಡುವಂತಾಯಿತು.

ಗೋಡೆ ಕುಸಿತ; ಕಾರುಗಳ ಜಖಂ

ಬಿನ್ನಿಪೇಟೆಯಲ್ಲಿ ಭಾರೀ ಮಳೆಗೆ ಮನೆಯ ಕಾಂಪೌಂಡ್ ಗೋಡೆ ಕುಸಿದು ಬಿದ್ದಿದ್ದು, 5-6 ಕಾರುಗಳು ಜಖಂಗೊಂಡಿದೆ. ಜೀವನ್ ಬೀಮಾ ನಗರದಲ್ಲಿ ಗಾಳಿ ಮಳೆಗೆ ಮರ ಉರುಳಿಬಿದ್ದಿದ್ದು, ಸಂಚಾರ ಸ್ಥಗಿತಗೊಂಡಿದೆ. ಮಂಜುನಾಥ್ ನಗರದಲ್ಲಿ ನೀರು ನಿಂತಿದ್ದು, ಮೊಣಕಾಲುದ್ದ ನೀರಿನಲ್ಲಿ ಸಂಚರಿಸಲು ಸಾಧ್ಯವಾಗದೇ ಜನ ಪರದಾಡಿದರು. ಭಾರೀ ಮಳೆಗೆ ಅಂಡರ್‌ಪಾಸ್‌ಗಳಲ್ಲಿ ನೀರು ನಿಂತಿದ್ದು ಅಪಾಯದ ಸ್ಥಿತಿಯುಂಟಾಗಿದೆ. ವೀರಸಂದ್ರ ಸಿಗ್ನಲ್ ಸಂಪೂರ್ಣ ಮುಳುಗಡೆಯಾಗಿದೆ. ಇನ್ನು ವಿಂಡರ್ಸ್ ಮ್ಯಾನರ್ ಬ್ರಿಡ್ಜ್‌ನಿಂದ ಹೆಬ್ಬಾಳದವರೆಗೂ ಸಂಚಾರ ದಟ್ಟಣೆಯುಂಟಾಗಿದ್ದು, ವಾಹನಸವಾರರು ಎಚ್ಚರಿಕೆಯಿಂದ ಸಂಚರಿಸುವಂತೆ ಸಂಚಾರಿ ಪೊಲೀಸರು ಮನವಿ ಮಾಡಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿ ಮತ್ತೆ ಜಲಾವೃತ: ಬೆಂಗಳೂರಿನಲ್ಲಿ ಸುರಿದ ಮಳೆಗೆ ಎಲೆಕ್ಟ್ರಾನಿಕ್ ಸಿಟಿ ಅಕ್ಷರಶಃ ತತ್ತರಿಸಿ ಹೋಗಿದ್ದು, ಐಟಿ ಬಿಟಿ ಮಂದಿ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಹೊಸೂರು ಬೆಂಗಳೂರು ಮುಖ್ಯರಸ್ತೆಯ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಸುಮಾರು ಅರ್ಧ ಕಿಮೀ ರಸ್ತೆ ವರೆಗೆ ಮಳೆ ನೀರು ತುಂಬಿಕೊಂಡು ರಸ್ತೆಗಳು ಕೆರೆಯಂತಾಗಿರುವ ವಾತಾವರಣ ಕಂಡುಬಂದಿತು. ನಗರದ ಟೌನ್ ಹಾಲ್, ಕಾರ್ಪೋರೇಷನ್ ಸರ್ಕಲ್, ವೈಟ್ ಫೀಲ್ಡ್ , ಕೆಆರ್ ಮಾರುಕಟ್ಟೆ, ಕಾರ್ಪೋರೇಷನ್ , ಮೈಸೂರ್ ರೋಡ್, ಚಾಮರಾಜಪೇಟೆ, ಗಾಂಧಿಬಜಾರ್. ಉತ್ತರಹಳ್ಳಿ, ಆರ್‌ಆರ್ ನಗರ, ಮಲ್ಲೇಶ್ವರ, ಮೆಜೆಸ್ಟಿಕ್ ,ಬಸವೇಶ್ವರ ನಗರ, ನಾಗಪುರ, ಮಾರುತಿನಗರ, ಚಿಕ್ಕಪೇಟೆ, ರಾಜಾಜಿನಗರ, ನಂದಿನಿ ಲೇಔಟ್, ಮಹಾಲಕ್ಷ್ಮೀ ಲೇಔಟ್, ಮಹದೇವಪುರ ಸೇರಿದಂತೆ ಹಲವು ಭಾಗಗಳಲ್ಲಿ ಭಾರೀ ಮಳೆಯಾಗಿದೆ.

ಶೇಷಾದ್ರಿ ರಸ್ತೆಯಲ್ಲಿ ಟ್ರಾಫಿಕ್ ಜಾಮ್‌ನಿಂದ ಮುಂದಕ್ಕೆ ಚಲಿಸಲಾರದೇ ನಿಂತ ವಾಹನಗಳು

ಎಲ್ಲೆಲ್ಲಿ ಎಷ್ಟೆಷ್ಟು ಮಳೆ (ರಾತ್ರಿ 10 ಗಂಟೆ ವೇಳೆಗೆ)

- ಹಂಪಿನಗರ - 90 ಮಿಮೀ
- ಬಸವೇಶ್ವರ ನಗರ - 80 ಮಿಮೀ
- ನಾಗಪುರ - 66.5 ಮಿಮೀ
- ಮಾರುತಿ ಮಂದಿರ - 59.5 ಮಿಮೀ
- ರಾಜಾಜಿನಗರ ನಗರ - 56.5 ಮಿಮೀ
- ನಂದಿನಿ ಲೇಔಟ್-51.50ಮಿಮೀ
- ಏರ್‌ಪೋರ್ಟ್-42.50 ಮಿಮೀ
- ನಾಯಂಡಹಳ್ಳಿ-40.50 ಮಿಮೀ
- ಮಾರತ್‌ಹಳ್ಳಿ-35.50 ಮಿಮೀ
- ಕಾಟನ್ ಪೇಟೆ-35.50 ಮಿಮೀ
- ಆರ್‌ಆರ್ ನಗರ 32.50 ಮಿಮೀ
- ಬಸವೇಶ್ವರ ನಗರ -104 50ಮಿಮೀ

ಸಮೀಕ್ಷೆಗೆ 600ಕ್ಕೂ ಹೆಚ್ಚು ಗಣತಿದಾರರ ನಿಯೋಜನೆ: ಸುರಳ್ಕರ್ ವಿಕಾಸ್ ಕಿಶೋರ್

ಬೀದಿಬದಿ ವ್ಯಾಪಾರಿಗಳ ಸಮೀಕ್ಷಾ ಕಾರ್ಯ ಆರಂಭ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆಯನ್ನು ಪ್ರಾರಂಭಿಸಲಾಗಿದ್ದು, ಶೀಘ್ರವೇ ಪೂರ್ಣಗೊಳಿಸಲು ಕಲ್ಯಾಣ ವಿಭಾಗದಿಂದ ಅಗತ್ಯ ಕ್ರಮವನ್ನು ಕೈಗೊಳ್ಳಲಾಗಿದೆ ಎಂದು ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಹೇಳಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಎಲ್ಲಾ ವಲಯಗಳಲ್ಲಿ ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆಯನ್ನು ಪ್ರಾರಂಭಿಸಲಾಗಿದ್ದು, ಶೀಘ್ರಗತಿಯಲ್ಲಿ ಪೂರ್ಣಗೊಳಿಸಲು ಕಲ್ಯಾಣ ವಿಭಾಗದಿಂದ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಬೀದಿ ಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿ ವ್ಯಾಪಾರ ನಿಯಂತ್ರಣ) ಅಧಿನಿಯಮ-2014 ಮತ್ತು ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ, ಬೀದಿ ಬದಿ ವ್ಯಾಪಾರದ ನಿಯಂತ್ರಣ ಮತ್ತು ಪರವಾನಗಿ) ಯೋಜನೆ-2020 ರಂತೆ ಬಿಬಿಎಂಪಿಯಲ್ಲಿ ನಗರ ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆಯನ್ನು ನಡೆಸಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ಪಾಲಿಕೆಯ ಎಲ್ಲಾ 8 ವಲಯಗಳಲ್ಲಿ ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆಯನ್ನು ಕೈಗೊಂಡಿದ್ದು, ಸಮೀಕ್ಷಾ ಕಾರ್ಯಕ್ಕಾಗಿ 600ಕ್ಕೂ ಹೆಚ್ಚು ಗಣತಿದಾರರನ್ನು ನಿಯೋಜಿಕೊಳ್ಳಲಾಗಿದೆ. ಮೊಬೈಲ್ ತಂತ್ರಾಂಶದ ಮೂಲಕ ಸಮೀಕ್ಷೆ ನಡೆಸಲಾಗುತ್ತಿದ್ದು, ಇದುವರೆಗೆ ವಲಯವಾರು ಸುಮಾರು 1800 ಬೀದಿ ಬದಿ ವ್ಯಾಪಾರಿಗಳನ್ನು ಸಮೀಕ್ಷೆ ಮೂಲಕ ಗುರುತಿಸಲಾಗಿದೆ ಎಂದಿದ್ದಾರೆ.

ಸಮೀಕ್ಷೆಯ ಅನುಸಾರ ಅರ್ಹ ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ಮತ್ತು ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು. ಅಲ್ಲದೇ ವಲಯ ಮಟ್ಟದಲ್ಲಿ ಪಟ್ಟಣ ಮಾರಾಟ ಸಮಿತಿಗಳನ್ನು ರಚಿಸಿ, ಬೀದಿ ಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿ ವ್ಯಾಪಾರ ನಿಯಂತ್ರಣ) ಅಧಿನಿಯಮ-2014 ಮತ್ತು ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ, ಬೀದಿ ಬದಿ ವ್ಯಾಪಾರದ ನಿಯಂತ್ರಣ ಮತ್ತು ಪರವಾನಗಿ) ಯೋಜನೆ-2020 ರಂತೆ ಬೀದಿ ವ್ಯಾಪಾರಿಗಳ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಪಾಲಿಕೆಯ ಕಲ್ಯಾಣ ವಿಭಾಗದಿಂದ ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆಯನ್ನು ಪ್ರಾರಂಭಿಸಲಾಗಿದ್ದು, ಈ ಬಗ್ಗೆ ಬೀದಿ ಬದಿ ವ್ಯಾಪಾರಿಗಳಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಬೀದಿ ನಾಟಕಗಳನ್ನು ಹಮ್ಮಿಕೊಂಡು ಅವರಿಗೆ ಸಿಗುವ ಸೌಲಭ್ಯಗಳ ಕುರಿತು ಅರಿವು ಮೂಡಿಸಲಾಗುತ್ತಿದೆ ಎಂದಿದ್ದಾರೆ.

ಸಮೀಕ್ಷೆಗೆ ಯಾವ ಯಾವ ದಾಖಲೆ ಅಗತ್ಯ

- ಆಧಾರ್ ಕಾರ್ಡ್
- ಮತದಾರರ ಗುರುತಿನ ಚೀಟಿ
- ಬ್ಯಾಂಕ್ ಪಾಸ್ ಬುಕ್
- ಕುಟುಂಬ ಪಡಿತರ ಚೀಟಿ
- ಕುಟುಂಬ ಸದಸ್ಯರ ಮಾಹಿತಿ
- ಸ್ವಯಂ ಘೋಷಣೆ ಪ್ರಮಾಣ ಪತ್ರ

ಬೆಂಗಳೂರಿನಲ್ಲಿ ಆಯೋಜಿಸಿದ್ದ ನಾಲ್ಕನೇ ಎಂಡೋಸ್ಕೋಪಿ ರಾಷ್ಟ್ರೀಯ ಸಮ್ಮೇಳನವನ್ನು ಸಂಸದ, ಜಯದೇವ ಹೃದ್ರೋಗ ಸಂಸ್ಥೆಯ ಮಾಜಿ ನಿರ್ದೇಶಕ ಡಾ. ಸಿಎನ್. ಮಂಜುನಾಥ್ ಉದ್ಘಾಟಿಸಿದರು. ಈ ವೇಳೆ ರಾಧಾಕೃಷ್ಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕಿ ಡಾ.ವಿದ್ಯಾ ವಿ.ಭಟ್ ಸೇರಿದಂತೆ ಹಲವರಿದ್ದರು.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2024-25ನೇ ಸಾಲಿನ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ, ನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಪೋಷಕರ ಮಕ್ಕಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕೆ ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ವಿದ್ಯಾರ್ಥಿಗಳು ವೆಬ್ ಸೈಟ್ www.sw.kar.nic.in ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ, ನಂ.20/1, 1ನೇ ಮಹಡಿ, ಜೆಲ್ಲೇಟಾ ಟವರ್, ಮಿಷನ್ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು. ದೂರವಾಣಿ ಸಂಖ್ಯೆ: 080-22240449, 9480843019 ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದೆ.

ದೈನಂದಿನ ವರದಿಗೆ ಆಯುಕ್ತರ ಸೂಚನೆ

ಬೆಂಗಳೂರು: ಎಲ್ಲಾ ಎಂಜಿ ನಿಯರ್‌ಗಳು ಮತ್ತು ಉನ್ನತ ಅಧಿಕಾರಿಗಳು ಪ್ರತಿ ದಿನ ತಾವು ಮಾಡಿದ ಕೆಲ ಸದ ವಿವರಗಳನ್ನು ತಮಗೆ ಕೈ ಬರಹದಲ್ಲಿ ವರದಿ ಸಲ್ಲಿಸಬೇಕು ಎಂದು ಬಿಡಿಎ ಆಯುಕ್ತ ಎನ್ ಜಯ ರಾಮ್ ಆದೇಶಿಸಿದ್ದಾರೆ. ಕಚೇರಿಯಲ್ಲಿ ಸರಿಯಾಗಿ ಕರ್ತವ್ಯ ನಿರ್ವಹಿಸದೇ ಸದಾ ವಿಶ್ರಾಂತಿಯ ಮನ ಸ್ಥಿತಿಯಲ್ಲಿ ಕಾಲ ಕಳೆಯುವ ಸಿಬ್ಬಂದಿಗೆ ಚುರುಕು ಮುಟ್ಟಿಸುವ ನಿಟ್ಟಿನಲ್ಲಿ ಈ ಕಾರ್ಯಕ್ಕೆ ಆಯುಕ್ತರು ಮುಂದಾಗಿದ್ದು, ದೈನಂದಿನ ವರದಿಯನ್ನು ಕೈಬರಹದಲ್ಲಿ ಕಚೇರಿಗೆ ಸಲ್ಲಿಸಬೇಕು ಎಂದು ಸೂಚನೆ ನೀಡಿದೆ.

ಆನೇಕಲ್‌ನಲ್ಲಿ ದಸರಾ ಸಂಭ್ರಮ

ಆನೇಕಲ್: ಆನೇಕಲ್ ನಗರದಲ್ಲಿ ದಸರಾ ಹಬ್ಬದ ಸಂಭ್ರಮ ಕಳೆಗಟ್ಟಿದೆ. ಆನೇಕಲ್ಲಿನ ಸ್ವಾಗತ ಕಮಾನಿನಿಂದ ಪ್ರಾರಂಭಗೊಂಡು ಗ್ರಾಮ ದೇವತೆ ಶ್ರೀ ಚೌಡೇಶ್ವರಿ ದೇಗುಲದವರೆಗೆ ಪ್ರಮುಖ ರಸ್ತೆಗಳು ದೀಪಾಲಂಕಾರಗಳಿಂದ ಕಂಗೊಳಿಸುತ್ತಿದೆ.

ಪ್ರಮುಖ ವೃತ್ತಗಳು, ಚೌಕದಲ್ಲಿ ಶಕ್ತಿದೇವತೆಗಳ ಬಾನೆತ್ತರದ ಕಟೌಟ್‌ಗಳು ವಿದ್ಯುತ್ ದೀಪಗಳಿಂದ ಅಲಂಕೃತಗೊಂಡು ಭಕ್ತಿ ಭಾವವನ್ನು ಮೂಡಿಸಿದರೆ ಶ್ರೀ ಚೌಡೇಶ್ವರಿ ಅಮ್ಮನವರ ದೇವಾಲಯದ ಮುಂದೆ ಪುಷ್ಪಾಲಂಕೃತ ಕಮಾನು ಭಕ್ತಾದಿಗಳನ್ನು ಆಕರ್ಷಿಸುತ್ತಿದೆ.

ದಿನನಿತ್ಯ ದೇವಿಗೆ ವಿಶೇಷ ಅಲಂಕಾರವನ್ನು ಮಾಡುತ್ತಿರುವ ಅರ್ಚಕರ ಕರ ಚಳಕ ಭಕ್ತಾದಿಗಳಲ್ಲಿ ಶ್ರದ್ಧಾ ಭಕ್ತಿಗಳೊಂದಿಗೆ ಸಂತಸವನ್ನು ನೀಡುತ್ತಿದೆ. ಸಮಿತಿಯ ಅಧ್ಯಕ್ಷ ಶ್ರೀನಿವಾಸ್ ಮಾಹಿತಿ ನೀಡಿ 25 ನೆಯ ವರ್ಷದ ಆನೆ ಅಂಬಾರಿ ಉತ್ಸವ ಅದ್ದೂರಿಯಾಗಿ ಏರ್ಪಡಿಸಿದ್ದು ರಾಜ್ಯ, ನೆರೆಯ ತಮಿಳುನಾಡು ಹಾಗೂ ಆಂಧ್ರ ಪ್ರದೇಶದಿಂದ ಭಕ್ತಾದಿಗಳು ಆಗಮಿಸುತ್ತಿದ್ದು ಈ ಬಾರಿ ಒಂದು ಲಕ್ಷಕ್ಕೂ ಹೆಚ್ಚು ಭಕ್ತರ ನಿರೀಕ್ಷೆ ಇದೆ. ನವರಾತ್ರಿಗಳ ಒಂಬತ್ತೂ ದಿನ ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆಯಿದ್ದು ವಿಜಯ ದಶಮಿಯಂದು ಇಡೀ ದಿನ ಅನ್ನದಾನ ಏರ್ಪಡಿಸಿದೆ ಎಂದರು.

ಸಮಿತಿಯ ಪದಾಧಿಕಾರಿಗಳಾದ ವೆಂಕಟರಾಜು, ಶಂಕರ್, ವೆಂಕಟೇಶ್, ರಮೇಶ್, ಇತರರು ಪಾಲ್ಗೊಂಡಿದ್ದರು.

ಆನೇಕಲ್ಲಿನ ಚೌಡೇಶ್ವರಿ ದೇಗುಲದಲ್ಲಿ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳು ಆಹ್ವಾನ ಪತ್ರಿಕೆ ಬಿಡುಗಡೆ ಮಾಡಿದರು.

ನಮ್ಮ ರಾಜ್ಯ, ಕೇರಳ ಮತ್ತು ತಮಿಳುನಾಡಿನಿಂದ 35ಕ್ಕೂ ಹೆಚ್ಚು ಜಾನಪದ ತಂಡಗಳು ದಸರಾ ಹಬ್ಬದ ಪ್ರಯುಕ್ತ ಆಕರ್ಷಕ ಪ್ರದರ್ಶನಗಳನ್ನು ನೀಡಲಿವೆ. ಕೇರಳದ ಆನೆ ಅಂಬಾರಿಯನ್ನು ಹೊರಲಿದ್ದು ಆನೇಕಲ್ಲಿನ ಪ್ರಮುಖ ರಸ್ತೆಗಳಲ್ಲಿ ಸಂಚರಿಸಲಿದೆ. ಸಂಜೆ ಬನ್ನಿ ಮಂಟಪ ಪೂಜೆ ಮುಗಿಸಿ ಸ್ವಸ್ಥಾನಕ್ಕೆ ಮರಳಿದ ನಂತರ ವರ್ಣ ರಂಜಿತ ಬಾಣಬಿರುಸುಗಳು ಮುಗಿಲು ಮುಟ್ಟಲಿದೆ.

-ಮುನಿರಾಜು, ಉಪಾಧ್ಯಕ್ಷ , ಚೌಡೇಶ್ವರಿ ದೇವಾಲಯ ಸಮಿತಿ

ರಾಶಿ ರಾಶಿ ತ್ಯಾಜ್ಯದ ನಡುವೆಯೇ ತರಕಾರಿ, ಸೊಪ್ಪು, ಹೂ ಮಾರಾಟ

ಕೆ.ಆರ್. ಮಾರುಕಟ್ಟೆಯಲ್ಲಿ ಕಸಗಳ ರಾಶಿ

ಬೆಂಗಳೂರು: ನಗರದ ಕೆಆರ್ ಮಾರುಕಟ್ಟೆಯಲ್ಲಿ ಸ್ವಚ್ಛತೆ ಮಾಯವಾಗಿದ್ದು, ದಿನನಿತ್ಯ ತ್ಯಾಜ್ಯಗಳ ನಡುವೆಯೇ ತರಕಾರಿ, ಸೊಪ್ಪು ಹೂಗಳನ್ನು ಮಾರಾಟ ಮಾಡುತ್ತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಕೆ.ಆರ್ ಮಾರುಕಟ್ಟೆಯಲ್ಲಿ ಉತ್ಪತ್ತಿಯಾಗುತ್ತಿರುವ ತ್ಯಾಜ್ಯಗಳನ್ನು ಪಾಲಿಕೆಯು ದಿನಕ್ಕೊಂದು ಬಾರಿ ಮಾತ್ರ ಸ್ವಚ್ಛಗೊಳಿಸುತ್ತಿದ್ದು, ಮತ್ತೆ ತುಂಬುವ ತ್ಯಾಜ್ಯಗಳ ನಡುವೆಯೇ ವ್ಯಾಪಾರಿಗಳು ತರಕಾರಿ, ಹಣ್ಣು, ಹೂವುಗಳ ಮಾರಾಟವನ್ನು ನಡೆಸುತ್ತಿದ್ದಾರೆ. ನಗರಕ್ಕೆ ರೈತರು ವಾಹನಗಳಲ್ಲಿ ಬಂದು ಸೊಪ್ಪು ತರಕಾರಿಗಳನ್ನು ಮಾರಾಟ ಮಾಡುತ್ತಿದ್ದು, ಜನರು ಇದೇ ಜಾಗದಲ್ಲಿ ಖರೀದಿಗೆ ಆಗಮಿಸುತ್ತಿರುತ್ತಾರೆ. ಇಲ್ಲಿ ಮಾರಾಟವಾಗದೇ ಉಳಿದ ತರಕಾರಿ ಹಣ್ಣು, ಸೊಪ್ಪುಗಳನ್ನು ಅಲ್ಲಲ್ಲೇ ಎಸೆದು ಹೋಗುವುದರ ಪರಿಣಾಮ ಅಲ್ಲಲೇ ಕೊಳೆತು ದುರ್ನಾತ ಬೀರುತ್ತಿದ್ದು, ಇದರಿಂದ ಬರುವ ದುರ್ನಾತದಿಂದಾಗಿ ಸಾರ್ವಜನಿಕರು ಮೂಗು ಮುಚ್ಚಿಕೊಂಡು ಹೋಗಬೇಕಾದ ಸ್ಥಿತಿ ಎದುರಾಗಿದೆ. ಜತೆಗೆ ಕಸ ಬಿದ್ದ ಜಾಗದಲ್ಲೇ ದಿನ ಬಳಕೆಯ ತರಕಾರಿ, ಸೊಪ್ಪು ಹಣ್ಣುಗಳನ್ನು ಮಾರಾಟ ಮಾಡುವುದರಿಂದಾಗಿ ರೋಗ ಹರಡುವ ಭಯ ಸೃಷ್ಟಿಯಾಗಿದ್ದು, ತ್ಯಾಜ್ಯ ವಿಲೇವಾರಿ ಕಡೆಗೆ ಗಮನಹರಿಸದ ಪಾಲಿಕೆ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಿಬ್ಬಂದಿಗೆ ಬಿಬಿಎಂಪಿ ಗ್ಲೌಸ್, ಮಾಸ್ಕ್ ಪೂರೈಸಲಿ

ಗಾಂಧಿ ಜಯಂತಿಯಂದು ಸ್ವಚ್ಛತಾ ಅಭಿಯಾನ ನಡೆಸಿದ ಬೆನ್ನಲ್ಲೇ ನಗರದ ಮಾರುಕಟ್ಟೆಗಳಲ್ಲಿ ಈ ರೀತಿ ಕಸ ಬಿದ್ದಿದ್ದು, ಗಾಂಧಿ ಜಯಂತಿಗೆ ಮಾತ್ರ ಸ್ವಚ್ಛತೆ ಪಾಠ ಸೀಮಿತವಾಯಿತೇ ಎನ್ನುವಂತಾಗಿದೆ. ಮುಖ್ಯ ಆಯುಕ್ತರು ಶುಕ್ರವಾರ ಪರಿಶೀಲನೆ ನಡೆಸಿ ಸ್ವಚ್ಛತೆಯ ಕುರಿತು ಮಾಹಿತಿ ನೀಡಿದರೂ ಕೂಡಾ ತ್ಯಾಜ್ಯ ಉಳಿದು ಹೋಗಿದೆ. ಕಸ ಎತ್ತುವ ಪಾಲಿಕೆ ಸಿಬ್ಬಂದಿಗೆ ಕಸ ಎತ್ತಲು ಹ್ಯಾಂಡ್ ಗ್ಲೌಸ್,ಮಾಸ್ಕ್ ಪಾಲಿಕೆ ನೀಡಬೇಕು. ಆದರೆ ಇದ್ಯಾವುದನ್ನೂ ಪೂರೈಸದೇ ಇರುವುದರಿಂದ ಕಸ ಎತ್ತಲು ಹಿಂದೇಟು ಹಾಕುವಂತಾಗಿದೆ ಎಂದೂ ಹೇಳಲಾಗುತ್ತಿದೆ.

48 ದಿನದಲ್ಲಿ ಸಿನಿಮಾ; ಸಿನಿಮೇಟ್ಸ್‌ಗೆ ತೆರೆ

ಬೆಂಗಳೂರು: ಜೈನ್ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗದ ವತಿಯಿಂದ ಚಿತ್ರೋದ್ಯಮದ ಪರಂಪರೆ ಮತ್ತು ಸಂಭ್ರಮ ಹಬ್ಬಿಸುವ ಕ್ರಿಯಾಶೀಲ ಕಾರ್ಯ ಕ್ರಮ ಸಿನಿಮೇಟ್ಸ್ 2.0 ಆಯೋಜಿಸಲಾಗಿತ್ತು. ಭಾರತೀಯ ಚಿತ್ರೋದ್ಯ ಮಕ್ಕೆ ಕೇಂದ್ರ ಬಿಂದುವಾದ ಒಂಬತ್ತು ಪ್ರಮುಖ ಭಾವ ನೆಗಳ ಮೇಲೆ ಆಧಾರಿತವಾದ 48 - ಗಂಟೆಗಳ ಕಿರು ಚಲನಚಿತ್ರ ನಿರ್ಮಾಣ ಸ್ಪರ್ಧೆಯಲ್ಲಿ, ಪ್ರತಿ ಚಲನಚಿತ್ರವು 'ನವರಸ' ದ ಪರಿಕಲ್ಪನೆಯ ಅಡಿಯಲ್ಲಿ ಮೂಡಿ ಬಂದಿದೆ.

ಡಾ. ದಿನೇಶ್ ನೀಲಕಂಠ್ ಮಾತನಾಡಿ, ಒಂದು ಕಥೆ ಭಾವನೆಗಳನ್ನು ಜಾಗೃತಗೊಳಿ ಸುವ, ಕಲ್ಪನಾ ಶಕ್ತಿಗೆ ಜೀವ ನೀಡಿ, ಕಥೆಗಳ ಮೂಲಕ, ಚಲನಚಿತ್ರಕಾರರು ತಮ್ಮ ಪ್ರೇಕ್ಷಕ ರೊಂದಿಗೆ ಆಳವಾದ ಸಂಬಂಧವನ್ನು ಹೊಂದಬ ಹುದು ಮತ್ತು ಅರ್ಥಪೂರ್ಣ ಅನುಭವವನ್ನು ಒದಗಿಸ ಬಹುದು. ಸಿನಿಮೇಟ್ಸ್ ಎಂಬುದು ಪತ್ರಿ ಕೋದ್ಯಮ ಮತ್ತು ಮಾಧ್ಯಮ ಸಂವಹನ ವಿಭಾ ಗದ ವತಿಯಿಂದ ನಿರ್ಮಿಸಲಾದ ಒಂದು ಪ್ರೋ ತ್ಸಾಹಕ ವೇದಿಕೆಯಾಗಿದ್ದು, ಇದನ್ನು ವಿದ್ಯಾರ್ಥಿ ಗಳನ್ನು ಭವಿಷ್ಯದ ಚಲನಚಿತ್ರ ನಿರ್ಮಾಪಕರಾಗಿ, ಕಥೆಗಾರರಾಗಿ, ಮತ್ತು ಚಲನಚಿತ್ರಕಾರರಾಗಿ ಬೆಳೆಯಲು ಸಹಾಯಕವಾಗಿದೆ ಎಂದರು.

ಚಲನಚಿತ್ರ ಅದ್ಭುತವಾಗಿದೆ

ಡಾ. ಪ್ರಿಯಾಂಕಾ ಉಪೇಂದ್ರ, ಮಾತನಾಡಿ, ಮಾಡುವ ಹೊಸದಾದ ಪರಿಕಲ್ಪನೆಯಲ್ಲಿ 48 ಗಂಟೆಯೊಳಗೆ ಚಲನಚಿತ್ರ ನಿರ್ಮಾಣ ಅದ್ಭುತವಾ ಗಿದ್ದು, ನಾನು ತಿಳಿದಿರುವಂತೆ, ಇದೊಂದು ಅನನ್ಯವಾದ ಕಲ್ಪನೆ. ಇದರಲ್ಲಿ ಸಾಕಷ್ಟು ಯೋಜನೆ, ಸೃಜನಶೀಲತೆ ಮತ್ತು ತಾಂತ್ರಿಕತೆ ಮುಖ್ಯವಾಗಿದ್ದು, ವಿಷಯದ ಮೇಲೆ ಏನು ಮಾಡಬೇಕು ಎಂಬುದರ ಮೇಲೆ ಗಮನ ಕೊಡಬೇಕು ಎಂದು ತಿಳಿಸಿದ್ದಾರೆ.

ಕುಮಾರಸ್ವಾಮಿ ಹೆದರುವುದು ದೇವರಿಗೆ, ನಾಡಿನ ಜನರಿಗೆ ಮಾತ್ರ | ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಕೇಂದ್ರ ಸಚಿವರ ತಿರುಗೇಟು

ಸಿದ್ದರಾಮಯ್ಯಗೆ ಏಕೆ ಭಯಪಡಲಿ: ಎಚ್.ಡಿ.ಕುಮಾರಸ್ವಾಮಿ

ಬೆಂಗಳೂರು: ಸಿಎಂ ಸಿದ್ದರಾಮಯ್ಯ ದೆವ್ವ ಆಗಿದ್ರೆ ಭಯ ಬೀಳಬೇಕು. ದೆವ್ವ ಅಲ್ಲವಲ್ಲಾ, ಅವರಂದ್ರೆ ನಾನು ಯಾಕೆ ಭಯಪಡಲಿ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಜೆಪಿ ನಗರದ ತಮ್ಮ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿ, ಜೆಡಿಎಸ್ ವೀಕ್ ಆಗುತ್ತೊ?, ಸ್ಟ್ರಾಂಗ್ ಆಗುತ್ತೊ?, ಅದನ್ನು ಭಗವಂತ ತೀರ್ಮಾನಿಸಲಿದ್ದಾರೆ. ಮೊದಲು ಸಮಸ್ಯೆ ಸರಿಪಡಿಸಿಕೊಳ್ಳಿ. ಇಂತಹ ಸಿದ್ದರಾಮಯ್ಯನಂತವರು ಲಕ್ಷ ಜನ ಬರಲಿ, ನಾನು ಹೆದರಲ್ಲ. ಹೆದರೋದು ನನ್ನ ಬೆಳೆಸಿರುವ ನಾಡಿನ ಜನಕ್ಕೆ ಮಾತ್ರ ಎಂದರು.

ರಾಜಕೀಯದಲ್ಲಿ ಸ್ವಂತ ದುಡಿಮೆ, ಕಾರ್ಯಕರ್ತರ ದುಡಿಮೆ ಮೇಲೆ ಬಂದಿದ್ದು, ಸಿದ್ದರಾಮಯ್ಯ ನೆರಳಲ್ಲಿ ಬಂದಿಲ್ಲ ಹಾಗೂ ಅವರ ಹೆಸರಲ್ಲಿ ನಾನು ರಾಜಕೀಯ ಮಾಡಿಲ್ಲ. ಹಾಗೆ ನೋಡಿದರೆ ಸಿಎಂ ಸಿದ್ದರಾಮಯ್ಯನವರು ನನ್ನ ಪಕ್ಷದ ಕಾರ್ಯಕರ್ತರು ಮತ್ತು ದೇವೇಗೌಡರ ನೆರಳಿನಲ್ಲಿ ಬಂದವರು. ಅದು ಯಾವುದೋ ಕೇಸ್ ಹಾಕಿಕೊಂಡು ನನ್ನ ಹೆದರಿಸಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಮೈಸೂರು ಅರಸರು ಮತ್ತು ಸರ್ ಎಂ ವಿಶ್ವೇಶ್ವರಯ್ಯ ಅವರ ದೂರದೃಷ್ಟಿಯಿಂದ ಎಚ್ ಎಂಟಿ ಕಾರ್ಖಾನೆ ಸ್ಥಾಪನೆಯಾಗಿದೆ. ಒಂದು ಕಾಲದಲ್ಲಿ ರಾಷ್ಟ್ರ ನಿರ್ಮಾಣಕ್ಕೆ ಅನನ್ಯ ಕೊಡುಗೆ ನೀಡಿದ್ದ ಈ ಕಾರ್ಖಾನೆ ಉಳಿಸುವ ನಿಟ್ಟಿನಲ್ಲಿ ಕೆಲ ಮಹತ್ವದ ಹೆಜ್ಜೆ ಇಡಲಾಗಿದೆ. ದೆಹಲಿಯ ಸಚಿವಾಲಯದ ಕಚೇರಿಯಲ್ಲಿ ಈ ಕಾರ್ಖಾನೆಯ ಪುನರುದ್ಧಾರದ ಬಗ್ಗೆ ಅನೇಕ ಸಭೆಗಳು ಆಗಿವೆ. ಎಲ್ಲಾ ಸಾಧಕ ಭಾದಕಗಳ ಬಗ್ಗೆ ಸಮಾಲೋಚನೆ ನಡೆದಿದೆ. ಕಾರ್ಖಾನೆ ಉಳಿಸುವ ವಿಚಾರದಲ್ಲಿ ನಾನು ರಾಜಿ ಆಗಲ್ಲ, ಅದಕ್ಕೆ ಅಗತ್ಯ ಸಲಹೆ ಪಡೆಯಲು ಒಂದು ಸಲಹಾ ಸಂಸ್ಥೆ ನೇಮಕ ಮಾಡಿಕೊಳ್ಳುವ ಬಗ್ಗೆ ಚಿಂತನೆ ಮಾಡಲಾಗಿದೆ. ನೀತಿ ಆಯೋಗದ ಜತೆಯೂ ಸಮಾಲೋಚನೆ ನಡೆಸುತ್ತಿದ್ದೇನೆ. ಒಳ್ಳೆಯ ದಿನ ಬರಬಹುದು. ಆಶಾವಾದಿಗಳಾಗಿ ಇರಿ ಎಂದು ಕಾರ್ಮಿಕರಿಗೆ ಭರವಸೆ ನೀಡಿದ್ದಾರೆ.



ಜಾಲಹಳ್ಳಿಯ ಎಚ್‌ಎಂಟಿ ಟೂಲ್ಸ್ ಮತ್ತು ಮಶೀನ್ ಘಟಕಕ್ಕೆ ಆಗಮಿಸಿದ ಸಚಿವ ಕುಮಾರಸ್ವಾಮಿ ಅವರನ್ನು ರೊಬೋಟಿಕ್ ಯಂತ್ರಗಳೇ ಹೂಗುಚ್ಛ ನೀಡಿ ಸ್ವಾಗತಿಸಿದ್ದು ವಿಶೇಷ. ಅಲ್ಲದೆ, ಆ ಯಂತ್ರಗಳೇ ಸಚಿವರ ಮೇಲೆ ಪುಷ್ಪವೃಷ್ಟಿ ಮಾಡಿದವು. ಕಾರ್ಖಾನೆಯ ಅಧ್ಯಕ್ಷ ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಕೊಹ್ಲಿ, ಪ್ರಧಾನ ವ್ಯವಸ್ಥಾಪಕ ಜತಿನ್ ಪ್ರಸಾದ್, ಕಾರ್ಮಿಕರ ಸಂಘದ ಅಧ್ಯಕ್ಷ ಹರೀಶ್ ಇದ್ದರು.

ಭಾವುಕರಾದ ಸಚಿವ

ಜಾಲಹಳ್ಳಿಯಲ್ಲಿರುವ ಎಚ್‌ಎಂಟಿ ಕಾರ್ಖಾನೆಯ ಟೂಲ್ಸ್ ಮತ್ತು ಮಶೀನ್ ವಿಭಾಗಕ್ಕೆ ಭೇಟಿ ನೀಡಿದ ವೇಳೆ, ಸಚಿವರಿಗೆ ಮನವಿ ಸಲ್ಲಿಸಿದ ಕಾರ್ಖಾನೆಯ ಕಾರ್ಮಿಕರ ಸಂಘದ ಅಧ್ಯಕ್ಷ ಹರೀಶ್, ಈ ಕಾರ್ಖಾನೆ ನಾವು ತಾಯಿಯಂತೆ ಭಾವಿಸುತ್ತಿದ್ದೇವೆ. ನಮ್ಮ ತಾಯಿ ಈಗ ಕಾಯಿಲೆಪೀಡಿತ ಆಗಿದ್ದಾಳೆ. ದಯಮಾಡಿ ಉಳಿಸಿಕೊಡಿ ಎಂದು ಮನವಿ ಮಾಡಿದಾಗ ಸಚಿವರು ಭಾವೋದ್ವೇಗಕ್ಕೆ ಒಳಗಾದರು. ನಾನು ರಾಜಕೀಯ ಬಂದಿದ್ದೇ ಆಕಸ್ಮಿಕ, ಎಂದೂ ಬರಬೇಕು ಎಂದು ಭಾವಿಸಿದವನಲ್ಲ. ನಾನು ಮೊದಲ ಬಾರಿಗೆ ಸಂಸದ ಆಗಿದ್ದು ಆಕಸ್ಮಿಕ, ಎರಡು ಬಾರಿ ಸಿಎಂ ಆಗಿದ್ದು ಆಕಸ್ಮಿಕ. ಕೇಂದ್ರ ಸಚಿವನಾಗಿರುವುದು ಕೂಡ ಆಕಸ್ಮಿಕ. ನರೇಂದ್ರ ಮೋದಿ ಅವರು ನನಗೆ ಈ ಅವಕಾಶ ನೀಡಿದ್ದಾರೆ. ಜನರ ಸೇವೆ ಮಾಡುವ ಅವಕಾಶ ಕೊಡುವುದಕ್ಕೆ ಇಷ್ಟೆಲ್ಲಾ ಆಕಸ್ಮಿಕಗಳು ನಡೆದಿವೆ. ನನ್ನ ಪ್ರಯತ್ನ ನಾನು ಮಾಡುತ್ತೇನೆ ಎಂದು ಹೇಳಿದರು.

ಬಿಜೆಪಿ-ಜೆಡಿಎಸ್ ನನ್ನ ಏಳಿಗೆ ಸಹಿಸುತ್ತಿಲ್ಲ | ಬಹುಕೋಟಿ ವೆಚ್ಚದ ಕಾಮಗಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ

ಕಲ್ಯಾಣ ಕರ್ನಾಟಕ ಅಭಿವೃದ್ಧಿಯೇ ನನ್ನ ಗುರಿ

ಮಾನ್ವಿ: ಕಲ್ಯಾಣ ಕರ್ನಾಟಕ ಭಾಗದ ಎಲ್ಲಾ ಜಿಲ್ಲೆಗಳನ್ನು ಅಭಿವೃದ್ಧಿ ಮಾಡುವುದೇ ನನ್ನ ಗುರಿಯಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮಾನ್ವಿಯಲ್ಲಿ ನಡೆದ ಕಾಂಗ್ರೆಸ್ ಪಕ್ಷದ ಬೃಹತ್ ಸ್ವಾಭಿಮಾನ ಸಮಾವೇಶದಲ್ಲಿ ಮಾತನಾಡಿದ ಸಿಎಂ, ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ತಮ್ಮ ಸರಕಾರ ಹಲವು ಯೋಜನೆಗಳನ್ನು ಕೈಗೊಂಡಿದೆ ಎಂದರು.

ಬಿಜೆಪಿ-ಜೆಡಿಎಸ್ ಸಹಿಸುತ್ತಿಲ್ಲ: ಸಮಾಜದ ಎಲ್ಲ ಜಾತಿ, ಧರ್ಮಗಳ ಬಡವರ ಪರವಾಗಿ ನಾನು ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸಿದ್ದೇನೆ. ಹಿಂದುಳಿದ ವರ್ಗಕ್ಕೆ ಸೇರಿದ ನಾನು ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿರುವುದನ್ನು ಬಿಜೆಪಿ-ಜೆಡಿಎಸ್‌ನವರಿಗೆ ಸಹಿಸಲಾಗುತ್ತಿಲ್ಲ ಎಂದು ತರಾಟೆಗೆ ತೆಗೆದು ಕೊಂಡರು. 40 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ್ದ ಸ್ವಾಭಿಮಾನಿ ಸಮಾವೇಶದಲ್ಲಿ ತಮಗೆ ವ್ಯಕ್ತವಾದ ಬೆಂಬಲಕ್ಕೆ ಭಾವುಕರಾದ ಸಿದ್ದರಾಮಯ್ಯ, ಜನರ ಪ್ರೀತಿ ಮತ್ತು ಅಭಿಮಾನಕ್ಕೆ ಚಿರಋಣಿ ಎಂದರು.

ರಾಯಚೂರು ಅಭಿವೃದ್ಧಿಗೆ ಹೆಚ್ಚಿನ ಅನುದಾನ: ಸಚಿವ ಬೋಸರಾಜು ಮಾತನಾಡಿ, ರಾಯಚೂರು ಜಿಲ್ಲೆಗೆ ಸಣ್ಣ ನೀರಾವರಿ ಇಲಾಖೆಯ ಮೂಲಕ ನಮ್ಮ



ಮಾನ್ವಿ ಪಟ್ಟಣದ ಸೂರ್ಯ ಕನ್ವೆನ್ಷನ್ ಹಾಲ್ ಮುಂಭಾಗದ ಭವ್ಯವಾದ ವೇದಿಕೆಯಲ್ಲಿ ಮಾನ್ವಿ ಸಿರವಾರ ತಾಲೂಕಿನ ಕಾಂಗ್ರೆಸ್ ಪಕ್ಷದ ಬೃಹತ್ ಸ್ವಾಭಿಮಾನ ಸಮಾವೇಶದಲ್ಲಿ ಬಹುಕೋಟಿ ವೆಚ್ಚದ ಕಾಮಗಾರಿಗಳಿಗೆ ಸಿಎಂ ಸಿದ್ದರಾಮಯ್ಯ ಚಾಲನೆ ನೀಡಿದರು.

ಕಾಂಗ್ರೆಸ್ ಸರಕಾರವು 676.85 ಕೋಟಿ ರು. ಮೊತ್ತದ ಅನುದಾನವನ್ನು ಹಂಚಿಕೆ ಮಾಡಲಾಗಿದ್ದು, ಚಿಕ್ಕಲ ಪರ್ವಿ ಹತ್ತಿರ ತುಂಗಭದ್ರಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ, ಮಾನ್ವಿ ತಾಲೂಕಿನ ಕುರ್ಡಿಕೆರೆ ತುಂಬಿಸುವ ಯೋಜನೆ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳು ಭರದಿಂದ ಸಾಗಿವೆ. ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಸಿದ್ದರಾಮ ಯ್ಯನವರು ವಿಶೇಷ ಆದ್ಯತೆ ವಹಿಸಿದ್ದಾರೆ ಎಂದು ಪ್ರಶಂಸಿಸಿದರು.

ಸುಸ್ಥಿರ ಕರ್ನಾಟಕ, ಸಮೃದ್ಧ ರಾಯಚೂರು ನಿರ್ಮಾಣದ ಗುರಿ ಸಾಧನೆಗೆ ನಮ್ಮ ಅನ್ನದಾತರ ಕಲ್ಯಾಣ ಮೂಲಮಂತ್ರವಾಗಿದೆ. ರೈತರು ಅಭಿವೃದ್ಧಿಯಾದರೆ ಜಿಲ್ಲೆಯೂ ಅಭಿವೃದ್ಧಿಯಾಗಲಿದೆ ಎಂದ ಸಚಿವರು, ಸಣ್ಣ ನೀರಾವರಿ ಇಲಾಖೆಯ ಮೂಲಕ ರಾಯಚೂರು ತಾಲೂಕಿನ 9 ಗ್ರಾಮಗಳ ಕೆರೆಗಳ ಅಭಿವೃದ್ಧಿ ಪಡಿಸುವುದರಿಂದ 766 ಹೆಕ್ಟೇರ್ ಜಮೀನುಗಳಿಗೆ ನೀರಾವರಿ ಅನುಕೂಲವಾಗಲಿದೆ ಹಾಗೂ ಅಲ್ಲಿನ ಪ್ರದೇಶದ ಅಂತರ್ಜಲ ಮಟ್ಟ ವೃದ್ಧಿಗೆ ಸಹಕಾರಿಯಾಗಲಿದೆ. ಮಾನ್ವಿ ತಾಲೂಕಿನಲ್ಲಿ 28 ಗ್ರಾಮಗಳಿಗೆ ಕುಡಿಯುವ ನೀರು, ಅಂತರ್ಜಲ ಅಭಿವೃದ್ಧಿ ಮತ್ತು 1995 ಹೆಕ್ಟೇರ್ ರೈತರ ಜಮೀನು ಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಯೋಜನೆ ಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸಚಿವರಾದ ಸತೀಶ್ ಜಾರಕಿಹೊಳಿ, ಶರಣು ಪಾಟೀಲ್, ಶಿವರಾಜ ತಂಗಡಗಿ, ಕೆ. ಎಚ್. ಮುನಿಯಪ್ಪ, ಶಾಸಕರಾದ ಜಿ ಹಂಪಯ್ಯ ನಾಯಕ, ಬಾದರ್ಲಿ ಹಂಪನಗೌಡ, ಶರಣೇಗೌಡ ಬಯ್ಯಪೂರು, ಬಸವನಗೌಡ ದದ್ದಲ್, ಬಸನಗೌಡ ತುರುವಿಹಾಳ,ಬಸನಗೌಡ ಸಿಂಧನೂರು, ವಸಂತ ಕುಮಾರ, ಮಾಗಡಿ ಬಾಲಕೃಷ್ಣ, ಪುರಸಭೆ ಅಧ್ಯಕ್ಷೆ ಲಕ್ಷ್ಮಿ, ಅಕ್ಬರ್ ಸಾಬ್, ಎಂ ಈರಣ್ಣ, ಸೈಯದ್ ಖಾಲಿದ್ ಖಾದ್ರಿ, ಎ ಬಾಲಸ್ವಾಮಿ ಕೊಡ್ಲಿ, ಚಂದ್ರಶೇಖರ ಕುರ್ಡಿ, ಸೇರಿದಂತೆ ನೂರಾರು ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

ಕುಮಾರಸ್ವಾಮಿ ವೀರನೂ ಅಲ್ಲ, ಶೂರನೂ ಅಲ್ಲ

ಕೊಟ್ಟ ಕುದುರೆ ಏರಲಾರದ ಎಚ್.ಡಿ. ಕುಮಾರಸ್ವಾಮಿ ವೀರನೂ ಅಲ್ಲ, ಶೂರನೂ ಅಲ್ಲ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ರಾಜ್ಯದ ಜನರಿಗೆ ಸಹಾಯ, ಅಭಿವೃದ್ಧಿ ಮಾಡುವ ಅವಕಾಶವೂ ಇತ್ತು. ಅಧಿಕಾರ, ಅವಕಾಶ ಇದ್ದಾಗ ಜನಪರ ಕೆಲಸ ಮಾಡದ ಕುಮಾರಸ್ವಾಮಿ ಮತ್ತು ಬಿಜೆಪಿಯವರು ಈಗ ನಮ್ಮ ಸರಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಸುಳ್ಳು ಮತ್ತು ಅಪಪ್ರಚಾರ ಮಾಡುತ್ತಿದ್ದಾರೆ. ರಾಜ್ಯದ ಬೊಕ್ಕಸ ಖಾಲಿ, ಅಭಿವೃದ್ಧಿ ಕಾರ್ಯಗಳಿಗೆ ಹಣ ಇಲ್ಲ ಎಂದು ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಸಿಎಂ ಸಿದ್ದರಾಮಯ್ಯ ಟೀಕಿಸಿದರು.

ಕನ್ನಡ ಕಾವಲು ಸಮಿತಿಯ ಅಧ್ಯಕ್ಷನಾಗಿ ರಾಜಕೀಯ ಜೀವನ ಆರಂಭಿಸಿದ ನಾನು, ಅಂದಿನಿಂದ ಇಂದಿನವರೆಗೆ ಸರಕಾರದ ಕಡತಗಳಿಗೆ ಕನ್ನಡ ಬಿಟ್ಟು ಬೇರೆ ಭಾಷೆಯಲ್ಲಿ ಸಹಿಯನ್ನೇ ಮಾಡಿಲ್ಲ. ಕನ್ನಡಿಗನಾಗಿ ಹುಟ್ಟಿರುವುದೇ ನನಗೆ ಹೆಮ್ಮೆಯ ಸಂಗತಿ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಸುಸ್ಥಿರ ಕರ್ನಾಟಕ ನಿರ್ಮಾಣಕ್ಕೆ ಬದ್ಧ

ದೇವದುರ್ಗ ತಾಲೂಕಿನ 4 ಗ್ರಾಮಗಳಿಗೆ ಅಂತರ್ಜಲ ಅಭಿವೃದ್ಧಿ ಮತ್ತು 150 ಹೆಕ್ಟೇರ್ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

ಮಸ್ಕಿ ತಾಲೂಕಿನ 8 ಗ್ರಾಮಗಳಿಗೆ ಅಂತ ರ್ಜಲ ಅಭಿವೃದ್ಧಿ ಮತ್ತು 250 ಹೆಕ್ಟೇರ್ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಸಿಂದನೂರು ತಾಲೂಕಿನ 5 ಗ್ರಾಮಗಳಿಗೆ ಅಂತರ್ಜಲ ಅಭಿವೃದ್ಧಿ ಮತ್ತು 600 ಹೆಕ್ಟೇರ್ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆಗಳನ್ನು ಆರಂಭಿಸಲಾಗಿದೆ.

ಲಿಂಗಸುಗುರು ತಾಲೂಕಿನ 2 ಗ್ರಾಮಗಳಿಗೆ ಅಂತರ್ಜಲ ಅಭಿವೃದ್ಧಿ ಮತ್ತು 95 ಹೆಕ್ಟೇರ್ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ರಾಯಚೂರು ಜಿಲ್ಲೆಯ ಏಳು ತಾಲೂಕುಗಳ ಸರ್ವತೋಮುಖ ಅಭಿವೃದ್ಧಿಯೊಂದಿಗೆ ಸಮೃದ್ಧ ರಾಯಚೂರು ಸುಸ್ಥಿರ ಕರ್ನಾಟಕ ನಿರ್ಮಾಣಕ್ಕೆ ನಮ್ಮ ಕಾಂಗ್ರೆಸ್ ಸರಕಾರ ಸದಾ ಬದ್ಧವಾಗಿದೆ ಎಂದು ಸಚಿವ ಬೋಸರಾಜು ತಿಳಿಸಿದರು.

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 14/24–25 ದಿನಾಂಕ: 04.10.2024

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ, ಚಿಕ್ಕಮಗಳೂರು ಜಿಲ್ಲೆ. ಲೋಕೋಪಯೋಗಿ ಇಲಾಖೆ ಉಪವಿಭಾಗಗಳಿಗೆ ಒಳಪಡುವ ಲೆಕ್ಕ ಶೀರ್ಷಿಕ 3054–03–337–0–05–200 ರಾಜ್ಯ ಹೆದ್ದಾರಿಗಳ ರಸ್ತೆ ನಿರ್ವಹಣೆ, 3054–04–337–1–10–200 ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ 8443 ಠೇವಣಿ ವಂತಿಕೆ, ಅಡಿಯಲ್ಲಿನ ಒಟ್ಟು 7 ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ, ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document KW - 1 & 2 ರಂತೆ) ವಿವರಗಳನ್ನು ಲಗತ್ತಿಸತಕ್ಕದ್ದು, ಗುತ್ತಿಗೆದಾರರಿಗೆ ಅಧಿನಿಯಮ 3ರಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಠ ಅಂದಾಜು ಮೊತ್ತ ರೂ.2.00 ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ.50.00 ಲಕ್ಷಗಳು ಆಗಿರುತ್ತವೆ, ಕೆಪಿಪಿ ಪೋರ್ಟಲ್ ಟೆಂಡರ್ ಸಲಿಸಬೇಕಾಗಿರುವ 7 ಕಾಮಗಾರಿಗಳಿಗೆ (ಇಂ ಸಂಖ್ಯೆ:13271 (3ನೇ ಕರೆ), 15978, 13818(4ನೇ ಕರೆ), 16050, 15763, 15282, 16053 ದಿ:14.10.2024 ರಂದು) ಸಂಜೆ 4.30 ಗಂಟೆಯೊಳಗೆ ಟೆಂಡರ್ ಸಲಿಸಬೇಕು, ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲಿ. ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/24–25/81/816

ಆಯುಷ್ ಇಲಾಖೆ
ಧನ್ವಂತರಿ ರಸ್ತೆ, ಬೆಂಗಳೂರು–560009. ದೂರವಾಣಿ: 080–22876553,
ಫ್ಯಾಕ್ಸ್ : 080–22340139, ಇ–ಮೇಲ್: directorayush.eproc.@gmail.com
ಸಂಖ್ಯೆ: ಆಯುಷ್/21/ಸಂಗ್ರಹಣಾ/2024–25 ದಿನಾಂಕ: 05.10.2024

ಇ–ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

2024–25ನೇ ಸಾಲಿನಲ್ಲಿ ರಾಷ್ಟ್ರೀಯ ಆಯುಷ್ ಅಭಿಯಾನದಡಿಯಲ್ಲಿ ಸರ್ಕಾರಿ ಆಯುಷ್ ಮಹಾವಿದ್ಯಾಲಯ ಮತ್ತು ಆಸ್ಪತ್ರೆಗಳಿಗೆ ಎಲ್‌ಇಡಿ ವಿಡಿಯೋ ವಾಲ್‌ಗಳನ್ನು ಖರೀದಿಸಿ ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999–2000 ನಿಯಮಗಳನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆಪಿಪಿ ಪೋರ್ಟಲ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗಾಗಿ, ಇ.ಎಂ.ಡಿ. ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳಿಗಾಗಿ ವೆಬ್‌ಸೈಟ್ **http://kppp.karnataka.gov.in** ನಲ್ಲಿ ನೋಡಬಹುದಾಗಿದೆ ಹಾಗೂ ಮೇಲ್ಕಂಡ ವಿಳಾಸದ ಕಛೇರಿ ವೇಳೆಯಲ್ಲಿ (ರಜಾದಿನಗಳನ್ನು ಹೊರತುಪಡಿಸಿ) ನೋಡಬಹುದಾಗಿದೆ.

ಇ–ಟೆಂಡರ್ ಪ್ರಕ್ರಿಯೆ		
1.	ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭ ದಿನಾಂಕ:	05.10.2024ರ ಸಂಜೆ 5:30 ಗಂಟೆಗೆ
2.	ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ:	22.10.2024ರ ಮಧ್ಯಾಹ್ನ 3:30 ಗಂಟೆಗೆ
3.	ಟೆಂಡರ್ ತೆರೆಯುವ (ತಾಂತ್ರಿಕ ಬಿಡ್) ದಿನಾಂಕ:	23.10.2024ರ ಸಂಜೆ: 4:00 ಗಂಟೆಗೆ

ಸಹಿ/–
ಲೆಕ್ಕಾಧಿಕಾರಿಗಳು, ಅಧ್ಯಕ್ಷರು.
DIPR/CP/RO2390/AAPL/2024-25

ಕರ್ನಾಟಕ ಸರಕಾರ
(ಜಲ ಸಂಪನ್ಮೂಲ ಇಲಾಖೆ)
ಸುವರ್ಣ ಕರ್ನಾಟಕ:2024–25
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ
ಪುನರವಸತಿ ವಿಭಾಗ ಸಂ.2. ಕೃ.ಮೇ.ಯೋ ಆಲಮಟ್ಟಿ–586201
ಕಛೇರಿ ದೂರವಾಣಿ ಸಂಖ್ಯೆ:(08426)295049 Email:ee2rrukp@gmail.com

ಸಂ. ಕೃಮೇಯೋ/ಪುವಿ–2/ಡಿಬಿ/ಕೆ.ಪಿ.ಪಿ.ಪೋರ್ಟಲ್/ಟೆಂಡರ–02/2024–25/504 ದಿನಾಂಕ:04–10–2024.

ಅಲ್ಪಾವಧಿ ಟೆಂಡರ ಪ್ರಕಟಣೆ
ಕೆ.ಪಿ.ಪಿ.ಪಿ ಮುಖಾಂತರ (ದ್ವಿಲಕೋಟೆ ಪದ್ಧತಿಯ ಮೇಲೆ)

ಕರ್ನಾಟಕ ರಾಜ್ಯದ ಮಾನ್ಯ ರಾಜ್ಯಪಾಲರ ಪರವಾಗಿ ಕೆಳಕಾಣಿಸಿದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ (Registered KPWD Class-I Contractor) 1ನೇ ದರ್ಜೆ, ಗುತ್ತಿಗೆದಾರರಿಂದ ಶೇಕಡವಾರು ಟೆಂಡರಗಳನ್ನು ಕೆ.ಡಬ್ಲೂ–4ರ ಮೂಲಕ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ನಿಯಮಾವಳಿಯಂತೆ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಟೆಂಡರನ್ನು ಕೆಳಗೆ ಸಹಿ ಮಾಡಿದವರಿಂದ ಅಹ್ವಾನಿಸಲಾಗಿದ್ದು, ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ ದಾಖಲೆಗಳನ್ನು https://kppp.karnataka.gov.in ವೆಬಸೈಟ್ ಮೂಲಕ ಪಡೆದುಕೊಂಡು ಭರ್ತಿ ಮಾಡಿದ ಟೆಂಡರಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಸಲ್ಲಿಸುವದು.

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ವಿವಿಧ ಪುನರ್ವಸತಿ ಶಾಲಾ ಕಟ್ಟಡ, ಕಂಪೌಂಡ ಗೋಡೆ, ನೆಲಸಮತಟ್ಟು, ಖಡೀಕರಣ ಮಾಡುವ, ರಸ್ತೆ, ಆರ್.ಸಿ.ಸಿ ಬದಿ ಚರಂಡಿ ಮತ್ತು ಸಿ.ಡಿಗಳ ನಿರ್ಮಾಣ, ಸ್ಟಾರ್ಮ ವಾಟರ ಡ್ರೆನ ನಿರ್ಮಾಣ ಕಾಮಗಾರಿಗಳು, ಹಾಗೂ ಕೋಲ್ಹಾರ ತಾಲೂಕಿನ ಕೋಲ್ಹಾರ ಪುನರ್ವಸತಿ ಕೇಂದ್ರದಲ್ಲಿ ರಸ್ತೆ ,ಆರ್.ಸಿ.ಸಿ ಬದಿ ಚರಂಡಿ ಮತ್ತು ಸಿ.ಡಿಗಳ ನಿರ್ಮಾಣ ಕಾಮಗಾರಿಗಳು, ಒಟ್ಟು ಕಾಮಗಾರಿಗಳು ಸಂಖ್ಯೆ–09.

ಟೆಂಡರಿಗಿಟ್ಟ ಅಂದಾಜು ಮೊತ್ತ. ಗರಿಷ್ಠ ರೂ. 339.88 ಲಕ್ಷ, ಕನಿಷ್ಠ ಮೊತ್ತ. ರೂ. 108.92 ಲಕ್ಷ. ಇ.ಎಂ.ಡಿ ಮೊತ್ತ. ಗರಿಷ್ಠ ರೂ. 5.10 ಲಕ್ಷ ಕನಿಷ್ಠ ರೂ. 1.63 ಲಕ್ಷ.

ವೆಬಸೈಟ್ ಮೂಲಕ ಟೆಂಡರ ಮಾಹಿತಿಯ ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ: 15–10–2024 ಮುಂಜಾನೆ 11:30 ಗಂಟೆಯವರೆಗೆ. ಟೆಂಡರ ಪೂರ್ವಭಾವಿ ಬಿಡ್ ಸಭೆ ದಿನಾಂಕ:15–10–2024 ಸಾಯಂಕಾಲ 4:30 ಗಂಟೆಗೆ. (ಒಂದು ಕೋಟಿಗಿಂತ ಹೆಚ್ಚಿನ ಮೊತ್ತದ ಕಾಮಗಾರಿಗಳಿಗೆ ಮಾತ್ರ), ಟೆಂಡರಗಳಿಗೆ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸುವುದು ಹಾಗೂ ಟೆಂಡರಗಳನ್ನು ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: 07–11–2024. ಸಾಯಂಕಾಲ 5:00 ಗಂಟೆವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 11–11–2024 ಮುಂಜಾನೆ 11:30 ಗಂಟೆಗೆ (ಸಾಧ್ಯವಾದಲ್ಲಿ). ತಾಂತ್ರಿಕ ಬಿಡ್‌ಗಳು ಅನುಮೋದನೆ ಆದ ನಂತರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು.

(The Estimate amount put to Tender is Exclusive of GST. The tenderer should quote Excluding GST. GST shall be paid separately @ prevailing rates during billing).

ಹೆಚ್ಚಿನ ಮಾಹಿತಿಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಪುನರ್ವಸತಿ ವಿಭಾಗ ನಂ,2, ಆಲಮಟ್ಟಿ ಇವರ ಕಛೇರಿಯಲ್ಲಿ ಕೆಲಸದ ಅವಧಿಯಲ್ಲಿ ಅಥವಾ https://kppp.karnataka.gov.in ವೆಬಸೈಟ್ ಮೂಲಕ ದಿನಾಂಕ: 07–10–2024 ರಂದು ಅಥವಾ ತದನಂತರ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಪುನರವಸತಿ ವಿಭಾಗ ನಂ.2,ಕೃ.ಮೇ.ಯೋ, ಆಲಮಟ್ಟಿ.
DIPR/BGK/RO-NO-268/KSMCA/2024-25

ನೋವಿನಿಂದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ

ಹುಕ್ಕೇರಿ: ಸದಸ್ಯತ್ವ ಹೆಚ್ಚಿಸುವ ಕುರಿತು ನಿರ್ದೇಶಕರು ಯಾವುದೇ ದೃಢ ನಿರ್ಧಾರ ಕೈಗೊಳ್ಳದ ಕಾರಣ ನೋವಿನಿಂದ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿರುವುದಾಗಿ ಮಾಜಿ ಸಂಸದ ರಮೇಶ್ ಕತ್ತಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಇವರು. ಸದಸ್ಯತ್ವ ಕುರಿತು ಕೆಲವು ಹೆಚ್ಚಿಸಿ ಎಂದು ಇನ್ನೂ ಕೆಲವರು ಬೇಡ ಎಂದರು. ನಿರ್ದೇಶಕರು ಯಾವುದೇ ದೃಢ ನಿರ್ಧಾರ ತೆಗೆದುಕೊಳ್ಳದೆ ಇರುವುದರಿಂದ ನನ್ನ ಮನಸ್ಸಿಗೂ ಭಾರವೆನ್ನಿಸಿತ್ತು. ಕಳೆದ 42 ವರ್ಷದ ಸುದೀರ್ಘ ಅನುಭವದಲ್ಲಿ ಈ ರೀತಿಯ ಸಂದರ್ಭ ಬಂದಿರಲಿಲ್ಲ. ನನ್ನ ಹಿಂದಿನ ಹಾದಿಯನ್ನು ಗಮನದಲ್ಲಿಟ್ಟುಕೊಂಡು ನೋವಿನಿಂದ ರಾಜೀನಾಮೆ ನೀಡಿದ್ದೇನೆ ಎಂದರು.

ಅಧಿಕಾರ ಶಾಶ್ವತವಲ್ಲ ರೈತರ, ಆಡಳಿತ ಮಂಡಳಿಯವರ ಸಹಕಾರದಿಂದ ಕಳೆದ 42 ವರ್ಷದಿಂದ ಬಿಡಿಸಿಸಿ ಬ್ಯಾಂಕ್‌ನಲ್ಲಿ ಸೇವೆ ಸಲ್ಲಿಸಿದ್ದೇನೆ. ಅದರಲ್ಲಿ 10 ವರ್ಷ ಅಧ್ಯಕ್ಷನಾಗಿ ಸೇವೆ ಮಾಡಿದ್ದೇನೆ. ನನಗೆ 60 ವರ್ಷ ವಯಸ್ಸಾದ ಹಿನ್ನೆಲೆಯಲ್ಲಿ ಸ್ವಯಂ ನಿವೃತ್ತಿಯಾಗುವ ದೃಢ ನಿರ್ಧಾರ ಹಾಗೂ ಹೊಸಬರಿಗೆ ಅವಕಾಶ ಮಾಡಿಕೊಡಬೇಕು ಎಂಬ ಉದ್ದೇಶದಿಂದ ರಾಜೀನಾಮೆ ನೀಡಿರುವುದಾಗಿ ಹೇಳಿದರು.

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ನಿಗಮ ಕಾರ್ಯಾಲಯ, ಜೆಸ್ಕಾಂ ಕಲಬುರಗಿ.
ದೂರವಾಣಿ ಸಂಖ್ಯೆ: (08472) 256881 ಇ.ಮೆಲ್: gescom.ddugjy@gmail.com

ಸಂಖ್ಯೆ:–ಜೆಸ್ಕಾಂ/ಮು.ಇ.ವಿ.(ಕಾ)/ಅ.ಇಂ(ಪ್ರೋ)/ಕಾ.ನಿ(ಪ್ರೋ)/ಸ.ಕಾ.ನಿ/ಸಾ.ಇ–2/2024–25/34463–97
ದಿನಾಂಕ: 04–10–2024

:: ಟೆಂಡರ್ ಪ್ರಕಟಣೆ ::

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ)

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತದಿಂದ ಹೋಸಪೇಟೆ ನಗರ ಜಿಲ್ಲೆಯಲ್ಲಿ ಈ ಕೆಳಗಿನ ಕಾರ್ಯ ಮತ್ತು ಪಾಲನಾ ವಿಭಾಗಗಳಲ್ಲಿ ಹೊಸ 11 ಕೆ.ವಿ ವಿದ್ಯುತ್ ಮಾರ್ಗಗಳನ್ನು ವಿವಿಧ ಉಪ–ಕೇಂದ್ರಗಳಿಂದ/ಹೆಚ್ಚುವರೆ ವಿದ್ಯುತ್ ಭಾರ ಹೊಂದಿರುವ ಫೀಡರ್‌ಗಳ ವಿದ್ಯುತ್ ಭಾರ ಕಡಿಮೆ ಮಾಡಲು ಹೊಸದಾಗಿ 11 ಕೆ.ವಿ ವಿದ್ಯುತ್ ಮಾರ್ಗಗಳ ನಿರ್ಮಾಣಕ್ಕಾಗಿ, ಸಂಪೂರ್ಣ ಟರ್ನ್‌ಕೀ ಶೇಕಡವಾರು ಆಧಾರದ ಮೇಲೆ ಅರ್ಹ ಬಿಡ್ಡರುಗಳಿಂದ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ.

1) ಟೆಂಡರ್ ಸಂಖ್ಯೆ. : **No:GESCOM/CEE(O)/SEE(Proj)/EEE/AEE/AE/2024-25/11KV Link Line/HPT Call-2/454,** 2) ಅಂದಾಜು ಮೊತ್ತ (**ರೂ. ಕೋಟಿಗಳಲ್ಲಿ**) : **3.91**
ಬಿಡ್ಡು ದಾಖಲೆಗಳು ದಿನಾಂಕ: 07/10/2024 ರಂದು ಅಥವಾ ನಂತರ **https://kppp.karnataka.gov.in** ನಲ್ಲಿ ಲಭ್ಯವಿರುತ್ತವೆ. ಬಿಡ್ಡದಾರರು ಟೆಂಡರ್‌ಗಳಲ್ಲಿ ಭಾಗವಹಿಸಲು ಹೆಚ್ಚಿನ ವಿವರಗಳಿಗಾಗಿ ನಿಗಮ ಕಛೇರಿ, ಯೋಜನೆಗಳ ಶಾಖೆ, ಜೆಸ್ಕಾಂ, ಕಲಬುರಗಿ ರವರಿಂದ ಪಡೆಯಬಹುದಾಗಿದೆ.

ಸಹಿ/– ಮುಖ್ಯ ಇಂಜಿನಿಯರ್ (ವಿ),
(ಕಾರ್ಯಚರಣೆ), ನಿಗಮ ಕಛೇರಿ, ಜೆಸ್ಕಾಂ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/497/ಕೆ.ಎಸ್.ಎಂ.ಸಿ.&ಎ/2024–25

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ವಿಭಾಗ, ರಾಯಚೂರು
ಕಛೇರಿ ವಿಳಾಸ: # 1–11–50/ಎ/ 14 & 15, ಸಿದ್ಧಾರ್ಥ ಕಾಲೋನಿ, ಲಾಯನ್ಸ್ ಕ್ಲಬ್ ಶಾಲೆ ಹಿಂದುಗಡೆ, ರಾಯಚೂರು–584101.
ಇ–ಮೇಲ್: eekwbraichur@gmail.com (ದೂ. ಸಂಖ್ಯೆ : 08532–200051).

ಸಂಖ್ಯೆ : ಕಜಮ/ಕಾಅರಾ/ತಾಶಾ/ಕಿ.ಅ/ಗಂಗಾವತಿ/ಒಳಚರಂಡಿ/2024–25/677 ದಿನಾಂಕ: 05–10–2024

ಟೆಂಡರ್ ಅಧಿಸೂಚನೆ

ಬಿಡ್ ದಾಖಲೆಯಲ್ಲಿ ವಿವರಿಸಲಾದ ಅರ್ಹತಾ ಅವಶ್ಯಕತೆಗಳನ್ನು ಪೂರೈಸುವ ಗುತ್ತಿಗೆದಾರರು/ಫರ್ಮ್ಸ್ ರವರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ (https://kpppusers@karnataka.gov.in) ಕೆಳಕಂಡ ಕಾಮಗಾರಿಯ ಟೆಂಡರ್‌ನ್ನು ಅಹ್ವಾನಿಸಲಾಗಿದೆ.

ಸೂಚನೆ:– ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಇ–ಪ್ರೂಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.
1) **ಇ–ಪ್ರೂಕ್ಯೂರ್‌ಮೆಂಟ್ ಪೋರ್ಟಲ್ ಇಂಡೆಂಟ್ ನಂ.:**KUWSDB/2024-25/WS/WORK_INDENT263 **2) ಟೆಂಡರ್‌ಗಿಟ್ಟ ಮೊತ್ತ ರೂ. (ಜಿಎಸ್‌ಟಿ ಹೊರತುಪಡಿಸಿ):** 60,20,000–00. **3) ಇಎಂಡಿ ಮೊತ್ತ ರೂ.:** 1,20,400–00 **4) ಟೆಂಡರ್ ಅವದಿ ಮುಂಗಾರು ಸೇರಿದಂತೆ:** 04 ತಿಂಗಳು.
ವೇಳಾಪಟ್ಟಿ:– 1) ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಬದ ದಿನಾಂಕ: 05–10–2024 ಮತ್ತು ಸಮಯ: 11.00 ಘಂಟೆಯ ನಂತರ. **2) ಬಿಡ್ ಸಲ್ಲಿಸಲು ಕೊನೆಯ ದಿನಾಂಕ:** 21–10–2024 ಮತ್ತು ಸಮಯ 17:30 ಘಂಟೆಯವರೆಗೆ. **3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:** 23–10–2024 ಮತ್ತು ಸಮಯ 11.00 ಘಂಟೆಯ ನಂತರ.
4. ಆರ್ಥಿಕ ಬಿಡ್ ತೆರೆಯುವ ದಿನಾಂಕ ಯಶಸ್ವಿ ಟೆಂಡರ್‌ದಾರರಿಗೆ ತಿಳಿಸಲಾಗುವುದು.
ಸಂಪರ್ಕಿಸಬೇಕಾದ ಆಧಿಕಾರಿ: ಕಾರ್ಯಪಾಲಕ ಅಭಿಯಂತರರು, ದೂರವಾಣಿ॥ 08532 200051.

ಸಹಿ/– ಕಾರ್ಯಪಾಲಕ ಅಭಿಯಂತರರು.
DIP/RCR/441/KSMC&A/Job No.438/2024-25 **ಕನನೀಸ ಮತ್ತು ಒಚ ಮಂಡಳಿ, ವಿಭಾಗ, ರಾಯಚೂರು.**

ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ಸಂಖ್ಯೆ:ಕಮಪಾ/ಆಶಾ/ಎಸ್.ಡಬ್ಲೂ.ಎಮ್/ಪೌ.ಕ/ಉಪಹಾರ/2024–25 ದಿನಾಂಕ:01.10.2024

:: ಇ–ಪ್ರಕ್ಯೂರ್‌ಮೆಂಟ್ ಮರು ಟೆಂಡರ್ ಪ್ರಕಟಣೆ ::

ಕೆಲಸದ ವಿವರ: ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000ರ ಅಡಿಯಲ್ಲಿ ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ಈ ಕೆಳಗೆ ನಮೂದಿಸಿದ ಮೂರು ಟೆಂಡರ್‌ಗಳಾದ 2024–25ನೇ ಸಾಲಿನ ಶೇ.24.10% ಎಸ್.ಎಫ್.ಸಿ ಮುಕ್ತ ನಿಧಿ ಅಡಿಯಲ್ಲಿ ಮತ್ತು ಸಾಮಾನ್ಯ ನಿಧಿಯಿಂದ ಸ್ವಚ್ಛತಾ ಕಾರ್ಯನಿರ್ವಹಿಸುತ್ತಿರುವ ಖಾಯಂ ನೇರಪಾವತಿ ಹೊರಗುತ್ತಿಗೆ ಪೌರಕಾರ್ಮಿಕರು, ಒಳಚರಂಡಿ ಕಾರ್ಮಿಕರು ಹಾಗೂ ಇತರೆ ಸ್ವಚ್ಛತಾ ಸಿಬ್ಬಂದಿ ವರ್ಗದವರಿಗೆ ಪ್ರತಿದಿನದ ಬೆಳಗಿನ ಉಪಾಹಾರ ಸರಬರಾಜು ಮಾಡಲು ಅರ್ಹ ಬಿಡ್‌ದಾರರಿಂದ ಟೆಂಡರ್ ಅಹ್ವಾನಿಸಲಾಗಿದೆ. ಈ ಕೆಳಕಂಡ ಸೇವೆಗಳಿಗೆ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಪ್ರಕಾರ ಟೆಂಡರ್ ಕರೆಯಲಾಗಿದೆ.

1) ಕಾಮಗಾರಿ/ಸೇವೆಯ ವಿವರ : Supplying and delivery of Morning Breakfast to Sanitation Workers for Food Package-01 in Kalaburagi Mahanagara Palike 2024-25, **INDENT NO : DMA/2024-25/SE3001/CALL-02,** ಟೆಂಡರಗಿಟ್ಟ ಮೊತ್ತ : ರೂ. **73,20,075/-,**
2) ಕಾಮಗಾರಿ/ಸೇವೆಯ ವಿವರ : Supplying and delivery of Morning Breakfast to Sanitation Workers for Food Package-02 in Kalaburagi Mahanagara Palike 2024-25 **INDENT NO : DMA/2024-25/SE3002/CALL-02** : ಟೆಂಡರಗಿಟ್ಟ ಮೊತ್ತ : ರೂ. **59,27,600/-**
3) ಕಾಮಗಾರಿ/ಸೇವೆಯ ವಿವರ : Supplying and delivery of Morning Breakfast to Sanitation Workers for Food Package-03 in Kalaburagi Mahanagara Palike 2024-25 **INDENT NO : DMA/2024-25/SE3003/CALL-02,** ಟೆಂಡರಗಿಟ್ಟ ಮೊತ್ತ : ರೂ. **61,44,775/-**

ಟೆಂಡರಿಗಾಗಿ ನಿಗಧಿಪಡಿಸಲಾದ ದಿನಾಂಕಗಳು
1) ಆಕ್ಷೇಪಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **08.10.2024 ಮಧ್ಯಾಹ್ನ 04.30 ಗಂಟೆಯವರೆಗೆ,** 2) ಟೆಂಡರ್ ಅರ್ಜಿ ಸ್ವಿಕರಿಸುವ ಕೊನೆಯ ದಿನಾಂಕ: **09.10.2024 ರಂದು ಸಾಯಂಕಾಲ 05.00 ಗಂಟೆಯವರೆಗೆ,** 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **10.10.2024 ರಂದು ಸಾಯಂಕಾಲ 05.30 ಗಂಟೆಯವರೆಗೆ,** 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **11.10.2024 ರಂದು ಬೆಳಗ್ಗೆ 11.30 ಗಂಟೆಯವರೆಗೆ**
* ಇಎಮ್‌ಡಿ ಕುರಿತು ಹೆಚ್ಚಿನ ವಿವರಗಳನ್ನು ಇ–ಪ್ರಕ್ಯೂರ್ಮೆಂಟ್‌ನಲ್ಲಿ ಪಡೆಯಬಹುದು. * ಹೆಚ್ಚಿನ ವಿವರಗಳಿಗಾಗಿ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ಕಲಬುರಗಿ ಮಹಾನಗರ ಪಾಲಿಕೆರವರನ್ನು ಸಂಪರ್ಕಿಸಬಹುದಾಗಿದೆ.
* ವೆಬ್ ಸೈಟ್: Eproc.Karnataka.gov.in.

ಸಹಿ/– ಉಪ ಆಯುಕ್ತರು (ಅಭಿವೃದ್ಧಿ)
ಕಲಬುರಗಿ ಮಹಾನಗರ ಪಾಲಿಕೆ ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/488/ಕೆ.ಎಸ್.ಎಂ.ಸಿ.ಎ/2024–25

ಜಮ್ಮು-ಕಾಶ್ಮೀರ ಕೈ-ಎನ್‌ಸಿಗೆ ಬೆಂಬಲ

← ಮೊದಲಪುಟದಿಂದ

10 ವರ್ಷಗಳ ಆಡಳಿತ ಕಾಲದಲ್ಲಿ ಕಮಲ ಪಕ್ಷಕ್ಕೆ ಲೋಕಸಭಾ ಚುನಾವಣೆಯಲ್ಲಿ ಮೊದಲ ಬಾರಿಗೆ ಹಿನ್ನಡೆಯಾಗಿದೆ. ಅದೇ ಪರಿಣಾಮ, ಈಗ ಮುಕ್ತಾಯ ಕಂಡ ವಿಧಾನಸಭಾ ಚುನಾವಣೆಯಲ್ಲಿಯೂ ಪ್ರತಿಫಲಿತ ವಾಗಲಿದೆ ಎಂಬುದೇ ಚುನಾವಣೋತ್ತರ ಸಮೀಕ್ಷಾ ವರದಿಗಳ ವಿಶ್ಲೇಷಣೆಯಾಗಿದೆ. ಒಂದು ಸಮೀಕ್ಷೆಯಂತೂ, ಹರಿಯಾಣದ ಮತದಾರರ ಮನಸ್ಸಿನಲ್ಲಿ ಬಿಜೆಪಿ ಕುರಿತ ಅಭಿಪ್ರಾಯ ಬದಲಾಗಿದೆ. ಜನರ ಪ್ರೀತಿ ಕಡಿಮೆ ಆಗಿದೆ ಎಂದೇ ವಿಶ್ಲೇಷಿಸಿದೆ.

ಜಮ್ಮು-ಕಾಶ್ಮೀರ 'ಇಂಡಿಯ' ಒಕ್ಕೂಟದ ಪರ: ಜಮ್ಮು-ಕಾಶ್ಮೀರದಲ್ಲಿ ಸಂವಿಧಾನದ ವಿಧಿ 370 ರದ್ದುಗೊಂಡ(2019) ಐದು ವರ್ಷಗಳ ಬಳಿಕ ವಿಧಾನಸಭೆ ಚುನಾವಣೆ ನಡೆದಿದೆ. 'ಇಂಡಿ' ಒಕ್ಕೂಟದ ಪಾಲುದಾರರಾದ ಕಾಂಗ್ರೆಸ್ ಮತ್ತು ಫಾರೂಕ್-ಓಮರ್ ಅಬ್ದುಲ್ಲಾ ನೇತೃತ್ವದ ನ್ಯಾಷನಲ್ ಕಾನ್ಫರೆನ್ಸ್(ಎನ್‌ಸಿ) ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿವೆ. ಪೀಪಲ್ಸ್ ಡೆಮಾಕ್ರೆಟಿಕ್ ಪಾರ್ಟಿ(ಪಿಡಿಪಿ) ಮೈತ್ರಿಗೆ ಆಸಕ್ತಿ ತೋರಿದರೂ ದೂರವಿಡಲಾಯಿತು.

ಇಂಡಿಯ ಟುಡೆ, ಸಿ-ವೋಟರ್, ಪೀಪಲ್ಸ್ ಪಲ್ಸ್, ಆಕ್ಸಿಸ್ ಮೈ ಇಂಡಿಯ ಮತ್ತಿತರ ಸಮೀಕ್ಷಾ ಸಂಸ್ಥೆಗಳು ನಡೆಸಿದ ಚುನಾವಣೋತ್ತರ ಸಮೀಕ್ಷೆಗಳ ಪ್ರಕಾರ ಜಮ್ಮು-ಕಾಶ್ಮೀರದಲ್ಲಿನ ಮತದಾರರು ಕಾಂಗ್ರೆಸ್-ಎನ್‌ಸಿ ಮೈತ್ರಿಕೂಟದತ್ತ ಒಲವು ತೋರಿದ್ದಾರೆ. ಸದ್ಯ ಕೇಂದ್ರಾಡಳಿತ ಪ್ರದೇಶವಾಗಿರುವ ಜಮ್ಮು-ಕಾಶ್ಮೀರಕ್ಕೆ ಮರಳಿ ರಾಜ್ಯದ ಸ್ಥಾನಮಾನ ನೀಡುವುದಾಗಿ ಹಾಗೂ 370ನೇ ವಿಧಿಯನ್ನು ಮರು ಜಾರಿ ಮಾಡುವುದಾಗಿ ಎರಡೂ ಪಕ್ಷಗಳು ಚುನಾವಣೆ ವೇಳೆ ಭರವಸೆ ನೀಡಿವೆ. ಇದೇ ಅಂಶ ಮತದಾರರನ್ನು ಮೆಚ್ಚುಗೆ ಗಳಿಸಿದೆ. ಹಾಗಾಗಿ, 90 ಕ್ಷೇತ್ರಗಳ ಚುನಾವಣೆಯಲ್ಲಿ ಕಾಂಗ್ರೆಸ್-ಎನ್‌ಸಿಗೆ ಹೆಚ್ಚು ಸ್ಥಾನ ಲಭಿಸಲಿವೆ ಎಂದು ಸಮೀಕ್ಷೆಯಲ್ಲಿ ವಿಶ್ಲೇಷಿಸಲಾಗಿದೆ. ಅ.8ಕ್ಕೆ ವಾಸ್ತವ ಚಿತ್ರಣ ಲಭಿಸಲಿದೆ.

ಮತ್ತೆ ಮಳೆ ಆರ್ಭಟ

← ಮೊದಲಪುಟದಿಂದ

ಬಳ್ಳಾರಿಯಲ್ಲಿ ಜನಜೀವನ ಅಸ್ತವ್ಯಸ್ತ: ಬಳ್ಳಾರಿ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಶುಕ್ರವಾರ ರಾತ್ರಿಯಿಡೀ ಭಾರೀ ಮಳೆ ಸುರಿದಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ನಿರಂತರವಾಗಿ ಸುರಿದ ಮಳೆಯಿಂದ ತಗ್ಗು ಪ್ರದೇಶದಲ್ಲಿ ನೀರು ನಿಂತಿದೆ. ಮಳೆ ಆರ್ಭಟಕ್ಕೆ ಹಳ್ಳಕೊಳ್ಳಗಳು ಉಕ್ಕಿ ಹರಿಯುತ್ತಿವೆ. ತಗ್ಗು ಪ್ರದೇಶದಲ್ಲಿ ವಾಸಿಸುವ ಜನರು ಇಡೀ ರಾತ್ರಿ ಪರದಾಡುವಂತಾಯಿತು.

ಭಾರೀ ಮಳೆಯ ಪರಿಣಾಮ ಸಂಡೂರಿನ ನಂದಿಹಳ್ಳಿ ವಾಶಿಂಗ್ ಪ್ಲಾಂಟ್ ಬಳಿ ಅವಾಂತರ ಸೃಷ್ಟಿಯಾಗಿದೆ. ಮಳೆ ನೀರಿನಲ್ಲಿ ನೂರಾರು ಗಣಿ ಲಾರಿಗಳು ಭಾಗಶಃ ಮುಳುಗಡೆಯಾಗಿವೆ. ಲಾರಿಗಳು ಜಲಾವೃತಗೊಂಡ ಹಿನ್ನೆಲೆ ಚಾಲಕರು ಸಹ ಇಡೀ ರಾತ್ರಿ ಪರದಾಡಿದ್ದಾರೆ. ಸಂಡೂರು ತಾಲೂಕಿನಾದ್ಯಂತ ರಾತ್ರಿ ಯಿಂದ ಸುರಿದ ಬಾರೀ ಮಳೆಯಿಂದಾಗಿ ನಾರಿಹಳ್ಳ ಜಲಾ ಶಯದ ಬೆಳಿಗ್ಗೆ 4 ಗೇಟ್ ಮೂಲಕ 12000 ಸಾವಿರ ಕ್ಯುಸೆಕ್ ನೀರನ್ನು ಹೊರಬಿಡಲಾಗಿದೆ.

ಹಾಸನದಲ್ಲೂ ಭಾರಿ ಮಳೆ

ಹಾಸನ: ಜಿಲ್ಲೆಯ ಬಹುತೇಕ ಕಡೆ ಶನಿವಾರ ಬೆಳಗ್ಗೆಯಿಂದ ಮೋಡ ಕವಿದ ವಾತಾವರಣವಿದ್ದು, ಮಧ್ಯಾಹ್ನದ ನಂತರ ಹಾಸನ ನಗರ ಸೇರಿದಂತೆ ಹಲವು ಕಡೆಗಳಲ್ಲಿ ಭಾರೀ ಮಳೆಯಾಗಿದೆ. ಇದರಿಂದಾಗಿ ಜನ ಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡು ವಾಹನ ಸವಾರರು ಪರದಾಡಬೇಕಾಯಿತು.

ಮೀಸಲು ಸಿಗದಿದ್ದರೆ ವಿಧಾನಸೌಧಕ್ಕೆ ಮುತ್ತಿಗೆ: ಮೃತ್ಯುಂಜಯ ಸ್ವಾಮೀಜಿ

ಪಂಚಮಸಾಲಿಗೆ ಮೀಸಲು ಸಿಗುವ ವಿಶ್ವಾಸವಿದೆ



ಗದಗ: ಪಂಚಮಸಾಲಿ ಮೀಸಲು ಹೋರಾಟದ ಕುರಿತು ವಿಧಾನಸಭೆಯಲ್ಲಿ ಸಚಿವರ, ಶಾಸಕರ ಧ್ವನಿ ಅಡಗಿದ ಕಾರಣ ನ್ಯಾಯಾಂಗದ ಮೂಲಕ ಹೋರಾಟ ಆರಂಭಿಸಲಾಗಿದೆ ಎಂದು ಕೂಡಲ ಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೊಮ್ಮಾಯಿ ಅವರು ಸಿಎಂ ಆಗಿದ್ದಾಗ ಎಲ್ಲ ಸಚಿವರು, ಶಾಸಕರು ಮಾತನಾಡುತ್ತಿದ್ದರು. ಸಿಎಂ ಸಿದ್ದರಾಮಯ್ಯ ಅವರ ಎದುರು ಸಮಾಜದ ಸಚಿವರು, ಶಾಸಕರು ಹಿಂದೇಟು ಹಾಕುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪಂಚಮಸಾಲಿ ಸಮುದಾಯದ ಮಕ್ಕಳಿಗೆ ನ್ಯಾಯ ಸಿಗಬೇಕು, ಶೈಕ್ಷಣಿಕವಾಗಿ, ಸರಕಾರಿ ಉದ್ಯೋಗಕ್ಕಾಗಿ, ಸಂವಿಧಾನಬದ್ಧ ಹಕ್ಕುಗಳಿಗಾಗಿ ಪಂಚಮಸಾಲಿ ಸಮಾಜದ ವಕೀಲರು ಹೋರಾಟ ನಡೆಸಿದ್ದಾರೆ ಎಂದು ತಿಳಿಸಿದರು.

ಸಿಎಂ ಸಿದ್ದರಾಮಯ್ಯ ಅವರು ಅ. 15ರಂದು ಪಂಚಮಸಾಲಿ ಸಮಾಜದ ಪ್ರಮುಖ ವಕೀಲರ ಸಭೆ ಕರೆದಿದ್ದಾರೆ. ಆದರೆ, ಸಭೆಯ ಸಮಯ ಹಾಗೂ ಸ್ಥಳ ಸಭೆ ನಿಗದಿಯಾಗಿಲ್ಲ, ಕೂಡಲೇ ಸಮಯ ಹಾಗೂ ಸ್ಥಳ ನಿಗದಿಗೊಳಿಸಬೇಕು. ಮುಖ್ಯಮಂತ್ರಿಗಳ ಬಳಿ ತೆರಳುವ ನಿಯೋಗದಲ್ಲಿ ಯಾವ ವಿಷಯಗಳನ್ನು ಚರ್ಚಿಸಬೇಕು ಎಂದು ಈಗಾಗಲೇ ತೀರ್ಮಾನ ಮಾಡಲಾಗಿದೆ. 10 ಜನ ವಕೀಲರೊಂದಿಗೆ ಸಮುದಾಯದ ಪ್ರಮುಖರು, ಪಂಚಮಸಾಲಿ ಹೋರಾಟಗಾರರು ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಸಭೆಯಲ್ಲಿ ಮೀಸಲು ಹಾಗೂ ಆದರಿಂದ ಸಮಾಜಕ್ಕೆ ಉಂಟಾಗುವ ಅನುಕೂಲಗಳ ಕುರಿತು ಚರ್ಚಿಸುವುದರ ಜೊತೆಗೆ ಮನವೊಲಿಸಲಾಗುವುದು, ಒಂದು ವೇಳೆ ಬೇರೆ ಬೇರೆ ಕಾರಣ, ನೆಪವೊಡ್ಡಿ ಸಭೆಯನ್ನು ಮೊಟಕುಗೊಳಿಸಿದ್ದಲ್ಲಿ ವಕೀಲರೊಂದಿಗೆ, ಸಮುದಾಯದ ಮುಖಂಡರು, ಹೋರಾಟಗಾರರು ವಿಧಾನಸೌಧದ ಎದುರು ಪ್ರತಿಭಟನೆ ನಡೆಸಲಾಗುವುದು ಎಂದರು.

ಸಿಎಂ ಸಿದ್ದರಾಮಯ್ಯ ಅವರು ಪಂಚಮಸಾಲಿ ಸಮಾಜಕ್ಕೆ ಮೀಸಲು ನೀಡುತ್ತಾರೆ ಎಂಬ ವಿಶ್ವಾಸವಿದೆ. ಇಲ್ಲವಾದಲ್ಲಿ 10 ಸಾವಿರಕ್ಕೂ ಹೆಚ್ಚು ಸಮಾಜದ ಮುಖಂಡರೊಂದಿಗೆ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವುದು, ಜಾತಿ ಜನಗಣತಿ ಮಾಡುವ ಬಗ್ಗೆ ಎಲ್ಲೆಡೆ ಅಸಮಾಧಾನವಿದ್ದು, ವೈಜ್ಞಾನಿಕವಾಗಿ, ಸತ್ಯವನ್ನು ಆಧರಿಸಿ ಜಾತಿ ಜನಗಣತಿಯಾದರೆ ನಮ್ಮ ಸಂಪೂರ್ಣ ಬೆಂಬಲವಿದೆ .

-ಮೃತ್ಯುಂಜಯ ಸ್ವಾಮೀಜಿ,
ಕೂಡಲ ಸಂಗಮ ಪಂಚಮಸಾಲಿ ಪೀಠ

ರಾಜ್ಯದ ಮಹಿಳೆಯರು, ಗರ್ಭಿಣಿಯರಿಗೆ ಹೆಬ್ಬಾಳ್ಕರ್ ಮನವಿ

ಸೈಬರ್ ವಂಚಕರ ಜಾಲಕ್ಕೆ ಬಲಿಯಾಗಬೇಡಿ

ಬೆಳಗಾವಿ: ಪೋಷಣ್ ಟ್ರ್ಯಾಕರ್ ಆ್ಯಪ್ ಹ್ಯಾಕ್ ಆಗಿದೆ ಎನ್ನುವ ಮಾಹಿತಿ ಬಂದಿದೆ. ರಾಜ್ಯದ ಮಹಿಳೆಯರು, ಗರ್ಭಿಣಿಯರು ಸೈಬರ್ ವಂಚಕರ ಮೋಸದ ಜಾಲಕ್ಕೆ ಬಲಿಯಾಗಬೇಡಿ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮನವಿ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಸೈಬರ್ ವಂಚಕರು, ಗರ್ಭಿಣಿಯರು, ಮಹಿಳೆಯರ ಮಾಹಿತಿಯನ್ನು ಆ್ಯಪ್‌ನಲ್ಲಿ ತಿಳಿದು ಮೊಬೈಲ್ ಮೂಲಕ ವಂಚಿಸುತ್ತಿರುವ ಪ್ರಕರಣಗಳು ಕೇಳಿಬರುತ್ತಿದ್ದು, ಎಲ್ಲರೂ ಎಚ್ಚರಿಕೆಯಿಂದ ಇರಬೇಕು ಎಂದರು. ಪೋಷಣ್ ಆ್ಯಪ್ ಅನ್ನು ಕೇಂದ್ರ ಸರಕಾರ ನಿರ್ವಹಣೆ ಮಾಡುತ್ತದೆ. ವಂಚನೆಯಾಗುತ್ತಿರುವ ಬಗ್ಗೆ ನಮ್ಮ ಗಮನಕ್ಕೆ ಬಂದ ತಕ್ಷಣ ಕೇಂದ್ರದ ಗಮನ ಸೆಳೆದಿದ್ದೇವೆ. ಜತೆಗೆ ನಮ್ಮ 70 ಸಾವಿರ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೆ ಸಂದೇಶ ಕಳುಹಿಸಿ, ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದೇವೆ ಎಂದರು. ಈ ಕುರಿತು ಸೂಕ್ತ ಕ್ರಮಕ್ಕೆ ಸೂಚಿಸಲಾಗಿದೆ. ಈ ಮೋಸದ ಜಾಲ ಪತ್ತೆಯಾದ ತಕ್ಷಣ ಜನರಲ್ಲಿ ಜಾಗೃತಿ ಮಾಡುವುದಕ್ಕೆ ಕ್ರಮಕೈಗೊಂಡಿದ್ದೇವೆ. ಜನ ಯಾರೂ ಇದರಲ್ಲಿ ಮೋಸ ಹೋಗಬಾರದು ಎಂದು ಸಚಿವರು ಹೇಳಿದರು.

ಎಚ್‌ಡಿಕೆ ವಿರುದ್ಧ ಕಿಡಿ

ಮುಡಾ ಹಗರಣವನ್ನು ವಿಷಯಾಂತರ ಮಾಡುವ ಸಲುವಾಗಿ ತಮ್ಮ ಮೇಲೆ ಕೇಸ್ ಹಾಕಲಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಆರೋಪವನ್ನು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ತಳ್ಳಿ ಹಾಕಿದ್ದಾರೆ. ಕಾನೂನು ಪ್ರಕಾರ ಏನು ಕ್ರಮಕೈಗೊಳ್ಳ ಬೇಕು ಅದನ್ನು ಕೈಗೊಳ್ಳಲಾಗಿದೆ. ಯಾವುದೇ ಪ್ರಕರಣ ವನ್ನು ವಿಷಯಾಂತರ ಮಾಡುವ ಅವಶ್ಯಕತೆ ಸರಕಾರ ಕ್ಕಿಲ್ಲ ಎಂದು ಸಚಿವರು ತಿರುಗೇಟು ನೀಡಿದರು.

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ಅವಾಸ್ತವಿಕ ಗ್ಯಾರಂಟಿಗಳ ಅಪ್ರಬುದ್ಧ ಅನುಷ್ಠಾನದಿಂದ ಹಿಮಾಚಲ ಪ್ರದೇಶದ ಕಾಂಗ್ರೆಸ್ ಸರಕಾರ ಸಂಪೂರ್ಣ ದಿವಾಳಿಯಾಗಿ ಈಗ ಮನೆಮನೆಗಳ ಟಾಯ್ಲೆಟ್‌ಗಳಿಗೂ ಟ್ಯಾಕ್ಸ್ ಹಾಕಲು ಮುಂದಾಗಿದೆ. ಇದಕ್ಕಿಂತಲೂ ಹೀನ ಪರಿಸ್ಥಿತಿ ಮುಂದೊಂದು ದಿನ ಕರ್ನಾಟಕದಲ್ಲಿ ಬಂದರೂ ಅಚ್ಚರಿ ಇಲ್ಲ...!

ಕೃಷ್ಣ, ಬೆಂಗಳೂರು

ಬೆಂಗಳೂರಿನಲ್ಲಿ ಟಾಯ್ಲೆಟ್ ಟ್ಯಾಕ್ಸ್ ಹಾಕುತ್ತಿಲ್ಲವೇ..? ನಿಮ್ಮ ನೀರಿನ ಬಿಲ್ ಅನ್ನು ಒಮ್ಮೆ ನೋಡಿ.

ಸಮಾಚಾರ ಸಣ್ಣದಲ್ಲ

ವಿದ್ಯುತ್ ತಗುಲಿ ರೈತನ ಸಾವು

ಯಾದಗಿರಿ: ಜಮೀನಿಗೆ ನೀರು ಹರಿಸಲು ಹೋಗಿದ್ದ ವೇಳೆ ವಿದ್ಯುತ್ ತಗುಲಿ ಯುವ ರೈತನೋರ್ವ ಸಾವನ್ನಪ್ಪಿರುವ ಘಟನೆ ಜಿಲ್ಲೆಯ ಗುರುಮಠಕಲ್ ತಾಲೂಕಿನ ಯಲಸತ್ತಿ ಗ್ರಾಮದಲ್ಲಿ ನಡೆದಿದೆ. ಶರಣಪ್ಪ (30) ಮೃತಪಟ್ಟ ರೈತನಾಗಿದ್ದಾನೆ. ಜಮೀನಿಗೆ ನೀರು ಹರಿಸಲು ಪಂಪ್ ಸೆಟ್ ಮೋಟಾರ್ ಸ್ಟಾರ್ಟ್ ಮಾಡಲು ಹೋದಾಗ ವಿದ್ಯುತ್ ತಗುಲಿ ಈ ಘಟನೆ ಜರುಗಿದೆ. ಈ ಕುರಿತು ಸೈದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

100ಕ್ಕೂ ಹೆಚ್ಚು ಜನರಿಗೆ ವಾಂತಿ-ಭೇದಿ

ಉಡುಪಿ: ಕಳೆದೊಂದು ವಾರದಿಂದ ಕಲುಷಿತ ನೀರು ಕುಡಿದು 100ಕ್ಕೂ ಹೆಚ್ಚು ಜನ ಅಸ್ವಸ್ಥಗೊಂಡ ಘಟನೆ ಜಿಲ್ಲೆಯ ಬೈಂದೂರು ತಾಲೂಕಿನ ಉಪ್ಪುಂದ ಗ್ರಾಮ



ಪಂಚಾಯತಿ ವ್ಯಾಪ್ತಿಯಲ್ಲಿ ನಡೆದಿದೆ. ಗ್ರಾಮ ಪಂಚಾಯತಿ ವ್ಯಾಪ್ತಿಯ 6 ಮತ್ತು 7ನೇ ವಾರ್ಡ್‌ನಲ್ಲಿ ಈ ಘಟನೆ ನಡೆದಿದೆ. ಕುಡಿಯುವ ನೀರು ಕಲುಷಿತಗೊಂಡಿದ್ದು, ಇಲ್ಲಿನ ಕಾಸಿನಾಡಿ ಎಂಬಲ್ಲಿರುವ ಟ್ಯಾಂಕ್‌ನಿಂದ ಬಿಡಲಾಗುವ ನೀರು ಕುಡಿದು ಕರ್ಕಿಕಳ್ಳಿ ಮತ್ತು ಮಡಿಕಲ್ ಗ್ರಾಮದ 100ಕ್ಕೂ ಹೆಚ್ಚು ಜನ ಅಸ್ವಸ್ಥಗೊಂಡಿದ್ದಾರೆ. ವಾರ್ಡ್‌ನ ಪ್ರತಿ ಮನೆಯಲ್ಲೂ 3ಕ್ಕೂ ಅಧಿಕ ಮಂದಿಯಲ್ಲಿ ವಾಂತಿ, ಭೇದಿ ಕಾಣಿಸಿಕೊಂಡಿದೆ. 80 ವರ್ಷದ ವಯೋವೃದ್ಧರಿಗೆ ರಕ್ತಭೇದಿ ಉಂಟಾಗಿದ್ದು, ಗಂಭೀರ ಸ್ಥಿತಿಯಲ್ಲಿದ್ದ ಅವರನ್ನು ಚಿಕಿತ್ಸೆಗಾಗಿ ಕುಂದಾಪುರದ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪರಿಷತ್ ಚುನಾವಣೆ ಆಕಾಂಕ್ಷಿಯಲ್ಲ

ಮಂಗಳೂರು: ವಿಧಾನ ಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಲು ತಾವು ಆಕಾಂಕ್ಷಿಯಾಗಿರಲಿಲ್ಲ ಎಂದು ಮಾಜಿ ಸಂಸದ ನಳಿನ್‌ಕುಮಾರ್ ಕಟೀಲ್

ಸ್ಪಷ್ಟಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಈವರೆಗೆ ವಿಧಾನಪರಿಷತ್ ಸದಸ್ಯರಾಗಿದ್ದ ಕೋಟ ಶ್ರೀನಿವಾಸ ಪೂಜಾರಿ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ ಕಾರಣ ತೆರವಾದ ಸ್ಥಾನಕ್ಕೆ ನಡೆದ ಉಪ ಚುನಾವಣೆಯಲ್ಲಿ ಕಿಶೋರ್ ಕುಮಾರ್ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ ಅವರನ್ನು ಬೆಂಬಲಿಸಿ ಬಿಜೆಪಿ ಯನ್ನು ಈ ಬಾರಿಯೂ ಗೆಲ್ಲಿಸಬೇಕೆಂದು ತಾನು ಮತದಾರರಲ್ಲಿನ ಮನವಿ ಮಾಡುವುದಾಗಿ ತಿಳಿಸಿದ್ದಾರೆ. ಬಿಜೆಪಿ ನನಗೆ ಮೂರು ಬಾರಿ ಸಂಸದನಾಗುವ ಹಾಗೂ ರಾಜ್ಯಾಧ್ಯಕ್ಷ ನಾಗುವ ಅವಕಾಶವನ್ನು ನೀಡಿತ್ತು. ಅದಕ್ಕಾಗಿ ನಾನು ಪಕ್ಷಕ್ಕೆ ಋಣಿಯಾಗಿದ್ದೇನೆ . ಮುಂದೆಯೂ ಪಕ್ಷ ಸಂಘಟನೆಯ ಕೆಲಸ ಮಾಡುತ್ತೇನೆ, ಕಾರ್ಯಕರ್ತನಾಗಿ ಇರುತ್ತೇನೆ ಎಂದರು.

ವಿರಾಮ
ಪ್ರತಿ ಭಾನುವಾರ

{ ಈಶ್ವರಪ್ಪ } ಮಾಜಿ ಡಿಸಿಎಂ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಮೊದಲು ಜಾತಿ ಗಣತಿ ವರದಿಯನ್ನು ಅನುಷ್ಠಾನ ತರುವುದಾಗಿ ಮಾತು ಕೊಟ್ಟಿದ್ದರು. ಆದರೆ ಅವರ ಧ್ವನಿ ಈಗ ಬದಲಾಗಿದೆ. ಜನರ ಅಭಿಪ್ರಾಯ ಪಡೆದು ಪರಿಶೀಲನೆ ನಡೆಸುತ್ತೇವೆ ಎಂದು ಹೇಳಿದ್ದಾರೆ. ಇದು ಸರಿಯಲ್ಲ ಅವರು ಕೊಟ್ಟ ಮಾತಿನಂತೆ ನಡೆದುಕೊಳ್ಳಬೇಕು. ಈಗಾಗಲೇ ಈ ವರದಿ ನನೆಗುದಿಗೆ ಬಿದ್ದಿದೆ.

ಜಗನ್ಮೋಹನ ಅರಮನೆಯಲ್ಲಿ ದಸರಾ ಕವಿಗೋಷ್ಠಿ, ಪಂಚ ಕಾವ್ಯೋತ್ಸವ ಆರಂಭ

ಕವಿಯಾದವನಿಗೆ ಪ್ರಜ್ಞೆ, ಪ್ರತಿಭೆ ಬಹಳ ಮುಖ್ಯ: ಡಾ.ನಾಗತಿಹಳ್ಳಿ

ಮೈಸೂರು: ಎಲ್ಲ ವ್ಯಕ್ತಿಗಳಲ್ಲೂ ಒಬ್ಬ ಕವಿ ಅಡಗಿದ್ದಾನೆ, ಆದರೇ ಎಲ್ಲರೂ ಶ್ರೇಷ್ಠ ಕವಿಯಾಗಲು ಸಾಧ್ಯವಿಲ್ಲ. ಹಾಗಾಗಿ ಯಾವುದೇ ಒಬ್ಬ ಶ್ರೇಷ್ಠ ಕವಿಯಾಗಬೇಕೆಂದರೆ ಆತನಿಗೆ ಪ್ರಜ್ಞೆ ಮತ್ತು ಪ್ರತಿಭೆ ಬಹಳ ಮುಖ್ಯ. ಆಗ ಮಾತ್ರ ಒಬ್ಬ ಶ್ರೇಷ್ಠ ಕವಿಯಾಗಿ ಜನರ ಮನದಲ್ಲಿ ಚಿರಕಾಲ ಉಳಿಯಬಹುದು ಎಂದು ಸಾಹಿತಿ, ಸಿನಿಮಾ ನಿರ್ದೇಶಕ ಡಾ.ನಾಗತಿಹಳ್ಳಿ ಚಂದ್ರಶೇಖರ್ ಹೇಳಿದರು.

ಜಗನ್ಮೋಹನ ಅರಮನೆಯಲ್ಲಿ ದಸರಾ ಕವಿಗೋಷ್ಠಿ ಪಂಚ ಕಾವ್ಯೋತ್ಸವವನ್ನು ಉದ್ಘಾಟಿಸಿದ ಅವರು , ಕಾವ್ಯ ಎಂಬುದು ಪುರಾತನ ಕಲೆ. ಕಾವ್ಯದ ಜೊತೆಗೆ ಮನುಷ್ಯ ಐತಿಹಾಸಿಕವಾಗಿ, ಪೌರಾಣಿಕವಾಗಿ ಹಾಗೂ ಸಾಮಾಜಿಕವಾಗಿ ನಡೆದು, ಕಾವ್ಯವನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾನೆ ಎಂದು ಬಣ್ಣಿಸಿದರು.

ಮಾದರಿಯಾದ ಕವಿಗೋಷ್ಠಿ: ನಾಡಹಬ್ಬ ದಸರಾ ಉತ್ಸವ ಬಹುಮುಖಿಯಾಗಿ ಹರಡಿದ್ದು, ಅದರ ಒಂದು ಭಾಗವಾಗಿ ಕವಿಗೋಷ್ಠಿ ನಡೆಯುತ್ತಿದೆ. ಕವಿಗೋಷ್ಠಿಯು ನೆರೆದಿರುವ ನೂರಾರು ಕವಿಗಳಿಂದ ಕಾವ್ಯ ಸಂಭ್ರಮ, ಕಾವ್ಯಾತೀತ ಸಂಭ್ರಮದಂತೆ ಭಾಸವಾಗುತ್ತಿದೆ. ಯುವಕರು ಕವಿಗೋಷ್ಠಿಗಳಿಂದ ದೂರ ಹೋಗುತ್ತಿದ್ದಾರೆ, ಕವಿಗೋಷ್ಠಿಗಳಲ್ಲಿ ನಿಜವಾದ ಕವಿಗಳ ಭಾಗವಹಿಸುವಿಕೆ ಕಡಿಮೆ ಎನ್ನುವಾಗ ದಸರಾ ಕವಿಗೋಷ್ಠಿ ಮಾದರಿಯಾಗಿದೆ ಎಂದು ನಾಗತಿಹಳ್ಳಿ ಚಂದ್ರಶೇಖರ್ ಸಂತಸ ವ್ಯಕ್ತಪಡಿಸಿದರು.

ಕವಿಗೋಷ್ಠಿ ಉಪಸಮಿತಿ ಕಾರ್ಯಾಧ್ಯಕ್ಷೆ ಎಸ್. ಕೆ. ಲೋಲಾಕ್ಷಿ, ಉಪ ವಿಶೇಷಧಿಕಾರಿ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ಕಾರ್ಯದರ್ಶಿ ಕೃಷ್ಣ. ಸಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ದಸರಾ ಕವಿಗೋಷ್ಠಿಗೆ ಸಾಹಿತಿ ಡಾ.ನಾಗತಿಹಳ್ಳಿ ಚಂದ್ರಶೇಖರ್ ಉದ್ಘಾಟಿಸಿದರು. ಹಿರಿಯ ಸಾಹಿತಿ ಹಂ.ಪ. ನಾಗರಾಜಯ್ಯ, ಬಂಜಗೆರೆ ಜಯಪ್ರಕಾಶ್ ಮೊದಲಾದ ಗಣ್ಯರು ಇದ್ದರು.

ಜನರು ಕವಿಯಿಂದ ಪ್ರಭಾವಿತರಾಗಬೇಕಾದರೆ ಮೊದಲು ಆ ಕವಿಯು ಜನರಿಂದ ಪ್ರಭಾವಿತನಾಗಿ ಜನರ ಮಧ್ಯೆ ಇದ್ದು, ಅವರ ದುಃಖ ದುಮ್ಮಾನಗಳನ್ನು ಅರಿತು ಬರೆಯಬೇಕು.
-ಡಾ. ಬಂಜಗೆರೆ ಜಯಪ್ರಕಾಶ್, ಚಿಂತಕ

ಪಂಚ ಕಾವ್ಯೋತ್ಸವದ ಪರಿಕಲ್ಪನೆ : ಈ ಬಾರಿ ದಸರಾ ಕವಿಗೋಷ್ಠಿಯಲ್ಲಿ ಪಂಚ ಕಾವ್ಯೋತ್ಸವವನ್ನು 5 ದಿನಗಳ ಕಾಲ ಜಗನ್ಮೋಹನ ಅರಮನೆಯಲ್ಲಿ ಆಯೋಜಿಸಲಾಗಿದೆ. ಸಮರಸ ಕವಿಗೋಷ್ಠಿ, ಸಮಾನತಾ ಕವಿಗೋಷ್ಠಿ, ಸಂತಸ ಕವಿಗೋಷ್ಠಿ, ಸಮಷ್ಟಿ ಕವಿಗೋಷ್ಠಿ ಹಾಗೂ ಸಮೃದ್ಧ ಕವಿಗೋಷ್ಠಿ ಎಂಬ ಪರಿಕಲ್ಪನೆಯ ಸ್ವರೂಪಗಳು ಯುವ ಹಾಗೂ ಹಿರಿಯ ಕವಿಗಳ ಸಮ್ಮುಖದಲ್ಲಿ ನಡೆಯಲಿವೆ.

ಕಾವ್ಯದ ಮೂಲ ತಿಳಿಯಿರಿ

ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಾಹಿತಿ, ನಾಡೋಜ ಹಂಪ ನಾಗರಾಜಯ್ಯ, ಕನಸು ಮತ್ತು ಕವಿತೆ ಪ್ರತಿಯೊಬ್ಬರಲ್ಲಿಯೂ ಇರುತ್ತದೆ. ಹಾಗೆಂದ ಮಾತ್ರಕ್ಕೆ ಎಲ್ಲರೂ ಕವಿಗಳಾಗಲು ಸಾಧ್ಯವಿಲ್ಲ. ಕಾವ್ಯದ ಮೂಲವನ್ನು ಆಳವಾಗಿ ಅರಿಯಬೇಕು ಆಗ ಮಾತ್ರವೇ ಕವಿತನ ಒಳಿಯುತ್ತದೆ ಎಂದು ಯುವಕವಿಗಳಿಗೆ ಕಿವಿಮಾತು ಹೇಳಿದರು.

ರೈತ ದಸರಾ ಮೆರವಣಿಗೆಗೆ ಸಚಿವರಿಂದ ಚಾಲನೆ

ಕೃಷಿಕ್ಷೇತ್ರದಲ್ಲಿ ನೂತನ ತಂತ್ರಜ್ಞಾನ ಬಳಕೆ ಕಡಿಮೆ

ಮೈಸೂರು ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ರೈತ ದಸರಾ ಮೆರವಣಿಗೆಗೆ ಸಚಿವ ಚಲುವರಾಯಸ್ವಾಮಿ ಚಾಲನೆ ಕೊಟ್ಟರು. ಸಚಿವ ವೆಂಕಟೇಶ್, ರೈತ ದಸರಾ ಸಮಿತಿ ಅಧ್ಯಕ್ಷ ಕರೀಗೌಡ, ಶಾಸಕ ಹರೀಶ್ ಗೌಡ, ಸೆಸ್ಕ್ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ ಮೊದಲಾದವರು ಇದ್ದರು.

ಮೈಸೂರು: ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ರೈತರು ಹೊಸ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವುದು ಕಡಿಮೆಯಾಗಿದೆ ಎಂದು ಸಚಿವ ಚಲುವರಾಯಸ್ವಾಮಿ ಬೇಸರ ವ್ಯಕ್ತಪಡಿಸಿದರು.

ದಸರಾ ಅಂಗವಾಗಿ ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಆವರಣದಲ್ಲಿ ಆಯೋಜಿಸಲಾಗಿದ್ದ ರೈತ ದಸರಾ ಮೆರವಣಿಗೆಗೆ ಚಾಲನೆ ನೀಡಿ ಅವರು ಮಾತನಾಡಿ, ರೈತರ ಹಿತ ಕಾಯಲೆಂದೇ ಸಿದ್ದರಾಮಯ್ಯ ನೇತೃತ್ವದ ನಮ್ಮ ಸರಕಾರ 1000 ಕೋಟಿ ರು. ಸಹಾಯಧನ ಹಾಗೂ ಅನುದಾನ ನೀಡುವುದರ ಜತೆಗೆ ರೈತರಿಗೆ 1,900 ಕೋಟಿ ವಿಮೆ ನೀಡಿದ್ದಾರೆ. ಅದನ್ನು ಪ್ರತಿಯೊಬ್ಬ ರೈತರು ಸದುಪಯೋಗ ಪಡಿಸಿಕೊಂಡು ದೇಶವನ್ನು ಅಭಿವೃದ್ಧಿಯತ್ತ ಸಾಗಿಸುವ ನಿಟ್ಟಿನಲ್ಲಿ ದುಡಿಯಬೇಕು ಎಂದು ಸಚಿವರು ಕರೆ ನೀಡಿದರು.

ರೈತ ದಸರಾ ಮೆರವಣಿಗೆ

ಅರಮನೆಯ ಕೋಟೆ ಆಂಜನೇಯ ಮೈದಾನದಿಂದ ದೇವರಾಜ ಅರಸು ರಸ್ತೆಯ ಮೂಲಕ ಜೆ.ಕೆ ಗ್ರೌಂಡ್ ವರೆಗೂ ಸಾಗಿದ ರೈತ ದಸರಾ ಮೆರವಣಿಗೆಯಲ್ಲಿ ಸಾವಿರಾರು ಜನರು ಭಾಗವಹಿಸಿದ್ದು, ನಾದಸ್ವರ ಪೂಜೆ ಕುಣಿತ, ಜೊತೆಗೆ ಬಂಡೂರು ಕುರಿ, ಎತ್ತಿನ ಗಾಡಿ ಎತ್ತುಗಳನ್ನು ಕರೆಸಲಾಗಿತ್ತು. ಹೊಸ ಹೊಸ ಕೃಷಿ ತಂತ್ರಜ್ಞಾನಗಳಾದ ಡ್ರೋನ್-2 ಕಬ್ಬು ಕಟಾವು ಯಂತ್ರ, ಕಬ್ಬು ನಾಟಿ ಯಂತ್ರ, ಬೂಮ್ ಸ್ಪ್ರೇರ್, ಕಂಬೈಡ್, ಹಾರ್ವೆಸ್ಟರ್, ಮಿನಿ ಕಾರ್ಟ್, ಬಯೋಜಾರ್ ಯಂತ್ರ, ಟ್ಯಾಬ್ಲೋಗಳನ್ನು ಪ್ರದರ್ಶಿಸಲಾಯಿತು.

ಕೊಪ್ಪಳ ಜಿಲ್ಲೆ ಗಂಗಾವತಿಯಲ್ಲಿ ನಡೆದ ಘಟನೆ | ಕ್ಷಣಾರ್ಧದಲ್ಲಿ ತಪ್ಪಿದ ಭಾರಿ ಅನಾಹುತ

ಸಿಎಂ ಬೆಂಗಾವಲು ಪಡೆಗೆ ರೆಡ್ಡಿ ಕಾರು ಸವಾಲು

ಕೊಪ್ಪಳ: ಝೀರೋ ಟ್ರಾಫಿಕ್ ಮಾರ್ಗದಲ್ಲಿ ಸಿಎಂ ಸಿದ್ದರಾಮಯ್ಯ ಅವರ ಬೆಂಗಾವಲು ಪಡೆಯ ಕಾರು ಚಲಿಸುವ ವಿರುದ್ಧದ ದಿಕ್ಕಿನಲ್ಲಿ ಕಾರು ಓಡಿಸಿಕೊಂಡು ಹೋದ ಪ್ರಸಂಗ ಕೆಲಕಾಲ ಎಲ್ಲರನ್ನೂ ದಿಗ್ಭ್ರಾಂತಿಗೆ ಗುರಿಮಾಡಿತ್ತು. ಹಾಗೆಂದು ಕಾರು ಓಡಿಸಿದ್ದು ಯಾರೋ ಬಿಸಿರಕ್ತದ ಅಪ್ರಬುದ್ಧ ಯುವಕನಲ್ಲ. ಝೀರೋ ಟ್ರಾಫಿಕ್ ಎಂದರೆ ಏನು ಎಂದು ಗೊತ್ತಿರುವ ಬಿಜೆಪಿ ನಾಯಕ ಮತ್ತು ಮಾಜಿ ಸಚಿವ ಜನಾರ್ದನ ರೆಡ್ಡಿಯ ಕಾರು ಚಾಲಕ. ಈ ಘಟನೆ ನಡೆದಿದ್ದು ಕೊಪ್ಪಳ ಜಿಲ್ಲೆ ಗಂಗಾವತಿಯಲ್ಲಿ.

ಕ್ಷಣಾರ್ಧದಲ್ಲಿ ತಪ್ಪಿದ ಅನಾಹುತ

ಕೇವಲ 20 ರಿಂದ 40 ಸೆಕೆಂಡ್ ವ್ಯತ್ಯಾಸ ಆಗಿದ್ದರೂ ಶಾಸಕ ಜನಾರ್ದನ ರೆಡ್ಡಿ ಹಾಗೂ ಸಿಎಂ ಸಿದ್ದರಾಮಯ್ಯ , ಅವರ ಬೆಂಗಾವಲು ವಾಹನಗಳು ನೇರವಾಗಿ ಡಿಕ್ಕಿ ಆಗುತ್ತಿದ್ದವು. ರಾಯಚೂರು ಜಿಲ್ಲೆಯಲ್ಲಿ ಕಾರ್ಯಕ್ರಮ ಮುಗಿಸಿಕೊಂಡು ಝೀರೋ ಟ್ರಾಫಿಕ್‌ನಲ್ಲಿ ಬೆಂಗಳೂರಿಗೆ ತೆರಳುತ್ತಿದ್ದ ಸಿಎಂ ಸಿದ್ದರಾಮಯ್ಯ ಬೆಂಗಾವಲು ಪಡೆಯ ವಿರುದ್ಧ ದಿಕ್ಕಿನಲ್ಲಿ ಶಾಸಕ ಜನಾರ್ದನ ರೆಡ್ಡಿಗೆ ಸೇರಿದ ಮೂರು ವಾಹನಗಳು ಹಾದುಹೋಗಿವೆ, ಅದೂ, ಒನ್ ವೇ ಮಾರ್ಗದಲ್ಲಿ..!

ಶಾಸಕ ಜನಾರ್ದನ ರೆಡ್ಡಿ ಮತ್ತವರ ಬೆಂಬಲಿಗರ ಕಾರುಗಳು ಸಂಚಾರಿ ನಿಯಮಗಳನ್ನು ಸಾರಾಸಗಟಾಗಿ ಉಲ್ಲಂಘಿಸಿ, ಡಿವೈಡರ್ ಮೇಲೆ ನುಗ್ಗಿಸಿಕೊಂಡು ಬೆಂಗಾವಲು ವಾಹನಗಳ ವಿರುದ್ಧ ದಿಕ್ಕಿನಲ್ಲಿ ಮೂರು ಕಾರು ಹೋಗಿದ್ದನ್ನು ಕಂಡು ಸ್ಥಳದಲ್ಲಿದ್ದವರು ಬೆಕ್ಕಸ ಬೆರಗಾಗಿದ್ದಾರೆ. ಡಿವೈಡರ್ ದಾಟಿ ಏಕಮುಖ ರಸ್ತೆಯ ವಿರುದ್ಧ ದಿಕ್ಕಿನ ಕಡೆಗೆ ರೆಡ್ಡಿ ವಾಹನ ಕಟ್ ಆಗುವುದು 20 ರಿಂದ 40 ಸೆಕೆಂಡ್ ತಡವಾಗಿದ್ದರೂ ದುರ್ಘಟನೆ ಯಾಗುವ ಸಾಧ್ಯತೆ ಗಂಗಾವತಿಯಲ್ಲಿ ನಡೆಯುತ್ತಿತ್ತು..!

ಆಗಿದ್ದೇನು?: ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಶುಕ್ರವಾರ ಸಂಜೆಯೇ ರಾಯಚೂರು ಜಿಲ್ಲೆಗೆ ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಬೆಂಗಳೂರಿಗೆ ವಾಪಸ್ ಹೋಗಬೇಕಿತ್ತು. ರಾಯಚೂರು ಜಿಲ್ಲೆಯಿಂದ ರಸ್ತೆ ಮಾರ್ಗವಾಗಿ ಕೊಪ್ಪಳ ಸಮೀಪದ ಬಸಾಪೂರ ಖಾಸಗಿ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತಲುಪುವುದು ಸಿಎಂ ಪೂರ್ವಯೋಜಿತ ಕಾರ್ಯಕ್ರಮ. ಅದರಂತೆ ಶನಿವಾರ ಸಿಎಂ ಕಾರ್ಯಕ್ರಮ ಮುಗಿಸಿ, ಕತ್ತಲಾದ ಬಳಿಕ ವಿಮಾನ ನಿಲ್ದಾಣದ ಕಡೆಗೆ ರಸ್ತೆ ಮಾರ್ಗವಾಗಿ ಸಿಂಧನೂರಿನಿಂದ ಕೊಪ್ಪಳದ ಬಸಾಪುರ ವಿಮಾನ ನಿಲ್ದಾಣದ ಕಡೆಗೆ ಪ್ರಯಾಣ ಬೆಳೆಸಿದ್ದಾರೆ.

ಸಿಎಂ ಬೆಂಗಾವಲು ಪಡೆಯ ವಿರುದ್ಧ ದಿಕ್ಕಿನಲ್ಲಿ ಚಲಿಸಿದ ಶಾಸಕ ಜನಾರ್ದನ ರೆಡ್ಡಿ ಕಾರು.

ಏನಿದು ಝೀರೋ ಟ್ರಾಫಿಕ್..?

ಝಡ್ ಶ್ರೇಣಿ ಭದ್ರತೆ ಇರುವ ಗಣ್ಯಾತಿಗಣ್ಯರಿಗೆ ಭದ್ರತಾ ದೃಷ್ಟಿಯಿಂದ ಝೀರೋ ಟ್ರಾಫಿಕ್ ವ್ಯವಸ್ಥೆ ನೀಡಲಾಗುತ್ತದೆ. ಈ ವೇಳೆ ಗಣ್ಯರು ಮತ್ತವರ ಬೆಂಗಾವಲು ವಾಹನ ದಾಟುವವರೆಗೆ ಸಾರ್ವಜನಿಕರ ಸಂಚಾರ ನಿಲ್ಲಿಸಲಾಗುತ್ತದೆ. ಸಾಮಾನ್ಯವಾಗಿ ಝೀರೋ ಟ್ರಾಫಿಕ್ ನಲ್ಲಿ ಗಣ್ಯರು ಚಲಿಸುವ ಕಾರಿನ ಮುಂದಿನ ಭದ್ರತಾ ಪಡೆಯ ವಾಹನ ಮತ್ತು ಬೆಂಗಾವಲು ವಾಹನಗಳು ಕನಿಷ್ಠ 70 ರಿಂದ 80 ಕಿ.ಮೀ ವೇಗದಲ್ಲಿ ಚಲಿಸುತ್ತವೆ. ಹೀಗೆ ಸಾಲು ಸಾಲಾಗಿ ಬರುವ ವಾಹನಗಳ ವಿರುದ್ಧ ದಿಕ್ಕಿನಲ್ಲಿ ರೆಡ್ಡಿ ಕಾರು ಚಲಿಸಿವೆ.

ರಸ್ತೆ ವಿಭಜಕ ದಾಟಿದ ರೆಡ್ಡಿ ಕಾರು

ಸಿಎಂಗೆ ಝೀರೋ ಟ್ರಾಫಿಕ್ ವ್ಯವಸ್ಥೆ ಮಾಡಿದ್ದ ಪೊಲೀಸ್ ಇಲಾಖೆ, ಸಿಎಂ ಮತ್ತವರ ಬೆಂಗಾವಲು ವಾಹನ ತೆರಳುವಾಗ ಇತರ ವಾಹನಗಳ ಸಂಚಾರ ಬಂದ್ ಮಾಡಿತ್ತು. ಈ ವೇಳೆ, ಶಾಸಕ ಜನಾರ್ದನ ರೆಡ್ಡಿ ಕೊಪ್ಪಳದಿಂದ ಗಂಗಾವತಿಗೆ ಬಂದಿದ್ದಾರೆ. ಝೀರೋ ಟ್ರಾಫಿಕ್ ವ್ಯವಸ್ಥೆ ಹಿನ್ನೆಲೆಯಲ್ಲಿ ಪೊಲೀಸರು ಎಲ್ಲ ವಾಹನಗಳ ಸಂಚಾರಕ್ಕೆ ತಡೆಹಾಕಿದ್ದಾರೆ. ಆಗ ಗಂಗಾವತಿಯ ಸಿಬಿಎಸ್ ವೃತ್ತಕ್ಕಿಂದ ಸ್ವಲ್ಪದೂರದಲ್ಲಿ ಟ್ರಾಫಿಕ್ ನಲ್ಲಿ ಸಿಲುಕಿದ್ದ ಶಾಸಕ ಜನಾರ್ದನ ರೆಡ್ಡಿ ಕಾರು, ತಮ್ಮ ಬಲಭಾಗದ ಡಿವೈಡರ್ ದಾಟಿಸಿಕೊಂಡು ಸಿಎಂ ಬೆಂಗಾವಲು ಪಡೆ ಆಗಮಿಸುತ್ತಿದ್ದ ಮಾರ್ಗದ ವಿರುದ್ಧ ತೆರಳಿದೆ. ರೆಡ್ಡಿ ಕಾರು ವಿಭಜಕ ದಾಟಿದ ಕೇವಲ 30 ಸೆಕೆಂಡ್‌ನಲ್ಲೇ ಆ ಸ್ಥಳದಿಂದ ಸಿಎಂ ಬೆಂಗಾವಲು ಪಡೆಯ ವಾಹನಗಳು ಹಾದುಹೋಗಿವೆ. ಆದರೆ, ಅದೃಷ್ಟವಶಾತ್ ದೊಡ್ಡ ಅಪಘಾತ ತಪ್ಪಿದೆ.

ಸಾಂಪ್ರದಾಯಿಕ ಉಡುಪಿನೊಂದಿಗೆ ದಂಪತಿಗಳ ಸಂಭ್ರಮ

ದಸರಾ ಪಾರಂಪರಿಕ ಟಾಂಗಾ ಸವಾರಿ

ಮೈಸೂರು: ನಾನಾ ಜಿಲ್ಲೆಗಳಿಂದ ಆಗಮಿಸಿದ ದಂಪತಿಗಳು ಮುಂಜಾನೆಯ ತುಂತುರು ಮಳೆಯಲ್ಲೂ ತಮ್ಮ ವಿವಿಧ ಪ್ರಕಾರದ ಸಾಂಪ್ರದಾಯಿಕ ಉಡುಗೆಗಳನ್ನು ತೊಟ್ಟು ನೆರೆದ ಜನರ ಕಣ್ಮನ ಸೆಳೆದರು.

ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ರಂಗಚಾರ್ಲು ಪುರಭವನದ ಆವರಣದಲ್ಲಿ ನಡೆದ ಪಾರಂಪರಿಕ ಉಡುಗೆಯಲ್ಲಿ ದಂಪತಿಗಳಿಗೆ ಟಾಂಗಾ ಸವಾರಿಯನ್ನು ಜೋಡಿಗಳಿಗೆ ಬಾಗಿನ ಕೊಡುವ ಮೂಲಕ ಪ್ರಾರಂಭಿಸಲಾಯಿತು.

ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತ ದೇವರಾಜು ಮಾತನಾಡಿ, ಸಾಮೂಹಿಕ ವಿವಾಹವನ್ನು ಏರ್ಪಾಡು ಮಾಡಿರುವ ರೀತಿಯಲ್ಲಿ ವೇದಿಕೆಯು ಕಂಗೊಳಿಸುತ್ತಿದೆ. ನೂತನ ದಂಪತಿಗಳಂತೆ ಎಲ್ಲಾ ಜೋಡಿಗಳು ಜನರನ್ನು ಆಕರ್ಷಿಸುತ್ತಿದ್ದು, ತುಂತುರು ಹನಿಯ ನಡುವೆಯೂ ಸುಂದರವಾದ ಸಂಭ್ರಮದ ವಾತಾವರಣ ಸೃಷ್ಟಿಯಾಗಿದೆ ಎಂದರು.

ಟಾಂಗಾ ಪರಂಪರೆ ರಕ್ಷಿಸಿ: ನಮ್ಮ ಇಲಾಖೆಯು ಪರಂಪರೆಯನ್ನು ಸಂರಕ್ಷಿಸಿ, ರಕ್ಷಿಸಿ ಅದನ್ನು ಮುಂದಿನ ಪೀಳಿಗೆಗೆ ರವಾನಿಸುವ ಕೆಲಸವನ್ನು ಮಾಡುತ್ತಿದೆ. ಸಂಸ್ಕೃತಿಯನ್ನು ಪ್ರಚಲಿತಗೊಳಿಸಿ, ಹೆಚ್ಚು ಜನರಿಗೆ ತಲುಪಿಸುವ ಮೂಲಕ ಅದನ್ನು ಕಾಪಾಡಬೇಕಾಗಿದೆ ಎಂದರು.

ಮೈಸೂರಿನ ಮಹಾರಾಜರು ಇಂದಿಗೂ ಕೂಡ ಟಾಂಗಾ ಸವಾರಿಯನ್ನು ಬಳಸುವುದರಿಂದ ಮೈಸೂರು ಎಂದರೆ ಟಾಂಗಾ, ಟಾಂಗಾ ಎಂದರೆ ಮೈಸೂರು ಎಂಬ ಪ್ರತೀತಿ ಇದೆ. ಮೈಸೂರಿಗೆ ಆಗಮಿಸುವ ಪ್ರವಾಸಿಗರು ಟಾಂಗಾ ಸವಾರಿಯನ್ನು ಮಾಡದೆ ಹಿಂತಿರುಗುವುದಿಲ್ಲ, ಹಾಗಾಗಿ ಸಾಂಪ್ರದಾಯಿಕ ಉಡುಗೆ ಮತ್ತು ಟಾಂಗಾ ಸವಾರಿ ಇವೆರಡನ್ನು ಒಂದುಗೂಡಿಸಿ ಪಾರಂಪರಿಕ ದಸರಾವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ ಎಂದು ಹೇಳಿದರು.

ಸಾಂಪ್ರದಾಯಿಕ ಉಡುಪಿನೊಂದಿಗೆ ಟಾಂಗಾ ಸವಾರಿಗೆ ಸಜ್ಜಾದ ದಂಪತಿಗಳು

40ಕ್ಕೂ ಅಧಿಕ ಜೋಡಿ ಭಾಗಿ

ಟಾಂಗಾ ಸವಾರಿಯಲ್ಲಿ ಮೈಸೂರು, ಶಿವಮೊಗ್ಗ, ಹಾಸನ, ಬೆಂಗಳೂರು ಹಾಗೂ ಇತರ ಜಿಲ್ಲೆಗಳಿಂದ ನೋಂದಾಯಿತ ದಂಪತಿಗಳು ತಮ್ಮ ಸಾಂಪ್ರದಾಯಿಕ ಉಡುಗೆಯ ಮೂಲಕ ಕಣ್ಮನ ಸೆಳೆದ ಕೊಡಗು, ಮೈಸೂರಿನ ಪಾರಂಪಾರಿಕ ಉಡುಗೆ ತೊಟ್ಟ ದಂಪತಿಗಳು, ಮೈಸೂರು ಪೇಟ, ರೇಷ್ಮೆಸೀರೆ ತೊಟ್ಟ ದಂಪತಿಗಳು ಹಾಗೂ ಕಿರಿಯ ವಯಸ್ಸಿನಿಂದ ಹಿರಿಯ ವಯಸ್ಸಿನ ಜೋಡಿಗಳು ಭಾಗಿಯಾಗಿ ಜನರ ಗಮನವನ್ನು ತಮ್ಮತ್ತ ಸೆಳೆದುಕೊಂಡರು. 25 ಟಾಂಗಾ ಗಾಡಿಗಳಲ್ಲಿ ದಂಪತಿಗಳಿಗೆ ನಗರದ ಐತಿಹಾಸಿಕ ರಸ್ತೆಗಳಲ್ಲಿ ಟಾಂಗಾ ಸವಾರಿಯನ್ನು ನೋಡಿ ಜನರು ಕಣ್ತುಂಬಿ ಕೊಂಡರು.

ಜಿ.ಟಿ ದೇವೇಗೌಡರು ವಾಸ್ತವಾಂಶ ಮಾತನಾಡಿದ್ದಾರೆ: ಡಾ.ಜಿ ಪರಮೇಶ್ವರ್

ಜಿಟಿಡಿ ಕಾಂಗ್ರೆಸ್ ಪಕ್ಷಕ್ಕೆ ಬಂದರೆ ಶಕ್ತಿ

ಧಾರವಾಡ: ಜಿ. ಟಿ ದೇವೇಗೌಡರು ವಾಸ್ತವಾಂಶ ಮಾತನಾಡಿದ್ದಾರೆ. ಅವರು ಕಾಂಗ್ರೆಸ್‌ಗೆ ಬಂದ್ರೆ

ಶಕ್ತಿ ಬರುತ್ತದೆ ಅನೋದಿದ್ರೆ ತೆಗೆದು ಕೊಳ್ಳುತ್ತೇವೆ. ಯಾರು ಕಾಂಗ್ರೆಸ್‌ನ ಸಿದ್ಧಾಂತ ಒಪ್ಪಿಕೊಳ್ಳುತ್ತಾರೋ ಅವರನ್ನು ಕಾಂಗ್ರೆಸ್‌ಗೆ ತೆಗೆದು ಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

ಸಿಎಂ ಸ್ಥಾನಕ್ಕೆ ಪರಮೇಶ್ವರ್ ಹೆಸರು ಕೇಳಿ ಬರುತ್ತಿರುವ ವಿಚಾರದ ಬಗ್ಗೆ ಮಾತನಾಡಿದರು, ಅದು ನನಗೆ ಕೇಳಿಸಿಲ್ಲ, ಮಾಧ್ಯಮಗಳಿಗೆ ಹೇಗೆ ಕೇಳಿಸುತ್ತೆ. ಅದು ನನಗೆ ಕೇಳಿಸಿದಾಗ ನೋಡೋಣ ಬಿಡಿ ಎಂದು ಹೇಳಿದರು.

ರಾಜ್ಯದಲ್ಲಿ ಸಿಇಎನ್ ಠಾಣೆಗಳ ನೇಮಕಾತಿಗೆ ಪ್ರತ್ಯೇಕ ಕೇಡರ್, ಜಿಲ್ಲೆಗೊಬ್ಬ ಪ್ರತ್ಯೇಕ ಎಸ್‌ಪಿ ಸಹ ನೇಮಕ ಮಾಡುತ್ತೇವೆ. ಪ್ರತಿ ಜಿಲ್ಲೆಯಲ್ಲಿ ಫಾರೆನ್ಸಿಕ್ ಸಿಇಎನ್ ಪೊಲೀಸ್ ಠಾಣೆ ಮಾಡಿದ್ದೇವೆ. ಪ್ರತಿ ಜಿಲ್ಲೆಯಲ್ಲಿ ಬೇಸಿಕ್ ಫಾರೆನ್ಸಿಕ್ ಸೈನ್ಸ್ ಲ್ಯಾಬ್ ಸಹ ಮಾಡಿದ್ದೇವೆ. ಹೊಸದಾಗಿ 43 ಫಾರೆನ್ಸಿಕ್ ಸಿಇಎನ್ ಪೊಲೀಸ್ ಠಾಣೆಗಳನ್ನು ಮಾಡಿದ್ದೇವೆ ಎಂದು ತಿಳಿಸಿದರು.

545 ಪಿಎಸ್‌ಐ ನೇಮಕ ವಿಚಾರದ ಬಗ್ಗೆ ಮಾತನಾಡಿ, ಕೋರ್ಟ್ ಆದೇಶಕ್ಕಾಗಿ ಕಾಯುತ್ತಿದ್ದೇವೆ. ಕೆಲವರು ಕೋರ್ಟ್‌ಗೆ ಹೋಗಿದ್ದಾರೆ. ಪ್ರಿಯಾಂಕ್ ಖರ್ಗೆ, ಈಶ್ವರ ಖಂಡ್ರೆ, ಶರಣಪ್ರಕಾಶ್ ಅವರ ಬೇಡಿಕೆಯೂ ಬಂದಿದೆ. 371ಜೆ ಗೆ ಶೇ. 8 ರಷ್ಟು ಮೀಸಲು ಕೇಳಿದ್ದಾರೆ ಎಂದು ತಿಳಿಸಿದರು.

ಸಿಇಎನ್ ಠಾಣೆಗಳ ನೇಮಕಕ್ಕೆ ಪ್ರತ್ಯೇಕ ಕೇಡರ್

ಮುಂದಿನ ದಿನಗಳಲ್ಲಿ ಅದಕ್ಕಾಗಿಯೇ ಎಸ್‌ಪಿ ಅಥವಾ ಬೇರೆ ಹಿರಿಯ ಅಧಿಕಾರಿ ನೇಮಕ ಸಹ ಮಾಡುತ್ತೇವೆ. ಇತ್ತೀಚೆಗೆ ಸೈಬರ್ ಅಪರಾಧಗಳು ಹೆಚ್ಚಾಗುತ್ತಿವೆ. ಹೀಗಾಗಿ ಇದಕ್ಕೆ ನಾವು ಹೆಚ್ಚು ಮಹತ್ವ ಕೊಟ್ಟಿದ್ದೇವೆ. ಈ ನಿಮಿತ್ತವಾಗಿ ಫಾರೆನ್ಸಿಕ್ ವಿವಿಗೆ ಭೇಟಿ ನೀಡಿದ್ದೇನೆ. ಉತ್ತಮವಾದ ಭೇಟಿ ಇದಾಗಿದೆ. ಪೊಲೀಸರಿಗೆ ಎರಡು ಹಂತದಲ್ಲಿ ಇವರು ತರಬೇತಿ ನೀಡುತ್ತಾರೆ. ಮುಂದೆ ಸಿಇಎನ್ ಠಾಣೆಗಳ ನೇಮಕಕ್ಕೆ ಪ್ರತ್ಯೇಕ ಕೇಡರ್ ಮಾಡುತ್ತೇವೆ ಎಂದುಗೃಹ ಸಚಿವ ಡಾ.ಜಿ ಪರಮೇಶ್ವರ್ ಹೇಳಿದರು.

ಎಲ್ಲ ಭೇಟಿಗೂ ವದಂತಿ ಹಬ್ಬಿಸುವುದು ಸರಿಯಲ್ಲ; ನಾನು ರಾಜೀನಾಮೆ ನೀಡಲ್ಲ : ಸಿಎಂ | ಖರ್ಗೆ ಭೇಟಿಗೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ: ಡಿಸಿಎಂ

ಖರ್ಗೆ-ಜಾರಕಿಹೊಳಿ ಭೇಟಿ; ಅಪಾರ್ಥ ಬೇಡವೆಂದ ನಾಯಕರು

ಬೆಂಗಳೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಸಚಿವ ಸತೀಶ್ ಜಾರಕಿಹೊಳಿ ಭೇಟಿಯಿಂದ ರಾಜ್ಯ ರಾಜಕಾರಣದಲ್ಲಿ ಯಾವುದೇ ಬದಲಾವಣೆ

ಯಿಲ್ಲ ಎನ್ನುವುದು ಸ್ಪಷ್ಟವಾಗಿದ್ದರೂ, 'ದಲಿತ' ಮುಖ್ಯಮಂತ್ರಿ ಎನ್ನುವ ಕೂಗು ಮುನ್ನಲೆಗೆ ಬರಲು ಕಾರಣವಾಗಿದೆ. ಇದರ ನಡುವೆ ಇದೀಗ ಈ ಭೇಟಿಗೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲವೆಂದು ಕಾಂಗ್ರೆಸ್ ನಾಯಕರು ಒಕ್ಕೊರಲಿನಿಂದ ಹೇಳಿದ್ದಾರೆ.

ಸತೀಶ್ ಜಾರಕಿಹೊಳಿ ಭೇಟಿಯನ್ನು ವಿವಿಧ ಆಯಾಮದಲ್ಲಿ ಬಿಜೆಪಿಗರು ವ್ಯಾಖ್ಯಾನಿಸುತ್ತಿದ್ದಾರೆ. ಆದರೆ ಕಾಂಗ್ರೆಸಿಗರು ಮಾತ್ರ, ಈ ಭೇಟಿಗೂ ಮುಖ್ಯಮಂತ್ರಿ ಬದಲಾವಣೆಗೂ ಸಂಬಂಧವಿಲ್ಲ. ಅಷ್ಟಕ್ಕೂ ಮುಖ್ಯಮಂತ್ರಿ ಹುದ್ದೆಯೇ ಖಾಲಿಯಿಲ್ಲ ಎನ್ನುವ ಮಾತುಗಳನ್ನು ಹಲವು ನಾಯಕರು ಹೇಳಿದ್ದಾರೆ.

ರಾಯಚೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಮುಖ್ಯಮಂತ್ರಿ ಬದಲಾವಣೆ ಊಹಾಪೋಹ. ರಾಜ್ಯದ ವಿವಿಧ ನಾಯಕರು ವರಿಷ್ಠರೊಂದಿಗೆ ಚರ್ಚಿಸುವುದು ಸಹಜ. ಅಂದ ಮಾತ್ರಕ್ಕೆ ಮುಖ್ಯಮಂತ್ರಿಗಳನ್ನು ಬದಲಾವಣೆ ಮಾಡಲಾಗುತ್ತದೆ ಎಂದು ಹೇಳಲು ಸಾಧ್ಯವೇ? ಪ್ರತಿಪಕ್ಷದವರು ಸುಳ್ಳು ಆರೋಪ ಮಾಡಿ ನನ್ನನ್ನು ರಾಜೀನಾಮೆ ನೀಡುವಂತೆ ಹೇಳಿದರೆ ರಾಜೀನಾಮೆ ನೀಡಲು ಸಾಧ್ಯವೇ? ಎಂದು ಪ್ರಶ್ನಿಸಿದರು.

ಸಚಿವ ಸತೀಶ್ ಜಾರಕಿಹೊಳಿ ಭೇಟಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ಸಿಎಂ ಬದಲಾವಣೆ ವಿಚಾರ ಊಹಾಪೋಹ. ರಾಜ್ಯದ ಕಾಂಗ್ರೆಸ್‌ನ ವಿವಿಧ ನಾಯಕರು ವರಿಷ್ಠರೊಂದಿಗೆ ಚರ್ಚೆ ಮಾಡುವುದು ಸಹಜ. ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಊಹಾಪೋಹಗಳು ಅಗತ್ಯವಿಲ್ಲ. ಸತೀಶ್ ಜಾರಕಿಹೊಳಿ ನಮ್ಮ ಎಐಸಿಸಿ ಅಧ್ಯಕ್ಷರನ್ನು ಭೇಟಿ ಮಾಡಿದರೆ ಅದಕ್ಕೆ ಬೇರೆ ಇನ್ನೇನೋ ಊಹೆ ಮಾಡುವುದು, ಬೋಸರಾಜು ಇನ್ಯಾರನ್ನೋ ಭೇಟಿ ಮಾಡಿದರೆ ಅದಕ್ಕೊಂದು ಊಹಾಪೋಹ ಮಾಡುವುದು. ಈ ರೀತಿಯ ಊಹಾಪೋಹ ಹಿಂದೆಯೂ ನಡೆದಿದೆ. ಈಗಲೂ ನಡೆಯುತ್ತಿದೆ. ಈಗ ಯಾಕೆ ಊಹಾಪೋಹ ಎದ್ದಿರೋದು? ಎಂದು ಸಿಎಂ ಪ್ರಶ್ನಿಸಿದರು.

ನಾನು ತಪ್ಪು ಮಾಡಿಲ್ಲ, ನ್ಯಾನೇಕೆ ನೀಡಲಿ: ತಾನು ರಾಜೀನಾಮೆ ನೀಡಲು ಸಿದ್ಧ, ಸಿಎಂ ಅವರೂ ರಾಜೀನಾಮೆ ನೀಡುತ್ತಾರಾ ಎನ್ನುವ ಅಶೋಕ್ ಸವಾಲಿಗೆ ಪ್ರತಿಕ್ರಿಯಿಸಿ, ಜಮೀನು ಖರೀದಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರು ಮೊದಲು ರಾಜೀನಾಮೆ ನೀಡಲಿ.

ರಾಜೀನಾಮೆ ಕೊಡುವುದಿದ್ದರೆ ಕೊಡಲಿ. ನಾನು ತಪ್ಪು ಮಾಡಿಲ್ಲ. ತಪ್ಪು ಮಾಡಿದ್ದೇನೆಂದು ಯಾರಾದರೂ ಹೇಳಿದ್ದಾರಾ? ತಪ್ಪೇ ಮಾಡಿಲ್ಲ ಎಂದ ಮೇಲೆ ಯಾರಿಗೂ ಭಯ ಪಡುವ ಅಗತ್ಯವಿಲ್ಲ. ಬಿಜೆಪಿಯವರಿಗೂ ಭಯ ಪಡಲ್ಲ. ಜೆಡಿಎಸ್‌ನವರಿಗೂ ಭಯಪಡಲ್ಲ ಎಂದು ಸ್ಪಷ್ಟಪಡಿಸಿದರು.

ಸಚಿವರು, ಶಾಸಕರು, ಹೈಕಮಾಂಡ್ ನಾಯಕರನ್ನು ಭೇಟಿ ಮಾಡುವುದು ಸ್ವಾಭಾವಿಕ. ಇದನ್ನು ತಪ್ಪಾಗಿ ಅರ್ಥೈಸುವ ಅಗತ್ಯವಿಲ್ಲ. ನನ್ನನ್ನೂ ನೂರಾರು ಮಂದಿ ಬಂದು ಭೇಟಿ ಮಾಡುತ್ತಾರೆ. ಅದೆಲ್ಲದಕ್ಕೂ ವಿಶೇಷ ಅರ್ಥ ಕಲ್ಪಿಸಲು ಸಾಧ್ಯವೇ? ರಾಜಕೀಯ, ಆಡಳಿತ ಹಾಗೂ ಕೆಲವು ಸನ್ನಿವೇಶಗಳ ಸಮಸ್ಯೆ ಬಗ್ಗೆ ಚರ್ಚೆ ಮಾಡುವುದು ಸಹಜ.
- ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ನಮ್ಮ ವರಿಷ್ಠರನ್ನು ಭೇಟಿ ಮಾಡೋದರಲ್ಲಿ ತಪ್ಪೇನಿದೆ?: ಡಿಕೆಶಿ

ಮಲ್ಲಿಕಾರ್ಜುನ ಖರ್ಗೆ ಅವರು ನಮ್ಮ ಪಕ್ಷದ ಅಧ್ಯಕ್ಷರು. ನಮ್ಮ ನಾಯಕರು ಅವರನ್ನು ಭೇಟಿ ಮಾಡದೇ ಬೇರೆ ಇನ್ಯಾರನ್ನು ಭೇಟಿ ಮಾಡಬೇಕು. ಇದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ. ಸಿಎಂ ಬದಲಾವಣೆ ಬಗ್ಗೆ ಯಾವುದೇ ಚರ್ಚೆ ಇಲ್ಲ. ನಮ್ಮ ರಾಜ್ಯದವರು ಎಐಸಿಸಿ ಅಧ್ಯಕ್ಷರಾಗಿದ್ದು, ಅವರನ್ನು ಭೇಟಿ ಮಾಡುವುದರಲ್ಲಿ ತಪ್ಪೇನಿದೆ? ನಮ್ಮ ನಾಯಕರು ನಮ್ಮ ಪಕ್ಷದ ಅಧ್ಯಕ್ಷರನ್ನು ಭೇಟಿ ಮಾಡದೆ ಬೇರೆ ಯಾರನ್ನು ಭೇಟಿ ಮಾಡಬೇಕು? ನಮಗೂ ಮಾಧ್ಯಮದವರಿಗೂ ಸಂಬಂಧ ಇರುವಂತೆ ನಮ್ಮ ನಾಯಕರಿಗೂ ನಮ್ಮ ಅಧ್ಯಕ್ಷರಿಗೂ ಸಂಬಂಧ ಇರುತ್ತದೆ. ನಾನು ದೆಹಲಿಗೆ ಭೇಟಿ ಕೊಟ್ಟಾಗೆಲ್ಲಾ ನಮ್ಮ ಅಧ್ಯಕ್ಷರನ್ನು ಭೇಟಿ ಮಾಡುತ್ತೇನೆ. ನಾನು ದಿನ ನಿತ್ಯ ಅವರ ಸಂಪರ್ಕದಲ್ಲಿ ಇರುತ್ತೇನೆ. ಪಕ್ಷದ ಬೆಳವಣಿಗೆಗಳ ವರದಿ ನೀಡುತ್ತಿರುತ್ತೇವೆ. ಅದಕ್ಕೆ ಪ್ರತ್ಯೇಕ ತಂಡ ರಚಿಸಲಾಗಿದೆ ಎಂದರು.

ಇಸ್ರೇಲ್ ಪ್ರತೀಕಾರ ತೆಗೆದುಕೊಂಡರೆ, ಅದೇಕೆ ಮಹಾಪರಾಧವಾಗಿ ಕಾಣುತ್ತದೆ?

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ಮಧ್ಯಪ್ರಾಚ್ಯ ಹೊತ್ತಿ ಉರಿಯುತ್ತಿದೆ. 'ನಾವು ಇಸ್ರೇಲ್‌ಗೆ ಹೆದರುವ ಪ್ರಶ್ನೆಯೇ ಇಲ್ಲ. ಅದು ಪ್ರತೀಕಾರಕ್ಕೆ ಇಳಿದರೆ ಆ ದೇಶವನ್ನು ನಾವು ಮುಗಿಸುತ್ತೇವೆ' ಎಂದು ಇರಾನಿನ ಜ್ಯೇಷ್ಠ ನಾಯಕ, ಎಂಬತ್ತಾರು ವರ್ಷದ ಅಯತೊಲ್ಲಾ ಖೊಮೇನಿ ಕೈಯಲ್ಲಿ ರೈಫಲ್ ಹಿಡಿದು ಶುಕ್ರವಾರದ ಪ್ರಾರ್ಥನಾ ಸಭೆ ನಂತರ ಅಬ್ಬರಿಸಿದ್ದಾರೆ. ಮೂರು ದಿನಗಳ ಹಿಂದೆ, ಇಸ್ರೇಲ್ ಮೇಲೆ ನಡೆಸಿದ ಇನ್ನೂರು ಕ್ಷಿಪಣಿ ದಾಳಿಯನ್ನು 'ಸಾರ್ವಜನಿಕ ಸೇವೆ' ಎಂದು ಖೊಮೇನಿ ಸಾರಿದ್ದಾರೆ. ಅಗತ್ಯ ಬಿದ್ದರೆ ಇನ್ನೊಂದು ಸುತ್ತಿನ ಕ್ಷಿಪಣಿ ದಾಳಿಗೂ ಸಿದ್ಧ ಎಂದು ಬೊಬ್ಬಿರಿದಿದ್ದಾರೆ.

ಇದಕ್ಕೂ ಒಂದು ವಾರದ ಮುನ್ನ ಇಸ್ರೇಲ್, 'ಆ ಖೊಮೇನಿಯನ್ನು ಸಾಯಿಸದೆ ಬಿಡುವುದಿಲ್ಲ. ನಮ್ಮ ಮುಂದಿನ ಗುರಿ ಖೊಮೇನಿ' ಎಂದು ಹೇಳಿತ್ತು.

ಇಸ್ರೇಲ್ ವಿರುದ್ಧ ಸಂಘರ್ಷದಲ್ಲಿ ನಿರತವಾಗಿರುವ ಹಮಾಸ್ ಮತ್ತು ಹೆಜಬುಲ್ಲಾ ಉಗ್ರ ಸಂಘಟನೆಗಳಿಗೆ ಇರಾನ್ ಬೆಂಬಲವಾಗಿ ನಿಂತಿದೆ. ಹೆಜಬುಲ್ಲಾ ಉಗ್ರ ಸಂಘಟನೆ ಮುಖ್ಯಸ್ಥ ಹಾಸನ್ ನಸ್ರಲ್ಲ ಹತ್ಯೆಯ ನಂತರ, ಇರಾನ್ ಪಿತ್ತ ನೆತ್ತಿಗೇರಿದೆ. ಅದಕ್ಕೂ ಮುಂಚೆ ಇಸ್ರೇಲ್, ಹಮಾಸ್ ನಾಯಕನನ್ನೂ ಹತ್ಯೆ ಮಾಡಿತ್ತು. ಇಸ್ರೇಲಿನ ಮುಂದಿನ ಗುರಿ ಖೊಮೇನಿ ಎಂಬುದು ಇರಾನ್‌ಗೆ ಮನವರಿಕೆಯಾಗಿದೆ. ಇದು ಖೊಮೇನಿಯ ನಿದ್ದೆಗೆಡಿಸಿರಲಿಕ್ಕೂ ಸಾಕು.

ಇರಾನ್ ಕ್ಷಿಪಣಿ ದಾಳಿಗೆ ಪ್ರತೀಕಾರ ತೆಗೆದುಕೊಳ್ಳಲು ಇಸ್ರೇಲ್ ಸಜ್ಜಾಗುತ್ತಿರುವಾಗಲೇ, 'ನೋಡ್ತಾ ಇರಿ, ಇನ್ನು ಹೆಚ್ಚು ದಿನ ಇಸ್ರೇಲ್ ಇರುವುದಿಲ್ಲ' ಎನ್ನುವ ಮೂಲಕ ಇರಾನ್ ಬರಲಿರುವ ಕರಾಳ ದಿನಗಳ ಮುನ್ಸೂಚನೆ ನೀಡಿದೆ.

ಇಂಥ ಧಮಕಿಗಳಿಗೆಲ್ಲ ಇಸ್ರೇಲ್ ಮಣಿಯುವ, ಹಿಂದೆ ಸರಿಯುವ ಮಾತೇ ಇಲ್ಲ ಎಂಬುದು ನಿರ್ವಿವಾದ. ಇಸ್ರೇಲ್ ಧೋರಣೆ ಗೊತ್ತಿರುವವರು ಈ ಮಾತನ್ನು ಒಪ್ಪುತ್ತಾರೆ. ತನ್ನನ್ನು ಕೆಣಕಿದವರ, ತನ್ನ ಮೇಲೆ ಆಕ್ರಮಣ ಮಾಡಿದವರ ಹುಟ್ಟಡಗಿಸದೇ ಇಸ್ರೇಲ್ ಇಲ್ಲಿ ತನಕ ಯಾರನ್ನೂ ಬಿಟ್ಟಿಲ್ಲ.

ಈ ಸಂಘರ್ಷವನ್ನು ಅರ್ಥ ಮಾಡಿಕೊಳ್ಳುವ ಮುನ್ನ ಇಸ್ರೇಲ್ ಭೂಪಟವನ್ನೊಮ್ಮೆ ಕಣ್ಮುಂದೆ ತಂದುಕೊಳ್ಳಬೇಕು. ಇಸ್ರೇಲ್ ಪಕ್ಕಕ್ಕೆ ಪೂರ್ವದಲ್ಲಿ ಸಿರಿಯಾ, ಜೋರ್ಡನ್ ಮತ್ತು ಸೌದಿ ಅರೇಬಿಯಾ ಇದೆ. ಅದರಾಚೆ ಪೂರ್ವಕ್ಕೆ ಇರಾನ್ ಇದೆ. ಇಸ್ರೇಲಿಗೆ ತಾಕಿಕೊಂಡ ಉತ್ತರಕ್ಕೆ ಲೆಬನಾನ್ ಇದೆ. ನೈರುತ್ಯಕ್ಕೆ ಈಜಿಪ್ಟ್ ಇದೆ. ಈ ಎಲ್ಲ ಅರಬ್ ದೇಶಗಳೂ ಒಂದಿಲ್ಲೊಂದು ಕಾಲಘಟ್ಟದಲ್ಲಿ ಕಳೆದ 75 ವರ್ಷಗಳಲ್ಲಿ ಇಸ್ರೇಲ್ ವಿರುದ್ಧ ಯುದ್ಧ ಸಾರಿದವುಗಳೇ. ಇಸ್ರೇಲಿನಿಂದ ಇಕ್ಕಿಸಿಕೊಂಡವೇ.

ಈ ಎಲ್ಲ ರಾಷ್ಟ್ರಗಳನ್ನು ಬಗಲಲ್ಲಿ ಕಟ್ಟಿಕೊಂಡೇ ಅಷ್ಟು ವರ್ಷಗಳಿಂದ ಇಸ್ರೇಲ್ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುವುದು ಸೋಜಿಗವಷ್ಟೇ ಅಲ್ಲ, ಅದೊಂದು ದೊಡ್ಡ ಪವಾಡ. ಪಕ್ಕದಲ್ಲಿರುವ ದೇಶ ದಾಳಿ ಮಾಡುವುದು ಸಹಜ. ಆದರೆ ಇರಾನ್ ಮತ್ತು ಇಸ್ರೇಲ್ ಮಧ್ಯೆ ಬೇರೆ ದೇಶಗಳಿವೆ. ಈಗ ಇರಾನ್, ಇಸ್ರೇಲಿನ ಉತ್ತರಕ್ಕೆ ಹೊಂದಿಕೊಂಡಿರುವ ಲೆಬನಾನ್‌ನ ಹೆಜಬುಲ್ಲಾ ಉಗ್ರ ಸಂಘಟನೆಯನ್ನು ಬಳಸಿಕೊಂಡು ದಾಳಿ ಮಾಡುತ್ತಿದೆ. ನೆರೆ-ಮನೆಯವ ಜಗಳ ತೆಗೆಯುವುದು ಸಾಮಾನ್ಯ. ಆದರೆ ನೆರೆ-ಮನೆಯವನಿಗೆ ತಾಕಿಕೊಂಡಿರುವ ಆಚೆಮನೆಯವ ಈಗ ಯುದ್ಧಕ್ಕೆ ನಿಂತಿದ್ದಾನೆ. ಆಚೆಮನೆಯವನು ನೆರೆ-ಮನೆಯವನ ನೆರವನ್ನು ಪಡೆದು ಯುದ್ಧಕ್ಕೆ ನಿಂತಿದ್ದಾನೆ.

ಇಸ್ರೇಲ್ ವಿರುದ್ಧ ಆಕ್ರಮಣ ಮಾಡಬೇಕು ಎಂದು (ಇರಾನ್) ಬಯಸಿದಾಗಲೆಲ್ಲ ಈ ಭೌಗೋಳಿಕ ಕಾರಣದಿಂದ ಇರಾನ್‌ಗೆ ನೇರ ಸಂಘರ್ಷ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಅದು ಇಸ್ರೇಲಿಗೆ ತಾಕಿಕೊಂಡಿರುವ ಗಾಜಾದಲ್ಲಿರುವ ಹಮಾಸ್ ಮತ್ತು ಉತ್ತರಕ್ಕೆ ತಾಕಿಕೊಂಡಿರುವ ಲೆಬನಾನ್‌ನಲ್ಲಿರುವ ಹೆಜಬುಲ್ಲಾ ಉಗ್ರ ಸಂಘಟನೆಗಳ ಮೂಲಕ ದಾಳಿ ಮಾಡುತ್ತದೆ.

ಇದನ್ನು ಇನ್ನೂ ಸರಳವಾಗಿ ಹೇಳಬೇಕೆಂದರೆ, ಇಸ್ರೇಲ್ ಕೆನ್ನೆಗೆ ಹೊಡೆಯಬೇಕೆಂದು ಇರಾನ್ ಬಯಸಿದರೆ, ಅದರ ಕೈ ನಿಲುಕುವುದಿಲ್ಲ. ಅದಕ್ಕಾಗಿ ಅದು ಯಾವತ್ತೂ ಹಮಾಸ್ ಮತ್ತು ಹೆಜಬುಲ್ಲಾ ಎಂಬ ಬೇರೆ ಬೇರೆ ಎರಡು ಕೈಗಳನ್ನು ಬಳಸಿಕೊಳ್ಳುತ್ತದೆ. ಈಗ ಅದು ಮಾಡುತ್ತಿರುವುದೂ ಅದನ್ನೇ. ಇಸ್ರೇಲ್ ಕೆನ್ನೆಗೆ ಹೊಡೆಯಲೆಂದೇ ಇರಾನ್ ಆ ಎರಡೂ ಉಗ್ರ ಸಂಘಟನೆಗಳನ್ನು ಬಾಡಿಗೆಗೆ ಇಟ್ಟುಕೊಂಡಿದೆ.

ಹುಲಿ, ಜಿಂಕೆಯನ್ನು ಬೆನ್ನಟ್ಟಿ ಓಡುತ್ತಿದೆಯೆಂದರೆ, ಹುಲಿಗೆ ಅದು ಆಹಾರದ ಪ್ರಶ್ನೆ. ಆದರೆ ಜಿಂಕೆಗೆ ಸಾವು-ಬದುಕಿನ ಪ್ರಶ್ನೆ. ಇಲ್ಲಿ ಜಿಂಕೆ ಸ್ಥಾನದಲ್ಲಿರುವ ಇಸ್ರೇಲ್ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕೆಂದರೆ ಓಡುತ್ತಲೇ ಇರಬೇಕಾಗಿದೆ, ಹೋರಾಡಲೇಬೇಕಿದೆ. ಆಗಾಗ ಬೇರೆ ಬೇರೆ ದೇಶಗಳು ಹುಲಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತವೆ. ಇಷ್ಟನ್ನು ತಿಳಿದುಕೊಂಡರೆ ಸಾಕು, ಈ ಸಮಸ್ಯೆ, ಸಂಘರ್ಷ ಅರ್ಥವಾದೀತು.

ಈಗ ಒಂದು ಸಂಗತಿ ಸ್ಪಷ್ಟವಾಗಿರಬಹುದು, ಹಮಾಸ್ ಮತ್ತು ಹೆಜಬುಲ್ಲಾ ಎರಡೂ ಒಂದೇ ಎಂಬುದು. ಇವೆರಡೂ ಇರಾನ್ ಪ್ರೇರಿತ ಉಗ್ರ ಸಂಘಟನೆಗಳು. ಅವುಗಳ ಉದ್ದೇಶ ಒಂದೇ- ಇಸ್ರೇಲ್‌ಗೆ ಸದಾ ಮಗ್ಗುಲ ಮುಳ್ಳಾಗಿ ಕಾಡುವುದು ಮತ್ತು ಇಸ್ರೇಲನ್ನು ಸರ್ವನಾಶ ಮಾಡುವುದು. ಆ ನಿಟ್ಟಿನಲ್ಲಿ ಆ ಎರಡೂ ಉಗ್ರ ಸಂಘಟನೆಗಳು ವ್ಯವಸ್ಥಿತವಾಗಿ ಕೆಲಸ ಮಾಡುತ್ತಲೇ ಬಂದಿವೆ. ಆದರೆ ಯಶಸ್ಸನ್ನು ಸಾಧಿಸಲು ಸಾಧ್ಯವಾಗಿಲ್ಲ.

ದಕ್ಷಿಣದಲ್ಲಿ ಹಮಾಸ್ ಮತ್ತು ಉತ್ತರದಲ್ಲಿ ಹೆಜಬುಲ್ಲಾ, ಇಸ್ರೇಲಿನ ನಾಗರಿಕರು ವಾಸಿಸುವ ನಗರಗಳ ಮೇಲೆ ಕ್ಷಿಪಣಿ ದಾಳಿಗಳನ್ನು ಮಾಡುತ್ತಲೇ ಬಂದಿವೆ. ಈ ಎರಡೂ ಸಂಘಟನೆಗಳು ಇಸ್ರೇಲಿನ ನಿದ್ದೆಗೆಡಿಸಿರುವುದಂತೂ ನಿಜ. ಯಾವ ಕ್ಷಣದಲ್ಲೂ ಇಸ್ರೇಲ್ ಮೈಮರೆಯುವಂತಿಲ್ಲ. ಈ ಎರಡು ಸಂಘಟನೆಗಳ ಪೈಕಿ ಹೆಜಬುಲ್ಲಾ ಇನ್ನೂ ಅಪಾಯಕಾರಿ. ಹೆಜಬುಲ್ಲಾ ಉಗ್ರರು ಹಮಾಸ್ ದಾಳಿಕೋರರಿಗಿಂತ ಹೆಚ್ಚು ತರಬೇತಿ ಪಡೆದವರು. ಅವರು ಬಳಸುವ ಶಸ್ತ್ರಾಸ್ತ್ರಗಳು ಹೆಚ್ಚು ಆಧುನಿಕ. ಇಸ್ರೇಲ್ ಮೇಲೆ ದಾಳಿಗೆ ಅನುಕೂಲವಾಗಲೆಂದೇ ಲೆಬನಾನಿನ ದಕ್ಷಿಣ ಭಾಗವನ್ನು ಹೆಜಬುಲ್ಲಾ ಉಗ್ರರು ಸಂಪೂರ್ಣವಾಗಿ ಆಕ್ರಮಿಸಿಕೊಂಡಿದ್ದಾರೆ.

ಇಲ್ಲಿ ಇನ್ನೊಂದು ಸಂಗತಿಯನ್ನು ಅರ್ಥ ಮಾಡಿಕೊಳ್ಳಬೇಕು. ಇದು ಇಸ್ರೇಲ್ ಮತ್ತು ಲೆಬನಾನ್ ಸಮಸ್ಯೆ ಅಲ್ಲ. ಆ ಎರಡೂ ದೇಶಗಳ ಜನರ ಮಧ್ಯೆ ಯಾವುದೇ ಸಂಘರ್ಷಗಳಿಲ್ಲ. ಇಸ್ರೇಲ್ ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಲು ಹೋರಾಡುತ್ತಿದೆ. ಆದರೆ ಇಸ್ರೇಲ್ ಅನ್ನು ಮುಗಿಸಲೇಬೇಕು ಎಂದು ಹೆಜಬುಲ್ಲಾ ಪಣ ತೊಟ್ಟಿದೆ. ಹೆಜಬುಲ್ಲಾ ಉಗ್ರ ಸಂಘಟನೆ ಮೇಲೆ ಲೆಬನಾನ್ ಸರಕಾರಕ್ಕೆ ಯಾವ ಹತೋಟಿ ಇಲ್ಲ. ಹಮಾಸ್ ಗಾಜಾದಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತೆ, ಹೆಜಬುಲ್ಲಾ ಲೆಬನಾನ್‌ನಲ್ಲಿ ಸ್ವತಂತ್ರವಾಗಿ ಕೆಲಸ ಮಾಡುತ್ತಿದೆ. ಅಷ್ಟಕ್ಕೂ ಇವು ಪುಂಡ-ಪೋಕರಿ ಸಂಘಟನೆ ಅಲ್ಲ. ಇವು ಪೂರ್ಣ ಪ್ರಮಾಣದ ಸೈನಿಕ ಪಡೆಗಳನ್ನು ಹೊಂದಿರುವ ಬಲಿಷ್ಠ ಉಗ್ರಗಾಮಿ ಸಂಘಟನೆಗಳು.

ಇಲ್ಲಿ ಗಮನಿಸಬೇಕಾದ ಇನ್ನೊಂದು ಸಂಗತಿಯಿದೆ. ಅದೇನೆಂದರೆ, ಲೆಬನಾನ್ ಮಿಲಿಟರಿ ಪಡೆಗಿಂತ ಹೆಜಬುಲ್ಲಾ ಉಗ್ರರ ಮಿಲಿಟರಿ ಬಲಾಢ್ಯವಾಗಿದೆ, ಆಧುನಿಕವಾಗಿದೆ. ಲೆಬನಾನ್ ಸೈನಿಕರಿಗಿಂತ ಹೆಚ್ಚು ಸೈನಿಕರು ಹೆಜಬುಲ್ಲಾ ಸಂಘಟನೆಯಲ್ಲಿದ್ದಾರೆ. ಯುರೋಪಿನ ಮಧ್ಯಗಾತ್ರದ ಅವೆಷ್ಟೋ ರಾಷ್ಟ್ರಗಳ ಮಿಲಿಟರಿಗಿಂತ, ಹೆಜಬುಲ್ಲಾ ಉಗ್ರರ ಮಿಲಿಟರಿ ಶಕ್ತಿಶಾಲಿಯಾಗಿದೆ. ಕಳೆದ ಒಂದು ವಾರದಿಂದ ಹೆಜಬುಲ್ಲಾ ಉಗ್ರರು ಎಂಟು ಸಾವಿರಕ್ಕಿಂತ ಹೆಚ್ಚು ಕ್ಷಿಪಣಿ, ರಾಕೆಟ್‌ಗಳಿಂದ ಇಸ್ರೇಲ್ ಮೇಲೆ ದಾಳಿ ಮಾಡಿದ್ದಾರೆ. ಇದು ಸಾಮಾನ್ಯ ಉಗ್ರ ಸಂಘಟನೆಗೆ ಸಾಧ್ಯವಾ? ಈ ದಾಳಿಯಲ್ಲಿ ನೂರಾರು ಇಸ್ರೇಲ್ ನಾಗರಿಕರು, ಮಕ್ಕಳು ಸತ್ತಿದ್ದಾರೆ. ಸುಮಾರು ಒಂದು ಲಕ್ಷ ಇಸ್ರೇಲಿಗರು ತಮ್ಮ ದೇಶದಲ್ಲಿಯೇ ನಿರ್ಗತಿಕರಾಗಿದ್ದಾರೆ.

ಇಸ್ರೇಲಿನ ಉತ್ತರ ಭಾಗ ಅಕ್ಷರಶಃ ಹೊತ್ತಿ ಉರಿಯುತ್ತಿದೆ. ರಾತ್ರಿ ಹೊತ್ತು ರಾಕೆಟ್, ಕ್ಷಿಪಣಿಗಳ ಸದ್ದು ಮೊರೆಯುತ್ತಿದೆ. ಆಗಸದಿಂದ ಬೆಂಕಿಯ ಉಂಡೆಗಳ ಧಾರೆಯಾಗುತ್ತಿದೆ. ಒಂದೆಡೆ ಹಮಾಸ್ ಮತ್ತು ಇನ್ನೊಂದೆಡೆ ಹೆಜಬುಲ್ಲಾ. ಇವೆರಡೂ ಉಗ್ರ ಸಂಘಟನೆಗಳು ಏಕಕಾಲಕ್ಕೆ ಇಸ್ರೇಲ್ ಮೇಲೆ ದಾಳಿ ಮಾಡುತ್ತಲೇ ಇವೆ. ಹಮಾಸ್ ದಾಳಿ ನಿಲ್ಲುತ್ತಿದ್ದಂತೆ, ಹೆಜಬುಲ್ಲಾಗಳು ಶುರು ಹಚ್ಚಿಕೊಳ್ಳುತ್ತಿದ್ದಾರೆ. ಹೆಜಬುಲ್ಲಾಗಳ ನಂತರ ಹಮಾಸ್ ದಾಳಿ. ನಂತರ ಎರಡೂ ಒಂದೇ ಕಾಲಕ್ಕೆ ತೊಡೆ ತಟ್ಟುತ್ತವೆ. ಇವೆರಡನ್ನೂ ಸಾಕುತ್ತಿರುವುದು, ಕುಮ್ಮಕ್ಕು ನೀಡುತ್ತಿರುವುದು ಇರಾನ್. ಅಂದರೆ ಈ ಎರಡೂ ಸಂಘಟನೆಗಳ ಕೀಲಿಕೈ ಇರುವುದು ಇರಾನ್ ಕೈಯಲ್ಲಿ.

ಈ ಹುಚ್ಚಾಟಗಳನ್ನು ವಿಶ್ವಸಂಸ್ಥೆ ಸುಮ್ಮನೆ ನೋಡುತ್ತಾ ಕುಳಿತುಕೊಂಡಿದೆ. ಲೆಬನಾನ್ ದಕ್ಷಿಣಕ್ಕೆ ಹೆಜಬುಲ್ಲಾಗಳ ಶಸ್ತ್ರಾಸ್ತ್ರ ಕೋಠಿ ಇರುವುದು ಇಡೀ ಜಗತ್ತಿಗೆ ಗೊತ್ತಿದೆ. ಆದರೆ ವಿಶ್ವಸಂಸ್ಥೆಗೆ ಮಾತ್ರ ಗೊತ್ತಿಲ್ಲ. ಕಳೆದ ಕಾಲು ಶತಮಾನದಲ್ಲಾದ ಎಲ್ಲ ಒಪ್ಪಂದಗಳೂ ಉಲ್ಲಂಘನೆಯಾಗಿವೆ. ಆದರೆ ಹಮಾಸ್ ಮತ್ತು ಹೆಜಬುಲ್ಲಾಗಳು ಮಾತ್ರ ದಿನದಿಂದ ದಿನಕ್ಕೆ ಶಕ್ತಿಶಾಲಿಯಾಗುತ್ತಾ ಹೋಗುತ್ತಿದ್ದಾರೆ. ಇಸ್ರೇಲಿನಂಥ ದೇಶದ ಮೇಲೆ ಸತತ ಯುದ್ಧ ಮಾಡುವಷ್ಟು ಶಕ್ತಿಯನ್ನು ಬೆಳೆಸಿಕೊಂಡಿದ್ದಾರೆ.

ಹೀಗಿರುವಾಗ ಇಸ್ರೇಲ್ ಮುಂದೆ ಬೇರೆ ಯಾವ ಆಯ್ಕೆ ಇದೆ?

ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಇಸ್ರೇಲ್ ಹೋರಾಡಲೇಬೇಕಿದೆ. ಒಂದು ಕ್ಷಣವೂ ಸುಮ್ಮನೆ ಕುಳಿತುಕೊಳ್ಳುವ ಪ್ರಶ್ನೆಯೇ ಇಲ್ಲ. ಎರಡೂ ಕಡೆಗಳಲ್ಲಿ ತನ್ನ ಗಡಿ ಮತ್ತು ನಾಗರಿಕರನ್ನು ಉಳಿಸಿಕೊಳ್ಳಲು ಹೆಣಗಲೇಬೇಕಿದೆ. ಇಸ್ರೇಲನ್ನು ಸರ್ವನಾಶ ಮಾಡುತ್ತೇವೆ ಎಂದು ಜೋರ್ಡನ್, ಈಜಿಪ್ಟ್, ಇರಾಕ್ ಅಥವಾ ಸೌದಿ ಅರೇಬಿಯಾ ಹೇಳಿದ್ದಿದ್ದರೆ ಅರ್ಥವಿತ್ತು. ಕಾರಣ ಅವು ನೆರೆ ದೇಶಗಳು. ಆದರೆ ಈ ಮಾತನ್ನು ಇರಾನ್ ಹೇಳುತ್ತಿದೆ. ಹಮಾಸ್ ಮತ್ತು ಹೆಜಬುಲ್ಲಾ ಇರಾನಿನ ಒಂದೇ ನಾಣ್ಯದ ಎರಡು ರಾಕ್ಷಸ ಮುಖಗಳು.

ತಮಾಷೆ ಅಂದ್ರೆ, ಇಸ್ರೇಲ್ ವಿರುದ್ಧ ಮಾತಾಡುವವರು, ಈ ರಾಕ್ಷಸರಿಗೆ ಮಾನವೀಯತೆ ತೋರಬೇಕೆಂದು ಹೇಳುತ್ತಿದ್ದಾರೆ. ಇವರ ಮಾತುಗಳನ್ನು ಕೇಳಿದರೆ, ನಾಳೆ ಜಾಗತಿಕ ಭೂಪಟದಲ್ಲಿ ಇಸ್ರೇಲ್ ಇರುವುದಿಲ್ಲ. ಮಾತಾಡುವವರು ತಮ್ಮ ಕೆಲಸ ಮುಂದುವರಿಸಲಿ, ಇಸ್ರೇಲ್ ತನ್ನ ಕೆಲಸವನ್ನು ಮುಂದುವರಿಸುತ್ತದೆ. ಹಮಾಸ್ ವಿರುದ್ಧದ ಸಂಘರ್ಷ ಇನ್ನೇನು ಒಂದು ವರ್ಷ ಪೂರೈಸಲಿದೆ. ಇಸ್ರೇಲ್ ವಿರುದ್ಧ ಎಲ್ಲ ದಿಕ್ಕುಗಳಿಂದ ವೈರಿಗಳು ಮುಗಿಬಿದ್ದಿದ್ದಾರೆ. ಆದರೆ ತನ್ನನ್ನು ರಕ್ಷಿಸಿಕೊಳ್ಳಲು ಇಸ್ರೇಲ್ ಹೋರಾಟ ಮಾಡಿದರೆ, ಮಾನವ ಹಕ್ಕುಗಳ ಉಲ್ಲಂಘನೆ ಎಂದು ಕೆಲವರು ಬೊಬ್ಬೆ ಹಾಕುತ್ತಿರುವುದು ಹಾಸ್ಯಾಸ್ಪದ ಮತ್ತು ವಿಪರ್ಯಾಸ.

'ಇನ್ನು ಹೆಚ್ಚು ದಿನ ಇಸ್ರೇಲ್ ಇರುವುದಿಲ್ಲ' ಎಂದು ಖೊಮೇನಿ ಹೇಳಿದರೆ ಯಾರೂ ಅದನ್ನು ಖಂಡಿಸುವುದಿಲ್ಲ. ಅದಕ್ಕೆ ಇಸ್ರೇಲ್ ಪ್ರತೀಕಾರ ತೆಗೆದುಕೊಂಡರೆ, ಅದು ಮಹಾಪರಾಧವಾಗಿ ಕಾಣುತ್ತದೆ.

Enough!

ಸಾವು ಏಕೆ ಮುಖ್ಯ?

ಈ ಕತೆಯನ್ನು ನೀವು ಕೇಳಿದ್ದೀರೋ, ಇಲ್ಲವೋ ಗೊತ್ತಿಲ್ಲ. ಇದನ್ನು ನನಗೆ ಹೇಳಿದವರು ಯೋಗಿ ದುರ್ಲಭಜೀ.

ಒಮ್ಮೆ ರಾಜನಿಗೆ ಅನಿಸಿತು. ಮನುಷ್ಯ ಅರವತ್ತೋ, ಎಪ್ಪತ್ತೋ, ತೊಂಬತ್ತೋ ವರ್ಷ ಬದುಕುತ್ತಾನಲ್ಲ, ಆತನ ಸಾವಿನಲ್ಲಿ ಅವನ ಅನುಭವ, ಪರಿಶ್ರಮ, ಸಾಧನೆ, ಜ್ಞಾನ ಗಳಿಕೆ ಎಲ್ಲವೂ ಮಣ್ಣಿನಲ್ಲಿ ಹೊರಟು ಹೋಗುತ್ತವೆ. ಒಬ್ಬ ವ್ಯಕ್ತಿಯ ಅಷ್ಟು ವರ್ಷಗಳ ಹೋರಾಟ ನಿರರ್ಥಕವಾಗುತ್ತದೆ. ಅದರ ಬದಲು ಮನುಷ್ಯನಿಗೆ ಸಾವೇ ಬರದಿದ್ದರೆ? ಬೇರೆಯವರ ವಿಷಯವಿರಲಿ, ನಾನಂತೂ ಸಾಯಬಾರದು. ಆಗ ನಾನು ಗಳಿಸಿದ ಹಣ, ಜ್ಞಾನವೆಲ್ಲವನ್ನೂ ಕಾಪಾಡಿಕೊಳ್ಳಬಹುದು ಎಂದು ಅವನಿಗೆ ಅನಿಸಿತು.

ಹಾಗಾದರೆ ಸಾವು ಬರದಿರುವಂತೆ ಮಾಡಲು ಏನು ಮಾಡಬೇಕು? ಅಮರತ್ವವನ್ನು ಪಡೆಯುವುದು ಹೇಗೆ?

ಈ ಪ್ರಶ್ನೆಯನ್ನು ರಾಜ ಒಬ್ಬ ಮಹಾತ್ಮನಿಗೆ ಕೇಳಿದ. ಆತ, 'ಮಹಾರಾಜ, ಅಲ್ಲಿ ಕಾಣುವ ಆ ಪರ್ವತದ ತಪ್ಪಲಿನಲ್ಲಿ ಒಂದು ಕೊಳವಿದೆ. ಅದರ ನೀರನ್ನು ಕುಡಿ. ನಿನಗೆ ಸಾವೇ ಬರುವುದಿಲ್ಲ' ಎಂದು ಹೇಳಿದ.

ಆ ಮಹಾತ್ಮ ಹೇಳಿದಂತೆ ರಾಜ ಪರ್ವತದ ತಪ್ಪಲಿಗೆ ಹೋದ. ಅಲ್ಲೊಂದು ತಿಳಿನೀಲಿ ನೀರಿನ ಕೊಳ ಕಾಣಿಸಿತು. ಆ ಕೊಳದಿಂದ ಬೊಗಸೆಯಲ್ಲಿ ಸಂತೃಪ್ತನಾಗುವಷ್ಟು ನೀರು ಕುಡಿದ. ಅಷ್ಟರಲ್ಲಿ ಅವನಿಗೆ ಯಾರದೋ ನರಳಿಕೆಯ ಸ್ವರ ಕೇಳಿಸಿತು. ರಾಜ ಆತನ ಬಳಿ ಹೋಗಿ, 'ಯಾಕೆ ನರಳುತ್ತಿದ್ದೀಯಾ, ನಿನ್ನ ಸಮಸ್ಯೆ ಏನು?' ಎಂದು ಕೇಳಿದ.

ಅದಕ್ಕೆ ಆತ, 'ನಾನು ಈ ಕೊಳದ ನೀರನ್ನು ಕುಡಿದು ಅಮರತ್ವವನ್ನು ಗಳಿಸಿದೆ. ನನ್ನ ಮಗ ನನ್ನನ್ನು ಮನೆಯಿಂದ ಹೊರ ಹಾಕಿದ. ಕಳೆದ ಐವತ್ತು ವರ್ಷಗಳಿಂದ ನಾನು ಇಲ್ಲಿ ನರಳುತ್ತಾ ಬಿದ್ದಿದ್ದೇನೆ. ನನ್ನನ್ನು ನೋಡಲು ಯಾರೂ ಬಂದಿಲ್ಲ. ಈ ಮಧ್ಯೆ ನನ್ನ ಮಗ ಸತ್ತು ಹೋದ. ಈಗ ನನ್ನ ಮೊಮ್ಮಕ್ಕಳಿಗೆ ವಯಸ್ಸಾಗಿದೆ. ನಾನು ಏನನ್ನೂ ಸೇವಿಸುತ್ತಿಲ್ಲ, ಕುಡಿಯುತ್ತಿಲ್ಲ, ಆದರೂ ಬದುಕಿದ್ದೇನೆ. ಈ ಬಾಳು ಯಾರಿಗೂ ಬೇಡ' ಎಂದು ಹೇಳಿದ.

ರಾಜ ಯೋಚನೆಗೆ ಬಿದ್ದ. ಮುದುಕನಾಗಿ ಅಮರತ್ವ ಪಡೆಯುವುದರಲ್ಲಿ ಏನು ಪ್ರಯೋಜನವಿದೆ ಎಂದು ಅವನಿಗೆ ಅನಿಸಿತು.

ತಟ್ಟನೆ ಮಹಾತ್ಮನಲ್ಲಿಗೆ ಹೋಗಿ, 'ನನಗೆ ಅಮರತ್ವವೊಂದೇ ಬೇಡ. ಜತೆಗೆ ಯೌವನವೂ ಬೇಕು. ಅವೆರಡನ್ನೂ ಸಾಧಿಸುವುದು ಹೇಗೆ?' ಎಂದು ಕೇಳಿದ. ಅದಕ್ಕೆ ಆ ಮಹಾತ್ಮ, 'ಅಲ್ಲಿ ಇನ್ನೊಂದು ಪರ್ವತ ಕಾಣುತ್ತಿದೆಯಲ್ಲ, ಅದರಾಚೆ ಒಂದು ಕೊಳವಿದೆ. ಆ ಕೊಳದ ಪಕ್ಕದ ಮರದಲ್ಲಿರುವ ಹಣ್ಣನ್ನು ಸೇವಿಸಿದರೆ, ಯೌವನ ಮತ್ತು ಅಮರತ್ವ ಪ್ರಾಪ್ತವಾಗುತ್ತವೆ' ಎಂದು ಹೇಳಿದ.

ರಾಜ ಕುದುರೆಯನ್ನೇರಿ ಅಲ್ಲಿಗೆ ಹೊರಟ. ಆತನಿಗೆ ಮರದಲ್ಲಿ ಹಳದಿ ಹಣ್ಣುಗಳು ಬಿಟ್ಟಿರುವುದು ಕಾಣಿಸಿತು. ಇನ್ನೇನು ಒಂದು ಹಣ್ಣನ್ನು ಕಿತ್ತು ಸೇವಿಸಬೇಕು ಎನ್ನುವಷ್ಟರಲ್ಲಿ ಆತನಿಗೆ ಯಾರೋ ಜೋರಾಗಿ ಜಗಳವಾಡುವ ದನಿ ಕೇಳಿಸಿತು. ಈ ನಿರ್ಜನ ಸ್ಥಳದಲ್ಲಿ ಯಾರು ಜಗಳವಾಡುತ್ತಿದ್ದಾರೆ ಎಂದು ರಾಜನಿಗೆ ಅಚ್ಚರಿಯಾಯಿತು. ನಾಲ್ವರು ಯುವಕರು ಮಾರಾಮಾರಿಗೆ ತೋಳೇರಿಸಿ ನಿಂತಿದ್ದರು.

ಅವರ ಪೈಕಿ ಒಬ್ಬ ಹೇಳಿದ- 'ನನಗೆ ಇನ್ನೂರೈವತ್ತು ವರ್ಷಗಳಾದವು. ಈತನಿಗೆ ಮುನ್ನೂರು ವರ್ಷಗಳಾದವು. ಈತ ನನಗೆ ಆಸ್ತಿಯಲ್ಲಿ ಪಾಲು ಕೊಡುತ್ತಿಲ್ಲ' ಎಂದು ಹೇಳಿದ.

ರಾಜ ಮುನ್ನೂರು ವರ್ಷದವನ ಹತ್ತಿರ ಹೋಗಿ, 'ನೀನೇಕೆ ಆಸ್ತಿಯಲ್ಲಿ ಪಾಲು ಕೊಟ್ಟಿಲ್ಲ' ಎಂದು ಕೇಳಿದಾಗ, 'ಮುನ್ನೂರೈವತ್ತು ವರ್ಷದ ನನ್ನ ತಂದೆ ಇನ್ನೂ ಬದುಕಿದ್ದಾರೆ. ಆತ ನನಗೆ ಆಸ್ತಿಯಲ್ಲಿ ಪಾಲು ನೀಡಿಲ್ಲ. ಹೀಗಿರುವಾಗ ನಾನು ಹೇಗೆ ನನ್ನ ಮಗನಿಗೆ ಪಾಲನ್ನು ನೀಡಲಿ?' ಎಂದು ಪ್ರಶ್ನಿಸಿದ.

ಮುನ್ನೂರೈವತ್ತು ವರ್ಷದವನನ್ನು ರಾಜ ಪ್ರಶ್ನಿಸಿದ. ಅದಕ್ಕೆ ಆತ, 'ನಾನೂರು ವರ್ಷದ ನನ್ನ ತಂದೆಯೇ ನನಗೆ ಆಸ್ತಿಯಲ್ಲಿ ಪಾಲು ನೀಡಿಲ್ಲ. ನಾನು ಹೇಗೆ ನನ್ನ ಮಗನಿಗೆ ಪಾಲು ನೀಡಲಿ?' ಎಂದು ಕೇಳಿದ. ರಾಜನಿಗೆ ಈ ಸಮಸ್ಯೆ ಎಂದೆಂದೂ ಬಗೆಹರಿಯುವುದಿಲ್ಲ ಎಂದು ಖಾತ್ರಿಯಾಯಿತು.

ಈ ಜಗಳ ಬಗೆಹರಿಯದ್ದರಿಂದ ಊರಿನ ಜನರೆಲ್ಲ ಸೇರಿ ಅವರನ್ನು ಗಡಿಪಾರು ಮಾಡಿದ್ದರೆಂದೂ, ಅದಕ್ಕಾಗಿ ಅವರೆಲ್ಲ ಈಗ ಕೊಳದ ಸನಿಹ ಬಂದು ಜಗಳವಾಡುತ್ತಿದ್ದಾರೆಂದೂ ರಾಜನಿಗೆ ತಿಳಿಯಿತು.

ತಕ್ಷಣ ಅಲ್ಲಿಂದ ಕುದುರೆಯನ್ನೇರಿದ ರಾಜನು ಮಹಾತ್ಮ ಇದ್ದಲ್ಲಿಗೆ ಧಾವಿಸಿ, 'ಥತ್, ಈ ಅಮರತ್ವ ಮತ್ತು ಯೌವನ ಯಾರಿಗೆ ಬೇಕು? ಸಾವಿನ ಮಹತ್ವವನ್ನು ನನಗೆ ತಿಳಿಸಿದ್ದಕ್ಕಾಗಿ ಧನ್ಯವಾದಗಳು. ನನಗೆ ಅಮರತ್ವವೂ ಬೇಡ, ಶಾಶ್ವತ ಯೌವನವೂ ಬೇಡ' ಎಂದು ಕೈಮುಗಿದ.

ಆಗ ಮಹಾತ್ಮ ಹೇಳಿದ- 'ಸಾವು ಇರುವುದರಿಂದಲೇ ಜಗತ್ತಿನಲ್ಲಿ ಪ್ರೀತಿ ಇದೆ. ಪ್ರತಿ ಕ್ಷಣವನ್ನೂ ಪ್ರೀತಿಯಿಂದ, ಸಂತಸದಿಂದ ಇರುವುದನ್ನು ರೂಢಿಸಿಕೊಳ್ಳಬೇಕು. ಹುಟ್ಟಿದವರೆಲ್ಲ ಸಾಯುವುದೇ ಮೇಲು. ಸಾವು ಇರದಿದ್ದರೆ ಬದುಕಿಗೆ ಅರ್ಥವೇ ಇಲ್ಲ'.

ಮಾನಸಿಕ ಬಲಿಷ್ಠರು ಯಾರು?

ಮಾನಸಿಕವಾಗಿ ಬಲಿಷ್ಠವಾಗಿರುವ ವ್ಯಕ್ತಿಗಳು ಆರು ಗುಣವಿಶೇಷಗಳನ್ನು ಹೊಂದಿರುತ್ತಾರಂತೆ. ಇದನ್ನು ನಾನು 'ಪಾಸಿಟಿವ್ ಲೈಫ್' ಪತ್ರಿಕೆಯಲ್ಲಿ ಓದಿದ್ದು. ಅವು ಯಾವುದೆಂದು ನೋಡೋಣ.

1. ಅವರು ತಮ್ಮ ಬಗ್ಗೆ ಕನಿಕರಪಡುವುದಿಲ್ಲವಂತೆ. ಏನೇ ಆದರೂ ಒಂದು ಕ್ಷಣ ಆದ ಘಟನೆಗೆ ವಿಷಾದ ವ್ಯಕ್ತಪಡಿಸಿ, ಮುಂದಿನ ಕ್ಷಣದಲ್ಲಿ ಏನೂ ಆಗಿಯೇ ಇಲ್ಲ ಎಂಬಂತೆ, ತಮ್ಮ ಪಾಡಿಗೆ ಮುಂದಕ್ಕೆ ಸಾಗುತ್ತಾರಂತೆ.
2. ಅವರು ಬದಲಾವಣೆಯನ್ನು ಒಪ್ಪಿಕೊಳ್ಳುತ್ತಾರಂತೆ, ಅಪ್ಪಿಕೊಳ್ಳುತ್ತಾರಂತೆ. ಅವರು ಸವಾಲುಗಳನ್ನು ಸ್ವಾಗತಿಸುತ್ತಾರಂತೆ.
3. ಅವರು ಸಾಧ್ಯವಾದಷ್ಟು ಸಂತಸವಾಗಿರಲು ಬಯಸುತ್ತಾರಂತೆ. ಎಂಥ ಪ್ರತಿಕೂಲ ಪರಿಸ್ಥಿತಿಯಲ್ಲೂ ಮಾನಸಿಕ ಸಮತೋಲನ ಮತ್ತು ಸಮಾಧಾನವನ್ನು ಕಳೆದುಕೊಳ್ಳುವುದಿಲ್ಲವಂತೆ. ತಮ್ಮಿಂದ ನಿಯಂತ್ರಿಸಲಾಗದ ಸಂಗತಿಗಳ ಮೇಲೆ ತಮ್ಮ ಶಕ್ತಿಯನ್ನು ಪೋಲು ಮಾಡುವುದಿಲ್ಲವಂತೆ.
4. ಅವರು ಬೇರೆಯವರ ಅಭಿಪ್ರಾಯಗಳನ್ನು ಮನ್ನಿಸುತ್ತಾರಂತೆ. ಆದರೆ ತಮಗೆ ಅನಿಸಿದ್ದನ್ನು ನೇರವಾಗಿ ಹೇಳಲು ಹಿಂಜರಿಯುವುದಿಲ್ಲವಂತೆ.
5. ಅವರು ಕಠಿಣ ಪರಿಸ್ಥಿತಿಯನ್ನು ಎದುರಿಸಲು ಹೆದರುವುದಿಲ್ಲವಂತೆ. ಒಂದು ಹಂತದವರೆಗಿನ ರಿಸ್ಕ್ ತೆಗೆದುಕೊಳ್ಳಲು ಹಿಂಜರಿಯುವುದಿಲ್ಲವಂತೆ.
6. ಅವರು ಬೇರೆಯವರ ಯಶಸ್ಸನ್ನು ಮುಕ್ತವಾಗಿ ಒಪ್ಪಿಕೊಳ್ಳುತ್ತಾರಂತೆ ಮತ್ತು ಎಲ್ಲರ ಎದುರು ಅಂಥವರನ್ನು ಹೊಗಳುತ್ತಾರಂತೆ. ಬೇರೆಯವರನ್ನು ಹೊಗಳಿದರೆ, ತಾವು ಕುಬ್ಜರಾಗುತ್ತೇವೆ ಎಂದು ಯೋಚಿಸುವುದಿಲ್ಲವಂತೆ.

ಕಣಕ ಮತ್ತು ಹೂರಣ: ಹೋಳಿಗೆಯಲ್ಲಿ ಪ್ರಕೃತಿ-ಪುರುಷ ತತ್ತ್ವ

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

ಅಶ್ಲೀಲವೆಂದು ಪರಿಗಣಿಸಲ್ಪಟ್ಟಿಲ್ಲ ಅಂತ ಸ್ವತಃ ಪಾ.ವೆಂ. ಆಚಾರ್ಯರೇ ಶಿಫಾರಸು ಮಾಡಿ 'ಯು' ಸರ್ಟಿಫಿಕೇಟ್ ಕೊಟ್ಟಿರುವ, ಹಾಗಾಗಿ ಇಲ್ಲಿಯೂ ಧಾರಾಳವಾಗಿ ಉಲ್ಲೇಖಿಸಬಹುದಾದ, ಒಂದು ಆಸಕ್ತಿಕರ ವಿವರಣೆ ಇದೆ, ಆಚಾರ್ಯರ ಪದಾರ್ಥ ಚಿಂತಾಮಣಿ ಗ್ರಂಥದಲ್ಲಿ. ಅದು ಹೀಗಿದೆ: ''ತೆಂಗಿನ ಕಾಯಿಯನ್ನು ಒಡೆದರೆ ಎರಡು ಹೋಳಾಗುತ್ತದೆ. ಅವುಗಳಲ್ಲಿ ಒಂದು ಹೆಣ್ಣು ಹೋಳು; ಇನ್ನೊಂದು ಸ್ವಾಭಾವಿಕವಾಗಿ ಗಂಡು ಹೋಳು. ಈ ಹೆಸರುಗಳು ಸುಮ್ಮನೆ ಬಂದಿಲ್ಲ. ಕಾಯಿಯಲ್ಲಿ ಕಣ್ಣು ಅಥವಾ ತೂತು ಇರುವ ಭಾಗ ಹೆಣ್ಣು. ನಾವು ಎಷ್ಟೇ ಲೈಂಗಿಕ ಮಡಿವಂತಿಕೆಯನ್ನು ಆಚರಿಸಿದರೂ ಭಾಷೆಯಿಂದ ಲೈಂಗಿಕತೆಯನ್ನು ಉಚ್ಚಾಟನೆ ಮಾಡಲಾಗುವುದಿಲ್ಲ. ಗ್ರಾಮ್ಯದಲ್ಲಿ ಮಾತ್ರವಲ್ಲ ನಾಗರಿಕ ಮಾತಿನಲ್ಲಿ ಕೂಡ ಅದು ನುಸುಳಿಯೇ ನುಸುಳುತ್ತದೆ. ತೂತು ಇರುವುದು ಹೆಣ್ಣು ಎಂಬುದು ಶರೀರ ರಚನೆಯಲ್ಲಿ ಪ್ರತ್ಯಕ್ಷವಾದ ತಥ್ಯ. ಅದು ತೆಂಗಿನ ಕಾಯಿಯ ಹೋಳಿಗೆ ಅನ್ವಯಿಸಿದಾಗ ಅದರ ಮೂಲ ಅಶ್ಲೀಲತ್ವ ನಮ್ಮ ಗಮನಕ್ಕೆ ಬಾರದಷ್ಟು ಆಳಕ್ಕೆ ಹುಗಿಯಲ್ಪಟ್ಟಿದೆ. ನಮ್ಮ ಮಡಿವಂತ ಮನೆಯಲ್ಲಿ ಬಲು ಔಚಿತ್ಯ ಪ್ರಜ್ಞೆಯ ನನ್ನ ತರುಣ ಅಕ್ಕಂದಿರು ಕಿವಿಯ ಆಭರಣಗಳನ್ನು ತೊಳೆಯುವಾಗ ಕೊಪ್ಪಿನ ಗಂಡು ತಿರುಗಣಿ ಸವೆದುಹೋಗಿದೆ ಎನ್ನುತ್ತಿದ್ದರು. ತಿರುಗಣಿಯಲ್ಲಿ ತೂತಿನೊಳಗೆ ಅಥವಾ ಆಂಡೆಯೊಳಗೆ ಹೋಗಿ ಕೂಡ್ರುವ ಭಾಗ ಗಂಡು. ಈ ಆಭರಣಗಳ ಗಂಡು-ಹೆಣ್ಣು ಭಾಗಗಳನ್ನು ಹೇಳುವಾಗ ಕೇವಲ ಗಂಡು-ಹೆಣ್ಣಿನ ಅಂಗ ವೈಶಿಷ್ಟ್ಯಗಳನ್ನು ಕುರಿಯುವುದಿಲ್ಲ, ಗುಪ್ತವಾದ ಲೈಂಗಿಕ ಸಂಭೋಗಕ್ರಿಯೆಯನ್ನೂ ಸೂಚಿಸುತ್ತಿದ್ದೇವೆ ಎಂದು ಅವರಿಗೆ ಹೊಳೆಯುತ್ತಿರಲೇ ಇಲ್ಲ. ಯಾವುದಾದರೂ ಚಿಕಿತ್ಸಕ ಬುದ್ಧಿಯ ಮಗು ಈ ಆಂಡೆ ತಿರುಗಣಿಗಳಿಗೆ ಗಂಡು-ಹೆಣ್ಣೆಂಬ ಹೆಸರು ಯಾಕೆ ಎಂದು ಕೇಳಿದ್ದರೆ ಅವರು ತುಂಬ ಪೇಚಿಗೆ ಸಿಕ್ಕಿಕೊಳ್ಳಬಹುದಿತ್ತು. ಇದು ನಮ್ಮ ಕನ್ನಡ ಭಾಷೆಗಷ್ಟೇ ಸೀಮಿತವಲ್ಲ ಎನ್ನುವುದನ್ನು ಯಾವುದೇ ಒಳ್ಳೆಯ ಇಂಗ್ಲಿಷ್ ಶಬ್ದಕೋಶದಲ್ಲಿ ನೀವು screw ಎಂಬ ಶಬ್ದದ ಕೆಳಗೆ ನೋಡಿ ಕಂಡುಕೊಳ್ಳುವಿರಿ. ಅಲ್ಲಿಯೂ male screw ಮತ್ತು female screw ಇವೆ. ಆಂಡೆಯೊಳಗೆ ಹೋಗಿ ಕೂಡ್ರುವ ಭಾಗ ಗಂಡು. ಯಾವುದೇ ಯಂತ್ರಭಾಗದಲ್ಲಿ ಸ್ಕ್ರೂ ಕೂಡಿಸಲು ಮಾಡಿದ ತಿರುಗಣಿ (ಥ್ರೆಡ್) ಉಳ್ಳ ತೂತು ಹೆಣ್ಣು ಸ್ಕ್ರೂ''.

'ಪಾವೆಂ' ಅವರ ಸಂಶೋಧನಾತ್ಮಕ ವಿವರಣೆ ಸ್ವಾರಸ್ಯಕರವಷ್ಟೇ ಅಲ್ಲ ಸಮಂಜಸವಾಗಿಯೂ ಇದೆ. ಆದರೆ ಸ್ಕ್ರೂ, ನಟ್-ಬೋಲ್ಟ್, ಇಲೆಕ್ಟ್ರಿಕ್ ಪ್ಲಗ್ ಮತ್ತು ತೆಂಗಿನಕಾಯಿಯ ಹೋಳಿಗೆ ಇದನ್ನು ಅನ್ವಯಿಸಿದ್ದಕ್ಕಿಂತಲೂ 'ಪಾವೆಂ' ಮುಂದುವರಿಸಿ ಇದೇ ಥಿಯರಿಯನ್ನು ಹೋಳಿಗೆಗೂ ವಿಸ್ತರಿಸಿದ್ದು ಮತ್ತಷ್ಟು ರುಚಿಕರವಾಗಿ ಇದೆ! ಈಗ ನವರಾತ್ರಿ ಹಬ್ಬದ ಸೀಸನ್ ಬೇರೆ. ನಾವೆಲ್ಲ ಹೋಳಿಗೆಯ ಉಲ್ಲೇಖವನ್ನು ಎಲ್ಲಾದರೂ ತಪ್ಪಿಸಿಕೊಳ್ಳಲಿಕ್ಕುಂಟೇ? ಅದನ್ನೂ ಓದಿಯೇಬಿಡೋಣ. 'ಪಾವೆಂ' ಹೀಗೆ ಬರೆದಿದ್ದಾರೆ: ''ಹೋಳಿಗೆ ಮಾಡುವುದಕ್ಕೆ ಕಣಕ ಮತ್ತು ಹೂರಣ ಬೇಕಾಗುತ್ತವಲ್ಲ, ಎರಡನ್ನೂ ಅಂದಾಜಿನ ಅಳತೆಯಿಂದ ಬೇರೆಬೇರೆ ಅಣಿಗೊಳಿಸುತ್ತಾರೆ. ಹೋಳಿಗೆ ಮಾಡಿ ಮುಗಿಸಿದಾಗ ಒಂದೋ ಸ್ವಲ್ಪ ಕಣಕವಾದರೂ ಮಿಕ್ಕುಳಿಯುತ್ತದೆ ಅಥವಾ ಹೂರಣವಾದರೂ ಉಳಿದುಬಿಡುತ್ತದೆ. ಮನೆಯಲ್ಲಿ ಯಾರಾದರೂ ಬಸುರಿ ಇದ್ದರೆ ಹೋಳಿಗೆ ಶಕುನ ಪ್ರಕಾರ ಅಜ್ಜಮ್ಮ ಭವಿಷ್ಯ ಹೇಳುತ್ತಾರೆ- ಹೂರಣ ಉಳಿದರೆ ಗಂಡು, ಕಣಕ ಉಳಿದರೆ ಹೆಣ್ಣು ಮಗು ಹುಟ್ಟುತ್ತದೆ ಎಂದು. ಹೂರಣ ಕಣಕದ ಒಳಗೆ ಹೋಗುವುದರಿಂದ (ಹೂರಣ ಎಂಬ ಪದ ಬಂದಿರುವುದೇ ಸಂಸ್ಕೃತದ 'ಪೂರಣ'ದಿಂದ, ತುಂಬಿಸುವುದು ಎಂಬ ಅರ್ಥದಿಂದ) ಅದು ಗಂಡು. ಕಣಕವು ಹೂರಣವನ್ನು ಒಳಗೆ ತೆಗೆದುಕೊಳ್ಳುವುದರಿಂದ ಅದು ಹೆಣ್ಣು. ಲೈಂಗಿಕ ಕ್ರಿಯೆಯನ್ನೇ ಆಧರಿಸಿದ ಶಕುನವಿದು, ಅಶ್ಲೀಲವೆಂದು ಪರಿಗಣಿಸಲ್ಪಟ್ಟಿಲ್ಲ!''.

ಹೌದಲ್ಲ! ಪಾ.ವೆಂ.ಆಚಾರ್ಯರು ವಿವರಿಸಿದ ಹೋಳಿಗೆ ಶಕುನವನ್ನು ನಾವು ಮೋದಕ, ಕರಜಿಕಾಯಿ, ಸುಕ್ಕಿನುಂಡೆ ಇತ್ಯಾದಿಗೂ ವಿಸ್ತರಿಸಬಹುದು. ಬಾಳೆಕಾಯಿ ಪೋಡಿ, ಮಿರ್ಚಿಬಜ್ಜಿ, ಆಲೂ ಬೋಂಡಾ ಮುಂತಾದವುಗಳಿಗೂ ಸರಿದೂಗಿಸಬಹುದು. ಹೊರಗೊಂದು ಕವಚ, ಒಳಗೆ ಸ್ಟಫಿಂಗ್ ಇರುವ ಯಾವ ತಿನಿಸಾದರೂ ಸರಿಯೇ. ಸಮೋಸ, ಸ್ಟಫ್ಡ್ ಪರೋಟಾ ಅಥವಾ ಈಗೀಗ ನಗರವಾಸಿ ಭಾರತೀಯರಿಗೂ ಪರಿಚಯವಾಗಿರುವ ಮೋಮೋಸ್(ಚೈನೀಸ್ ಡಂಪ್ಲಿಂಗ್ಸ್) ಮುಂತಾದವಕ್ಕೂ ಅನ್ವಯಿಸಬಹುದು. ಇಲ್ಲೆಲ್ಲ ಪ್ರಕೃತಿ-ಪುರುಷ ತತ್ತ್ವವೇ ತಾನೆ ಪಾಲನೆ ಆಗಿರುವುದು? ಆದರೆ ಹೋಳಿಗೆಗಿರುವ ಖದರು, ಗತ್ತು, ಹಬ್ಬದಾಚರಣೆಗೆ ಮಾಡುವ ವಿಶೇಷ ಭಕ್ಷ್ಯ ಎಂದು ತುಸು ಹೆಚ್ಚೇ ಪೂಜ್ಯ-ಪವಿತ್ರ ಭಾವನೆ ಬೇರೆಲ್ಲ ತಿನಿಸುಗಳಿಗೆಲ್ಲಿ ಬರಬೇಕು? ಎಷ್ಟೆಂದರೂ ಹೋಳಿಗೆಯ ಶ್ರೇಷ್ಠತೆಯೇ ಬೇರೆ. ಅದು ಸಾಂಪ್ರದಾಯಿಕ ಬೇಳೆ ಹೋಳಿಗೆಯೇ ಇರಲಿ, ಕಾಯಿಹೋಳಿಗೆಯಿರಲಿ, ಉತ್ತರ ಕರ್ನಾಟಕದಲ್ಲಿ ಹೆಚ್ಚು ಜನಪ್ರಿಯವಾಗಿರುವ ಶೇಂಗಾ ಹೋಳಿಗೆಯಾದರೂ ಇರಲಿ ಅಥವಾ ಈಗ ಬೆಂಗಳೂರಲ್ಲಿ ತಲೆಯೆತ್ತಿರುವ 'ಹೋಳಿಗೆ ಮನೆ'ಗಳಲ್ಲಿ ಸಿಗುವ ಛಪ್ಪನ್ನೈವತ್ತಾರು ತರಹೇವಾರಿ ಹೋಳಿಗೆಗಳೇ ಇರಲಿ. ಗಾದೆಮಾತೇ ಹೇಳುವಂತೆ- ಶಬ್ದದ ಅರ್ಥ ತಿಳಿಯದಿದ್ದರೂ ಹಬ್ಬದ ಹೋಳಿಗೆ ತಿನ್ನಲಿಕ್ಕೆ ಕಡಿಮೆ ಇಲ್ಲ.

ಇಂತಿರುವ ಹೋಳಿಗೆ ತತ್ತ್ವವನ್ನು ರಸಋಷಿ ಕುವೆಂಪು ತಮ್ಮದೊಂದು ಕವಿತೆಯಲ್ಲಿ ರಸವತ್ತಾಗಿ ಚಿತ್ರಿಸಿದ್ದಾರೆ. ಗಮನಾರ್ಹ ವ್ಯತ್ಯಾಸವೇನೆಂದರೆ ಇಲ್ಲಿ ಕಣಕವೆಂದರೆ ಗಂಡು, ಹೂರಣವೆಂದರೆ ಹೆಣ್ಣು! 1954ರಲ್ಲಿ ಪ್ರಕಟವಾದ 'ಚಂದ್ರಮಂಚಕೆ ಬಾ, ಚಕೋರಿ!' ಕವನಸಂಕಲನದಲ್ಲಿದೆ ಈ ಕವಿತೆ. ಇದರ ಶೀರ್ಷಿಕೆ 'ದಂಪತಿ' ಎಂದು. 'ಗೌರಿಹಬ್ಬಕ್ಕೆ ಕಬ್ಬಗಾಣಿಕೆ' ಅಂತೊಂದು



ಉಪಶೀರ್ಷಿಕೆಯೂ ಆವರಣದಲ್ಲಿದೆ. ಬಹುಶಃ ಗೌರಿ-ಗಣೇಶ ಹಬ್ಬಕ್ಕೆಂದು ಮನೆಯಲ್ಲಿ ಹೋಳಿಗೆ ತಯಾರಿಸುತ್ತಿದ್ದಾಗ ಕುವೆಂಪುಗೆ ಈ ಕವಿತೆ ಹೊಳೆದದ್ದಿರಬಹುದು. ''ನಮ್ಮ ಬಾಳಿಗೆ ಸಾಕ್ಷಿ ಹೋಳಿಗೆ! ನಾನು ಕಣಕ, ನೀನು ಹೂರ್ಣ; ನಿನ್ನನಪ್ಪೆ ನಾನು ಪೂರ್ಣ! ನಾನಿಲ್ಲದೆ ನೀನು ಚೂರ್ಣ; ನೀನಿಲ್ಲದೆ ನಾನು ಶೀರ್ಣ! ಎರಡು ಹೆಸರು, ಒಂದೆ ಉಸಿರು; ನಾನು ಪತಿ, ನೀನು ಸತಿ; ಒಂದೆ ದಂಪತಿ!'' ಎಂದು ಕವಿತೆಯ ಮೊದಲ ಚರಣ. ''ನಿನ್ನ ವಿನಾ ನಾನು ಶೂನ್ಯ; ತೊರೆಯೆ ನೀನು ನಾ ಜಘನ್ಯ. ನಿನ್ನ ತಪ್ಪಿ ನಾನು ರಿಕ್ತ; ನಿನ್ನನೊಪ್ಪಿ ನಾ ಸುಶಕ್ತ. ನೀ ಬಂಧಿಸೆ ನಾ ವಿಮುಕ್ತ; ಆಲಿಂಗಿಸೆ ಯೋಗಮುಕ್ತ! ಎರಡು ಹೆಸರಿಗೊಂದೆ ಉಸಿರು: ನಾನು ಪತಿ, ನೀನು ಸತಿ, ಒಂದೆ ದಂಪತಿ!''- ಇದು ಎರಡನೆಯ ಚರಣ.

ಹೋಳಿಗೆ ಉತ್ಕೃಷ್ಟ ಮಟ್ಟದ್ದಾಗಬೇಕಿದ್ದರೆ ಕಣಕ ಮತ್ತು ಹೂರಣಗಳ ಪ್ರಮಾಣ, ಅನುಪಾತ ಎಲ್ಲವೂ ಸರಿಯಾಗಿರಬೇಕು. ಕಣಕವೇ ಹೆಚ್ಚಾದರೆ ಹೋಳಿಗೆ ಹಸನಾಗಿ ಬಾರದೆ ಒಣಕಲು ರೊಟ್ಟಿಯಂತಾದೀತು. ಹೂರಣ ಹೆಚ್ಚಾದರೆ ಕಣಕವೆಲ್ಲ ಹರಿದು ಹೋಗಿ ಹೋಳಿಗೆ ಛಿದ್ರವಿಚ್ಛಿದ್ರವಾದೀತು. ''ಎರಡು ಗಾಲಿ ಬೇಕೇಬೇಕು ಬಂಡಿ ಓಡಲು... ಉರುಳದೆಂದು ಒಂದು ಗಾಲಿ ಚಿಕ್ಕದಾಗಲು...'' ಎಂಬ ಚಿತ್ರಗೀತೆ ಸಾಲಿನಂತೆಯೇ ಸಂಸಾರವೆಂಬ ಹೋಳಿಗೆಯ ಸಮತೋಲನ ಕೂಡ. ಕವಿತೆಯಲ್ಲಿ ಕುವೆಂಪು ಅದನ್ನು ಸಮರ್ಥವಾಗಿ ಪ್ರತಿಬಿಂಬಿಸಿದ್ದಾರೆ. ಆದರೆ ತನ್ನನ್ನು ಕಣಕಕ್ಕೂ, ಮನದನ್ನೆಯನ್ನು ಹೂರಣಕ್ಕೂ ಸಮೀಕರಿಸಿದ್ದೇಕಿರಬಹುದು? ಕಣಕ ಹೊರಗಿನ ಕವಚ, ರಕ್ಷಣೆಯ ಹೊಣೆ ಹೊತ್ತಿರುವಂಥದು, ಪ್ರಾಪಂಚಿಕ ಒತ್ತಡಗಳಿಗೆ ಒಡ್ಡಿಕೊಂಡಿರುವಂಥದು; ಹೂರಣ ಮನೆಯೊಳಗಿನದು, ಅಂತರಂಗದ ಮಾಧುರ್ಯ, ಮನೆವಾಳ್ತೆಯ ಕೇಂದ್ರಬಿಂದು... ಎಂಬ ತರ್ಕದಿಂದಿರಬಹುದು. ಇದು ಕೂಡ ಅತ್ಯಂತ ಸಮಂಜಸವೇ. 'ಚಂದ್ರಮಂಚಕೆ ಬಾ, ಚಕೋರಿ!' ಕವನಸಂಕಲನವನ್ನು ಕುವೆಂಪು ಅವರು ಪತ್ನಿ ಹೇಮಾವತಿ ಅವರಿಗೆ ಅರ್ಪಣೆ ಮಾಡಿರುವ ರೀತಿಯನ್ನು ಗಮನಿಸಿದರೆ ನಮಗಿದು ಅರ್ಥವಾಗುತ್ತದೆ: ''ನನ್ನ ಜೀವನ ಲಕ್ಷ್ಮಿಗೆ ನನ್ನ ಹೃದಯದ ವಾಣಿಗೆ; ಪ್ರೇಮದೀ ಕೃತಿ ಕಾಣಿಕೆ ಚೆಲುವಿನೊಲವಿನ ರಾಣಿಗೆ! ಆನಂದದೀ ಕೇಂದ್ರಕೆ ಸೌಂದರ್ಯದೀ ನೇಮಿಗೆ; ರಸತಪಸ್ಯೆಯ ಕಾಣಿಕೆ ಗೃಹತಪಸ್ವಿನಿ ಹೇಮಿಗೆ!''.

ಹೋಳಿಗೆ ಹರಟೆಯಲ್ಲಿ ಕುವೆಂಪು ನೆನಪಾಗಿರುವುದರಿಂದ, ಅವರ 'ಹೋಳಿಗೆ ಪ್ರತಿಜ್ಞೆ' ಕಥೆಯನ್ನೂ ಇಲ್ಲಿ ಪ್ರಸ್ತಾವಿಸಬೇಕು. 'ಸನ್ಯಾಸಿ ಮತ್ತು ಇತರ ಕತೆಗಳು' ಸಂಕಲನದಲ್ಲಿರುವ ಕಥೆಯದು. ಅದರಲ್ಲಿ ಕಣಕ-ಹೂರಣಗಳ ವಿಶ್ಲೇಷಣೆಯೇನೂ ಬರುವುದಿಲ್ಲ, ಅಥವಾ ಹೋಳಿಗೆ ಬಗ್ಗೆ ಪ್ರತಿಜ್ಞೆ ಮಾಡಿದ್ದು ಕೂಡ ಕುವೆಂಪು ಏನಲ್ಲ. ಆದರೂ ಕಥೆ ತುಂಬ ಮಾರ್ಮಿಕವಾಗಿದೆ, ವಿಚಾರಪ್ರಚೋದಕವಾಗಿದೆ. ಬಾಲ್ಯದ ಆಟ ಆ ಹುಡುಗಾಟ ಎಂಬಂತೆ ಶಾಲೆಗೆ ಹೋಗುವಾಗ ಜೇಬಿನಲ್ಲಿ ಹೋಳಿಗೆ ತುಂಬಿಸಿಕೊಂಡು ಹೋಗಿ ಅಲ್ಲಿ ಅದು ಗುಂಡಪ್ಪ ಮೇಷ್ಟ್ರಿಗೆ ಗೊತ್ತಾಗಿ ದೊಡ್ಡ ರಾದ್ಧಾಂತವಾದದ್ದು, ಕಥೆಗಾರರ (ಕುವೆಂಪು ಅವರ ಅಂತಲೇ ಅಂದುಕೊಳ್ಳೋಣ) ಮಿತ್ರರೊಬ್ಬರು ಆ ಪ್ರಸಂಗದಲ್ಲಿದ್ದದ್ದು, ಆಮೇಲೆ ಜನ್ಮೇಪಿ ಹೋಳಿಗೆ ತಿನ್ನುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದು, ಅಷ್ಟೇ ಸೀರಿಯಸ್ಸಾಗಿ ಅದನ್ನು ಪಾಲಿಸಿಕೊಂಡು ಬಂದದ್ದು ಇತ್ಯಾದಿ ವಿವರಣೆ. ಕಥೆಗಾರನಿಗೋ ಅಚ್ಚರಿ. ಚಿಕ್ಕ ವಯಸ್ಸಿನಲ್ಲಿ ಹುಡುಗಾಟದಿಂದ ಮಾಡಿದ್ದ ಪ್ರತಿಜ್ಞೆಯಿಂದ ಆದ ಪ್ರಯೋಜನವಾದರೂ ಏನು? ಅದನ್ನು ಪಾಲಿಸಿಕೊಂಡು ಬರಬೇಕಾದ ಅಗತ್ಯವಾದರೂ ಏನು? ಆಗ ಆ ಮಿತ್ರರು ಹೇಳುವ ಮಾತು ನಿಜಕ್ಕೂ ಚಿಂತನಾರ್ಹವಾದುದು. ''ಹೋಳಿಗೆ ತಿನ್ನುವುದು ಬಿಡುವುದರಲ್ಲಿ ಯಾವ ಮಹತ್ತೂ ಇಲ್ಲ. ಆದರೆ ಇಂದಿನವರೆಗೆ ಪ್ರತಿಜ್ಞೆಯನ್ನು ಪಾಲಿಸಿರುವೆನೆಂಬ ಮನೋಭಾವ ನನ್ನ ಧರ್ಮಬುದ್ಧಿಗೆ ಬಲಕಾರಿಯಾಗಿರುತ್ತದೆ, ನನ್ನ ಚಿತ್ತಶುದ್ಧಿಗೆ ಸಹಕಾರಿಯಾಗಿರುತ್ತದೆ. ದೊಡ್ಡ ಮನಸ್ಸಿನಿಂದ ಮಾಡಿದ ಸಣ್ಣ ಕಾರ್ಯಗಳು ಸಣ್ಣ ಮನಸ್ಸಿನಿಂದ ಮಾಡಿದ ದೊಡ್ಡ ಕಾರ್ಯಗಳಿಗಿಂತಲೂ ಎಷ್ಟೋ ಶ್ರೇಷ್ಠವಾದವುಗಳೆಂದು ನನ್ನ ನಿಶ್ಚಲವಾದ ಅಭಿಪ್ರಾಯ. ಮಹಿಮೆ ಕಾರ್ಯಗಳಲ್ಲಿಲ್ಲ, ಕಾರ್ಯ ಮಾಡಿರುವ ಚಿತ್ತವೃತ್ತಿಯಲ್ಲಿದೆ''. ಅಬ್ಬಾ, ಎಂಥದೊಂದು ಜೀವನಪಾಠ!

ಸರಿ, ಕುವೆಂಪು ಅವರಿಂದ ವಿದಾಯ ಪಡೆದು ಮತ್ತೆ ನಾವೀಗ 'ಪಾವೆಂ'ರ 'ಪದಾರ್ಥ ಚಿಂತಾಮಣಿ'ಯತ್ತ ಗಮನ ಹರಿಸೋಣ. ಹೋಳಿಗೆ ಎಂಬ ಪದದ ವ್ಯುತ್ಪತ್ತಿಯ ಬಗೆಗೂ 'ಪಾವೆಂ' ಪಾಂಡಿತ್ಯಪೂರ್ಣ ವಿವರಣೆ ನೀಡಿದ್ದಾರೆ. ''ಹೋಳಿಗೆ ಕನ್ನಡಿಗರಿಗೆ ಎಷ್ಟು ಇಷ್ಟ ಮತ್ತು ಪರಿಚಿತವಾಗಿದೆಯೆಂದರೆ ಅದರ ವಂಶಾನುಕ್ರಮದ ಪ್ರಶ್ನೆಯೇ ಅವರ ತಲೆಗಳಲ್ಲಿ ಮೂಡದು. ಆದರೆ ಅದರ ಲಿಖಿತ ದಾಖಲೆ 12ನೆಯ ಶತಮಾನಕ್ಕಿಂತ ಹಿಂದೆ ಹೋಗುವುದಿಲ್ಲ. ವಾಸ್ತವಿಕವಾಗಿ ಹಳೆಯ ಕೋಶಗಳಲ್ಲಿ ಹೋಳಿಗೆ ಪದಕ್ಕಿರುವ ಅರ್ಥ ಮೈಯಲ್ಲಿ ಏಳುವ ಗುಳ್ಳೆ, ಹುಗುಳು ಎಂದಲ್ಲದೆ ಸಿಹಿತಿಂಡಿಯೆಂದಲ್ಲ. ಚನ್ನಬಸವಣ್ಣನ ಒಂದು ವಚನದಲ್ಲಿ ಕಡುಬು, ಕಜ್ಜಾಯಗಳೊಡನೆ ಹೋಳಿಗೆಯೂ ಪ್ರಸ್ತಾವಿಸಲ್ಪಟ್ಟಿದೆ. ಆದ್ದರಿಂದ 12ನೆಯ ಶತಮಾನದಲ್ಲಿ ಅದು ಪ್ರಚಲಿತ ಖಾದ್ಯವಾಗಿತ್ತೆಂದು ವಿದಿತವಾಗುತ್ತದೆ. 13ನೆಯ ಶತಮಾನದ ಜೈನಕಾವ್ಯ 'ಶಾಂತೀಶ್ವರ ಪುರಾಣ'ದಲ್ಲಿ ಅಂಗಾರ ಹೋಳಿಗೆಯ ಉಲ್ಲೇಖವಿದೆ. ಅಂಗಾರವೋಳಿಗೆ, ಅಂಗರವಳಿಗೆ, ಅಂಗರೋಳಿಗೆ ಎಂಬ ರೂಪಗಳೂ ಇವೆ. ಸಂಸ್ಕೃತರೂಪ 'ಅಂಗಾರ ಸ್ಫೋಟಿಕಾ'. ಅಂದರೆ ಕೆಂಡದಲ್ಲಿ ಸುಟ್ಟ ಉಬ್ಬುರೊಟ್ಟಿ. ಸಂಸ್ಕೃತ ಕೋಶಗಳಲ್ಲಿ ಅಂಗಾರ ಸ್ಫೋಟಿಕಾ ಎಂಬ ತಿಂಡಿಯ ಸುದ್ದಿಯಿಲ್ಲ. ಅಲ್ಲಿ ಕೂಡ ಸ್ಫೋಟಿಕಾ ಎಂದರೆ ಗುಳ್ಳೆ ಎಂದೇ ಅರ್ಥ. ಅಂಗಾರಸ್ಫೋಟಿಕೆ ಅಥವಾ ಅಂಗರೋಳಿಗೆ ಈಗಿನ ಹೂರಣದ ಸಿಹಿ ತಿಂಡಿಯೇ ಆಗಿತ್ತೋ ಬರೀ ಉಬ್ಬುರೊಟ್ಟಿಯೋ ತಿಳಿಯದು. ಹುಣ್ಣಿಮೆಯ ಚಂದ್ರನಂತೆ ಅದು ಬೆಳ್ಳಗೆ ಮತ್ತು ದುಂಡಾಗಿತ್ತೆಂಬುದು ಶಾಂತೀಶ್ವರ ಪುರಾಣದ ಹೇಳಿಕೆ. ಚನ್ನಬಸವಣ್ಣನ ಹೇಳಿಕೆಯಿಂದ ತಾನೇ ಅದು ಸಿಹಿಭಕ್ಷ್ಯವೆಂದು ಊಹಿಸಬರುತ್ತದೆ''.

'ಪಾವೆಂ' ಅವರ ಸತಾರ್ಕಿಕ ಪದಶೋಧನೆಯ ಬಗೆಗೆ ನನಗೆ ಯಾವತ್ತಿಗೂ ಗೌರವಪೂರಿತ ಬೆರಗು. ನಮ್ಮ ಹಾಗೆ ಗೂಗಲ್‌ನ ಅಂಥ ಅವಲಂಬಿಯಾಗಿರದೆ ವಿವಿಧ ಗ್ರಂಥಗಳ, ವಿವಿಧ ಕೋಶಗಳ ಆಳವಾದ ಅಧ್ಯಯನದಿಂದಲೇ ಅವರು ಪದಗಳ ಬೆನ್ನು ಹತ್ತಿದರು. ಇಷ್ಟೆಲ್ಲ ವಿಚಾರಗಳನ್ನು ತಿಳಿದುಕೊಂಡರು. ಹೋಳಿಗೆಯನ್ನೂ ಅವರು ಅಷ್ಟಕ್ಕೇ ಬಿಟ್ಟುಬಿಡುವುದಿಲ್ಲ. ಜಿಜ್ಞಾಸೆಯೆಂಬ ಹಾಲಲ್ಲದ್ದಿ ಚಪ್ಪರಿಸುತ್ತಾರೆ. ಮುಂದುವರಿಸುತ್ತ ''ಸ್ಫೋಟಿಕಾ ಅಂದರೆ ಉಬ್ಬಲು, ಸುಟ್ಟು ಅಥವಾ ಕಾದು ಉಬ್ಬಿದ್ದು. ಅದೇ ಪೋಳಿಗೆ ಅಥವಾ ಹೋಳಿಗೆ. ಹೀಗೆ ಅದು ಮರಾಠಿಯ ಪೋಳಿ (ಉದಾ: ಶಂಕರ ಪೋಳಿ, ಸಾಖರ ಪೋಳಿ), ಪೋಡಿ (ಬಜ್ಜಿ) ಇತ್ಯಾದಿಗಳ ಸಗೋತ್ರದ್ದು. ಬಂಗಾಲಿಯಲ್ಲಿ ಪೋಡಾ = ಸುಟ್ಟದ್ದು. ನಾದಿದ ಹಿಟ್ಟಿನ ಉಂಡೆಯೊಳಗೆ ಹೂರಣ ತುಂಬಿಸಿ ಲಟ್ಟಿಸಿ ಅಥವಾ ತಟ್ಟಿ ಹಂಚಿನಲ್ಲಿ ಬೇಯಿಸುವ ಉಪಾಯ ಎಂದೋ ಆಮೇಲೆ ಸೇರಿಕೊಂಡದ್ದು. ಹೂರಣ ಅಂದರೆ ಸಂಸ್ಕೃತದಲ್ಲಿ ಪೂರಣ (= ತುಂಬುವುದು). ಈ ಹೂರಣ ಎಳ್ಳು, ಸಕ್ಕರೆ, ಕಡಲೆ ಅಥವಾ ಹೆಸರು ಬೇಳೆಯದು. ರವಾಶಿರಾ, ಬೆಲ್ಲ ಕಲಸಿದ ತೆಂಗಿನ ತುರಿ ಇತ್ಯಾದಿ ಯಾವುದೇ ಆಗಬಹುದೆಂದು ಆಧುನಿಕ ಪಾಕಶಾಸ್ತ್ರಜ್ಞರ ಆವಿಷ್ಕಾರ. ಹೋಳಿಗೆಗೆ ಸಂಬಂಧಿಸಿದ ಶಬ್ದಗಳು ಸಂಸ್ಕೃತ-ಪ್ರಾಕೃತ ಮೂಲದವಾಗಿದ್ದರೂ ಅದರ ಬೆಳವಣಿಗೆಯೆಲ್ಲ ಕರ್ನಾಟಕದಲ್ಲಿ ಆದಂತೆ ಕಾಣುತ್ತದೆ. ತೆಲುಗು-ತಮಿಳು ಭಾಷೆಗಳಿಗೂ ಪೋಳಿ ಹೋಗಿದೆ'' ಎನ್ನುತ್ತಾರೆ.

ತಮಿಳಿಗೂ ಪೋಳಿ ಹೋಗಿದೆ ಎಂದಾಗ ನನಗೊಂದು ತಮಾಷೆ ನೆನಪಾಗುತ್ತಿದೆ. ತಮಿಳಿನಲ್ಲಿ 'ಪ' ಮತ್ತು 'ಬ' ಒಂದೇ ಆದ್ದರಿಂದ ಅಲ್ಲಿ ಅದು 'ಬೋಳಿ' ಆಗಿದೆ. ''ಬೋಳಿ ಅಂಗಡೀಲಿ ಇದ್ದೀನಿ ಏನಾದ್ರೂ ತರಲಾ ಅಂತ ಮಾವ ಫೋನ್ ಮಾಡಿದ್ರು. ಒಂದ್ ಸೆಕೆಂಡ್ ಗಾಬರಿಬಿದ್ದೆ. ಏನಿದು ಈ ಥರ ಎಲ್ಲ ಮಾತಾಡ್ತಾರಲ್ಲ ಅಂತ. ಬೋಳಿ ಅಂಗಡೀಲಿ ಪದಾರ್ಥ ಬಹಳ ರುಚಿ. ಬೋಂಡಾ ತನ್ನಿ ಅಂದ್ರು ಅತ್ತೆ. ಇವರೂ ಹೀಗಂತಾರಲ್ಲ ಅಂತ ಗಾಬರಿ ಆಯ್ತು. ಕನ್ನಡ ಅಲ್ಲ ತಮಿಳು ಬೋಳಿ ಅದು, ಪೋಳಿ ಅಲಿಯಾಸ್ ಬೋಳಿ ಅಂದ್ರೆ ಹೋಳಿಗೆ ಅಂತ ರಿಯಲೈಜ್ ಆಗೋ ಅಷ್ಟರಲ್ಲಿ ಉಫ್... ಅಂದಹಾಗೆ ಬೋಳಿ ಮತ್ತು ಬೋಂಡಾ ಬಹಳ ರುಚಿಯಾಗಿತ್ತು. ಈಕಡೆ ಬಂದರೆ ತಪ್ಪದೆ ತಿನ್ನಿ'' ಎಂದು ಸ್ನೇಹಿತೆ ಧರ್ಮಶ್ರೀ ಐಯಂಗಾರ್ ಒಮ್ಮೆ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದರು. ಮದುವೆಯಾದ ಹೊಸತರಲ್ಲಿ, ಗಂಡನೊಂದಿಗೆ ಕೆನಡಾಕ್ಕೆ ವಲಸೆ ಹೋಗುವ ಮೊದಲು ಅವರು ಒಂದಷ್ಟು ದಿನ ಚೆನ್ನೈಯಲ್ಲಿ ಅತ್ತೆ-ಮಾವರ ಮನೆಯಲ್ಲಿದ್ದಾಗಿನ ಪ್ರಸಂಗವದು, ಎರಡು ವರ್ಷಗಳ ಹಿಂದಿನದು. ತಮಿಳರಿಗೆ ಪರೋಟಾ ಮತ್ತು ಬರೋಡಾ ಒಂದೇ, ಗಾಂಧಿ ಮತ್ತು ಕಾಂತಿ ಒಂದೇ... ಅಂತೆಲ್ಲ ಜೋಕುಗಳು ಗೊತ್ತಿದ್ದ ನನಗೆ ಈ ಪೋಳಿ-ಬೋಳಿ ಆಭಾಸದ ಅಂದಾಜಿರಲಿಲ್ಲ, ಧರ್ಮಶ್ರೀಯವರ ಪೋಸ್ಟ್ ಓದುವವರೆಗೂ.

ಇರಲಿ, ಕಣಕ-ಹೂರಣಗಳಿಂದ ಆರಂಭಿಸಿದ ಇಂದಿನ ಅಂಕಣಬರಹಕ್ಕೆ ಮುಚ್ಚಿಗೆ (ಮುಕ್ತಾಯ) ಕೂಡ ಕಣಕದ್ದೇ ಇರಲಿ. ಪುರಂದರ ದಾಸರ ಜನಪ್ರಿಯ ಗೀತೆ 'ಡೊಂಕು ಬಾಲದ ನಾಯಕರೆ, ನೀವೇನೂಟವ ಮಾಡಿದಿರಿ?' ಇದನ್ನು ನೀವು ಕೇಳಿಯೇ ಇರುತ್ತೀರಿ. ಇದರ ಮೊದಲ ಚರಣದಲ್ಲಿ ''ಕಣಕ ಕುಟ್ಟೋವಲ್ಲಿಗೆ ಹೋಗಿ, ಹಣಿಕೀ ಹಣಿಕೀ ನೋಡುವಿರಿ; ಕಣಕವ ಕುಟ್ಟುವ ಒನಕೆಲಿ ಹೊಡೆದರೆ ಕುಂಯ್ ಕುಂಯ್ ರಾಗವ ಮಾಡುವಿರಿ!'' ಎಂದು ಬರುತ್ತದೆ. ಈ ಗೀತೆಯಲ್ಲಿ ದಾಸರು ಮನುಷ್ಯನ ಮನಸ್ಸನ್ನು ನಾಯಿಯ ಡೊಂಕು ಬಾಲಕ್ಕೆ ಹೋಲಿಸಿದ್ದಾರೆ. ನಾಯಿಯ ಬಾಲ ನಳಿಕೆಯಲ್ಲಿಟ್ಟಾಗಷ್ಟೇ ನೇರವಾದೀತು, ಹೊರತೆಗೆದರೆ ಡೊಂಕೇ ಎಂಬುದು ಲೋಕನೀತಿ. ''ಮನುಷ್ಯನ ಮನಸ್ಸು ಕೂಡ ಮತ್ತೆಮತ್ತೆ ವಿಷಯಭೋಗಗಳ ಕಡೆಗೇ ಹರಿಯುತ್ತದೆ. ಕಣಕದ ಅಥವಾ ಹುಗ್ಗಿಯ ವಾಸನೆಯನ್ನು ಹಿಡಿದುಹೋದ ನಾಯಿಗೆ ಒನಕೆಯ ಅಥವಾ ಸೌಟಿನ ಪೆಟ್ಟು ತಪ್ಪಿದ್ದಲ್ಲ. ಅದೇರೀತಿ ವಿಷಯವಾಸನೆಯನ್ನು ಹಿಡಿದು ಹೋಗುವ ಮನುಷ್ಯನಿಗೂ ವಿಧಿಯ ಪೆಟ್ಟು ತಪ್ಪಿದ್ದಲ್ಲ. ಈ ಪೆಟ್ಟೇ ಮನುಷ್ಯನಿಗೆ ಸಿಗುವ ಊಟ ಅಥವಾ ಕರ್ಮಫಲ!'' ಎಂದು ವಿದ್ವಾಂಸರು ಈ ಪದ್ಯದ ಪಾರಮಾರ್ಥಿಕ ವ್ಯಾಖ್ಯಾನ ಮಾಡುತ್ತಾರೆ. ಇಲ್ಲಿ ನಾಯಕರೇ ಎಂಬ ಸಂಬೋಧನೆ ನಾಯಿಗೆ ಅಂತ ನಮಗನಿಸುತ್ತದೆ. ಪುರಂದರದಾಸರು ಪೂರ್ವಾಶ್ರಮದಲ್ಲಿ ಶ್ರೀನಿವಾಸ ನಾಯಕ ಆಗಿದ್ದವರು. ಅಂದರೆ ತಮ್ಮನ್ನೇ ಸಂಬೋಧಿಸಿಕೊಂಡದ್ದೂ ಇರಬಹುದು! ಹಾಗೆಯೇ, ಅವರ ಪೂರ್ವಾಶ್ರಮ ವೃತ್ತಿ ಚಿನ್ನದ ವ್ಯಾಪಾರ. ಅವರೇನೂ ಅಕ್ಕಸಾಲಿಗನಲ್ಲವಾದರೂ ವ್ಯಾಪಾರಕ್ಕಾಗಿ ಚಿನ್ನವನ್ನು ಮುಟ್ಟಿ-ತಟ್ಟಿ-ಕುಟ್ಟಿ ನೋಡುತ್ತಿದ್ದವರೇ. ಅದನ್ನೇ ಸೂಚ್ಯವಾಗಿ 'ಕನಕ' ಕುಟ್ಟೋವಲ್ಲಿಗೆ ಹೋಗಿ ಹಣಿಕೀ ಹಣಿಕೀ ನೋಡುವಿರಿ ಎಂದರೇ? ಪದ್ಯದಲ್ಲಿ ಮೇಲ್ನೋಟಕ್ಕೆ ಕಣಕ; ಗೂಢಾರ್ಥದಲ್ಲಿ ಕನಕ. ಹೋಳಿಗೆಯಲ್ಲಾದರೂ ಅಷ್ಟೇ: ಮೇಲ್ಪದರವಾಗಿ ಕಣಕ; ಒಳಗಡೆ ಸ್ವರ್ಣಸದೃಶ ಸಿಹಿಹೂರಣ.

ಹಾಗಿದ್ದರೆ, ಪಾ.ವೆಂ.ಆಚಾರ್ಯರು ವಿವರಿಸಿದಂತೆ ಕಣಕ ಹೆಣ್ಣು, ಹೂರಣ ಗಂಡು ಎಂದುಕೊಳ್ಳೋಣವೇ? ಅಥವಾ, ಕುವೆಂಪು ಬಣ್ಣಿಸಿದಂತೆ ಕಣಕ ಗಂಡು, ಹೂರಣ ಹೆಣ್ಣು ಎಂದುಕೊಳ್ಳೋಣವೇ? ಇಂತು, ನವರಾತ್ರಿ ಸ್ಪೆಷಲ್ ಎಂದು ನಿಮ್ಮ ಬಾಯಿಗೆ ಅಲ್ಲ ತಲೆಗೆ ಹೋಳಿಗೆ ಬಡಿಸಿದ್ದೇನೆ!

ನೀ ನನಗಾದರೆ ನಾ ನಿನಗೆ, ನನ್ನ ಸುದ್ದಿಗೆ ಬಂದರೆ...

ಯಾವ ಪಕ್ಷದ ನಾಯಕರಿರಲಿ, ಸಾರ್ವಜನಿಕ ಸಂಪತ್ತನ್ನು ಲೂಟಿ ಮಾಡಿದರೆ ಅವರಿಗೆ ಶಿಕ್ಷೆಯಾಗಬೇಕು. ಆದರೆ, ಪರಸ್ಪರರ ಹಗರಣ-ಅವ್ಯವಹಾರಗಳ ಮಾಹಿತಿಯಿದ್ದರೂ, ಬಿಜೆಪಿ-ಕಾಂಗ್ರೆಸ್-ಜೆಡಿಎಸ್ ನಾಯಕರುಗಳು ಇಷ್ಟು ದಿನ ಸುಮ್ಮನಿದ್ದು, ತಮ್ಮ ಬುಡಕ್ಕೆ ಬರುವವರೆಗೆ ಆನಂದದಿಂದ ಸಂಸಾರ ಸಾಗಿಸುತ್ತಿದ್ದರಲ್ಲಾ ಎಂಬುದು ಅಚ್ಚರಿಯುಂಟುಮಾಡಿದೆ.



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ಕಳೆದ ಕೆಲ ತಿಂಗಳುಗಳಿಂದ ಕರ್ನಾಟಕದ ರಾಜಕೀಯವು ವಿಲಕ್ಷಣವಾಗಿ ಸಾಗುತ್ತಿದೆ. ರಾಜಕಾರಣಿಗಳು ಒಬ್ಬರ ಕಾಲನ್ನು ಇನ್ನೊಬ್ಬರು ಎಳೆಯುವ ಹಾಗೂ ತಂತಮ್ಮ ಸ್ಥಾನಗಳನ್ನು ಉಳಿಸಿಕೊಳ್ಳುವ ಕಸರತ್ತಿನಲ್ಲೇ ವ್ಯಸ್ತರಾಗಿರುವಂತೆ ತೋರುತ್ತಿದೆ. ಹಾಗೆ ನೋಡಿದರೆ, ಈ ಎಲ್ಲವೂ ಒಳ್ಳೆಯದಕ್ಕೇ ಆಗುತ್ತಿದೆಯೇನೋ ಎನಿಸುತ್ತದೆ; ಏಕೆಂದರೆ, ಒಬ್ಬರ ಬಂಡವಾಳವನ್ನು ಇನ್ನೊಬ್ಬರು ಬಿಚ್ಚಿಡುವ, ಒಬ್ಬರ ಹಗರಣವನ್ನು ಇನ್ನೊಬ್ಬರು ಹೊರತರುವ ಮೂಲಕ ಇವರೆಲ್ಲಾ ಒಂದು ರೀತಿಯ ಸ್ವಚ್ಛತಾ ಕಾರ್ಯಕ್ರಮವನ್ನು ಜಾರಿಯಲ್ಲಿಟ್ಟಂತಿದೆ! ಇದು ಆಗೊಮ್ಮೆ ಈಗೊಮ್ಮೆಯಾದರೂ ನಡೆದರೆ, ರಾಜ್ಯದ ರಾಜಕೀಯ ವ್ಯವಸ್ಥೆಯಲ್ಲಿ ಸ್ವಲ್ಪವಾದರೂ ಶುದ್ಧೀಕರಣವಾಗಬಹುದೇನೋ? ಇಲ್ಲದಿದ್ದರೆ ಆಡಳಿತ ಪಕ್ಷ ಮತ್ತು ವಿಪಕ್ಷಗಳು ಪರಸ್ಪರ ಒಳಗೊಳಗೇ ಹೊಂದಾಣಿಕೆ ಮಾಡಿಕೊಂಡು, ಜನರ ಮುಂದೆ ಮಾತ್ರ ಹಾವು-ಮುಂಗುಸಿಯಂತೆ ಕಚ್ಚಾಡುವ ನಾಟಕ ಹಾಗೂ ಈ ರಾಜಕಾರಣಿಗಳ ಒಳಗುಟ್ಟು ನಮಗೆ ತಿಳಿಯುತ್ತಲೇ ಇರಲಿಲ್ಲವೇನೋ!

ಸೂಕ್ಷ್ಮವಾಗಿ ನೋಡಿದರೆ, ಕಳೆದ ಲೋಕಸಭಾ ಚುನಾವಣೆಯ ಫಲಿತಾಂಶ ಬರುತ್ತಿದ್ದಂತೆ ಕರ್ನಾಟಕ ರಾಜಕಾರಣದ ಬೃಹನ್ನಾಟಕ ಪ್ರಾರಂಭವಾಗಿರುವುದು ತಿಳಿಯುತ್ತದೆ. ಈ ಚುನಾವಣೆಯಲ್ಲಿ ಜೆಡಿಎಸ್ ಒಂದೊಮ್ಮೆ ಬಿಜೆಪಿ ಜತೆಗೆ ಮೈತ್ರಿ ಮಾಡಿಕೊಳ್ಳದೆ ಕಾಂಗ್ರೆಸ್‌ನೊಂದಿಗೆ ಕೈಜೋಡಿಸಿದ್ದಿದ್ದರೆ ಅಥವಾ ಏಕಾಂಗಿಯಾಗಿ ಚುನಾವಣೆ ಎದುರಿಸಿದ್ದರೂ ಸಾಕಾಗಿತ್ತು, ಕಾಂಗ್ರೆಸ್‌ನವರಿಗೆ ದೇವೇಗೌಡರು ಇಂದಿಗೂ ಪೂಜ್ಯರಾಗೇ ಇರುತ್ತಿದ್ದರು. ಮಾತ್ರವಲ್ಲ, ಪ್ರಜ್ವಲ್ ರೇವಣ್ಣ ಮತ್ತು ಸೂರಜ್ ರೇವಣ್ಣ ರಾಜ್ಯದ ಯುವ 'ಐಕಾನ್'ಗಳಾಗಿ ಮಿಂಚುತ್ತಿರಬಹುದಾಗಿತ್ತು, ರೇವಣ್ಣ ದಂಪತಿ ತಮ್ಮ ಹಾಸನದ ದರ್ಬಾರನ್ನು ನಿಶ್ಚಿಂತೆಯಿಂದ ಮುಂದುವರಿಸಬಹುದಾಗಿತ್ತು. ಆದರೆ ಹಾಗಾಗಿಲ್ಲ. ರಾಜ್ಯದಲ್ಲಿ ಒಟ್ಟಿಗೆ ಸರಕಾರ ನಡೆಸಿ ಕಹಿ ಅನುಭವಿಸಿದ್ದ ಕುಮಾರಸ್ವಾಮಿಯವರಿಗೆ ಕಾಂಗ್ರೆಸ್ ಸಹವಾಸ ಸಾಕಾಗಿತ್ತು. ದೇವೇಗೌಡರಿಗೆ, ಕೇಂದ್ರದಲ್ಲಿ ಮೋದಿಯವರು ಮರಳಿ ಅಧಿಕಾರಕ್ಕೆ ಬರುವುದು ನಿಶ್ಚಿತವೆಂಬುದು ಗೊತ್ತಿತ್ತು ಮತ್ತು ಕುಮಾರಸ್ವಾಮಿಯವರನ್ನು ಕೇಂದ್ರ ಮಂತ್ರಿಯನ್ನಾಗಿಸಿ, ಮುಳುಗುತ್ತಿದ್ದ 'ಜೆಡಿಎಸ್' ಎಂಬ ಹಡಗನ್ನು ದಡ ಸೇರಿಸಬೇಕಾಗಿತ್ತು. ಹಾಗಾಗಿ ಅವರು ಸ್ವಾಭಾವಿಕವಾಗಿ ಎನ್‌ಡಿಎ ಮೈತ್ರಿಕೂಟವನ್ನು ಸೇರಲು ನಿರ್ಧರಿಸಿಬಿಟ್ಟರು. ನಿರೀಕ್ಷೆಯಂತೆ ಎರಡೂ ಪಕ್ಷಗಳ ಮೈತ್ರಿಯಿಂದಾಗಿ ಮತಗಳ ಕ್ರೋಡೀಕರಣವಾಗಿ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ರಾಜ್ಯದಲ್ಲಿ ದೊಡ್ಡಪೆಟ್ಟು ಬಿತ್ತು.

ರಾಜ್ಯದ ಜನಪ್ರಿಯ ಕಾಂಗ್ರೆಸ್ ಸರಕಾರವು ಅಧಿಕಾರಕ್ಕೆ ಬಂದು ಒಂದು ವರ್ಷ ಕಳೆಯುವುದರೊಳಗೆ ನಡೆದ ಈ ಚುನಾವಣೆಯಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿಕೂಟದ ಸುಂಟರಗಾಳಿಗೆ ಅದು ಸಿಲುಕಿ ದಿಕ್ಕಾಪಾಲಾಯಿತು. ಅಧಿಕಾರವಿರುವ ರಾಜ್ಯದಲ್ಲಿ ಕಾಂಗ್ರೆಸ್‌ಗೆ 28ರಲ್ಲಿ 9 ಸ್ಥಾನವನ್ನು ಮಾತ್ರ ಗೆಲ್ಲಲು ಸಾಧ್ಯವಾಯಿತು. 20ಕ್ಕೂ ಹೆಚ್ಚು ಸ್ಥಾನಗಳನ್ನು ಗೆದ್ದೇ ಗೆಲ್ಲುತ್ತೇವೆ ಎನ್ನುತ್ತಿದ್ದ ಕರ್ನಾಟಕದ ಕಾಂಗ್ರೆಸ್ ನಾಯಕರಿಗೆ, ತಮ್ಮ ಮೇಲೆ ಬಹಳ ನಿರೀಕ್ಷೆಯಿಟ್ಟಿದ್ದ 'ಕೈ' ಹೈಕಮಾಂಡ್‌ಗೆ ಏನು ಉತ್ತರ ಕೊಡುವುದೆಂದು ಗೊತ್ತಾಗಲಿಲ್ಲ. ಅದರಲ್ಲೂ, ಕರ್ನಾಟಕದವರೇ ರಾಷ್ಟ್ರಮಟ್ಟದಲ್ಲಿ ಪಕ್ಷದ ಚುಕ್ಕಾಣಿ ಹಿಡಿದಿರುವಾಗ ಈ ಸೋಲು ಮುಜುಗರ ಉಂಟುಮಾಡುವಂಥದ್ದೇ ಆಗಿತ್ತು. 'ಪಂಚ ಗ್ಯಾರಂಟಿ'ಗಳ ಬಲದ ಮೇಲೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿದ್ದರೂ, ಲೋಕಸಭಾ ಚುನಾವಣೆಯಲ್ಲಿ ಅದು ಮೂರುಕಾಸಿನ ಕೆಲಸಕ್ಕೂ ಬರಲಿಲ್ಲ. 'ಅಭಿಮಾನಕ್ಕೆ ಬಿದ್ದ ಈ ಪೆಟ್ಟನ್ನು ಸಹಿಸಿಕೊಳ್ಳುವುದಾದರೂ ಹೇಗೆ?' ಎಂಬ ಪ್ರಶ್ನೆಯು ಆಗ ಪ್ರಾಯಶಃ ಕಾಂಗ್ರೆಸ್ಸಿಗರನ್ನು ಕಾಡಿದ್ದಿರಬೇಕು!

ಇಲ್ಲಿ ಇನ್ನೊಂದು ಸೂಕ್ಷ್ಮವನ್ನು ಗಮನಿಸಬೇಕು. ಲೋಕಸಭಾ ಚುನಾವಣೆಗೆ ಪೂರ್ವಭಾವಿಯಾಗಿ ದೇವೇಗೌಡರ ಪೌರೋಹಿತ್ಯದಲ್ಲಿ ನಡೆದ ಜೆಡಿಎಸ್-ಬಿಜೆಪಿಗಳ ಮೈತ್ರಿಯೇ 20 ಸ್ಥಾನ ಗೆಲ್ಲುವ ತಮ್ಮ ಯೋಜನೆಗೆ ದೊಡ್ಡ ಆಘಾತ ನೀಡಬಹುದು ಎಂಬ ಅಭಿಪ್ರಾಯಕ್ಕೆ ಬಂದ ರಾಜ್ಯ ಕಾಂಗ್ರೆಸ್ಸಿನ ಧುರೀಣರು, ಚುನಾವಣೆಯ ಹೊಸ್ತಿಲಲ್ಲಿ ಪ್ರಜ್ವಲ್ ರೇವಣ್ಣ ಮತ್ತು ಸೂರಜ್ ರೇವಣ್ಣ ಅವರ ಕರ್ಮಕಾಂಡವನ್ನು ಬಯಲಿಗೆಳೆಯುವ ಮೂಲಕ ಜೆಡಿಸ್ ಕುಟುಂಬಕ್ಕೂ, ವಯೋವೃದ್ಧ ದೇವೇಗೌಡರಿಗೂ ಮರ್ಮಾಘಾತ ನೀಡಿಬಿಟ್ಟರು. ಒಟ್ಟಿಗೆ ಅಧಿಕಾರ ನಡೆಸುವಾಗ ಕಾಂಗ್ರೆಸ್ಸಿಗರಿಗೆ 'ಸೂರಜ್-ಪ್ರಜ್ವಲ್ ಪ್ರಕರಣ' ಗೊತ್ತೇ ಇರಲಿಲ್ಲ ಅಂತೇನಲ್ಲ. ಇದು 'ನೀವು ನಮ್ಮ ಜತೆಗಿದ್ದಿದ್ದರೆ ನಾವೂ ನಿಮ್ಮ ಜತೆಗಿರುತ್ತಿದ್ದೆವು; ನೀವು ನಮ್ಮನ್ನು ಬಿಟ್ಟುಹೋಗಿ ಪೆಟ್ಟುಕೊಡುವುದಾದರೆ, ನಾವೂ ನಿಮ್ಮನ್ನು ಸುಮ್ಮನೆ ಬಿಡಲಾಗುವುದಿಲ್ಲ' ಎನ್ನುವ ಸಂದೇಶವನ್ನು ರವಾನಿಸಿರಲಿಕ್ಕೆ ಸಾಕು ಎಂಬುದು ಜನಾಭಿಪ್ರಾಯ. 'ಹಾಗಲ್ಲದಿದ್ದಿದ್ದರೆ ಹೀಗೆಲ್ಲಾ ಆಗಲಿಕ್ಕೆ ಸಾಧ್ಯವೇ ಇರಲಿಲ್ಲ' ಎಂಬುದು ಜೆಡಿಎಸ್‌ನವರ ಅಭಿಪ್ರಾಯ.

ಇನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪಾತ್ರವಿದೆ ಎನ್ನಲಾಗುವ 'ಮುಡಾ' ಹಗರಣವನ್ನು ಜನರಿಗೆ ತಲುಪಿಸುವ ಉದ್ದೇಶದ, ಬೆಂಗಳೂರಿನಿಂದ ಮೈಸೂರಿನವರೆಗಿನ ಮಿತ್ರಪಕ್ಷಗಳ ಜಂಟಿ ಪಾದಯಾತ್ರೆ ಪ್ರಕಟವಾಗುವವರೆಗೆ, ರಾಜ್ಯ ರಾಜಕಾರಣದಲ್ಲಿ ಆಡಳಿತ ಪಕ್ಷ ಮತ್ತು ವಿಪಕ್ಷಗಳ ನಡುವಿನ ಸಂಬಂಧ ಒಂದು ಮಟ್ಟಿಗೆ ಸುಸೂತ್ರವಾಗಿಯೇ ಇತ್ತು; ಉಭಯ ಪಕ್ಷಸ್ಥರೂ ಒಬ್ಬರಿಗೊಬ್ಬರು ಚೆನ್ನಾಗಿ ಹೊಂದಿಕೊಂಡು ಹೋಗುತ್ತಿದ್ದರು. 'ನಾವು ಹೊಡೆದ ಹಾಗೆ ಮಾಡುತ್ತೇವೆ, ನೀವು ಅತ್ತ ಹಾಗೆ ಮಾಡಿ' ಎನ್ನುವಂತೆ ಸಾಗಿತ್ತು ಅವರ ಸಹಜೀವನ. ಹಾಗೆ ನೋಡಿದರೆ, ವಾಲ್ಮೀಕಿ ನಿಗಮದ ಬಹುಕೋಟಿ ಹಗರಣವೂ ಸರಕಾರವನ್ನು ಅಷ್ಟೊಂದು ಬಾಧಿಸಿರಲಿಲ್ಲ ಎನ್ನಬಹುದು. ಈ ಹಗರಣದ ತನಿಖೆಗೆ ರಾಜ್ಯ ಸರಕಾರವು ರಚಿಸಿದ್ದ ಎಸ್‌ಐಟಿಯು, ಸಚಿವ ನಾಗೇಂದ್ರ ಮತ್ತು ನಿಗಮದ ಅಧ್ಯಕ್ಷರನ್ನು ಬಹಳ ದಿನಗಳವರೆಗೆ ಕರೆದು ಮಾತಾಡಿಸುವ ಗೋಜಿಗೂ ಹೋಗಿರಲಿಲ್ಲ, ವಿಪಕ್ಷದವರೂ ಆ ಬಗ್ಗೆ ಅಷ್ಟೊಂದು ತಲೆಕೆಡಿಸಿಕೊಂಡಿರಲಿಲ್ಲ. ಆದರೆ, 'ಇ.ಡಿ' ಎಂಬುದು ಸುಮ್ಮನಿರಬೇಕಲ್ಲ! ಹಗರಣ ಒಳಗೊಂಡಿರುವ ಮೊತ್ತವನ್ನು ಆಧರಿಸಿ ಸ್ವಯಂಪ್ರೇರಿತವಾಗಿ ಮೊಕದ್ದಮೆ ದಾಖಲಿಸಿಕೊಂಡು, ಸಚಿವ ನಾಗೇಂದ್ರರನ್ನು ಬಂಧಿಸಿ ವಿಚಾರಣೆಗೆ ಶುರುವಿಟ್ಟುಕೊಂಡುಬಿಟ್ಟಿತು. ಅದಿಲ್ಲದಿದ್ದರೆ, ನಾಗೇಂದ್ರರೂ, ನಿಗಮದ ಅಧ್ಯಕ್ಷರಾದ ದದ್ದಲ್ ಅವರೂ ಎಸ್‌ಐಟಿ ತನಿಖೆಯಲ್ಲಿ ಇಷ್ಟೊತ್ತಿಗೆ 'ಕ್ಲೀನ್‌ಚಿಟ್' ತೆಗೆದುಕೊಂಡು ಬಂದು, 'ಇದು ಅಧಿಕಾರಿಗಳಿಂದ ಆದ ತಪ್ಪು' ಎಂದು ತಿಪ್ಪೆ ಸಾರಿಸಿಬಿಡುತ್ತಿದ್ದರೇನೋ! (ಹಗರಣದಲ್ಲಿ ಸಚಿವ ನಾಗೇಂದ್ರರ ಯಾವುದೇ ಕೈವಾಡವಿಲ್ಲ ಎಂದು ಈಗಾಗಲೇ ಎಸ್‌ಐಟಿ ವರದಿ ಪ್ರಕಟವಾಗಿರುವುದನ್ನು ಗಮನಿಸಬಹುದು).

ಆದರೆ, ಮುಡಾ ಹಗರಣದಲ್ಲಿ ಮುಖ್ಯಮಂತ್ರಿಗಳನ್ನು ನೇರವಾಗಿ ಗುರಿಯಾಗಿಸಿ, ಅವರ ರಾಜೀನಾಮೆ ನಿರೀಕ್ಷಿಸಿ ನಡೆಸಿದ 'ಬೆಂಗಳೂರು-ಮೈಸೂರು ಜಂಟಿ ಪಾದಯಾತ್ರೆ' ಇದೆಯಲ್ಲಾ ಅದು ರಾಜ್ಯದಲ್ಲಿ ರಾಜಕೀಯ ಬಿರುಗಾಳಿಗೆ ಕಾರಣವಾಯಿತು. ಅದರಲ್ಲೂ, ಅಧಿಕಾರಾರೂಢ ಕಾಂಗ್ರೆಸ್ಸಿಗರಿಗೆ ಇದು ನುಂಗಲಾರದ ತುತ್ತಾಗಿರುವುದಂತೂ ಸತ್ಯ. ಅಲ್ಲಿಂದ ಮುಂದಕ್ಕೆ ಶುರುವಾಯಿತು ನೋಡಿ ಮೊಕದ್ದಮೆಗಳ ಮೇಲಾಟ! 'ನೀವು ನಮ್ಮ ಬಗ್ಗೆ ಮಾತಾಡುವುದಾದರೆ, ನಿಮ್ಮ ಬಗ್ಗೆ ಮಾತಾಡಲು ನಮಗೆ ನೂರು ವಿಷಯಗಳಿವೆ' ಎನ್ನುವ ತೆರದಲ್ಲಿ ವಿಪಕ್ಷಗಳ ನಾಯಕರುಗಳ ಒಂದೊಂದೇ ಹಗರಣಗಳನ್ನು ಹೆಕ್ಕಿ ತೆಗೆದು ಬಯಲಿಗೆಳೆಯಲಾಯಿತು. ಲೋಕಸಭಾ ಚುನಾವಣೆಗೂ ಮುನ್ನವೇ ದಾಖಲಾಗಿದ್ದ ಯಡಿಯೂರಪ್ಪನವರ ಮೇಲಿನ 'ಪೋಕ್ಸೋ' ಪ್ರಕರಣಕ್ಕೆ ವೇಗ ದಕ್ಕಿತು. ಜೆಡಿಎಸ್ ಮುಖಂಡ ಮತ್ತು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಯವರ 'ಡಿನೋಟಿಫಿಕೇಷನ್' ಪ್ರಕರಣ ಈಚೆಗೆ ಬಂತು. ಇವರ ಮೇಲೆ ಸುಲಿಗೆ ಮತ್ತು ಜೀವಬೆದರಿಕೆಯ ಮತ್ತೊಂದು ಆರೋಪವೂ ಹೊರಬಂದು ಎಫ್‌ಐಆರ್ ಕೂಡ ದಾಖಲಾಯಿತು. ಈಗ, ವಿಪಕ್ಷ ನಾಯಕ ಆರ್.ಅಶೋಕ್ ಭಾಗಿಯಾಗಿದ್ದಾರೆ ಎನ್ನಲಾಗುವ ಭೂಹಗರಣವೊಂದು ಈಚೆಗೆ ಬಂದು ಭಾರಿ ಸುದ್ದಿಮಾಡುತ್ತಿದೆ. ವಿಜಯೇಂದ್ರರ ವಿರುದ್ಧವೂ ಏನಾದರೂ ಹಗರಣವು ಯಾವುದೇ ಕ್ಷಣಕ್ಕೆ ಹೊರಬಂದರೆ ಜನರು ಅಚ್ಚರಿಪಡಬೇಕಿಲ್ಲ. ಬಿಜೆಪಿ ಕಾಲದ 'ಕೋವಿಡ್' ಅವ್ಯವಹಾರಗಳ ಕುರಿತಾದ ತನಿಖೆಯೂ ಏಕಾಏಕಿ ಆರಂಭವಾಗಿಬಿಟ್ಟಿದೆ. ಚುನಾವಣಾ ಬಾಂಡ್ ವಿಷಯದಲ್ಲಿ ಕೇಂದ್ರ ಅರ್ಥ ಸಚಿವೆ ನಿರ್ಮಲಾ ಸೀತಾರಾಮನ್‌ರ ಮೇಲೂ ದೂರು ದಾಖಲಾಯಿತು. ಅಧಿಕಾರಕ್ಕೆ ಬಂದ ಒಂದು ವರ್ಷದಿಂದ ಸಮಾಧಾನದಿಂದಿದ್ದ ಆಡಳಿತ ಪಕ್ಷವು, ವಿಪಕ್ಷಗಳ ವಿರುದ್ಧ ಏಕಾಏಕಿ ಹಗರಣಗಳ ಮಳೆ ಸುರಿಸಿ ಸಮರ ಸಾರಿಬಿಟ್ಟಿತು.



ವಿರೋಧ ಪಕ್ಷದಲ್ಲಿದ್ದಾಗ '40 ಪರ್ಸೆಂಟ್ ಸರಕಾರ' ಎಂದು ಬಿಜೆಪಿ ಸರಕಾರವನ್ನು ವಾಚಾಮಗೋಚರವಾಗಿ ದೂಷಿಸಿ, 'ಮುಂದೆ ನಾವು ಅಧಿಕಾರಕ್ಕೆ ಬಂದರೆ ಒಂದೊಂದು ಹಗರಣವನ್ನೂ ಹೊರತೆಗೆದು ಕಾನೂನಾತ್ಮಕವಾಗಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತೇವೆ' ಎಂದವರಿಗೆ, ವಾಲ್ಮೀಕಿ ನಿಗಮ ಮತ್ತು ಮುಡಾ ಹಗರಣಗಳು ಅವರ ಸರಕಾರದ ಮೇಲೆಯೇ ಏರಿ ಬರುವವರೆಗೆ ತಾವು ಹಾಗೆಂದಿದ್ದು ಮರೆತೇಹೋಗಿತ್ತು. ಕೋವಿಡ್ ಸಮಯದಲ್ಲಿ 10 ಸಾವಿರ ಕೋಟಿ ರು. 'ಅಪರಾತಪರಾ' ಆಗಿದೆ ಎನ್ನುವ ಕಾಂಗ್ರೆಸ್ಸಿಗರಿಗೆ, ತಾವು ಅಧಿಕಾರಕ್ಕೆ ಬಂದ ಮೇಲೆ ಅದು ಪ್ರಮುಖ ವಿಷಯವಾಗಿ ಕಾಣಲೇ ಇಲ್ಲ, ಇದಕ್ಕೆ ಏನನ್ನುವುದು?

ಇನ್ನು, ಮುನಿರತ್ನ ಅವರ ವಿಷಯಕ್ಕೆ ಬರುವುದಾದರೆ, ಜಾತಿನಿಂದನೆಯ ಆರೋಪದಲ್ಲಿ ಅವರನ್ನು ರಾತ್ರೋರಾತ್ರಿ ಬಂಧಿಸಿ ವಿಚಾರಣೆ ನಡೆಸಲಾಯಿತು. ಈ ಕೇಸಿನಲ್ಲಿ ಇನ್ನೇನು ಜಾಮೀನು ಸಿಕ್ಕಿ ಹೊರಬಂದರು ಎನ್ನುವುದರೊಳಗೆ ಮತ್ತೊಂದು ಅತ್ಯಾಚಾರ ಕೇಸಿನಿಂದಾಗಿ ಅವರು ಜೈಲಿನಲ್ಲೇ ಉಳಿಯುವಂತಾಯಿತು. ಮೊದಲು ಕಾಂಗ್ರೆಸ್‌ನಲ್ಲೇ ಇದ್ದವರು, ಕುಮಾರಸ್ವಾಮಿ ನೇತೃತ್ವದ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರಕಾರವನ್ನು ಕೆಡವಿ ತತ್ಫಲವಾಗಿ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರಕಾರ ಅಸ್ತಿತ್ವಕ್ಕೆ ಬರುವುದರಲ್ಲಿ ಪ್ರಮುಖ ಪಾತ್ರ ವಹಿಸಿ ಮಂತ್ರಿಯಾಗಿ ಮಿಂಚಿದವರು, ಡಿ.ಕೆ.ಸುರೇಶ್ ಅವರ ಅಭ್ಯರ್ಥಿಯೆಂದೇ ಬಿಂಬಿಸಲಾಗಿದ್ದ ಕುಸುಮಾರನ್ನು ವಿಧಾನಸಭಾ ಚುನಾವಣೆಯಲ್ಲಿ ಪ್ರಯಾಸದಿಂದ ಸೋಲಿಸಿದ್ದಲ್ಲದೆ ಲೋಕಸಭಾ ಚುನಾವಣೆಯಲ್ಲಿ ಡಾ.ಸಿ.ಎನ್.ಮಂಜುನಾಥರ ಗೆಲುವಿಗೆ ಶ್ರಮಿಸಿ ಡಿ.ಕೆ.ಸುರೇಶರ ಅನಿರೀಕ್ಷಿತ ಸೋಲಿಗೆ ಕಾರಣರಾದವರು ಈ ಮುನಿರತ್ನ. ಅಂದಮೇಲೆ ಅವರನ್ನು ಸುಮ್ಮನೆ ಬಿಡಲುಂಟೇ? ಮುನಿರತ್ನ ಅಪರಾಧಿ ಹೌದೋ ಅಲ್ಲವೋ ಎಂಬುದನ್ನು ನ್ಯಾಯಾಲಯವೇ ಹೇಳಬೇಕು; ಆದರೆ, ಅವರ ವಿಷಯವೆಲ್ಲಾ ಇದ್ದಕ್ಕಿದ್ದ ಹಾಗೆ ಈಗ ಬೆಳಕಿಗೆ ಬರುವುದಕ್ಕೆ ಕಾರಣವೇನಿರಬಹುದು ಎಂಬ ಬಗ್ಗೆ ಸಾರ್ವಜನಿಕರಲ್ಲಿ ಚರ್ಚೆಯಾಗುತ್ತಿರುವುದಂತೂ ಸತ್ಯ.

ನಾಗೇಂದ್ರ, ಸಿದ್ದರಾಮಯ್ಯ, ಕುಮಾರಸ್ವಾಮಿ, ಮುನಿರತ್ನ, ಅಶೋಕ್ ಮುಂತಾದವರು ನಿಜಕ್ಕೂ ತಪ್ಪು ಮಾಡಿದ್ದಾರೋ ಇಲ್ಲವೋ ಎಂಬುದು ಯಾರಿಗೂ ತಿಳಿದಿಲ್ಲ; ಅದನ್ನು ತನಿಖೆಯ ನಂತರ ತೀರ್ಮಾನಿಸಲು ನೆಲದ ಕಾನೂನುಗಳಿವೆ ಮತ್ತು ಅಂತಿಮವಾಗಿ ಕಾನೂನನ್ನು ಎಲ್ಲರೂ ಗೌರವಿಸಲೇಬೇಕಾಗುತ್ತದೆ. ಈ ಕುರಿತು ಸದ್ಯಕ್ಕೆ ನಾವು ಹೆಚ್ಚು ಚರ್ಚಿಸುವುದು ಸಮಂಜಸವಲ್ಲ. ರಾಜ್ಯದ ಜನರಿಗೆ ವ್ಯಕ್ತಿಗಳು ಮುಖ್ಯವಾಗುವುದೂ ಇಲ್ಲ. ಅದು ಯಾವ ಪಕ್ಷದ ಯಾವುದೇ ನಾಯಕರಿರಲಿ, ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಸಾರ್ವಜನಿಕ ಸಂಪತ್ತನ್ನು ಲೂಟಿ ಮಾಡಿದರೆ ಕಾನೂನಿನ ಪ್ರಕಾರ ಅವರಿಗೆ ಶಿಕ್ಷೆಯಾಗಬೇಕು ಎಂಬುದು ಸ್ವಾಭಾವಿಕವಾಗಿ ಜನಾಭಿಪ್ರಾಯವಾಗಿರುತ್ತದೆ.

ಆದರೆ, ಎಲ್ಲರ ಮೇಲೂ ಇಷ್ಟೊಂದು ಆಪಾದನೆಗಳು, ಸಂಶಯಗಳು ಇದ್ದರೂ, ಪರಸ್ಪರರ ಹಗರಣ-ಅವ್ಯವಹಾರಗಳ ಮಾಹಿತಿಯಿದ್ದರೂ, ಬಿಜೆಪಿ-ಕಾಂಗ್ರೆಸ್-ಜೆಡಿಎಸ್ ನಾಯಕರುಗಳು ಇಷ್ಟು ದಿನದಿಂದ ಪರಸ್ಪರ ಹೊಂದಾಣಿಕೆ ಮಾಡಿಕೊಂಡು, ತಮ್ಮ ಬುಡಕ್ಕೆ ಬರುವವರೆಗೆ ಆನಂದದಿಂದ ಸಂಸಾರ ಸಾಗಿಸುತ್ತಿದ್ದರಲ್ಲಾ ಎಂಬುದು ರಾಜ್ಯದ ಜನರಿಗೆ ಅಚ್ಚರಿಯುಂಟುಮಾಡಿದೆ. ಹಾಗಾದರೆ, ಇಲ್ಲಿಯವರೆಗೂ ಇವರೆಲ್ಲರೂ ಒಟ್ಟಾಗಿ ಕರ್ನಾಟಕವನ್ನು ದೋಚುವ ಯತ್ನದಲ್ಲಿದ್ದರೇ? ಎಂಬ ಪ್ರಶ್ನೆ ಜನರ ಮನದಲ್ಲಿ ಮೂಡುತ್ತದೆ. ನಡೆದಿದೆ ಎನ್ನಲಾದ, ವಾಲ್ಮೀಕಿ ನಿಗಮ ಮತ್ತು ಮುಡಾ ಹಗರಣಗಳು ಬೆಳಕಿಗೆ ಬರುವವರೆಗೆ, ಬಿಜೆಪಿ ಸರಕಾರದ ಅವಧಿಯಲ್ಲಿ ನಡೆದಿದೆಯೆನ್ನಲಾದ ಹಗರಣಗಳ ಬಗ್ಗೆ ಕಾಂಗ್ರೆಸ್ ಕ್ರಮ ಕೈಗೊಳ್ಳಲಿಲ್ಲವೇಕೆ? ಎಂಬ ಪ್ರಶ್ನೆಗೆ ಸರಳ ಉತ್ತರವನ್ನು ರಾಜ್ಯದ ಜನರೇ ಕಂಡುಕೊಳ್ಳುತ್ತಿದ್ದಾರೆ. ವಿವಿಧ ಪಕ್ಷಗಳಲ್ಲಿನ ನಾಯಕರು ತಮ್ಮ ವೈಯಕ್ತಿಕ ಹಿತಾಸಕ್ತಿಗಳಿಗಾಗಿ ಮಾಡಿಕೊಳ್ಳುವ ಇಂಥ ಅಪವಿತ್ರ ಹೊಂದಾಣಿಕೆಯ ರಾಜಕಾರಣವನ್ನು ಅರ್ಥಮಾಡಿಕೊಳ್ಳಲಾಗದಷ್ಟು ದಡ್ಡರಲ್ಲ ಕರ್ನಾಟಕದ ಜನರು ಎನ್ನುವುದನ್ನು ರಾಜಕಾರಣಿಗಳು ಅರಿಯುವುದೊಳಿತು. ಈಗ ನಡೆಯುತ್ತಿರುವಂತೆ ಒಳ ಒಪ್ಪಂದ ಮಾಡಿಕೊಳ್ಳದೆ, ಅನ್ಯ ಪಕ್ಷದವರ ಹಗರಣಗಳನ್ನೆಲ್ಲ ಬಯಲಿಗೆ ತಂದು, ಅವಕ್ಕೆ ತಾರ್ಕಿಕ ಅಂತ್ಯ ನೀಡಲಿ ಎಂಬುದು ಮಾತ್ರ ರಾಜ್ಯದ ಜನರ ಆಶಯವಾಗಿದೆ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಪೊಲೀಸರೇ ಹೆಚ್ಚಾಗಿರುವ ಪ್ರದೇಶ- ಪೊಲೀಸ್ ಬೆಲ್ಟ್

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಈ ವಾರ ಬಿಡುಗಡೆ ಆದ 'ಭೈರಾದೇವಿ' ಸಿನಿಮಾದಲ್ಲಿ 2,000 ರುಪಾಯಿ ನೋಟುಗಳು ಚಲಾವಣೆಯಲ್ಲಿವೆ. ಇಲ್ಲಿ ದಿವಂಗತ ನಟ ಶಿವರಾಮ್ ಅಭಿನಯಿಸಿದ್ದಾರೆ. ಇನ್ನೊಬ್ಬ ದಿವಂಗತ ನಿರ್ದೇಶಕ ಡಿ.ರಾಜೇಂದ್ರಬಾಬು ಫೋಟೋದ ಮೇಲಿರೋ ಪಾತ್ರ ಆಗಿದ್ದಾರೆ. ಬಾಲನಟಿಯಾಗಿ ಅಭಿನಯಿಸಿರೋ ಬೇಬಿ ಗ್ರೀಷ್ಮ ಈಗ ಹೆಚ್ಚುಕಮ್ಮಿ 'ಚೆಲುವಿನ ಚಿತ್ತಾರ' ಥರದ ಸಿನಿಮಾದ ಹೀರೋಯಿನ್ ಆಗಬಹುದು ಅನ್ನುವಷ್ಟು ದೊಡ್ಡವಳಾಗಿದ್ದಾಳೆ. ಇದೆಲ್ಲ ಯಾಕೆ ಹೇಳ್ತಾ ಇದ್ದೀನಿ ಅಂದ್ರೆ, ಇದು ತುಂಬಾ ವರ್ಷಗಳ ಹಿಂದೆ ಶುರುವಾದ ಸಿನಿಮಾ. ಹಾಗಾಗಿ ಈಗಿನ ಟ್ರೆಂಡ್‌ಗೆ ಸರಿಹೋಗುತ್ತಾ ಅನ್ನೋ ಅನುಮಾನ ಸಹಜ. ಆದ್ರೆ ಈ ಚಿತ್ರದ ಕೊನೆಯಲ್ಲಿ 'ಭೈರಾದೇವಿ 2' ಬರುತ್ತೆ ಅಂತ ಹೇಳಿರೋದ್ರಿಂದ ಇದು ಈಗಿನ ಟ್ರೆಂಡ್ ಪ್ರಕಾರದ ಸಿನಿಮಾ ಅಂತ ಹೇಳಬಹುದು. ಕಥೆ ವಿಷಯದಲ್ಲಿ ಇಲ್ಲಿ ಹೊಸತನ ಅಂತೇನೂ ಇಲ್ಲ. ಅನ್ಯಾಯಕ್ಕೊಳಗಾದ ಹುಡುಗಿಯೊಬ್ಬಳು ಆತ್ಮವಾಗಿ, ತನ್ನ ಮೇಲೆ ಅನ್ಯಾಯ ಮಾಡಿದವರ ಮೇಲೆ ಸೇಡು ತೀರಿಸಿಕೊಳ್ಳೋಕೆ ಹೋಗೋ ಕಥೆ. ಆದರೆ ಅತೃಪ್ತ ಆತ್ಮದ ಕಥೆ ಇರೋ ಈ ಸಿನಿಮಾ ಪ್ರೇಕ್ಷಕರನ್ನು ತೃಪ್ತಿ ಪಡಿಸೋದು ಕಷ್ಟವೇ. ಸಿನಿಮಾ ನೋಡೋಕೆ ಮುಂಚೆ ರಮೇಶ್ ಅರವಿಂದ್ ಅವರದ್ದು ಈ ಚಿತ್ರದಲ್ಲಿ 'ಗೆಸ್ಟ್ ಅಪಿಯರೆನ್ಸ್' ಇರಬಹುದು ಅಂದ್ಕೊಂಡಿರ್ತೀರ. ಆದರೆ ಅವರು ಇಡೀ ಸಿನಿಮಾ ಇದ್ದಾರೆ. ಆದ್ರೆ 'ಘೋಸ್ಟ್ ಅಪಿಯರೆನ್ಸ್' ಪಾತ್ರದಲ್ಲಿ ರಾಧಿಕಾ ಇದ್ದಾರೆ ಅನ್ನೋದು ವಿಶೇಷ. ಅವರು ದೆವ್ವ ಮತ್ತು ದೆವ್ವ ಬಿಡಿಸೋ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. 'ಗ್ಲಾಮರ್ ದಿವಾ' ಆಗಿಯೇ ನಾವು ಹೆಚ್ಚಾಗಿ ನೋಡಿರುವ ರಾಧಿಕಾ ಫಾರ್-ಎ-ಚೇಂಜ್ ಇಲ್ಲಿ 'ಗ್ಲಾಮರ್ ದೆವ್ವ' ಆಗಿ ಕಾಣಿಸಿಕೊಂಡಿದ್ದಾರೆ. ಒಟ್ಟಾರೆ ಹೇಳೋದಾದ್ರೆ ದೆವ್ವದ ಸಿನಿಮಾಗೆ ದೇವರ ಡಿವೈನ್ ಟಚ್ ಕೊಡೋ ಅದೇ 'ಹಳೇ ವೈನ್ ಹೊಸ ಗ್ಲಾಸ್' ಸಿನಿಮಾ ಇದು. ಆದ್ರೆ ರಾಧಿಕಾ ಅವರನ್ನ ತೆರೆಯ ಮೇಲೆ ನೋಡಿ ಬಹಳ ದಿನವಾಯ್ತು ಅನ್ನೋ ಬೇಸರ ಇದ್ದವರು ಒಂದ್ಸಲ ನೋಡಿಕೊಂಡು ಬರಬಹುದು.

ಲೂಸ್ ಟಾಕ್

ಕಾಮನ್ ಮ್ಯಾನ್

- **ಸಿದ್ರಾಮಯ್ಯನವರ ಆಡಳಿತದಲ್ಲಿ ಎಲ್ಲಾ ಅಯೋಮಯ ಆಗಿದೆ. ಸಿಎಂ ವಿರುದ್ಧ ಪ್ರತಿಭಟನೆ ಆಗ್ತಾ ಇದೆ. ಈ ವಿಧಾನಸೌಧದಲ್ಲಿ ಧರಣಿ ಮಾಡ್ತಾ, ಅಲ್ಲೇ ಮಲಕ್ಕೋತೀವಿ ಅನ್ನೋ ವಿಪಕ್ಷಗಳ ನಾಯಕರ ಬಗ್ಗೆ ನಿಮ್ಮಭಿಪ್ರಾಯ?**

– ಏನ್ ಮಾಡೋದು... ರಾಜ್ಯದಲ್ಲಿ ಹಾಸಿ ಹೊದ್ಕೊಳ್ಳೋವಷ್ಟು ಸಮಸ್ಯೆಗಳಿವೆ, ಇವ್ರು ಅವನ್ನೆಲ್ಲ ಬಿಟ್ಟು ಯಾವುದೋ ವಿಷ್ಯ ಇಟ್ಕೊಂಡು ವಿಧಾನಸಭೆಯಲ್ಲೇ ಹಾಸಿ ಹೊದ್ಕೊಂಡ್ ಮಲಕ್ಕೊತಾರೆ.

- **ಸದನದಲ್ಲಿ ಅಂಥಾ ಪರಿಸ್ಥಿತಿ ಬಂದಾಗ, ದೇಶದ ಪ್ರಜೆಯಾಗಿ ನಿಮಗೆ ಏನನ್ನಿಸುತ್ತೆ?**

– ಏನೂ ಅನ್ಸಲ್ಲ.. ಸದಾನಂದ ಗೌಡರ ಥರ ಸುಮ್ನೆ ಸದನದ ಕಡೆ ನೋಡಿ ನಗ್ತಾ ಇರಬೇಕಷ್ಟೇ.

- **ಆದ್ರೂ, ವಿಧಾನಸೌಧದಲ್ಲಿ ಹಿಂಗೆ ಮಲಗೋರನ್ನ ನೋಡಿದ್ರೆ, ನಿಮ್ಮಂಥ ಜನ ಏನಂದ್ಕೊಳ್ಳೊಲ್ಲ?**

– ಅಯ್ಯೋ, ಇವ್ರ ಆಡೋದ್ ನೋಡಿ, ಮೊನ್ನೆ ಯಾರೋ, 'ಇಲ್ಲಿ ಹತ್ರ ಎಲ್ಲಾದ್ರೂ ಒಳ್ಳೆ ಲಾಡ್ಜ್ ಇದೆಯಾ?' ಅಂತ ಕೇಳಿದ್ದಕ್ಕೆ 'ಇಲ್ಲೇ ಮುಂದೆ ಹೋಗಿ ಲೆಫ್ಟ್ ತಗೊಂಡ್ರೆ, ವಿಧಾನಸೌಧ ಬರುತ್ತೆ' ಅಂತ ಅಡ್ರೆಸ್ ಹೇಳಿದ್ರಂತೆ.

- **ಸರಿ, ಇಂಥ ಪ್ರತಿಭಟನೆ ಹಿಂದಿರೋ ಉದ್ದೇಶ ಏನು ಅಂತ ನಿಮ್ಮ ಅನಿಸಿಕೆ ?**

– 'ಬಾವಿ'ಗೆ ಇಳಿದು ಪ್ರತಿಭಟನೆ ಮಾಡಿಬಿಟ್ಟರೆ 'ಭಾವಿ' ಮುಖ್ಯಮಂತ್ರಿ ಅನ್ನಿಸ್ಕೊತೀವಿ ಅಂದ್ಕೊಂಡಿರೋ ಕೆಲವರ ಪ್ಲ್ಯಾನ್ ಇದು.

- **ಹೋಗ್ಲಿ, ಸಿಎಂ ಆಗಿ ಸಿದ್ರಾಮಯ್ಯ ಅವರು ಮಾಡ್ತಾ ಇರೋ ಕೆಲಸದ ಬಗ್ಗೆ ನಿಮಗೆ ತೃಪ್ತಿ ಇದೆಯಾ?**

– ಇವರೆಲ್ಲ ಕೆಲಸ ಮಾಡೋಕೆ ಬಿಟ್ರೆ ತಾನೇ? ಹಿಂಗೇ ಆದ್ರೆ, ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದ ಅವಧಿಯನ್ನ ಇತಿಹಾಸ 'ಶೂನ್ಯ ವೇಳೆ' ಅಂತ ನೆನಪಿಟ್ಟುಕೊಳ್ಳುತ್ತೆ ಅಷ್ಟೇ.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮು ಯಾವಾಗ್ಲೂ ಸಿಕ್ಕಾಪಟ್ಟೆ ಕುಡೀತಿದ್ದ. ಕುಡಿದರೆ ಅವನಿಗೆ ಮೈಮೇಲೆ ಜ್ಞಾನವೇ ಇರುತ್ತಿರಲಿಲ್ಲ. ತನ್ನ ಸುತ್ತಮುತ್ತ ಅಷ್ಟೇ ಅಲ್ಲ, ತನಗೆ ಏನಾಗ್ತಾ ಇದೆ ಅನ್ನೋದೂ ಅವನಿಗೆ ಗೊತ್ತಾಗ್ತಾ ಇರಲಿಲ್ಲ. ಖೇಮು ಮನೆಯಲ್ಲೇ ಕುಡಿಯುತ್ತಿದ್ದುದರಿಂದ ಖೇಮುಶ್ರೀಗೆ ಇದರ ಅನುಭವ ಹಲವಾರು ಬಾರಿ ಆಗಿತ್ತು. ಇದರಿಂದ ಬೇಸತ್ತು ಹೋಗಿದ್ಲು. ಆದರೆ ಖೇಮು ಅದನ್ನು ನಂಬುತ್ತಿರಲಿಲ್ಲ. 'ನಾನೆಷ್ಟೇ ಕುಡಿದರೂ ಅಲರ್ಟ್ ಆಗಿರ್ತೀನಿ, ನಂಗೆಲ್ಲಾ ಗೊತ್ತಾಗುತ್ತೆ' ಅಂತನೇ ವಾದ ಮಾಡ್ತಾ ಇದ್ದ. ಒಂದು ದಿನ ಖೇಮುಶ್ರೀ, 'ಕುಡಿದ ಮೇಲೆ ನಿಮಗೆ ಮೈಮೇಲೆ ಜ್ಞಾನ ಇರಲ್ಲ ಅನ್ನೋದನ್ನ ಇವತ್ತು ಪ್ರೂವ್ ಮಾಡೇ ಮಾಡ್ತೀನಿ' ಅಂತ ಚಾಲೆಂಜ್ ಮಾಡಿದಳು. ಈ ಚಾಲೆಂಜಿಗೆ ಒಪ್ಪಿದ ಖೇಮು 3 ಲಾರ್ಜ್ ವಿಸ್ಕಿ ಕುಡಿದು ಟೈಟಾದ. ಮನೆಯಲ್ಲೇ ಎಣ್ಣೆ ಸ್ಟಾಕ್ ಇಟ್ಟಿರುತ್ತಿದ್ದುದರಿಂದ ಖೇಮುಶ್ರೀಗೆ 'ಇನ್ನೊಂದು ಲಾರ್ಜ್ ವಿಸ್ಕಿ ತಗೊಂಬಾ' ಅಂದ. ತಂದು ಕೊಟ್ಟ ಖೇಮುಶ್ರೀ, ಅದನ್ನು ಖೇಮು ಕುಡಿದ ನಂತರ ಮೊದಲೇ ಪ್ಲ್ಯಾನ್ ಮಾಡಿದಂತೆ ಅವನನ್ನು ಹಿಗ್ಗಾಮುಗ್ಗ ಬಾರಿಸತೊಡಗಿದಳು. ಖೇಮು ನೆಲದ ಮೇಲೆಲ್ಲಾ ಬಿದ್ದು ಹೊರಳಾಡಿದ ನಂತರ ಎದ್ದು ಖೇಮುಶ್ರೀ ಮುಖ ನೋಡಿ, ಮತ್ತೆ 'ಇನ್ನೊಂದು ಲಾರ್ಜ್ ವಿಸ್ಕಿ ತಗೊಂಡ್ ಬಾ' ಅಂದ. ವಿಸ್ಕಿ ರಿಪೀಟ್ ಆದಂತೆ ಅದನ್ನು ಕುಡಿದ ನಂತರ ಖೇಮುಶ್ರೀ ಒದೆಯೂ ರಿಪೀಟ್ ಆಯ್ತು. ಒದೆ ತಿಂದು ಬಿದ್ದು, ಮತ್ತೆ ಎದ್ದು ಹೆಂಡತಿ ಮುಖವನ್ನು ಗುರಾಯಿಸಿದ ಖೇಮು, ಮತ್ತೆ ಹೇಳಿದ 'ಇನ್ನೊಂದು ಲಾರ್ಜ್ ವಿಸ್ಕಿ ತಗೊಂಡ್ ಬಾ'. 'ಓ, ಈಗ ನನ್ನ ಗಂಡನಿಗೆ ಎಷ್ಟು ಕುಡಿದರೂ ತನ್ನ ಸುತ್ತಮುತ್ತ ಏನಾಗ್ತಾ ಇದೆ ಅಂತ ಗೊತ್ತಾಗ್ತಿದೆಯಲ್ಲ ಸಾಕು' ಅಂತ ಖೇಮುಶ್ರೀ ಖುಷಿಯಾಗಿ ಇನ್ನೊಂದು ತಗೊಂಡ್ ಬಂದ್ ಕೊಟ್ಳು. ಮತ್ತೆ ಏಟನ್ನೂ ಕೊಟ್ಟಳು. ಈ ಸಲ ಒದೆ ತಿಂದು ಕೆಳಗೆ ಬಿದ್ದು, ಹೆಂಡ್ತಿಯನ್ನು ಗುರಾಯಿಸಿದ ಖೇಮು ಹೇಳಿದ, 'ಇನ್ನೊಂದ್ ಲಾರ್ಜ್ ರಮ್ ತಗೊಂಡ್ ಬಾ'. ಅದಕ್ಕೆ ಖೇಮುಶ್ರೀ, 'ಅಲ್ಲರೀ, ನೀವು ಆವಾಗಿಂದ ವಿಸ್ಕಿ ಅಲ್ವಾ ಕುಡಿತಾ ಇದ್ದೋದು?' ಅಂದ್ಳು. ಅದಕ್ಕೆ ಖೇಮು ಹೇಳಿದ, 'ವಿಸ್ಕಿ ಕುಡಿತಾ ಇದ್ದೀನಿ ಅಂತ ನಂಗೊತ್ತು, ನಾನು ಅಲರ್ಟ್ ಆಗೇ ಇದ್ದೀನಿ; ಆದ್ರೆ, ವಿಸ್ಕಿ ಕುಡಿದ್ರೆ ಯಾಕೋ ಆವಾಗಿಂದ ಸಿಕ್ಕಾಪಟ್ಟೆ ಮೈ ಕೈ ನೋವಾಗ್ತಿದೆ. ಅದಕ್ಕೆ ಈ ಸಲ ರಮ್ ತಗೊಂಡ್ ಬಾ'.

ಲೈನ್ ಮ್ಯಾನ್

- ಸದಾ ಅಭಿವೃದ್ಧಿಯ ಜಪ ಮಾಡೋ ದೇಶ
  – ಜಪಾನ್
- ಸರ್ಕ್ಯುಲೇಶನ್ ಕಡಿಮೆ ಆಗಿರೋ ಡೈಲಿ ಪತ್ರಿಕೆ
  –'ವೀಕ್'ಲಿ
- 'ಮೂಗು' ಔಟ್ ಆಫ್ ಆರ್ಡರ್ ಆಗಿದ್ರೆ, ಅದು
  – 'ನಾಕ್' ಔಟ್
- ಮೂಗು ಕಟ್ಟಿಕೊಂಡ್ರೆ, ಅದು
  – 'ನಾಕಾ' ಬಂದಿ
- ನೀವು ಸರಿಯಾಗಿ ಯೋಚನೆ ಮಾಡ್ತಾ ಇಲ್ಲ ಅನ್ನೋದನ್ನು ಕಣ್ಣು, ಮೂಗು ಪದಗಳನ್ನ ಬಳಸಿ ಹೇಳುವಾಗ ಆಗುವ ವ್ಯತ್ಯಾಸ
  – ನೀವು 'ವಕ್ರ'ದೃಷ್ಟಿ ಬೀರ್ತಾ ಇದ್ದೀರಿ.
  – ನೀವು ನಿಮ್ಮ ಮೂಗಿನ 'ನೇರಕ್ಕೆ' ಮಾತಾಡ್ತಾ ಇದ್ದೀರಿ.
- ಭಾಷಾ ಬಳಕೆ
  – ಕನ್ನಡ ಮಾತಾಡೋನಷ್ಟೇ ಅಲ್ಲ, ಕನ್ನಡಿ ಮಾರೋನೂ ಕನ್ನಡಿಗನೇ
- ಪೊಲೀಸರೇ ಹೆಚ್ಚಾಗಿರುವ ಪ್ರದೇಶ
  – ಪೊಲೀಸ್ 'ಬೆಲ್ಟ್'
- ಜನಸಂದಣಿಯಲ್ಲಿ ಸಮಯ ನೋಡಿ ಕಾದು ಹೊಂಚುಹಾಕಿ ಜನರ ಪರ್ಸ್, ಮೊಬೈಲ್ ಎತ್ತೋನು
  – 'ವೆಯ್ಟ್' 'ಲಿಫ್ಟರ್'
- ಬ್ಯಾಟ್ಸ್‌ಮನ್‌ಗಳು ರನೌಟ್ ಆಗ್ತಾ ಇರೋದನ್ನ ತಡೆಯಲಾಗದೆ ಕೈ ಚೆಲ್ಲಿ ಕೂತ ಕ್ಯಾಪ್ಟನ್ ಮಾತುಗಳು
  – ವಿ ಹ್ಯಾವ್ ರನ್ ಔಟ್ ಆಫ್ ಐಡಿಯಾಸ್
- ರಸ್ತೆ ಅಡವಿಟ್ಟು ಸಾಲ ಪಡೆದ ಪಾಕಿಸ್ತಾನ
  – ಜೀವ್ನ ರೋಡಿಗ್ ಬರೋದು ಅಂದ್ರೆ, ಇದೇನಾ?

ಬೆತ್ತಲೆ ರಾಜ್ಯದಲ್ಲಿ ಬಟ್ಟೆ ಹಾಕ್ಕೊಂಡೋನೇ ಮೂರ್ಖ!

ರಸದೌತಣ
ಯಗಟಿ ರಘು ನಾಡಿಗ್
naadigru@gmail.com

ಘಟಿಂಗನೊಬ್ಬನ ಕೊನೆಯ ಆಶ್ರಯತಾಣವೇ ರಾಜಕೀಯ ಕ್ಷೇತ್ರ ಎಂಬುದು ರಾಜಕಾರಣದ ಕುರಿತಾಗಿ ಕೇಳಿಬರುವ ಚರ್ವಿತ-ಚರ್ವಣ ವ್ಯಾಖ್ಯಾನ. ಇದನ್ನು ಹೇಳಿದ್ದು ಐರಿಷ್ ನಾಟಕಕಾರ, ವಿಮರ್ಶಕ ಹಾಗೂ ರಾಜಕೀಯ ಹೋರಾಟಗಾರ ಜಾರ್ಜ್ ಬರ್ನಾರ್ಡ್ ಷಾ. ರಾಜಕೀಯ ಕ್ಷೇತ್ರದ ಕುರಿತಾದ ಈ ಮಾತು ಕೊಂಚ ಕಠೋರವಾಗಿ ಕೇಳಿಸುವುದುಂಟು, ನಿಂದನಾತ್ಮಕ ಎನಿಸುವುದೂ ಉಂಟು. ಆದರೆ, ವರ್ತಮಾನದ ಕೆಲ ರಾಜಕಾರಣಿಗಳ ಒಂದಷ್ಟು ನವರಂಗಿ ಆಟಗಳನ್ನು ನೋಡಿದಾಗ, ''ಆ ಮಹಾನುಭಾವ ಎಂಥಾ ದಿಟವಾದ ಮಾತು ಹೇಳಿದ್ದಾನಪ್ಪಾ'' ಎಂದು ತಲೆದೂಗಲೇಬೇಕಾಗುತ್ತದೆ!

ರಾಜಕಾರಣದ ಕುರಿತಾದ ಮೇಲಿನ ವ್ಯಾಖ್ಯಾನವನ್ನು ಒಪ್ಪುವುದು ಬಿಡುವುದು ಅವರವರಿಗೆ ಬಿಟ್ಟ ವಿಷಯ. ಆದರೆ ಕೆಲ ರಾಜಕಾರಣಿಗಳು ದಶಕಗಳಿಂದ ಹೇಳಿಕೊಂಡು ಬಂದಿರುವ ಮಾತನ್ನೇ ನಂಬಿಕೊಂಡು ನಮ್ಮಂಥ ಜನಸಾಮಾನ್ಯರು 'ಮಂಗ್ಯಾ' ಆಗಿಬಿಟ್ಟಿದ್ದೇವಾ? ಅಥವಾ ಅವರು ನಮ್ಮನ್ನು 'ಮಂಗ್ಯಾ' ಮಾಡಿಬಿಟ್ಟಿದ್ದಾರಾ? ಎಂಬ ಸಂದೇಹ ಹಲವರಲ್ಲಿ ಇಣುಕುವುದುಂಟು. ಈ ಮಾತಿಗೆ ಪುಷ್ಟಿ ನೀಡುವಂಥ ನಿದರ್ಶನಗಳು ಸಾಕಷ್ಟಿವೆ. 'ಪಕ್ಷದ ತತ್ವ-ಸಿದ್ಧಾಂತ' ಎನ್ನುವ ತೀರಾ ಗಹನ ಸಂಗತಿಗಳ ತಂಟೆಗೆ ಹೋಗುವುದೇ ಬೇಡ, ಸರಳವಾಗಿರುವ ಕೆಲವನ್ನಷ್ಟೇ ಪರಿಗಣಿಸಿ ನೋಡೋಣ. ಕೆಲ ಪುಢಾರಿಗಳು ವೇದಿಕೆಯೇರಿದಾಗ, ''ನಮ್ಮದು ನೂರಾರು ಎಕರೆ ತೆಂಗಿನ ತೋಟವಿದೆ, ದೇವರ ಕೃಪೆಯಿಂದ ಸಾಕಷ್ಟು ಆಸ್ತಿಯಿದೆ. ನಾನು ಕೂತು ಉಂಡರೂ ಯಾರೂ ಕೇಳೋರಿಲ್ಲ. ಮನಸ್ಸು ಮಾಡಿದ್ದರೆ ಒಳ್ಳೇ ಕಂಪನಿಗೆ ಕೆಲಸಕ್ಕೆ ಸೇರಿ ಲಕ್ಷ ಲಕ್ಷ ದುಡೀತಿದ್ದೆ. ಆದರೆ 'ಜನಸೇವೆ' ಮಾಡಬೇಕೆಂಬ ಒಂದೇ ಉದ್ದೇಶದಿಂದ ರಾಜಕೀಯಕ್ಕೆ ಬಂದೆ. ನಿಮ್ಮ ಆಶೀರ್ವಾದ ನನ್ನ ಮೇಲಿರಲಿ'' ಎಂದು ಒಂದೇ ಸಮನೆ ತೌಡು ಕುಟ್ಟುವುದುಂಟು. ಈ ಪಾಯಿಂಟನ್ನೇ ಪಟ್ಟಾಗಿ ಹಿಡಿದುಕೊಂಡರೆ, ''ರಾಜಕೀಯ ಕ್ಷೇತ್ರವು ಒಂದು ವೃತ್ತಿಯೋ ಅಥವಾ ಸೇವೆಯೋ?'' ಎಂಬ ಪ್ರಶ್ನೆ ಟಣ್ಣನೆ ಜಿಗಿಯುತ್ತದೆ. ಕೆಲವರು ಹೇಳಿಕೊಳ್ಳುವ ಹಾಗೆ ರಾಜಕೀಯವು ಸೇವೆಯೇ ಆಗಿದ್ದರೆ, ಅದು ಉಚಿತ ರೂಪದಲ್ಲಿ ಇರಬೇಕಲ್ಲವೇ? ಪುಢಾರಿಗಳು ತಾವು ಮಾಡುವ 'ರಾಜಕೀಯ ಸೇವೆ'ಗೆಂದು ಬಂಗಲೆ, ಗೂಟದ ಕಾರು, ಆಳು-ಕಾಳು, ಸಂಬಳ-ಸಾರಿಗೆ, ತರಹೇವಾರಿ ಭತ್ಯೆಗಳು, ವಿದೇಶ ಪ್ರವಾಸದ ಅವಕಾಶ, ನಿಗದಿತ ಸೇವಾವಧಿ ಪೂರೈಸಿದರೆ ಪಿಂಚಣಿ ಇತ್ಯಾದಿ 'ಭಾಗ್ಯ'ಗಳನ್ನು ಪಡೆಯುವುದೇಕೆ? (ಈ ಪ್ರಶ್ನೆಗೆ ಅವರು, ''ಇವೆಲ್ಲಾ ಸೇವಾಶುಲ್ಕ ಕಣ್ರೀ'' ಎಂದರೂ ಅಚ್ಚರಿಯಿಲ್ಲ!).

''ರಾಜಕೀಯವೆಂದರೆ ಸೇವೆ ಎಂದು ಒಂದೊಮ್ಮೆ ಹೇಳಿಬಿಟ್ಟರೆ ಮಾತಿನಲ್ಲಿ ಸಿಕ್ಕಿಹಾಕಿಕೊಳ್ಳಬೇಕಾಗುತ್ತೆ, ಆದ್ದರಿಂದ ಇದನ್ನೊಂದು ವೃತ್ತಿ ಎಂದುಬಿಡೋಣ'' ಎಂದು ಕೆಲ ವಿತಂಡವಾದಿ ಪುಢಾರಿಗಳು ರೂಟು ಬದಲಿಸಬಹುದು. ಆಗಲೂ ಪ್ರಶ್ನೆ ತಪ್ಪಿದ್ದಲ್ಲ. ರಾಜಕೀಯವು ಇವರು ಹೇಳಿದಂತೆ ವೃತ್ತಿಯೇ ಎಂದಾದಲ್ಲಿ, ಆ ವೃತ್ತಿಯೊಳಗೆ ತೂರಿಕೊಳ್ಳಲು ಕನಿಷ್ಠ ವಿದ್ಯಾರ್ಹತೆ ಸೇರಿದಂತೆ ಒಂದಷ್ಟು ಅರ್ಹತೆ-ಯೋಗ್ಯತೆಗಳು ಇರಬೇಕಲ್ಲವೇ? ಸರಕಾರಿ ಕಚೇರಿಯಲ್ಲಿ ಕೆಳಹಂತದ ನೌಕರನಾಗಿ ಸೇರಿಕೊಳ್ಳುವುದಕ್ಕೂ ನಿಗದಿತ ವಿದ್ಯಾರ್ಹತೆಯಿದೆ. ಕೆಲವು ಹುದ್ದೆಗಳಿಗೆ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆ, ಮೌಖಿಕ ಸಂದರ್ಶನ ಇತ್ಯಾದಿಗಳಿರುತ್ತವೆ, ಸೇವಾವಧಿಯ ನಂತರ 'ವೃತ್ತಿಯಿಂದ ನಿವೃತ್ತಿ' ಎಂಬುದಿರುತ್ತದೆ. ಆದರೆ ಕೆಲ ಪುಢಾರಿಗಳು ಈ ಯಾವ ಹಂತವನ್ನೂ ಹಾದುಹೋಗುವುದಿಲ್ಲ ಅಥವಾ ಪುಢಾರಿಯಾಗುವುದಕ್ಕೆ ಇಂಥ ಯಾವ ಷರತ್ತು-ನಿಬಂಧನೆಗಳೂ ಇಲ್ಲ. ಜತೆಗೆ ಅವರು ನಿವೃತ್ತಿಗೆ ಅತೀತರು! ಹೀಗಿರುವಾಗ ರಾಜಕೀಯವನ್ನು 'ವೃತ್ತಿ' ಎಂದು ಕರೆಯಲಾದೀತೇ? ಹುಡುಕುತ್ತ ಹೋದರೆ ಈ ಥರದ ದ್ವಂದ್ವಗಳು ಸಾಕಷ್ಟು ಸಿಗುತ್ತವೆ. ಹೀಗಾಗಿ, ''ರಾಜಕೀಯವೆಂದರೆ ಸೇವೆಯೂ ಅಲ್ಲದ, ವೃತ್ತಿಯೂ ಅಲ್ಲದ ಒಂದು ತ್ರಿಶಂಕು ಸ್ವರ್ಗ'' ಎಂಬ ತೀರ್ಮಾನಕ್ಕೆ ಕೆಲವರು ಬಂದರೆ ಅದೇನೂ ಅಚ್ಚರಿಯಲ್ಲ. ಆದರೆ, ಇಂಥ 'ತ್ರಿಶಂಕು ಸ್ವರ್ಗ'ವನ್ನು ಸೃಷ್ಟಿಸಿದ 'ವಿಶ್ವಾಮಿತ್ರ'ರು ಯಾರು? ಎಂಬುದು ಮಿಲಿಯನ್ ಡಾಲರ್ ಪ್ರಶ್ನೆ!!

ಎಚ್.ಜಿ.ಗೋವಿಂದೇಗೌಡ



ಅಬ್ದುಲ್ ನಜೀರ್‌ಸಾಬ್



ಶಾಂತವೇರಿ ಗೋಪಾಲಗೌಡ

ಜಾರ್ಜ್ ಫರ್ನಾಂಡಿಸ್

ಇನ್ನು, ಒಮ್ಮೆ ಜನಪ್ರತಿನಿಧಿಯಾಗಿಬಿಟ್ಟರೆ ಅಂಥ ಪುಣ್ಯಪುರುಷರಿಗೆ (ಕೆಲವೊಮ್ಮೆ 'ಪುಣ್ಯಸ್ತ್ರೀ'ಯರಿಗೆ!) ಸಂಬಳ-ಸಾರಿಗೆ ಸೇರಿದಂತೆ ಸಿಗುವ ಹತ್ತು ಹಲವು ಭತ್ಯೆಗಳು ಮತ್ತು ಸೌಲಭ್ಯಗಳ ವಿವರವನ್ನು ಪ್ರೊಜೆಕ್ಟರ್‌ಗೆ ಉಣಿಸಿದರೆ ಬಿಂಬಿತವಾಗುವುದೇ ಒಂದು ಭರ್ಜರಿ ಸಿನಿಮಾಸ್ಕೋಪ್ ಮತ್ತು ಈಸ್ಟ್‌ಮನ್ ಕಲರ್ 'ರಾಜಕೀಯ ಚಿತ್ರಾನ್ನ'! ಅದರಿಂದ ಒಂದು ಅಗುಳನ್ನಷ್ಟೇ ಹೆಕ್ಕಿ ಹಿಸುಕಿ ನೋಡೋಣ. ಪ್ರತಿಯೊಬ್ಬ ಜನಪ್ರತಿನಿಧಿಗೂ ದೂರವಾಣಿ ಕರೆಗಳಿಗೆಂದೇ ಗಣನೀಯ ಮೊತ್ತವನ್ನು ನೀಡಲಾಗುತ್ತದೆ. ಈಗಂತೂ ಮೊಬೈಲ್ ಫೋನಿಲ್ಲದ ವ್ಯಕ್ತಿಗಳಿಲ್ಲ, ಅವು ಪ್ರವೇಶಿಸದ ಜಾಗಗಳಿಲ್ಲ. ತಿಂಗಳಿಗೊಮ್ಮೆ 350-400 ರುಪಾಯಿ ಕೊಟ್ಟು ರೀಚಾರ್ಜ್ ಮಾಡಿಸಿಬಿಟ್ಟರೆ, ತಿಂಗಳು ಪೂರ್ತಿ 'ಅನ್‌ಲಿಮಿಟೆಡ್' ಮಾತಾಡುವ ಸೌಲಭ್ಯವನ್ನು ಮೊಬೈಲ್ ಸೇವಾ ಕಂಪನಿಗಳು ಒದಗಿಸಿಬಿಟ್ಟಿವೆ. ಹೀಗೆ 400 ರುಪಾಯಿಯೊಳಗೆ ಆಗಿಹೋಗುವ ಕೆಲಸಕ್ಕೆ ಜನಪ್ರತಿನಿಧಿಗಳಿಗೆ ಸಾವಿರಾರು ರುಪಾಯಿ ಭತ್ಯೆಯನ್ನೇಕೆ ಕೊಡಬೇಕು ಎಂಬುದು 'ಬಡ ಬೋರೇಗೌಡ'ನ ಪ್ರಶ್ನೆ!

ಇನ್ನು, ಏನೋ ಒಂದು ನವರಂಗಿ ನಾಟಕವಾಡಿ ಜನಪ್ರತಿನಿಧಿ ಎನಿಸಿಕೊಂಡುಬಿಡುವ ಕೆಲವರು, ತಮಗಿರುವ ಹೊಣೆಗಾರಿಕೆಯ ನಿಭಾವಣೆಗೆ ತಕ್ಕಂಥ ವಿದ್ಯಾರ್ಹತೆ, ಕಾರ್ಯದಕ್ಷತೆ, ವಿಷಯಜ್ಞಾನ ಇತ್ಯಾದಿಯನ್ನು ಹೊಂದಿದ್ದಾರೆಯೇ? ಅವರದ್ದು ಅಪರಾಧಿಕ ಹಿನ್ನೆಲೆಯೇ? ಎಂದೆಲ್ಲಾ ಜಾಲಾಡುತ್ತಾ ಹೋದರೆ, ಅಂಥ ವ್ಯರ್ಥ ಕಸರತ್ತಿಗೆ ಇಳಿದವರು ನಿಜಕ್ಕೂ ನಿಬ್ಬೆರಗಾಗಬೇಕಾಗುತ್ತದೆ. ಸಂಖ್ಯಾಬಲವೇ ಮುಖ್ಯವಾಗಿರುವ ನಮ್ಮ ಆಳುಗ ವ್ಯವಸ್ಥೆಯಲ್ಲಿ ಇಂಥ ಕೆಲವೊಂದು 'ರಾಜಿ-ಹೊಂದಾಣಿಕೆ'ಗಳೂ ಅನಿವಾರ್ಯ ಎಂಬ ನಿಲುವನ್ನು ಮನಸ್ಸಿಲ್ಲದೆ ತಳೆಯಬೇಕಾಗುತ್ತದೆ. ಇದನ್ನು ಹೆಚ್ಚು ವಿವರಿಸುವ ಅಗತ್ಯವಿಲ್ಲ, ಕೆಲ ಪುಢಾರಿಗಳ ನಿತ್ಯನಾಟಕ, ಆಟಾಟೋಪಗಳನ್ನು ನೋಡುವ ಜನರಿಗೆ ಈ ಬಗ್ಗೆ ಸಾಕಷ್ಟು ಗೊತ್ತಿದೆ. ಆದರೂ, ಅದನ್ನು ಸೂಚ್ಯವಾಗಿ ಹೇಳುವ ಒಂದು ಲಘು ಪ್ರಸಂಗವಿಲ್ಲಿದೆ ನೋಡಿ:

ಕಚ್ಚೆ ಪಂಚೆ, ಬಿಳೀಜುಬ್ಬಾ, ಗಾಂಧಿ ಟೋಪಿ, ದಪ್ಪ ಮಸೂರದ ಕನ್ನಡಕ ಧರಿಸಿದ್ದ ವಯೋವೃದ್ಧರೊಬ್ಬರು ವಾಹನ ದಟ್ಟಣೆಯಿದ್ದ ಮಹಾನಗರಿಯ ರಸ್ತೆಯೊಂದನ್ನು ದಾಟುವ ಹರಸಾಹಸದಲ್ಲಿದ್ದರು. ಟ್ರಾಫಿಕ್ ಪೊಲೀಸ್ ಆಗಲೀ, ನಿಯಂತ್ರಕ ದೀಪಗಳಾಗಲೀ ಇಲ್ಲದ ಕಾರಣ ಅವರು ರಸ್ತೆ ದಾಟಲು ಭಾರಿ ಕಷ್ಟಪಡುತ್ತಿದ್ದರು. ನೋಡನೋಡುತ್ತಿದ್ದಂತೆಯೇ, ವೇಗವಾಗಿ ಸಾಗಿಬಂದ ಗೂಟದ ಕಾರೊಂದು ಅವರ ಪಕ್ಕದಲ್ಲೇ ನಿಂತಿತು. ತೆಲುಗು ನಟ ಚಿರಂಜೀವಿಯವರ ಚಿತ್ರಗಳಲ್ಲಿರುವಂತೆ ಕಾರಿನ ಬಾಗಿಲು 'ಝುರಕ್' ಎಂದು ತೆರೆದುಕೊಂಡಿತು. ಖಾದಿವಸ್ತ್ರದೊಳಗೆ ತಮ್ಮ ಗಜದೇಹವನ್ನು ತೂರಿಸಿಕೊಂಡಿದ್ದ ವ್ಯಕ್ತಿಯೊಬ್ಬರು ತಾಂಬೂಲ ಮೆದ್ದು ಕೆಂಪಗಾಗಿದ್ದ ಹಲ್ಲುಬೀರುತ್ತಾ, ಹಿಂದಿನ ರಾತ್ರಿಯ 'ಹ್ಯಾಂಗೋವರ್'ನಲ್ಲಿದ್ದ ಕೆಂಗಣ್ಣುಗಳನ್ನು ಕಷ್ಟಪಟ್ಟು ಅಗಲಿಸಿಕೊಂಡು ಕಾರಿನಿಂದ ಕೆಳಗಿಳಿದು ಆ ವಯೋವೃದ್ಧರಿಗೆ ''ನಮಸ್ಕಾರ ಸಾ...'' ಎಂದರು. ಕಾರಣ, ಆ ವಯೋವೃದ್ಧರು ನಿವೃತ್ತಿಯ ಅಂಚಿನಲ್ಲಿದ್ದ ಶಿಕ್ಷಕರು. ತಬ್ಬಿಬ್ಬಾದ ಶಿಕ್ಷಕರು ''ನಮಸ್ಕಾರ, ನಮಸ್ಕಾರ'' ಎಂದಷ್ಟೇ ಹೇಳಿ ಸುಮ್ಮನೇ ನಿಂತುಬಿಟ್ಟರು.

ಗೂಟದ ಕಾರಿನ ವ್ಯಕ್ತಿ, ''ನಮಸ್ಕಾರ ಸಾ... ನಾನು ಒಂದ್ ಕಾಲದಾಗೆ ನಿಮ್ ಸಿಸ್ಯ ಆಗಿದ್ದೋನು. ಅಕ್ಸರ, ಕಾಗುಣ್ತ ನೆಟ್ಟಗೆ ಬರಿಯಾಕ್ಕೆ ಬರಲ್ಲ ಅಂತಂದು ನೀವು ನಂಗೆ ರೂಲ್‌ದೊಣ್ಣೇಲಿ ಶಾನೆ ಹೊಡೀತಿದ್ರಿ. ಪುಣ್ಯಾತ್ಮರಾದ ನಿಮ್ ಕೈ ಏಟು ತಿಂದಿದ್ದಕ್ಕೋ ಏನೋ, ನೋಡಿ ಈಗ ಸೊಗಸಾಗೇ ಬದುಕು ಸಾಗಿಸ್ತಿವ್ನಿ...'' ಅಂದರು.

ಅದಕ್ಕೆ ಶಿಕ್ಷಕರು, ''ಹೌದೇನಪ್ಪಾ ಸಂತೋಷ. ಈ ಉರಿಬಿಸಿಲಿನ ಝಳಕ್ಕೆ ನನ್ನ ಕಣ್ಣು ಸ್ವಲ್ಪ ಮಂಜಾಯ್ತು, ಹಾಗಾಗಿ ಗೊತ್ತಾಗ್ಲಿಲ್ಲ. ಅಂದ್ಹಾಗೆ ಏನು ಕೆಲಸ ಮಾಡ್ಕೊಂಡಿದ್ದೀಯಪ್ಪಾ?'' ಎಂದು ಕೇಳಿದರು. ಅದಕ್ಕೆ ಆ ಖಾದಿಧಾರಿ, ''ಏನ್ ಸಾ, ಇಂಗೆ ಕೇಳಿಬುಟ್ರಿ? ನಾನು ಈ ರಾಜ್ಯದ ಎಜುಕೇಸನ್ ಮಿನಿಟ್ರು ಸಾ'' ಎಂದರು.

ಶಿಕ್ಷಕರಿಗೆ ಲಘುವಾಗಿ ಹೃದಯಾಘಾತವಾದಂತಾಯ್ತು! ಎದೆಯನ್ನು ಎಡಗೈಯಲ್ಲಿ ಅವುಚಿ ಹಿಡಿದುಕೊಂಡೇ, ''ಹೌದೇ? ಒಂದು ಉಪಕಾರ ಮಾಡ್ತೀಯಾಪ್ಪಾ?'' ಎಂದು ಕೇಳಿದರು. ಆಗ ಆ ಪುಢಾರಿ, ''ಯೋಳಿ ಸಾ...'' ಎಂದರು. ಆಗ ಶಿಕ್ಷಕರು ''ನಾನು ಶಾಲೆಯಲ್ಲಿ ನಿನಗೆ ಮೇಷ್ಟ್ರಾಗಿದ್ದೆ ಅಂತ ದಯವಿಟ್ಟು ಯಾರ ಹತ್ರಾನೂ ಹೇಳಬೇಡಪ್ಪಾ...'' ಎಂದು ಹೇಳಿ ಶಿಷ್ಯನಿಗೆ ಕೈಮುಗಿದರು!

ಆ ಪುಢಾರಿಗೆ ಏನು ಹೇಳಬೇಕೆಂದು ತೋಚದೆ ಕೊನೆಗೆ ಏನೋ ಒಂದು ಮಾತಾಡಬೇಕೆಂಬ ಉಮೇದಿನಲ್ಲಿ, ''ಅಂದಂಗೆ, ನೀವೀಗ ಎಲ್ಲಿ ಕೆಲಸ ಮಾಡ್ತಾ ಇವ್ರಿ, ಸಾ?'' ಎಂದು ಕೇಳಿದರು. ಅದಕ್ಕೆ ಶಿಕ್ಷಕರು, ''ಈಗಲೂ ನಾಲ್ಕನೇ ಕ್ಲಾಸಿನ ಮಕ್ಕಳಿಗೆ ಪಾಠ ಹೇಳಿಕೊಡ್ತಿದ್ದೀನಿ ಕಣಪ್ಪಾ'' ಎಂದರು ವಿನಮ್ರರಾಗಿ. ಈ ಮಾತು ಕೇಳಿ ವಜ್ರಮುನಿ ಶೈಲಿಯಲ್ಲಿ ಗಹಗಹಿಸಿ ನಕ್ಕ ಆ ಪುಢಾರಿ, ''ಏನ್ ಸಾ...? ನಾನು 7ನೇ ಕ್ಲಾಸಿನಾಗೆ ಪೇಲು, ಆದರೆ ಈ ರಾಜ್ಯದ ಎಜುಕೇಸನ್ ಮಿನಿಟ್ರು ಆಗಿವ್ನಿ; ನೀವು ಇದ್ಯಾವಂತ್ರು, ಇನ್ನೂ 4ನೇ ಕ್ಲಾಸಿನಾಗೇ ಪಾಟ ಯೋಳ್ತಾ ಇದ್ದೀರಾ? ಇಂಗಾದ್ರೆ, ಜೀವನದಾಗೆ ಮುಂದೆ ಬರೋದು ಯಾವಾಗ ಸಾ...?'' ಎಂದು ಹೇಳಿ ಕಾರನ್ನೇರಿ 'ಭರ್ರನೆ' ಹೊರಟುಹೋದರು. ಆ ಕಾರು ಉಗುಳಿದ ಪೆಟ್ರೋಲ್ ಹೊಗೆ, ಚಕ್ರಗಳು ತೂರಿದ ಧೂಳನ್ನು ಸೇವಿಸಿ ಶಿಕ್ಷಕರು ಕೆಮ್ಮಲಾರಂಭಿಸಿದರು!!

•••

ರಾಜಕಾರಣಿಗಳನ್ನು ಸಾರಾಸಗಟಾಗಿ ದೂರುವುದು ಈ ಬರಹದ ಉದ್ದೇಶವಲ್ಲ. ಕೆಲವು ಪ್ರಾತಃಸ್ಮರಣೀಯರೂ ಈ ಕ್ಷೇತ್ರದಲ್ಲಿ ಆಗಿಹೋಗಿದ್ದಾರೆ. 'ಮಲೆನಾಡಿನ ಗಾಂಧಿ' ಎಂದೇ ಹೆಸರಾಗಿದ್ದ ಎಚ್.ಜಿ. ಗೋವಿಂದೇಗೌಡರು, ತಮ್ಮ 'ಸಮಾಜವಾದಿ' ಚಿಂತನೆಗಳ ಮೂಲಕ ಜನಮನ ಗೆದ್ದ ಶಾಂತವೇರಿ ಗೋಪಾಲಗೌಡರು, ರಾಜ್ಯದ ಹಳ್ಳಿಹಳ್ಳಿಗಳಲ್ಲಿ ಬೋರ್‌ವೆಲ್ ಕೊರೆಸಿ ಗ್ರಾಮಸ್ಥರ ನೀರಿನ ದಾಹ ತಣಿಸಿ 'ನೀರ್ ಸಾಬ್' ಎಂದೇ ಖ್ಯಾತರಾದ ಅಬ್ದುಲ್ ನಜೀರ್ ಸಾಬ್, ಸರಳತೆ ಮತ್ತು ದಕ್ಷತೆಗಳ ಪ್ರತೀಕವಾಗಿದ್ದ ಜಾರ್ಜ್ ಫರ್ನಾಂಡಿಸ್ ಮುಂತಾದ ಮುತ್ಸದ್ದಿಗಳಿಗೆ ಜನ್ಮನೀಡಿದ ನಾಡು ನಮ್ಮ ಕರ್ನಾಟಕ. ಇಂಥವರ ಪರಂಪರೆ ಇಷ್ಟಕ್ಕೇ ನಿಲ್ಲಬೇಕೇ? 'ಇವ ನಮ್ಮವ, ಇವ ನಮ್ಮವ' ಎಂದು ಕನ್ನಡಿಗರು ಹೆಮ್ಮೆಯಿಂದ ಎದೆತಟ್ಟಿಕೊಂಡು ಹೇಳಿಕೊಳ್ಳುವಂಥ ಧೀಮಂತ ರಾಜಕಾರಣಿ ಜನಸಾಗರದೊಳಗಿಂದ ಉದ್ಭವಿಸೋದು ಯಾವಾಗ...?

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 286

ಸಮಾಚಾರ ಸಣ್ಣದಲ್ಲ

ಕುಪ್ವಾರ: ಉಗ್ರರಿಬ್ಬರ ಕೊಂದ ಬಿಎಸ್‌ಎಫ್

ಕುಪ್ವಾರ: ಜಮ್ಮು-ಕಾಶ್ಮೀರದ ಕುಪ್ವಾರ ಜಿಲ್ಲೆ ವ್ಯಾಪ್ತಿಯಲ್ಲಿ ಗಡಿ ನಿಯಂತ್ರಣ ರೇಖೆ ಬಳಿ ಸಂಶಯಾತ್ಮಕವಾಗಿ ಓಡಾಡುತ್ತಾ, ಭಾರತದೊಳಕ್ಕೆ ನುಸುಳಲು ಹೊಂಚು ಹಾಕಿದ್ದ ಇಬ್ಬರು ಭಯೋತ್ಪಾದಕರನ್ನು ಗುಂಡಿಕ್ಕಿ ಕೊಲ್ಲಲಾಗಿದೆ ಎಂದು ಭಾರತೀಯ ಸೇನೆಯ ನಾರ್ಧರನ್ ಕಮಾಂಡ್ ವಿಭಾಗ ಶನಿವಾರ ತಿಳಿಸಿದೆ. ಕುಪ್ವಾರ ಜಿಲ್ಲೆಯ ಗುಗಾಲಧರ್ ಬಳಿ ಭದ್ರತಾ ಪಡೆಗಳು ಶುಕ್ರವಾರ ಸಂಜೆ ನಡೆಸಿದ ಕಾರ್ಯಾಚರಣೆಯಲ್ಲಿ ಪಾಕಿಸ್ತಾನ ಮೂಲದ ಇಬ್ಬರು ಉಗ್ರರನ್ನು ಹೊಡೆದುರುಳಿಸಲಾಗಿದೆ. ಉಗ್ರರ ಶವಗಳಿದ್ದ ಸ್ಥಳದಲ್ಲೇ ದೊಡ್ಡ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳನ್ನು ಅಡಗಿಸಿಟ್ಟಿದ್ದುದು ಕೂಡಾ ಪತ್ತೆಯಾಗಿದೆ. ಇನ್ನಷ್ಟು ಉಗ್ರರು ಅಡಗಿರಬಹುದೆಂಬ ಶಂಕೆಯ ಮೇರೆಗೆ ಶನಿವಾರ ಕೂಡಾ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ಮುಂದುವರಿಸಲಾಗಿದೆ ಎಂದು ಭಾರತೀಯ ಸೇನೆಯ ಚಿನಾರ್ ಕಾರ್ಪ್ಸ್ ಹೆಸರಿನ 'ಎಕ್ಸ್' ಖಾತೆಯಲ್ಲಿ ತಿಳಿಸಲಾಗಿದೆ.

ಪ್ರವಾದಿ ಕುರಿತ ಹೇಳಿಕೆ ಅಮರಾವತಿ ಉದ್ವಿಗ್ನ

ಮುಂಬೈ: ಉತ್ತರ ಪ್ರದೇಶದ ಧರ್ಮ ಗುರುವೊಬ್ಬರು ಪ್ರವಾದಿ ಮಹಮದ್ ಕುರಿತು ವಿವಾದಾತ್ಮಕ ಹೇಳಿಕೆ ನೀಡಿರುವುದನ್ನು ಖಂಡಿಸಿ ಮಹಾರಾಷ್ಟ್ರದ ಅಮರಾವತಿಯಲ್ಲಿ ಶನಿವಾರ ಉದ್ರಿಕ್ತ ಜನರ ಗುಂಪು ಕಲ್ಲು ತೂರಾಟ ನಡೆಸಿದೆ. ಈ ಘಟನೆಯಲ್ಲಿ 21 ಪೊಲೀಸರು ಗಂಭೀರವಾಗಿ ಗಾಯಗೊಂಡಿದ್ದಾರೆ. ಪ್ರವಾದಿ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ ವಿವಾದಿತ ಧರ್ಮಗುರು ಯತಿ ನರಸಿಂಹಾನಂದ ವಿರುದ್ಧ ತಕ್ಷಣ ದೂರು ದಾಖಲಿಸಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು. ಮುಸ್ಲಿಂ ಸಂಘಟನೆಗಳವರು ಶುಕ್ರವಾರ ರಾತ್ರಿ 8.15ರಲ್ಲಿ ಅಮರಾವತಿ ನಗರದ ನಾಗಪುರಿ ಗೇಟ್ ಪೊಲೀಸ್ ಠಾಣೆಗೆ ಬಂದು ಕಲ್ಲು ತೂರಾಟ ನಡೆಸಿದರು. ಪರಿಣಾಮ 10 ಪೊಲೀಸ್ ವ್ಯಾನ್‌ಗಳಿಗೆ ಹಾನಿಯಾಗಿದೆ. ಪೊಲೀಸ್ ಠಾಣೆ ಕಿಟಕಿ ಗಾಜುಗಳು ಪುಡಿಯಾಗಿವೆ. ದಪ್ಪ ಗಾತ್ರದ ಕಲ್ಲುಗಳ ಠಾಣೆಯೊಳಗೆ ಬಂದುಬಿದ್ದಿವೆ. ಈ ಸಂಬಂಧ 1,200 ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, 26 ಮಂದಿಯನ್ನು ಪೊಲೀಸರು ಗುರುತಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಇದೇ ವೇಳೆ, ಉತ್ತರ ಪ್ರದೇಶದ ಗಾಜಿ ಯಾಬಾದ್ ಪೊಲೀಸರು ಯತಿ ನರಸಿಂಹಾ ನಂದರನ್ನು ಶನಿವಾರ ಸಂಜೆ ಬಂಧಿಸಿದ್ದಾರೆ.

ಗುಂಡಿಕ್ಕಿಕೊಂಡು ಸೈನಿಕ ಆತ್ಮಹತ್ಯೆ

ಶ್ರೀನಗರ: ಜಮ್ಮು-ಕಾಶ್ಮೀರದ ಪೂಂಚ್ ಜಿಲ್ಲೆಯಲ್ಲಿ ಭಾರತೀಯ ಸೇನೆಯ ಯೋಧರೊಬ್ಬರು ಶನಿವಾರ ತಮ್ಮ ಸರ್ವಿಸ್ ರೈಫಲ್‌ನಿಂದಲೇ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬಾಲಕೋಟ್ ಸೆಕ್ಟಾರ್ನ ಬೆಹ್ರೋಟ್ ಪೋಸ್ಟ್‌ನಲ್ಲಿ ಸೆಂಟ್ರಿ ಡ್ಯೂಟಿಯಲ್ಲಿದ್ದ ಉತ್ತರಾಖಂಡ್ ಮೂಲದ ಸೈನಿಕ ಮನೀಶ್ ಬಿಶ್ತ್, ಸ್ವತಃ ಶೂಟ್ ಮಾಡಿಕೊಂಡಿದ್ದಾರೆ. ಯೋಧನ ಆತ್ಮಹತ್ಯೆಗೆ ಕಾರಣ ತಿಳಿಯಲು ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ ಎಂದು ಸೇನೆಯ ಅಧಿಕಾರಿಗಳು ಹೇಳಿದ್ದಾರೆ.

ಮಾಲಾ ಅಂಕೋಲಾ ಶಂಕಾಸ್ಪದ ಸಾವು

ಪುಣೆ: ಕರ್ನಾಟಕದ ಉತ್ತರ ಕನ್ನಡ ಜಿಲ್ಲೆ ಮೂಲದ ಮಾಜಿ ಕ್ರಿಕೆಟ್ ಆಟಗಾರ ಸಲೀಲ್ ಅಂಕೋಲಾ ಅವರ ತಾಯಿ ಮಾಲಾ ಅಶೋಕ್ ಅಂಕೋಲಾ(77)

ಅವರ ಸಂಶಯಾಸ್ಪದವಾಗಿ ಪುಣೆಯಲ್ಲಿ ಸಾವಿಗೀಡಾಗಿದ್ದಾರೆ. ಪುಣೆ ನಗರದಲ್ಲಿನ ಪ್ರಭಾತ್ ರಸ್ತೆಯಲ್ಲಿರುವ ವಸತಿ ಸಂಕೀರ್ಣದಲ್ಲಿನ ಫ್ಲಾಟ್‌ನಲ್ಲಿ ಕುತ್ತಿಗೆ ಸೀಳಿದ ಸ್ಥಿತಿಯಲ್ಲಿ ಮಾಲಾ ಅವರ ಶವ ಪತ್ತೆಯಾಗಿದೆ. ಅಸಹಜ ಸಾವು ಪ್ರಕರಣ ದಾಖಲಿಸಿರುವ ಪೊಲೀಸರು, ಕೊಲೆಯೋ, ಆತ್ಮಹತ್ಯೆಯೋ ಎಂಬುದನ್ನು ತಿಳಿಯಲು ಎಲ್ಲಾ ಕೋನಗಳಿಂದಲೂ ತನಿಖೆ ನಡೆಸುವುದಾಗಿ ಹೇಳಿದ್ದಾರೆ. ಸಲೀಲ್ ಅಂಕೋಲಾ 1989-97 ನಡುವಿನ ಅವಧಿಯಲ್ಲಿ 20 ಅಂತಾರಾಷ್ಟ್ರೀಯ ಏಕದಿನ ಪಂದ್ಯಗಳು ಹಾಗೂ ಒಂದು ಟೆಸ್ಟ್ ಪಂದ್ಯದಲ್ಲಿ ಭಾಋತ ತಂಡವನ್ನು ಪ್ರತಿನಿಧಿಸಿದ್ದರು.

ಭೂಕುಸಿತಕ್ಕೆ 10 ಸಾವು

ಗುವಾಹಟಿ: ಮೇಘಾಲಯದ ಗಾರೋ ಹಿಲ್ಸ್ ಪ್ರದೇಶದಲ್ಲಿ ಶನಿವಾರ ಭಾರೀ ಮಳೆಯಿಂದಾಗಿ ಪ್ರವಾಹ ಮತ್ತು ಭೂಕುಸಿತದಲ್ಲಿ ಕನಿಷ್ಠ 10 ಜನ ಮೃತಪಟ್ಟಿದ್ದಾರೆ. ಗಾರೋ ಹಿಲ್ಸ್‌ನ ಐದೂ ಜಿಲ್ಲೆಗಳು ಪ್ರವಾಹ ಪೀಡಿತವಾಗಿವೆ. ಪಶ್ಚಿಮ ಗಾರೋ ಹಿಲ್ಸ್‌ನಲ್ಲಿ ಮೂವರು ಮತ್ತು ದಕ್ಷಿಣ ಗ್ಯಾರೋ ಹಿಲ್ಸ್‌ನಲ್ಲಿ ಏಳು ಜನರು ಸಾವಿಗೀಡಾಗಿದ್ದಾರೆ ಎಂದು ವರದಿಯಾಗಿದೆ.

{ ಮಲ್ಲಿಕಾರ್ಜುನ ಖರ್ಗೆ } ಕಾಂಗ್ರೆಸ್ ಅಧ್ಯಕ್ಷ

ಸಂಸದ, ರಾಜ್ಯಸಭೆ ಪ್ರತಿಪಕ್ಷ ನಾಯಕನಾದ ನನಗೆ ನೀಡಲಾದ ಸೌಲಭ್ಯಕ್ಕೆ ಧಕ್ಕೆಯಾಗಿದೆ, ನಿಯಮಗಳ ಉಲ್ಲಂಘನೆ ಆಗಿದೆ. ನನಗೆ ಮಾಹಿತಿಯನ್ನೇ ನೀಡದೇ ಸಂಸತ್ತಿನಲ್ಲಿರುವ ನನ್ನ ಕೊಠಡಿಗೆ ಸಿಪಿಡಬ್ಲ್ಯುಡಿ, ಸಿಐಎಸ್‌ಎಫ್ ಮತ್ತು ಟಾಟಾ ಪ್ರಾಜೆಕ್ಟ್ ಅಧಿಕಾರಿಗಳು ಪ್ರವೇಶಿಸಿದ್ದಾರೆ. ಇಂಥ ನಡೆಗೆ ಕ್ಷಮೆ ಇಲ್ಲ. ರಾಜ್ಯಸಭೆ ಸಭಾಪತಿ ಇದನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳಬೇಕು.

ತಿರುಮಲದಲ್ಲಿ ವಿಐಪಿ ಸಂಸ್ಕೃತಿ ಕಡಿಮೆ ಆಗಲಿ, ಕ್ಷೇತ್ರದಲ್ಲಿನ ಪಾವಿತ್ರ್ಯವನ್ನು ಕಾಯ್ದುಕೊಳ್ಳಲು ಆಂಧ್ರ ಸಿಎಂ ಸೂಚನೆ | 2025ರ ಟಿಟಿಡಿ ಕ್ಯಾಲೆಂಡರ್-ಡೈರಿ ಬಿಡುಗಡೆ

ಲಡ್ಡು ಗುಣಮಟ್ಟ ಭಕ್ತರ ಪ್ರಶಂಸೆ: ನಾಯ್ಡು

ತಿರುಪತಿ: ತಿರುಮಲದ ತಿರುಪತಿಯ ಶ್ರೀ ವೆಂಕಟೇಶ್ವರ ದೇವಾಲಯದ ವಿಶ್ವ ವಿಖ್ಯಾತ ಲಡ್ಡು ಪ್ರಸಾದದ ಗುಣಮಟ್ಟ ಸುಧಾರಿಸಿದೆ ಎಂದು ಈಗ ಭಕ್ತರೇ ಖುಷಿಯಿಂದ ಹೇಳುತ್ತಿದ್ದಾರೆ ಎಂದು ಬ್ರಹ್ಮೋತ್ಸವಕ್ಕೆ ಆಗಮಿಸಿದ್ದ ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಶನಿವಾರ ಹೇಳಿದ್ದಾರೆ.

ತಿರುಮಲದಲ್ಲಿ ವಕುಲಮಾತಾ ಕೇಂದ್ರೀಕೃತ ಅಡುಗೆಮನೆ ಉದ್ಘಾಟಿಸಿ ಚಂದ್ರಬಾಬು ನಾಯ್ಡು, ಲಡ್ಡು ಪ್ರಸಾದ ತಯಾರಿಕೆ ಪ್ರಕ್ರಿಯೆ ವೀಕ್ಷಿಸಿದರು. ಲಡ್ಡು ಪ್ರಸಾದದ ರುಚಿ ನೋಡಿದರು. ಬಳಿಕ ಸುದ್ದಿಗಾರರ ಜತೆ ಮಾತನಾಡಿದರು. ಶುಕ್ರವಾರ ರಾತ್ರಿಯೇ ತಿರುಪತಿಗೆ ಆಗ ಮಿಸಿ ತಂಗಿದ್ದ ಮುಖ್ಯಮಂತ್ರಿ, ಚಂದ್ರಬಾಬು ನಾಯ್ಡು, 9 ದಿನಗಳ ವಾರ್ಷಿಕ ಬ್ರಹ್ಮೋತ್ಸವದ ಮೊದಲ ದಿನ ವೆಂಕಟೇಶ್ವರ ದೇವರಿಗೆ ರಾಜ್ಯ ಸರಕಾರದ ಪರವಾಗಿ ಪಟ್ಟು ವಸ್ತ್ರಗಳನ್ನು (ರೇಷ್ಮೆ ವಸ್ತ್ರ) ಸಮರ್ಪಿಸಿದರು. 2025ರ ತಿರುಮಲ ತಿರುಪತಿ ದೇವಸ್ಥಾನದ ಕ್ಯಾಲೆಂಡರ್ ಮತ್ತು ಡೈರಿ ಬಿಡುಗಡೆ ಮಾಡಿ ದರು. ನಂತರ ಶ್ರೀ ತಿರುಪತಿ ತಿರುಮಲ ದೇವಸ್ಥಾನದ(ಟಿಟಿಡಿ) ಅಧಿಕಾರಿಗಳೊಂದಿಗೆ ತಿರುಮಲದ ಪದ್ಮಾವತಿ ಅತಿಥಿ ಗೃಹದಲ್ಲಿ ಸಭೆ ನಡೆಸಿ, ದೇಗುಲದಲ್ಲಿನ ಆಡಳಿತ ವ್ಯವಸ್ಥೆ ಪರಿಶೀಲನೆ ನಡೆಸಿದರು. ಪ್ರಸಾದ ನೈವೇದ್ಯ ತಯಾರಿಕೆ ಯಲ್ಲಿ ಸ್ವಚ್ಛತೆ ಕಾಯ್ದು ಕೊಳ್ಳಬೇಕು, ಉತ್ತಮ ಗುಣಮಟ್ಟದ ಸಾಮಗ್ರಿಗಳನ್ನೇ ಬಳಸಬೇಕು ಎಂದು ಸಭೆಯಲ್ಲಿ ಸೂಚನೆ ನೀಡಿದರು. ಹಿಂದಿನ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ವೈ. ಎಸ್.ಜಗನ್ ಮೋಹನ್ ರೆಡ್ಡಿ ಸರಕಾರದಲ್ಲಿ ದೇವಸ್ಥಾನದ ಪ್ರಸಿದ್ಧ ಲಡ್ಡು ತಯಾರಿಕೆಗೆ ಪ್ರಾಣಿಗಳ ಕೊಬ್ಬು ಬೆರೆಸಿದ ತುಪ್ಪ ಬಳಸಲಾಗಿದೆ. ಇದರಿಂದ ವೆಂಕಟೇ ಶ್ವರ ಸ್ವಾಮಿ ದೇವಸ್ಥಾನದ ಪಾವಿತ್ರ್ಯ ಹಾಳಾಗಿದೆ. ತಿರುಪತಿಯ ದೇಗುಲ ಆಡಳಿತದಲ್ಲಿ ದುರಾಡಳಿತವಾಗಿದೆ ಎಂದು ಆರೋಪ ಮಾಡಿದ ನಂತರ ಸಿಎಂ ನಾಯ್ಡು ವೆಂಕಟೇಶ್ವರ ದೇವಸ್ಥಾನಕ್ಕೆ ಮೊದಲ ಬಾರಿಗೆ ಭೇಟಿ ನೀಡಿದ್ದಾರೆ.

ಆಂಧ್ರಪ್ರದೇಶ ಸಿಎಂ ಚಂದ್ರಬಾಬು ನಾಯ್ಡು, 9 ದಿನಗಳ ವಾರ್ಷಿಕ ಬ್ರಹ್ಮೋತ್ಸವದ ಮೊದಲ ದಿನ(ಶನಿವಾರ) ವೆಂಕಟೇಶ್ವರ ದೇವರಿಗೆ ರಾಜ್ಯ ಸರಕಾರದ ಪರವಾಗಿ ಪಟ್ಟು ವಸ್ತ್ರಗಳನ್ನು(ರೇಷ್ಮೆ ವಸ್ತ್ರ) ಸಮರ್ಪಿಸಿದರು.

ದೇಗುಲ ಅಲಂಕಾರ ಆಧ್ಯಾತ್ಮಿಕವಾಗಿರಲಿ

ತಿರುಪತಿ ತಿರುಮಲದ ಶ್ರೀ ವೆಂಕಟೇಶ್ವರ ಸನ್ನಿದಾನದಲ್ಲಿ, ದೇಗುಲದಲ್ಲಿ ಪಾವಿತ್ರ್ಯವನ್ನು ಸದಾ ಕಾಯ್ದುಕೊಳ್ಳಬೇಕಿದೆ. ದೇಗುಲದಲ್ಲಿ ವಿಐಪಿ ಸಂಸ್ಕೃತಿ ಕಡಿಮೆ ಮಾಡಬೇಕು. ಗಣ್ಯರು ದೇವಸ್ಥಾನಕ್ಕೆ ಭೇಟಿ ನೀಡಿದರೆಂದು ಗದ್ದಲ ಮಾಡಬಾರದು. ದೇಗುಲದ ಅಲಂಕಾರ ಸರಳವಾಗಿರಬೇಕು, ಆಷ್ಟೇ ಆಧ್ಯಾತ್ಮಿಕವಾಗಿರಬೇಕು. ಅನಗತ್ಯ ಧ್ವನಿವರ್ಧಕ ಬಳಕೆ ಸಲ್ಲ, ವೆಚ್ಚ ತಗ್ಗಿಸಬೇಕು. ತಿರುಮಲದಲ್ಲಿ ಗೋವಿಂದ ನಾಮ ಸ್ಮರಣೆ ಹೊರತು ಬೇರಾವುದೇ ಪದಗಳು ಕೇಳಿಬರಬಾರದು. ತಿರುಮಲದ ಅರಣ್ಯ ಪ್ರದೇಶದ ವಿಸ್ತಾರವನ್ನು ಈಗಿನ ಶೇ.72ರಿಂದ ಶೇ.80ಕ್ಕೆ ಹೆಚ್ಚಿಸಬೇಕಿದೆ. ಶುದ್ಧ ಕುಡಿಯುವ ನೀರಿನ ಲಭ್ಯತೆ ಹೆಚ್ಚಿಸಬೇಕು. ಟಿಟಿಡಿಯಲ್ಲಷ್ಟೇ ಅಲ್ಲದೇ ಉಳಿದ ದೇಗುಲಗಳಲ್ಲೂ ಭಕ್ತರ ಅಭಿಪ್ರಾಯ, ಸಲಹೆಗಳನ್ನು ಯಥೋಚಿತವಾಗಿ ಪರಿಗಣಿಸಬೇಕು.

ಹರಿಯಾಣ ಚುನಾವಣೆ: ಶೇ.63 ಮೀರಿ ಮತದಾನ

ಚಂಡೀಗಢ: ಕೃಷಿಕರು, ಕುಸ್ತಿ ಪಟುಗಳ ಪ್ರಭಾವದಲ್ಲಿರುವ 'ಹಸಿರು ಸಂಪತ್ತಿನ' ರಾಜ್ಯ, ಬಿಜೆಪಿ ಆಡಳಿತದ ಹರಿಯಾಣದಲ್ಲಿ ವಿಧಾನಸಭೆ ಚುನಾವಣೆ ನಡೆದಿದ್ದು, ಶನಿವಾರ ಸಂಜೆ 6 ಗಂಟೆವರೆಗೆ ಶೇ.63ಕ್ಕೂ ಅಧಿಕ ಜನರು ಮತ ಹಕ್ಕು ಚಲಾಯಿಸಿದ್ದರು. ಅ.8ರಂದು ಮತ ಎಣಿಕೆ ನಡೆಯಲಿದೆ.

ಸತತ ಎರಡು ಅವಧಿಗಳಿಂದ ರಾಜ್ಯದಲ್ಲಿ ಆಡಳಿತ ನಡೆಸಿರುವ ಬಿಜೆಪಿ, ಹ್ಯಾಟ್ರಿಕ್ ಗೆಲುವಿನ ಸಾಧನೆ ಮಾಡುವ ನಿರೀಕ್ಷೆಯಲ್ಲಿದೆ. ಒಂದು ದಶಕದಿಂದ ಹರಿಯಾಣದಲ್ಲಿ ಅಧಿಕಾರದಲ್ಲಿ ದೂರ ಉಳಿದಿರುವ ಕಾಂಗ್ರೆಸ್, ಈ ಬಾರಿಯಾದರೂ ಅಧಿಕಾರಕ್ಕೇರಬೇಕೆಂಬ ಹಂಬಲದಲ್ಲಿದೆ. ಅಲ್ಲದೇ, ದೆಹಲಿ ಮೂಲದ ಆಮ್ ಆದ್ಮಿ ಪಾರ್ಟಿ(ಎಎಪಿ), ಐಎನ್‌ಎಲ್‌ಡಿ-ಬಿಎಸ್‌ಪಿ ಮತ್ತು ಜೆಜೆಪಿ-ಆಜಾದ್ ಸಮಾಜ ಪಕ್ಷ ಕಣದಲ್ಲಿವೆ. ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ, ಕಾಂಗ್ರೆಸ್ ಮುಖಂಡ ಭೂಪಿಂದರ್ ಸಿಂಗ್ ಹೂಡಾ ಮತ್ತು ಒಲಿಂಪಿಯನ್ ಕುಸ್ತಿಪಟು ವಿನೇಶ್ ಫೋಗಟ್, ರಾಜ್ಯದ ಹೆಸರಾಂತ ಚೌಟಾಲ ಕುಟುಂಬದ ಕುಡಿ, ಬಿಜೆಪಿ ಮುಖಂಡ ದುಶ್ಯಂತ್ ಚೌಟಾಲಾ ಸೇರಿದಂತೆ 1031 ಮಂದಿ ಅಭ್ಯರ್ಥಿಗಳಲ್ಲಿ 90 ಮಂದಿಗಷ್ಟೇ ಗೆಲುವಿನ ಅವಕಾಶ. 101 ಮಹಿಳೆಯರೂ ಅಭ್ಯರ್ಥಿಗಳಾಗಿದ್ದಾರೆ. ರಾಜ್ಯದಲ್ಲಿ ಒಟ್ಟು 2.03 ಕೋಟಿ (2,03,54,350) ಮತದಾರರಿದ್ದಾರೆ. ಅವರಲ್ಲಿ 8,821 ಶತಾಯುಷಿಗಳಾಗಿದ್ದಾರೆ. ಇವರ ಮತದಾನಕ್ಕೆ ಅನುಕೂಲವಾಗಲೆಂದು ಕೇಂದ್ರ ಚುನಾವಣಾ ಆಯೋಗ ರಾಜ್ಯಾದ್ಯಂತ 20,632 ಮತಗಟ್ಟೆಗಳನ್ನು ಸ್ಥಾಪಿಸಿತ್ತು.

10 ವರ್ಷದ ಬಾಲಕಿ ಮೇಲೆ ಹತ್ಯಾಚಾರ: ಠಾಣೆಗೆ ಬೆಂಕಿ

ಕೋಲ್ಕತ್ತ: ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯಲ್ಲಿ ಶುಕ್ರವಾರ ಸಂಜೆ ಟ್ಯೂಷನ್ ಮುಗಿದ ಬಳಿಕ ಮನೆಗೆ ವಾಪಸಾಗುತ್ತಿದ್ದ 4ನೇ ತರಗತಿ ಬಾಲಕಿ ಹೊತ್ತೊಯ್ದು ಅತ್ಯಾಚಾರ ನಡೆಸಿ ಕೊಲೆ ಮಾಡಲಾಗಿದೆ. ಕೃಪಾಖಾಲಿ ಗ್ರಾಮದ ಗಂಗಾನದಿ ದಡದಲ್ಲಿ 10 ವರ್ಷದ ಪುಟ್ಟ ಬಾಲಕಿಯ ಶವ ಶನಿವಾರ ಬೆಳಗ್ಗೆ ಪತ್ತೆಯಾಗಿದೆ.

- ದ.24 ಪರಗಣ ಜಿಲ್ಲೆ ಕೃಪಾಖಾಲಿ ಗ್ರಾಮದಲ್ಲಿ ಘಟನೆ
- ಮಮತಾ ಬ್ಯಾನರ್ಜಿ ಆಡಳಿತ ವಿರುದ್ಧ ಬಿಜೆಪಿ ವಾಗ್ದಾಳಿ

ಶುಕ್ರವಾರ ಸಂಜೆ ಬಾಲಕಿ ನಾಪತ್ತೆಯಾಗಿದ್ದು, ಮಧ್ಯರಾತ್ರಿ ವೇಳೆ ದೂರು ದಾಖಲಿಸಲಾಗಿದೆ. ಪ್ರಾಥಮಿಕ ತನಿಖೆ ನಂತರ ಆರೋಪಿಯನ್ನು ಬಂಧಿಸಲಾಗಿದೆ. ನದಿ ದಡದಿಂದ ಬಾಲಕಿಯ ಶವ ವಶಪಡಿಸಿಕೊಂಡು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ. ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕಿ ನಾಪತ್ತೆ ಬಗ್ಗೆ ನಮಗೆ ರಾತ್ರಿ 9ಕ್ಕೆ ಮಾಹಿತಿ ಸಿಕ್ಕಿತು. ತಕ್ಷಣವೇ ಶೋಧ ಆರಂಭಿಸಿ ಆರೋಪಿಯನ್ನು ಗುರುತಿಸಿ ಬಂಧಿಸಲಾಗಿದೆ. ಮರುದಿನ ಬೆಳಗ್ಗೆ ಬಾಲಕಿ ಶವ ಸಿಕ್ಕಿದೆ ಎಂದು ಬರುಯಿಪುರ್ ಪೊಲೀಸ್ ವರಿಷ್ಠಾಧಿಕಾರಿ ಪಲಾಶ್ ಧಾಲಿ ಹೇಳಿದ್ದಾರೆ. ಘಟನೆಗೆ ಆಘಾತ ವ್ಯಕ್ತಪಡಿಸಿದ ಬಿಜೆಪಿ ರಾಜ್ಯ ಮುಖಂಡ ಸುಕಾಂತ ಮಜುಂದಾರ್, ಟಿಎಂಸಿ ಸರಕಾರದಿಂದಾಗಿ ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಪೂರ್ಣ ಹದಗೆಟ್ಟಿದೆ ಎಂದು ಟೀಕಿಸಿದ್ದಾರೆ.

ವಿದೇಶಾಂಗ ಸಚಿವ ಎಸ್.ಜೈಶಂಕರ್ ಸ್ಪಷ್ಟನೆ

ಉಗ್ರರ ಪ್ರಿಯ ಪಾಕ್ ಜತೆ ದ್ವಿಪಕ್ಷೀಯ ಮಾತು ಇಲ್ಲ

ದೆಹಲಿ: ಶಾಂಘೈ ಸಹಕಾರ ಸಂಘಟನೆ(ಎಸ್‌ಸಿಒ) ಸಮಾವೇಶದಲ್ಲಿ ಭಾಗವಹಿಸಲು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅ.15-16ರಂದು ಪಾಕಿಸ್ತಾನಕ್ಕೆ ಭೇಟಿ ನೀಡಲಿದ್ದು, ಈ ವೇಳೆ ಪಾಕ್ ಜತೆ ದ್ವಿಪಕ್ಷೀಯ ಮಾತು ಕತೆ ನಡೆಯುವುದಿಲ್ಲ.

ಭಾರತ-ಪಾಕ್ ನಡುವೆ ದ್ವಿಪಕ್ಷೀಯ ಸಭೆಯ ಸಾಧ್ಯತೆಯನ್ನೇ ಜೈಶಂಕರ್ ಶನಿವಾರ ತಳ್ಳಿ ಹಾಕಿದ್ದಾರೆ. ಪಾಕ್‌ಗೆ ಭೇಟಿ ನೀಡುತ್ತಿರುವುದು ಆ ದೇಶದೊಂದಿಗೆ ಅಧಿಕೃತ ಮಾತುಕತೆ ನಡೆಸುವುದಕ್ಕಲ್ಲ. ಇಸ್ಲಾಮಾಬಾದ್‌ನಲ್ಲಿ ನಡೆಯಲಿರುವ ಶಾಂಘೈ ಸಹಕಾರ ಸಂಘಟನೆ (ಎಸ್‌ಸಿಒ) ಸಮಾವೇಶದಲ್ಲಿ ಭಾಗಿಯಾಗಲು ಹೋಗುತ್ತಿರುವೆ. ಎಸ್‌ಸಿಒ ಸದಸ್ಯ ರಾಷ್ಟ್ರ ಭಾರತದ ಪರವಾಗಿ ನಾನು ಅಲ್ಲಿಗೆ ಹೋಗುತ್ತಿದ್ದೇನೆ ಅಷ್ಟೇ ಎಂದು ಜೈಶಂಕರ್ ಸ್ಪಷ್ಟಪಡಿಸಿದ್ದಾರೆ.

ಇದೇ ವೇಳೆ, ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಘಟನೆಯ(ಸಾರ್ಕ್) ಪ್ರಗತಿ ಸ್ಥಗಿತಗೊಂಡಿರುವುದಕ್ಕೆ ಪಾಕ್ ವಿರುದ್ಧ ಜೈಶಂಕರ್ ವಾಗ್ದಾಳಿ ನಡೆಸಿದರು. ಇತ್ತೀಚೆಗೆ ಸಾರ್ಕ್ ಚಟುವಟಿಕೆಗಳು ಸ್ಥಗಿತಗೊಂಡಿವೆ. ಅದಕ್ಕೆ ಕಾರಣ, ಸದಸ್ಯ ರಾಷ್ಟ್ರವೊಂದು ಗಡಿಯಾಚೆಗಿನ ಭಯೋತ್ಪಾದನೆ ನಡೆಸುತ್ತಿರುವುದೇ ಆಗಿದೆ. ಅದೇ ಕಾರಣಕ್ಕೆ ಸಾರ್ಕ್‌ಶೃಂಗ ಸಭೆ ನಡೆಸಲಾಗುತ್ತಿಲ್ಲ ಎಂದು ಪಾಕಿಸ್ತಾನದ ಹೆಸರು ಹೇಳದೇ ವಾಗ್ದಾಳಿ ನಡೆಸಿದರು. ನೆರೆಹೊರೆ ದೇಶಗಳು ಉಗ್ರ ಚಟುವಟಿಕೆ ಮುಂದುವರಿಸಿದರೆ ಸಾರ್ಕ್‌ನಲ್ಲಿ ಸಹಜ ಚಟುವಟಿಕೆ ಸಾಧ್ಯವಿಲ್ಲ. ಇತ್ತೀಚಿನ ವರ್ಷಗಳಲ್ಲಿ ಸಾರ್ಕ್ ಸಭೆ ನಡೆಯದೇ ಇರಲು ಇದುವೇ ಪ್ರಮುಖ ಕಾರಣ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಉತ್ತರಾಖಂಡ: ದಿಬ್ಬಣದ ಬಸ್ ಉರುಳಿ 30 ಸಾವು

ಪೌರಿ: ಉತ್ತರಾಖಂಡದಲ್ಲಿ ಶುಕ್ರವಾರ ರಾತ್ರಿ ದಿಬ್ಬಣದ ಬಸ್ ಕಮರಿಗೆ ಬಿದ್ದು, ಮದುವೆ ಸಂಭ್ರಮದಲ್ಲಿದ್ದ 30 ಮಂದಿ ದುರ್ಮರಣಕ್ಕೀಡಾಗಿದ್ದಾರೆ.

ಪೌರಿ ಜಿಲ್ಲೆಯಲ್ಲಿ ಮದುವೆ ಛತ್ರಕ್ಕೆ ಬಂಧು-ಮಿತ್ರರನ್ನು ಕರೆದೊಯ್ಯುತ್ತಿದ್ದ ಬಸ್ ಶುಕ್ರವಾರ ರಾತ್ರಿ 200 ಅಡಿ ಆಳದ ಕಮರಿಗೆ ಬಿದ್ದಿದ್ದು, 30 ಜನರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. 20ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಬಸ್ ಹರಿದ್ವಾರದ ಲಾಲ್ಢಾಂಗ್‌ನಿಂದ ಪೌರಿಯ ಬಿರೋಂಖಲ್ ಗ್ರಾಮಕ್ಕೆ ತೆರಳುತ್ತಿತ್ತು. ರಾತ್ರಿ 8ರ ವೇಳೆ ಸಿಮಂಡಿ ಗ್ರಾಮದ ಬಳಿ ಸಾಗುತ್ತಿದ್ದ ಬಸ್, ಚಾಲಕನ ನಿಯಂತ್ರಣ ತಪ್ಪಿ ನೇರವಾಗಿ ಆಳವಾದ ಕಮರಿಗೆ ಬಿದ್ದಿದೆ. ಬಸ್‌ನಲ್ಲಿ ಮದುವೆ ಮನೆಯ 50ಕ್ಕೂ ಹೆಚ್ಚು ಜನರಿದ್ದರು.

ವಧು ಮನೆ ಬಳಿ: ವಧುವಿನ ಮನೆಯಿಂದ ಕೇವಲ ಎರಡು ಕಿ.ಮೀ ದೂರದಲ್ಲಿದ್ದಾಗಲೇ ಬಸ್ ಅಪಘಾತಕ್ಕೀಡಾಗಿದೆ. ಬಸ್ ಕಮರಿಗೆ ಬಿದ್ದ ಸದ್ದು ಕೇಳಿ ಸ್ಥಳೀಯರು ಸಹಾಯಕ್ಕೆ ಧಾವಿಸಿ ಬಂದರು. ಅಪಘಾತದ ಮಾಹಿತಿ ಪಡೆದ ಸ್ಥಳೀಯ ಪೊಲೀಸರು, ಎಸ್‌ಡಿಆರ್‌ಎಫ್ ತಂಡ ಸ್ಥಳಕ್ಕೆ ತೆರಳಿ ರಕ್ಷಣಾ ಕಾರ್ಯಾಚರಣೆ ನಡೆಸಿದೆ. ಸ್ಥಳದಲ್ಲಿ ಕತ್ತಲೆ ಆವರಿಸಿದ್ದರಿಂದ ರಕ್ಷಣಾ ಕಾರ್ಯಾಚರಣೆಗೆ ತೊಡಕಾಯಿತು. ಮೊಬೈಲ್ ಫೋನ್ ಟಾರ್ಚ್ ಬೆಳಗಿಸಿ ರಕ್ಷಣಾ ಕಾರ್ಯಾಚರಣೆ ನಡೆಸಲಾಯಿತು.

ಅಪಘಾತದಲ್ಲಿ ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಸುದ್ದಿ ತಿಳಿದ ಉತ್ತರಾಖಂಡ ವಿಧಾನಸಭಾ ಸ್ಪೀಕರ್ ರಿತು ಖಂಡೂರಿ ಸ್ಥಳಕ್ಕೆ ಧಾವಿಸಿದ್ದಾರೆ.

ಸಾವರ್ಕರ್ ಟೀಕೆ; ರಾಹುಲ್‌ಗೆ ಸಮನ್ಸ್

ಪುಣೆ: ಸ್ವಾತಂತ್ರ್ಯ ಹೋರಾಟಗಾರ, ಹಿಂದುತ್ವವಾದಿ ವಿನಾಯಕ ದಾಮೋದರ ಸಾವರ್ಕರ್ ಅವರನ್ನು ನಿಂದಿಸಿದ ಆರೋಪದಡಿ ಮಹಾರಾಷ್ಟ್ರದ ಪುಣೆ ವಿಶೇಷ ನ್ಯಾಯಾಲಯದಲ್ಲಿ ಪ್ರತಿಪಕ್ಷ ನಾಯಕ', ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ವಿರುದ್ಧ ಮಾನಹಾನಿ ದಾವೆ ದಾಖಲಾಗಿದ್ದು, ಅ.23 ರಂದು ಖುದ್ದು ಹಾಜರಾಗುವಂತೆ ಶುಕ್ರವಾರ ಸಮನ್ಸ್ ಜಾರಿಯಾಗಿದೆ.

ಸಾವರ್ಕರ್ ಅವರ ಮೊಮಗ ಸಾತ್ಯಕಿ ಸಾವರ್ಕರ್, ರಾಹುಲ್ ವಿರುದ್ಧ ಪುಣೆಯ ಪ್ರಥಮ ದರ್ಜೆಯ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ 2023ರಲ್ಲೇ ದಾವೆ ಹೂಡಿದ್ದರು. ಪ್ರಕರಣ ಸೆಪ್ಟೆಂಬರ್‌ನಲ್ಲಿ ಸಂಸದರು ಮತ್ತು ಶಾಸಕರ ವಿಶೇಷ ನ್ಯಾಯಾಲಯಕ್ಕೆ ವರ್ಗಾವಣೆಗೊಂಡಿದೆ. ರಾಹುಲ್ ವಿರುದ್ಧ ಐಪಿಸಿ ಕಲಂ 500ರಡಿ ದಾವೆ ಹೂಡಲಾಗಿದ್ದು, ಆರೋಪಿತರ ಖುದ್ದು ಹಾಜರಿ ಅಗತ್ಯ ಎಂದು ಸಂಸದರು-ಶಾಸಕರ ವಿಶೇಷ ನ್ಯಾಯಾಲಯದ ಜಂಟಿ ಸಿವಿಲ್ ನ್ಯಾಯಾಧೀಶರಾದ ಅಮೋಲ್ ಶಿಂಧೆ ಸಮನ್ಸ್‌ನಲ್ಲಿ ಉಲ್ಲೇಖಿಸಿದ್ದಾರೆ. 2023ರ ಮಾರ್ಚ್‌ನಲ್ಲಿ ಲಂಡನ್ ಪ್ರವಾಸದಲ್ಲಿದ್ದ ರಾಹುಲ್, ಭಾಷಣ ಮಾಡುವಾಗ ಸಾವರ್ಕರ್ ಕುರಿತು ಮಾತನಾಡಿದ್ದರು. ಸಾರ್ವಕರ್ ತಮ್ಮ ಪುಸ್ತಕವೊಂದರಲ್ಲಿ 'ನಾನು, ಐದಾರು ಸ್ನೇಹಿತರು ಒಮ್ಮೆ ಮುಸ್ಲಿಂ ವ್ಯಕ್ತಿಯನ್ನು ಥಳಿಸಿದ್ದೆವು. ಅದರಿಂದ ನನಗೆ ಸಂತಸವಾಗಿತ್ತು' ಎಂದು ಬರೆದಿದ್ದಾರೆ ಎಂದು ರಾಹುಲ್ ಹೇಳಿದ್ದರು. ಆದರೆ, ಸಾವರ್ಕರ್ ಹಾಗೆಲ್ಲೂ ಬರೆದಿಲ್ಲ. ರಾಹುಲ್ ಅವರ ಹೇಳಿಕೆ ಸುಳ್ಳು, ದುರುದ್ದೇಶದಿಂದ ಕೂಡಿದೆ ಎಂದು ಸಾತ್ಯಕಿ ಸಾವರ್ಕರ್ ದಾವೆಯಲ್ಲಿ ಆರೋಪಿಸಿದ್ದಾರೆ.

ಹೈಬಾಕ್ಸ್ ಹಗರಣ; ₹500 ಕೋಟಿ ಮೋಸ

ಡೆಹ್ರಾಡೂನ್: ಹೂಡಿಕೆ ಮಾಡಿದ ಹಣಕ್ಕೆ ತಿಂಗಳಿಗೆ ಶೇ.30ರಿಂದ ಶೇ.150ರಷ್ಟು ಬಡ್ಡಿ ನೀಡುವ ಆಸೆ ತೋರಿಸಿ ದೇಶದ ವಿವಿಧೆಡೆಯು 30 ಸಾವಿರಕ್ಕೂ ಅಧಿಕ ಜನರ ವಂಚಿಸಿ 500 ಕೋಟಿ ರು. ಲಪಟಾಯಿಸಿದ 'ಹೈಬಾಕ್ಸ್ ಆ್ಯಪ್' ಹೆಸರಿನ ಅತಿದೊಡ್ಡ ಹಗರಣ ದೆಹಲಿಯಲ್ಲಿ ಬೆಳಕಿಗೆ ಬಂದಿದೆ. ಈ ಸಂಬಂಧ ದೆಹಲಿ ಪೊಲೀಸರು, ಹಿಂದಿ ಮತ್ತಿತರ ಭಾಷೆಗಳ ಚಲನಚಿತ್ರ ರಂಗದ ನಟಿ, ಜಾಹೀರಾತು ಕಲಾವಿದೆ ರಿಯಾ ಚಕ್ರವರ್ತಿ, ಟಿವಿ ಹಾಸ್ಯ ಕಲಾವಿದೆ ಭಾರತಿ ಹಾಗೂ ಉತ್ತರಾಖಂಡದ ಹಲ್ದಾನಿ ಮೂಲದ 'ಯು ಟ್ಯೂಬರ್' ಸೌರಭ್ ಜೋಶಿ ಎಂಬವರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಿದ್ದಾರೆ. ಹೈಬಾಕ್ಸ್ ವಂಚನೆ ಪ್ರಕರಣದಲ್ಲಿ ಹಲವಾರು ಸೋಷಿಯಲ್ ಮೀಡಿಯ ಪ್ರಭಾವಿಗಳಿಗೂ ನೋಟಿಸ್ ನೀಡಲಾಗಿದೆ. ಇವರೆಲ್ಲರೂ 'ಹೈಬಾಕ್ಸ್ ಆ್ಯಪ್' ಪರ ಪ್ರಚಾರ ಮಾಡಿ, ಜನರಿಗೆ ಆಮಿಷವೊಡ್ಡಿ ಹೂಡಿಕೆ ಮಾಡುವಂತೆ ಪ್ರಚೋದಿಸಿದ್ದಾರೆ ಎಂದು ಆರೋಪಿಸಲಾಗಿದೆ. ಹೈಬಾಕ್ಸ್ ಅಪ್ಲಿಕೇಶನ್ 'ಗೂಗಲ್ ಪ್ಲೇ' ಮತ್ತು 'ಆಪ್ ಸ್ಟೋರ್'ನಲ್ಲಿ ಲಭ್ಯವಿದೆ. ಸ್ಕ್ಯಾಮರ್‌ಗಳು ಬಳಕೆದಾರರು ಬಯಸಿದ ವಸ್ತುಗಳನ್ನು ರಹಸ್ಯ ಪೆಟ್ಟಿಗೆಗಳಲ್ಲಿರಿಸಿ ಲಾಭದಲ್ಲಿ ಮಾರಾಟ ಮಾಡಬಹುದು ಎಂದು ಆಮಿಷವೊಡ್ಡಿದ್ದಾರೆ. ಬಾಕ್ಸ್ ತೆರೆಯಲು ಸಾಧ್ಯವಾಗದಿದ್ದರೆ ಹೂಡಿಕೆ ಮಾಡಿದ ಹಣದ ಜತೆಗೆ ಮಾಸಿಕ ಶೇ.30ರಿಂದ ಶೇ.150ರಷ್ಟು ಬಡ್ಡಿ ಕೊಡುವ ಆಮಿಷ ಒಡ್ಡಲಾಗಿತ್ತು ಎಂದು ಆರೋಪಿಸಲಾಗಿದೆ.

ಇಸ್ರೇಲ್ ದಾಳಿಗೆ ಹಮಾಸ್ ಕಮಾಂಡರ್ ಕುಟುಂಬ ನಾಶ

ಬೈರೂತ್: ಲೆಬನಾನ್‌ನ ಉತ್ತರ ಭಾಗದ ಮೇಲೆ ಇಸ್ರೇಲ್ ಸೇನೆ ನಡೆಸಿದ ರಾಕೆಟ್ ದಾಳಿಯಲ್ಲಿ ಹಮಾಸ್ ಉಗ್ರ ಸಂಘಟನೆಯ 'ಖಾಸ್ಸಂ ಬ್ರಿಗೇಡ್'ನ ಕಮಾಂಡರ್ ಸಯೀದ್ ಅತಲ್ಲಾಹ್ ಅಲಿ ಹತನಾಗಿದ್ದಾನೆ. ಬಹುಮಹಡಿ ಕಟ್ಟಡದಲ್ಲಿ 6ನೇ ಮಹಡಿಯಲ್ಲಿ ಪತ್ನಿ, ಇಬ್ಬರು ಪುತ್ರಿಯರ ಜತೆ ವಾಸವಾಗಿದ್ದ ಸಯೀದ್‌ನನ್ನು ಗುರಿಯಾಗಿ ಇಸ್ರೇಲ್ ನಡೆಸಿದ ದಾಳಿಯಲ್ಲಿ ಸಯೀದ್ ಜತೆಗೆ ಪತ್ನಿ, ಪುತ್ರಿಯರಿಬ್ಬರೂ ಹತರಾಗಿದ್ದಾರೆ ಎಂದು ಲೆಬನಾನ್ ಆಡಳಿತ ಶನಿವಾರ ಮಾಹಿತಿ ನೀಡಿದೆ. ಇದೇ ವೇಳೆ ಲೆಬನಾನ್‌ನ ಹಿಜ್ಬುಲ್ಲಾ ಉಗ್ರರ ನೆಲೆಗಳ ಮೇಲೆಯೂ ಇಸ್ರೇಲ್ ಸೇನೆಯ ದಾಳಿ ಮುಂದುವರಿದಿದೆ.

- ಕಮಾಂಡರ್ ಸಯೀದ್ ಅತಲ್ಲಾಹ್ ಅಲಿ, ಪತ್ನಿ, 2 ಪುತ್ರಿಯರ ಸಾವು
- 8 ಮಹಡಿಗಳ ಕಟ್ಟಡದ 6ನೇ ಮಹಡಿಗೆ ಗುರಿಯಿಟ್ಟ ಇಸ್ರೇಲ್ ಕ್ಷಿಪಣಿ

ದಕ್ಷಿಣ ಲೆಬನಾನ್‌ನತ್ತ ಗುರಿ: ಈವರೆಗೂ ಉತ್ತರ ಲೆಬನಾನ್‌ನಲ್ಲಿನ ಹಿಜ್ಬುಲ್ಲಾ ಉಗ್ರ ಸಂಘಟನೆ ನೆಲೆಗಳನ್ನಷ್ಟೇ ಗುರಿಯಾಗಿಸಿ ದಾಳಿ ಮಾಡುತ್ತಿದ್ದ ಇಸ್ರೇಲ್ ಸೇನೆ, ಈಗ ದಕ್ಷಿಣ ಲೆಬನಾನ್ ಮೇಲೆಯೂ ರಾಕೆಟ್‌ಗಳನ್ನು ಹಾರಿಸಲಾ ರಂಭಿಸಿದೆ. ದಕ್ಷಿಣ ಲೆಬನಾನ್‌ನಲ್ಲಿ ಹಿಜ್ಬುಲ್ಲಾ ಉಗ್ರರು ಸುರಂಗಗಳನ್ನು ನಿರ್ಮಿಸಿಕೊಂಡಿದ್ದಾರೆ. ಅವುಗಳಲ್ಲಿ ಅಪಾರ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿದ್ದಾರೆ. ಕೆಲವೆಡೆ ನಿಯಂತ್ರಣಾ ಕೊಠಡಿಗಳನ್ನೂ ಸ್ಥಾಪಿಸಿದ್ದಾರೆ ಎಂಬ ಗುಪ್ತಚರ ಮಾಹಿತಿ ಹಿನ್ನೆಲೆಯಲ್ಲಿ ಇಸ್ರೇಲ್ ಸೇನೆ, ಆ ಭಾಗದತ್ತಲೂ ತನ್ನ ರಾಕೆಟ್ ಲಾಂಚರ್‌ಗಳನ್ನು ತಿರುಗಿಸಿದೆ. ಶುಕ್ರವಾರ-ಶನಿವಾರದ ರಾಕೆಟ್ ದಾಳಿಗೆ ಹಿಜ್ಬುಲ್ಲಾ ಉಗ್ರರ ಹಲವಾರು ಸುರಂಗ ನೆಲೆಗಳು ಧ್ವಂಸಗೊಂಡಿವೆ. ನಿಯಂತ್ರಣ ಕೊಠಡಿಗಳು ನಾಶವಾಗಿವೆ. ಹಲವು ಉಗ್ರರೂ ಹತರಾಗಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ ಎಂದು ಇಸ್ರೇಲ್ ಸೇನೆ ತಿಳಿಸಿದೆ.

9.4 ಕೋಟಿ ರೈತರ ಖಾತೆಗೆ 20,000 ಕೋಟಿ ರು. ಜಮೆ

ದೆಹಲಿ: ಪ್ರಧಾನ ಮಂತ್ರಿ(ಪಿಎಂ) ಕಿಸಾನ್ ಸಮ್ಮಾನ್ ನಿಧಿ ಯೋಜನೆಯ 18ನೇ ಕಂತನ್ನು ಪ್ರಧಾನಿ ನರೇಂದ್ರ ಮೋದಿ ಶನಿವಾರ ಮಹಾರಾಷ್ಟ್ರದಲ್ಲಿ ಬಿಡುಗಡೆ ಮಾಡಿದರು. ಆ ಮೂಲಕ ಕೃಷಿ ಬೆಂಬಲ ಮತ್ತು ಗ್ರಾಮೀಣ ಅಭಿವೃದ್ಧಿಗೆ ಸರ್ಕಾರದ ಬದ್ಧತೆಯನ್ನು ಬಲಪಡಿಸಿದರು. ಇದರೊಂದಿಗೆ ದೇಶದೆಲ್ಲೆಡೆಯ 9.4 ಕೋಟಿ ರೈತರ ಬ್ಯಾಂಕ್ ಖಾತೆಗಳಿಗೆ 20,000 ಕೋಟಿ ರು. ಜಮಾ ಆಗಿದೆ. 732 ಕೃಷಿ ವಿಜ್ಞಾನ ಕೇಂದ್ರ(ಕೆವಿಕೆ)ಗಳು, 1 ಲಕ್ಷಕ್ಕೂ ಅಧಿಕ ಪ್ರಾಥಮಿಕ ಕೃಷಿ ಸಹಕಾರ ಸಂಘಗಳು ಮತ್ತು ವೆಬ್‌ಕಾಸ್ಟ್ ಮೂಲಕ ದೇಶಾದ್ಯಂತದ 5 ಲಕ್ಷ ಸಾಮಾನ್ಯ ಸೇವಾ ಕೇಂದ್ರಗಳ 2.5 ಕೋಟಿ ರೈತರು ಈ ಕಾರ್ಯಕ್ರಮದಲ್ಲಿ ಭಾಗಿಯಾದರು. ಈ ಸಂದರ್ಭ ಮಹಾರಾಷ್ಟ್ರ ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್, ಕೇಂದ್ರ ಕೃಷಿ ಸಚಿವರಾದ ಶಿವ ರಾಜ್ ಸಿಂಗ್ ಚೌಹಾಣ್, ರಾಜೀವ್ ರಂಜನ್ ಸಿಂಗ್, ಮಹಾರಾಷ್ಟ್ರ ಸಿಎಂ ಏಕನಾಥ್ ಶಿಂದೆ, ಡಿಸಿಎಂಗಳಾದ ಅಜಿತ್ ಪವಾರ್ ಮತ್ತು ದೇವೇಂದ್ರ ಫಡ್ನವಿಸ್ ಮತ್ತಿತರರಿದ್ದರು. 2019ರ ಫೆ.24 ರಂದು ಪ್ರಾರಂಭವಾದ ಪಿಎಂ ಕಿಸಾನ್ ಸಮ್ಮಾನ್ ನಿಧಿ ಯೋಜನೆ, ವರ್ಷದಲ್ಲಿ 3 ಸಮಾನ ಕಂತುಗಳಲ್ಲಿ ಸಣ್ಣ ಹಿಡುವಳಿದಾರ ರೈತರ ಬ್ಯಾಂಕ್ ಖಾತೆಗೆ 6,000 ರೂ.ಗಳನ್ನು ಒದಗಿಸುತ್ತದೆ. 18ನೇ ಕಂತಿ ನೊಂದಿಗೆ ಈವರೆಗೆ 3.45 ಲಕ್ಷ ಕೋಟಿ ರು. ರೈತರ ಖಾತೆಗೆ ಸೇರಿದೆ.

ನಗರ ನಕ್ಸಲರಿಂದ ಕಾಂಗ್ರೆಸ್ ಚಾಲ್ತಿ: ಮೋದಿ ಟೀಕಾಸ್ತ್ರ

ಮುಂಬೈ: 'ನಗರ ನಕ್ಸಲರ ಗ್ಯಾಂಗ್'ನಿಂದಲೇ ಕಾಂಗ್ರೆಸ್ ಪಕ್ಷ ಚಾಲ್ತಿಯಲ್ಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೊಸದೇ ಆದ ಟೀಕಾಸ್ತ್ರ ಪ್ರಯೋಗಿಸಿದ್ದಾರೆ.



ಮಹಾರಾಷ್ಟ್ರದ ವಾಶಿಮ್ ಜಿಲ್ಲೆ ಯಲ್ಲಿ ವಿವಿಧ ಯೋಜನೆಗಳಿಗೆ ಶನಿ ವಾರ ಚಾಲನೆ ನೀಡಿದ ನಂತರ ರಾಜ್ಯ ಸರಕಾರ ಆಯೋಜಿಸಿದ್ದ ಸಭೆಯನ್ನು ದ್ದೇಶಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ಅಜೆಂಡಾ (ಕಾರ್ಯಸೂಚಿ) ಅಪಾಯಕಾರಿ ಯಾಗಿದೆ. ಅದನ್ನು ನಾಶಮಾಡುವುದಕ್ಕಾಗಿ ದೇಶದ ಮತದಾ ರರೆಲ್ಲರೂ ಒಟ್ಟಾಗಬೇಕು ಎಂದು ಕರೆ ನೀಡಿದರು. ಆಗಷ್ಟೇ, ದೇಶವನ್ನು ವಿಭಜಿಸಬೇಕೆಂಬ ಕಾಂಗ್ರೆಸ್ ಕಾರ್ಯಸೂಚಿ ವಿಫಲಗೊಳ್ಳುತ್ತದೆ ಎಂದರು. ಭಾರತಕ್ಕಾಗಿ ಒಳ್ಳೆಯ ಉದ್ದೇಶ ವನ್ನು ಹೊಂದಿರದ ಜನರೊಂದಿಗೆ ಕಾಂಗ್ರೆಸ್ ಎಷ್ಟು ನಿಕಟ ವಾಗಿ ನಿಂತಿದೆ ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕಿದೆ. ಇತ್ತೀಚೆಗಷ್ಟೇ ದೆಹಲಿಯಲ್ಲಿ ಸಾವಿರಾರು ಕೋಟಿ ರು. ಮೌಲ್ಯದ ಮಾದಕದ್ರವ್ಯವನ್ನು ವಶಪಡಿಸಿಕೊಳ್ಳಲಾಗಿದೆ. ಅದರಲ್ಲಿ ಕಾಂಗ್ರೆಸ್ ಯುವ ಘಟಕದ ಮುಖಂಡರೊಬ್ಬರೇ ಕಿಂಗ್‌ಪಿನ್ ಆಗಿದ್ದರು ಎನ್ನುವ ಆರೋಪ ಕೇಳಿಬಂದಿದೆ. ಯುವಕರನ್ನು ಮಾದಕ ದ್ರವ್ಯ ಜಾಲದ ಕಡೆಗೆ ತಳ್ಳಿ, ಅದರಿಂದ ಬರುವ ಕೋಟ್ಯಂತರ ಹಣದಿಂದ ಚುನಾವಣೆ ಎದುರಿಸಲು ಆ ಪಕ್ಷ ಬಯಸಿದೆ ಎಂದು ಪ್ರಧಾನಿ ಗಂಭೀರ ಆರೋಪ ಮಾಡಿದರು.

ಭಾರತ ಕಡಲಲ್ಲಿ 10 ದಿನ ಅಮೆರಿಕ, ಜಪಾನ್, ಆಸ್ಟ್ರೇಲಿಯ ಭಾಗಿ

ಕ್ವಾಡ್ ರಾಷ್ಟ್ರ ನೌಕಾಪಡೆ ಜಂಟಿ ತಾಲೀಮು

ದೆಹಲಿ: ಇಂಡೋ-ಫೆಸಿಫಿಕ್ ಸಾಗರ ಪ್ರದೇಶದಲ್ಲಿ ಚೀನಾ ಪ್ರಾಬಲ್ಯವನ್ನು ತಗ್ಗಿಸುವ ಉದ್ದೇಶದಿಂದ ರಚನೆಯಾದ 4 ರಾಷ್ಟ್ರಗಳ 'ಕ್ವಾಡ್' ಒಕ್ಕೂಟ, ಜಂಟಿ ಸಮರಾಭ್ಯಾಸದಲ್ಲೂ ಭಾಗಿಯಾಗಿದೆ.

ಭಾರತದ ಆತಿಥ್ಯದಲ್ಲಿ 10 ದಿನಗಳ ಬಹುರಾಷ್ಟ್ರೀಯ ನೌಕಾಪಡೆಗಳ ಜಂಟಿ ತಾಲೀಮು ನಡೆಯಲಿದೆ. ಅ.8ರಿಂದ 18ರವರೆಗೆ ಮಲಬಾರ್ ನೌಕಾಪಡೆ ತರಬೇತಿ ವಿಶಾಖಪಟ್ಟಣಂ ನಲ್ಲಿ ನಡೆಯಲಿದೆ. ಭಾರತ, ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯ ದೇಶಗಳ ನೌಕಾಪಡೆಗಳು ಸಕ್ರಿಯವಾಗಿ ಭಾಗಿಯಾಗಲಿವೆ. 1992ರಲ್ಲಿ ಅಮೆರಿಕ-ಭಾರತ ನೌಕಾಪಡೆ ಜಂಟಿ ನೌಕಾ ಸಮರಾಭ್ಯಾಸ ಆರಂಭವಾಗಿದೆ. ಮಲಬಾರ್ ನೌಕಾಭ್ಯಾಸ ಪರಸ್ಪರರ ಕಾರ್ಯಸಾಮರ್ಥ್ಯ ಹೆಚ್ಚಿಸುವ, ಪರಸ್ಪರ ತಿಳಿವಳಿಕೆ ವೃದ್ಧಿಸುವ ಮತ್ತು ಹಿಂದೂ ಮಹಾಸಾಗರ- ಇಂಡೋ- ಪೆಸಿಫಿಕ್ ಭಾಗದಲ್ಲಿ ಕಡಲ ಸವಾಲುಗಳನ್ನು ಪರಿಹರಿಸುವ ಗುರಿ ಹೊಂದಿದೆ. ಸಮರಾಭ್ಯಾಸದಲ್ಲಿ ಮಾರ್ಗದರ್ಶಿ ಕ್ಷಿಪಣಿ ವಿಧ್ವಂಸಕಗಳು, ಬಹುಪಯೋಗಿ ಯುದ್ಧನೌಕೆಗಳು, ಜಲಾಂತರ್ಗಾಮಿ ನೌಕೆಗಳು, ಯುದ್ಧ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳು ಭಾಗವಹಿಸುತ್ತವೆ. ಜಲಾಂತರ್ಗಾಮಿ ನಾಶಕ ಯುದ್ಧ, ವಾಯು ಸಮರ ಮತ್ತು ವಾಯು ರಕ್ಷಣಾ ವ್ಯಾಯಾಮ ಸಂಕೀರ್ಣ ಕಾರ್ಯಾಚರಣೆ ಸಮುದ್ರದಲ್ಲಿ ನಡೆಯಲಿವೆ.

ವಯನಾಡ್ ಪರಿಹಾರ ವಿಳಂಬಕ್ಕೆ ಹೈ ಬೇಸರ

ಎರ್ನಾಕುಲಂ: ವಯನಾಡ್ ಭೂಕುಸಿತದಲ್ಲಿ ಸಂತ್ರಸ್ತರಾದವರಿಗೆ ಪರಿಹಾರ ವಿಳಂಬವಾಗಿರುವ ಸಂಬಂಧ 'ಅಮಿಕಸ್ ಕ್ಯೂರಿ'(ನ್ಯಾಯಾಲಯದ ಮಿತ್ರ) ಸಲ್ಲಿಸಿದ ವರದಿ ಆಧರಿಸಿ ಕೇರಳ ಹೈಕೋರ್ಟ್, ಕೇಂದ್ರ ಸರಕಾರದಿಂದ ಪ್ರತಿಕ್ರಿಯೆ ಬಯಸಿದೆ. ನೈಸರ್ಗಿಕ ವಿಪತ್ತು ಪರಿಹಾರ ನಿಧಿ(ಎನ್‌ಡಿಆರ್‌ಎಫ್) ಮತ್ತು ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿ (ಪಿಎಂಎನ್‌ಆರ್‌ಎಫ್)ನಿಂದ ಪರಿಹಾರದ ಹಣ ಬಿಡುಗಡೆ ಮಾಡದೇ ಇರುವುದಕ್ಕೆ ಪ್ರತಿಕ್ರಿಯೆ ನೀಡುವಂತೆ ಕೇಂದ್ರಕ್ಕೆ ಶನಿವಾರ ಸೂಚನೆ ನೀಡಿದೆ. ವಿಪತ್ತು ಸಂಭವಿಸಿ 57 ದಿನಗಳೇ ಕಳೆದಿದ್ದರೂ ಯಾವುದೇ ಅನುದಾನವನ್ನು ಕೇಂದ್ರ ಸರಕಾರ ನೀಡಿಲ್ಲ ಎಂದು 'ಅಮಿಕಸ್ ಕ್ಯೂರಿ' ಹಿರಿಯ ವಕೀಲ ರಂಜಿತ್ ತಂಬಾನ್ ತಮ್ಮ ವರದಿಯಲ್ಲಿ ಗಮನ ಸೆಳೆದಿದ್ದಾರೆ.

ಇದು ಎನ್‌ಡಿಆರ್‌ಎಫ್ ಮತ್ತು ಪಿಎಂಎನ್‌ಆರ್‌ಎಫ್ ಪರಿಹಾರ ವಿತರಣೆ ಪ್ರಕ್ರಿಯೆ ನಿಯಂತ್ರಿಸುವ ಅಧಿಕಾರಿಗಳು ಗಮನಿಸಬೇಕಾದ ಅಂಶ ಎಂದು ಹೈಕೋರ್ಟ್ ಬೆಟ್ಟು ಮಾಡಿದೆ. ಕೇಂದ್ರದ ಸಹಾಯಕ ಸಾಲಿಸಿಟರ್ ಜನರಲ್ ಅವರು ಈ ಬಗ್ಗೆ ಪ್ರತಿಕ್ರಿಯಿಸಲು ಅ.18 ರವರೆಗೆ ಸಮಯ ಕೋರಿದರು.

ವಯನಾಡ್ ಭೂಕುಸಿತದಲ್ಲಿ 400ಕ್ಕೂ ಹೆಚ್ಚು ಜನರು ಸಾವಿಗೀಡಾಗಿ, ಸಾವಿರಾರು ಜನರು ನಿರಾಶ್ರಿತರಾಗಿದ್ದಾರೆ.

ಸಮಾಚಾರ ಸಣ್ಣದಲ್ಲ

ನರಸಿಂಹಾನಂದ ಮಹಾರಾಜ್ ಬಂಧನ

ಲಖನೌ: ಪ್ರವಾದಿ ಮುಹಮ್ಮದ್ ಮತ್ತು ಕುರಾನ್ ಕುರಿತು ಆಕ್ಷೇಪಾರ್ಹ ಹೇಳಿಕೆ ನೀಡಿದ ಆರೋಪದಡಿ ದಾಸ್ನಾ ದೇವಾಲಯದ ಪೀಠಾಧಿಪತಿ ಯತಿ

ನರಸಿಂಹಾನಂದ ಮಹಾ ರಾಜ್ ಅವರನ್ನು ಪೊಲೀಸರು ಬಂಧಿಸಿದ್ದಾರೆ. ನರಸಿಂಹಾನಂದ ಮಹಾ ರಾಜ್ ಹೇಳಿಕೆ ಖಂಡಿಸಿ ಉತ್ತರ ಪ್ರದೇಶದ ಹಲವು ನಗರಗಳಲ್ಲಿ ಹಿಂಸಾತ್ಮಕ ಪ್ರತಿಭಟನೆಗಳನ್ನು ನಡೆಸಲಾಗಿತ್ತು. ಪ್ರತಿಭಟನಾಕಾರರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದ್ದರು. ನರಸಿಂಹಾನಂದ ವಿರುದ್ಧ ಈವರೆಗೆ ಮೂರು ಪ್ರಕರಣಗಳು ದಾಖಲಾಗಿವೆ.

ಸಿಲಿಂಡರ್ ಸ್ಫೋಟ: ಅಗ್ನಿವೀರ ಮೃತ

ಜೈಪುರ: ರಾಜಸ್ಥಾನದ ಭರತಪುರದಲ್ಲಿ ಶನಿವಾರ ನಡೆದ ಸೇನಾ ಅಣಕು ಕಾರ್ಯಾಚರಣೆ ಸಂದರ್ಭದಲ್ಲಿ ಬೆಂಕಿ ನಂದಿಸಲು ಬಳಸುವ ಅಧಿಕ ಒತ್ತಡದ ಸಿಲಿಂಡರ್ ಸ್ಫೋಟಗೊಂಡ ಪರಿಣಾಮ 24 ವರ್ಷದ ಅಗ್ನಿವೀರ ಒಬ್ಬರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತ ಅಗ್ನಿ ವೀರರನ್ನು ಸೌರಭ್ ಪಾಲ್ ಎಂದು ಗುರುತಿಸಲಾಗಿದೆ. ಗೋಲ್ಪುರ ಸೇನಾ ವಲಯದಲ್ಲಿ ಈ ತರಬೇತಿ ಕಾರ್ಯಾಗಾರ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಅಗ್ನಿಶಾಮಕ ಸಿಲಿಂಡರ್ ಸ್ಫೋಟಗೊಂಡು ಸೌರಭ್ ತೀವ್ರವಾಗಿ ಗಾಯಗೊಂಡಿದ್ದರು. ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಅವರು ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ ಎಂದು ಡಿಎಸ್ಪಿ ಅನಿಲ್ ಜಸೋರಿಯಾ ತಿಳಿಸಿದ್ದಾರೆ. ಸೌರಭ್ ಅವರು ಉತ್ತರ ಪ್ರದೇಶದ ಭಾಖರಾ ಗ್ರಾಮದವರಾಗಿದ್ದಾರೆ.

ಎಕ್ಸಿಟ್‌ಪೋಲ್‌ಗಳು ಟೈಮ್ ಪಾಸ್: ಅಬ್ದುಲ್ಲಾ

ಜಮ್ಮು/ಶ್ರೀನಗರ: ಜಮ್ಮು-ಕಾಶ್ಮೀರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ನ್ಯಾಷನಲ್ ಕಾನ್ಫರೆನ್ಸ್ ಮೈತ್ರಿ ಮುನ್ನಡೆ ಗಳಿಸುವ ಸಾಧ್ಯತೆ ಇದೆ ಎಂದು ಬಹುತೇಕ ಸಮೀಕ್ಷೆಗಳು ಹೇಳಿವೆ. ಇನ್ನೊಂದೆಡೆ ಬಿಜೆಪಿ ಸರಕಾರ ರಚಿಸುವ ನಿರೀಕ್ಷೆಯಲ್ಲಿದೆ. ತಮ್ಮ ಪಕ್ಷದ ಪರ ಚುನಾವಣೋತ್ತರ ಸಮೀಕ್ಷೆಗಳು ಭವಿಷ್ಯ ನುಡಿದರೂ ಎಕ್ಸಿಟ್ ಪೋಲ್‌ಗಳನ್ನು ತಳ್ಳಿ ಹಾಕಿರುವ ಎನ್‌ಸಿ ಪಕ್ಷದ ಉಪಾಧ್ಯಕ್ಷ ಒಮರ್ ಅಬ್ದುಲ್ಲಾ, ಇದು ಕೇವಲ 'ಟೈಮ್ ಪಾಸ್' ಎಂದಿದ್ದಾರೆ. 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, 'ಇತ್ತೀಚೆಗಿನ ಸಾರ್ವತ್ರಿಕ ಚುನಾವಣೆಯಲ್ಲಿ ವೈಫಲ್ಯದ ಬಳಿಕ ಚಾನೆಲ್‌ಗಳು ಮತಗಟ್ಟೆ ಸಮೀಕ್ಷೆಗಳ ಬಗ್ಗೆ ತಲೆಕೆಡಿಸಿಕೊಳ್ಳುತ್ತಿರುವುದು ಅಚ್ಚರಿ ಮೂಡಿಸಿದೆ. ಚಾನೆಲ್, ಸಾಮಾಜಿಕ ಮಾಧ್ಯಮ, ವಾಟ್ಸ್‌ಆ್ಯಪ್ ಇತ್ಯಾದಿಗಳಲ್ಲಿ ಬರುವ ಸಮೀಕ್ಷೆಗಳನ್ನು ನಾನು ನಿರಾಕರಿಸುತ್ತೇನೆ. ಏಕೆಂದರೆ ಅಕ್ಟೋಬರ್ 8ರಂದು ಸ್ಪಷ್ಟ ಅಂಕಿ ಗೊತ್ತಾಗಲಿದೆ' ಎಂದು ಹೇಳಿದ್ದಾರೆ.

ವಿಶ್ವದ 2ನೇ ಶ್ರೀಮಂತ ಜುಕರ್‌ಬರ್ಗ್

ಎಲೋನ್ ಮಸ್ಕ್‌ಗೆ ಮೊದಲ ಸ್ಥಾನ | 3ನೇ ಸ್ಥಾನಕ್ಕೆ ಕುಸಿದ ಜೆಫ್ ಬೆಜೋಸ್

ವಾಷಿಂಗ್ಟನ್: ಮೆಟಾ ಸಂಸ್ಥೆಯ ಮಾಲೀಕ ಮಾರ್ಕ್ ಜುಕರ್‌ಬರ್ಗ್ 'ವಿಶ್ವದ ಎರಡನೇ ಸಿರಿವಂತ' ಎನಿಸಿಕೊಂಡಿದ್ದಾರೆ. ಆ ಮೂಲಕ ಅಮೆಜಾನ್ ಸಿಇಒ ಜೆಫ್ ಬೆಜೋಸ್ ಮತ್ತು ಎಲ್‌ವಿಎಂಎಚ್ ಸಿಇಒ ಬರ್ನಾರ್ಡ್ ಅರ್ನಾಲ್ಟ್ ಅವರನ್ನು ಹಿಂದಿಕ್ಕಿದ್ದಾರೆ.

ಬ್ಲೂಮ್‌ಬರ್ಗ್ ಬಿಲಿಯನೇರ್ ಅಂಕಿ ಅಂಶಗಳ ಪ್ರಕಾರ, ಟೆಸ್ಲಾ ಸಿಇಒ ಎಲೋನ್ ಮಸ್ಕ್ ಮೊದಲ ಸ್ಥಾನದಲ್ಲಿದ್ದಾರೆ. ಮೆಟಾ ಸಿಇಒ ಮಾರ್ಕ್ ಅವರ ಆಸ್ತಿ ಮೌಲ್ಯ 206 ಶತಕೋಟಿ ಡಾಲರ್‌ಗೆ (17.3 ಲಕ್ಷ ಕೋಟಿ ರು.) ತಲುಪಿದ್ದರಿಂದ 2ನೇ ಸ್ಥಾನಕ್ಕೇರಿದ್ದಾರೆ. ಮಸ್ಕ್ 256 ಶತಕೋಟಿ ಡಾಲರ್ (21.5 ಲಕ್ಷ ಕೋಟಿ ರು.) ಆಸ್ತಿಯೊಂದಿಗೆ ಅಗ್ರಸ್ಥಾನ ಪಡೆದುಕೊಂಡಿದ್ದಾರೆ.

2024ರಲ್ಲಿ ಜುಕರ್‌ಬರ್ಗ್ ಅವರ ಸಂಪತ್ತು 78.1 ಶತಕೋಟಿ ಡಾಲರ್‌ಗಳಷ್ಟು(6.5 ಲಕ್ಷ ಕೋಟಿ ರು.) ಹೆಚ್ಚಾಗಿದೆ. ಇದು ಅವರಿಗೆ 200 ಶತಕೋಟಿ ಡಾಲರ್ ಕ್ಲಬ್ ಸೇರಲು ಅನುವು ಮಾಡಿಕೊಟ್ಟಿದೆ. ಈ ಗುಂಪಿನಲ್ಲಿ ಮಸ್ಕ್ ಮತ್ತು ಬೆಜೋಸ್ ಇದ್ದರು. ಬೆಜೋಸ್ 205 ಶತಕೋಟಿ ಡಾಲರ್ (17.3 ಲಕ್ಷ ಕೋಟಿ ರು.)ಗಿಂತ ಸ್ವಲ್ಪ ಹಿಂದೆ ಇದ್ದಾರೆ. ಅರ್ನಾಲ್ಟ್ ಅವರ ಸಂಪತ್ತು 193 ಶತಕೋಟಿ ಡಾಲರ್ (16.2 ಲಕ್ಷ ಕೋಟಿ ರು.)ಗೆ ಇಳಿದಿದೆ. ಹೀಗಾಗಿ ಅವರು 200 ಶತಕೋಟಿ ಡಾಲರ್ ಕ್ಲಬ್‌ನಿಂದ ಹೊರಬಿದ್ದಿದ್ದಾರೆ.

2004ರಲ್ಲಿ ಫೇಸ್‌ಬುಕ್ ಸ್ಥಾಪಿಸಿದ ಜುಕರ್‌ಬರ್ಗ್, ತಮ್ಮ ಸಂಪತ್ತಿನ ಹೆಚ್ಚಿನ ಭಾಗವನ್ನು ಮೆಟಾ ಕಂಪನಿಗಳ ಸಮೂಹದಿಂದಲೇ ಪಡೆಯುತ್ತಿದ್ದಾರೆ. ಮೆಟಾ ಷೇರುಗಳು ಈ ವರ್ಷ ಶೇ.72ರಷ್ಟು ಮೌಲ್ಯ ಹೆಚ್ಚಾಗಿವೆ. ಫೇಸ್‌ಬುಕ್, ಇನ್ಸ್ಟಾಗ್ರಾಮ್, ಥ್ರೆಡ್ಸ್ ಮತ್ತು ಮೆಸೇಜಿಂಗ್ ಅಪ್ಲಿಕೇಶನ್ ವಾಟ್ಸಾಪ್‌ನಂಥ ಸಾಮಾಜಿಕ ಮಾಧ್ಯಮ ವೇದಿಕೆಗಳನ್ನು ಮೆಟಾ ಹೊಂದಿದೆ.

ಸೆ.25ರಂದು ನಡೆದ ಮೆಟಾ ಕನೆಕ್ಟ್ 2024 ಕಾರ್ಯಕ್ರಮದಲ್ಲಿ, 40 ವರ್ಷದ ಶತಕೋಟಿ ಮೆಟಾ ಕೃತಕ ಬುದ್ಧಿಮತ್ತೆ(ಎಐ) ಜಾಗತಿಕವಾಗಿ ಹೆಚ್ಚು ವ್ಯಾಪಕವಾಗಿ ಬಳಸಲಾಗುವ ಡಿಜಿಟಲ್ ಮಾಧ್ಯಮವಾಗುವ ಹಾದಿಯಲ್ಲಿದೆ ಎಂದು ಘೋಷಿಸಿದ್ದರು. ಈ ಸೇವೆಯು 50 ಕೋಟಿ ಸಕ್ರಿಯ ಬಳಕೆದಾರರನ್ನು ಹೊಂದುವುದರತ್ತ ಸಮೀಪಿಸುತ್ತಿದೆ. ಯುರೋಪ್ ಒಕ್ಕೂಟದಂತಹ ದೊಡ್ಡ ಮಾರುಕಟ್ಟೆಗಳಲ್ಲಿ ಮತ್ತಷ್ಟು ವಿಸ್ತರಣೆ ನಿರೀಕ್ಷಿಸಲಾಗಿದೆ ಎಂದು ಅವರು ಉಲ್ಲೇಖಿಸಿದರು.

ಆಸ್ತಿ ಮೌಲ್ಯ ಹೆಚ್ಚಳ

ಇತರ ಟೆಕ್ ನಾಯಕರು ಸಹ ಈ ವರ್ಷ ತಮ್ಮ ಆದಾಯದಲ್ಲಿ ಗಮನಾರ್ಹ ಬೆಳವಣಿಗೆ ಕಂಡಿದ್ದಾರೆ. ಜೆನ್ಸನ್ ಎನ್ವಿಡಿಯಾ ಸಿಇಒ ಹುವಾಂಗ್ ಮತ್ತು ಒರಾಕಲ್ ಸಹ-ಸಂಸ್ಥಾಪಕ ಲ್ಯಾರಿ ಎಲಿಸನ್ 2024 ರಲ್ಲಿ ತಮ್ಮ ಒಟ್ಟು ಮೌಲ್ಯಕ್ಕೆ ಕ್ರಮವಾಗಿ 63.5 ಶತಕೋಟಿ ಡಾಲರ್ (5.3 ಲಕ್ಷ ಕೋಟಿ ರು.) ಮತ್ತು 55.9 ಶತಕೋಟಿ ಡಾಲರ್ (4.7 ಲಕ್ಷ ಕೋಟಿ ರು.) ಸೇರಿಸಿಕೊಂಡಿದ್ದಾರೆ.

ರಾಜ್ಯದಲ್ಲಿ 1.50 ಕೋಟಿ ಸದಸ್ಯತ್ವ ಗುರಿ: ಶೋಭಾ

ಬೆಂಗಳೂರು: ಬಿಜೆಪಿಯಿಂದ ರಾಜ್ಯದಲ್ಲಿ 1.50 ಕೋಟಿ ಸದಸ್ಯತ್ವ ನೋಂದಣಿ ಗುರಿ ಹೊಂದಲಾಗಿದೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು. ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ಇಸ್ಕಾನ್ ಶ್ರೀಕೃಷ್ಣ ಮಂದಿರದಲ್ಲಿ ಪಕ್ಷದ ಸಾಮಾಜಿಕ ಜಾಲತಾಣ ವಿಭಾಗದಿಂದ ಬೆಂಗಳೂರು ಉತ್ತರ ಜಿಲ್ಲಾ ಬಿಜೆಪಿ ಸದಸ್ಯತ್ವ ಅಭಿಯಾನ -2024ಕ್ಕೆ ಚಾಲನೆ ನೀಡಿ ಮಾತನಾಡಿದರು. ಪಕ್ಷದ ವತಿಯಿಂದ 2014ರಲ್ಲಿ ನಡೆಸಲಾದ ಮೊದಲ ಸದಸ್ಯತ್ವ ಅಭಿಯಾನದಲ್ಲಿ ದೇಶದಲ್ಲಿ 11 ಕೋಟಿಗೂ ಅಧಿಕ, ರಾಜ್ಯದಲ್ಲಿ 74.88 ಲಕ್ಷ ಸದಸ್ಯರು, 2019ರ 2ನೇ ಸದಸ್ಯತ್ವ ಅಭಿಯಾನದಲ್ಲಿ ರಾಷ್ಟ್ರದಲ್ಲಿ 18 ಕೋಟಿ ಹಾಗೂ ರಾಜ್ಯದಲ್ಲಿ 1.01 ಕೋಟಿ ಸದಸ್ಯರನ್ನು ನೋಂದಾಯಿಸಲಾಗಿದೆ ಎಂದರು. ಮಾಜಿ ಸಚಿವ ಕೆ.ಗೋಪಾಲಯ್ಯ ಮಾತನಾಡಿ, ಮಹಾಲಕ್ಷ್ಮಿ ಲೇಔಟ್‌ನ ಎಲ್ಲ 8ವಾರ್ಡ್‌ಗಳಲ್ಲಿ ಪ್ರತಿ ಬೂತ್‌ಮಟ್ಟದಲ್ಲಿ ಈಗಾಗಲೇ ಸಭೆ ಮಾಡಿ ಕ್ಷೇತ್ರದಲ್ಲಿ ಅತೀ ಹೆಚ್ಚು ಸದಸ್ಯತ್ವ ಮಾಡಿಸಲಾಗುವುದು ಎಂದರು.

ರಾಜ್ಯೋತ್ಸವ ಪ್ರಶಸ್ತಿ: 49 ಸದಸ್ಯರ ಸಮಿತಿ ಪ್ರಕಟ

ಬೆಂಗಳೂರು: 69ನೇ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸಾಧಕರನ್ನು ಆಯ್ಕೆ ಮಾಡಲು ವಿವಿಧ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿರುವ ಸದಸ್ಯರನ್ನೊಳಗೊಂಡ ಸಲಹಾ ಸಮಿತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಚಿಸಿದೆ.

ವಿಧಾನಸೌಧದ ಮಹಾದ್ವಾರದ ಮೆಟ್ಟಿಲುಗಳ ಮೇಲೆ ನ.1ರಂದು ಕರ್ನಾಟಕ ಸಂಭ್ರಮ 50ರ ಸಮಾರೋಪ ಸಮಾರಂಭ ನಡೆಯಲಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ನೇತೃತ್ವದ ಸಲಹಾ ಸಮಿತಿ 36 ಸದಸ್ಯರು ಮತ್ತು 13 ಪದನಿಮಿತ್ತ ಸದಸ್ಯರನ್ನು ಒಳಗೊಂಡಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಅಧ್ಯಕ್ಷತೆಯಲ್ಲಿನ ಸಮಿತಿಯಲ್ಲಿ ನಟ ರವಿಚಂದ್ರನ್, ಹಂಸಲೇಖ ಸೇರಿ ಒಟ್ಟು 49 ಸದಸ್ಯರಿದ್ದಾರೆ. ಈ ಸಲಹಾ ಸಮಿತಿ ಮುಂದಿನ ವಾರದಿಂದಲೇ ಪರಿಶೀಲನೆ ನಡೆಸಲಿದ್ದು, ಕಲೆ, ಸಾಹಿತ್ಯ, ಜಾನಪದ, ಕೃಷಿ, ಪರಿಸರ, ವಿಜ್ಞಾನ, ತಂತ್ರಜ್ಞಾನ, ಕ್ರೀಡೆ, ಸಂಗೀತ ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರನ್ನು ಗುರುತಿಸಿ 69 ಸಾಧಕರಿಗೆ ಈ ಬಾರಿ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗುತ್ತದೆ.

ಡಾ. ಸಿ.ಎಸ್. ದ್ವಾರಕನಾಥ್, ರವಿಕುಮಾರ್, ಸದಾಶಿವ ಮರ್ಜಿ, ಬಾಬು ಭಂಡಾರಿಗಲ್, ಶೈಲಜಾ ಹಿರೇಮಠ, ರಂಜಾನ್ ದರ್ಗಾ, ವೈ.ಸಿ. ಭಾನುಮತಿ, ಪ್ರೊ.ಜಿ. ಶರಣಪ್ಪ, ಪ್ರೊ.ದೊಣ್ಣೆಗೌಡರು ವೆಂಕಣ್ಣ, ಹಿರೇಮಗಳೂರು ಕಣ್ಣನ್, ಪುಷ್ಪ ಶಿವಕುಮಾರ, ಡಾ. ರತ್ನಮ್ಮ, ಶರಣಪ್ಪ ವಡಿಗೇರಿ, ಡಾ. ತಿಮ್ಮಪ್ಪ, ಕ್ಯಾಪ್ಟನ್ ಕೃಷ್ಣಮೂರ್ತಿ ಸಮಿತಿಯ ಸದಸ್ಯರಾಗಿದ್ದಾರೆ.

ಪಂ.ಎಂ. ವೆಂಕಟೇಶ್ ಕುಮಾರ್, ಡಾ.ಕೆ.ಕುಮಾರ್, ಸಿ.ಬಸವಲಿಂಗಯ್ಯ, ಪಿ.ತಿಪ್ಪೆಸ್ವಾಮಿ, ಶ್ರೀರಾಮ ಇಟ್ಟಣ್ಣನವರ, ಸಿಹಿ ಕಹಿ ಚಂದ್ರು, ಜಯಣ್ಣಚಾರ್ ಮಲ್ಲಿಕಾರ್ಜುನ ಹೊಸಪಾಳ್ಯ, ಎಚ್.ಕೆ. ಶ್ರೀಕಂಠ, ಸಿ.ಚಂದ್ರಶೇಖರ್, ಹಂಸಲೇಖ, ರವಿಚಂದ್ರನ್, ಪ್ರೊ.ರಾಧಕೃಷ್ಣ, ಪ್ರೊ. ಕೃಷ್ಣೆಗೌಡ, ಸಿದ್ದರಾಜು, ನಾಗೇಶ್ ಹೆಗಡೆ, ಕೆ. ಚನ್ನಪ್ಪ, ಎ.ಬಿ. ಸುಬ್ಬಯ್ಯ, ಜೋಸೆಫ್ ಹೂವರ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸರಕಾರದ ಕಾರ್ಯದರ್ಶಿಗಳು ಸಮಿತಿಯ ಸದಸ್ಯರಾಗಿದ್ದಾರೆ.

ಬಗರ್ ಹುಕುಂ ಅರ್ಜಿ ವಿಲೇವಾರಿಗೆ 2 ತಿಂಗಳ ಗಡುವು

ಅರ್ಜಿ ವಿಲೇವಾರಿಗೆ ಆಸಕ್ತಿ ತೋರದಿದ್ದರೆ, ಕಾನೂನು ಕ್ರಮ ಎದುರಿಸಿ: ಸಚಿವ ಕೃಷ್ಣ ಬೈರೇಗೌಡ

ಬೆಂಗಳೂರು: ಬಗರ್ ಹುಕುಂ ಅರ್ಜಿ ವಿಲೇವಾರಿ ಕೆಲಸಗಳಿಗೆ ಸಂಬಂಧಿಸಿ ಸಕಾರಾತ್ಮಕ ಕೆಲಸ ನಿರ್ವಹಿಸದ ತಹಶೀಲ್ದಾರರ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಚಿವ ಕೃಷ್ಣ ಬೈರೇಗೌಡ ಎಚ್ಚರಿಸಿದ್ದಾರೆ.

ವಿಕಾಸಸೌಧದಲ್ಲಿ ರಾಜ್ಯದ ಎಲ್ಲಾ ತಹಶೀಲ್ದಾರ್ ಹಾಗೂ ಉಪ ವಿಭಾಗಾಧಿಕಾರಿಗಳ ಜತೆಗೆ ವಿಡಿಯೋ ಸಂವಾದ ಮೂಲಕ ಸಭೆ ನಡೆಸಿ ಮಾತನಾಡಿದ ಅವರು, ಬಗರ್ ಹುಕುಂ ಅರ್ಜಿಗಳ ವಿಲೇವಾರಿಗೆ ಅಧಿಕಾರಿಗಳು ಈಗಲೂ ಮೀನಾಮೇಷ ಎಣಿಸುವುದು ಸರಿಯಲ್ಲ. ಎಲ್ಲ ತಹಶೀಲ್ದಾರರಿಗೆ ಅಕ್ಟೋಬರ್ ಹಾಗೂ ನವೆಂಬರ್ ಅಂತ್ಯದವರೆಗೆ ಎರಡು ತಿಂಗಳ ಗಡುವು ನೀಡುತ್ತಿದ್ದು, ಈ ಅವಧಿಯಲ್ಲೂ ಬಗರ್ ಹುಕುಂ ಅರ್ಜಿಗಳ ಸಮರ್ಪಕ ವಿಲೇವಾರಿ ಹಾಗೂ ಅರ್ಹ ರೈತರಿಗೆ ಭೂ ಮಂಜೂರು ಆಗದಿದ್ದರೆ, ಸಂಬಂಧಿತ ತಹಶೀಲ್ದಾರರಿಗೆ ನೋಟಿಸ್ ಜಾರಿಗೊಳಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದ್ದಾರೆ.

ಹೆಚ್ಚುವರಿ ಗೋಮಾಳ ಇದ್ದರೆ ಮಂಜೂರು: ಪಶು ಮತ್ತು ಜಾನುವಾರುಗಳ ಸಂಖ್ಯೆಗೆ ಅನುಗುಣವಾಗಿ ಕಾಯ್ದಿರಿಸಿದಷ್ಟು ಭೂಮಿ ಹೊರತುಪಡಿಸಿ ಹೆಚ್ಚುವರಿ ಗೋಮಾಳ ಇದ್ದರೆ ಅದನ್ನು ರೈತ ಫಲಾನುಭವಿಗಳಿಗೆ ಮಂಜೂರು ಮಾಡಬಹುದು. ಸಮೀಕ್ಷೆಯ ಪ್ರಕಾರ ಎಷ್ಟು ಜಾನುವಾರುಗಳಿವೆ, ಅವುಗಳಿಗೆ ಎಷ್ಟು ಜಮೀನು ಅಗತ್ಯವಿದೆ ಎಂದು ನಿಗದಿಯಾಗಿದ್ದು, ಅದಕ್ಕಿಂತಲೂ ಹೆಚ್ಚುವರಿ ಭೂಮಿ ಇದ್ದರೆ ಅದನ್ನು ಜಿಲ್ಲಾಧಿಕಾರಿಗಳಿಂದ ಗುರುತಿಸಿ ರೈತರಿಗೆ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಿ. ಗೋಮಾಳ ಎಂಬ ಕಾರಣಕ್ಕೆ ರೈತರ ಅರ್ಜಿಗಳನ್ನು ತಿರಸ್ಕಾರ ಮಾಡಬಾರದು. ಈ ರೀತಿ ಮಾಡಿದರೆ ನ್ಯಾಯಾಲಯದಲ್ಲಿ ನಾವು ಕಷ್ಟ ಎದುರಿಸಬೇಕಾಗುತ್ತದೆ. ಎಲ್ಲಾ ತಾಲ್ಲೂಕುಗಳ ತಹಸೀಲ್ದಾರರು ತಮ್ಮಲ್ಲಿರುವ ಜಾನುವಾರುಗಳ ಸಂಖ್ಯೆಗಳನ್ನು ಪರಿಗಣನೆಗೆ ತೆಗೆದುಕೊಂಡು ಭೂಮಿ ಲಭ್ಯತೆ ಗುರುತಿಸಬೇಕು ಎಂದರು.

ವಿಕಾಸಸೌಧದಲ್ಲಿ ರಾಜ್ಯದ ಎಲ್ಲಾ ತಹಶೀಲ್ದಾರ್ ಹಾಗೂ ಉಪ ವಿಭಾಗಾಧಿಕಾರಿಗಳ ಜತೆಗೆ ವಿಡಿಯೊ ಸಂವಾದ ನಡೆಸಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ. ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯ ಹಾಗೂ ಕಂದಾಯ ಆಯುಕ್ತ ಸುನೀಲ್ ಕುಮಾರ್ ಉಪಸ್ಥಿತರಿದ್ದರು.

ಆನ್‌ಲೈನ್ ಸೇವೆಯಡಿ ಇತ್ಯರ್ಥ

ಅರಣ್ಯ ಭೂಮಿ ಅಲ್ಲದೇ ಇರುವ ಜಾಗಗಳನ್ನು ಅರ್ಹ ಅರ್ಜಿದಾರರಿಗೆ ಮಂಜೂರು ಮಾಡಲು ಗ್ರಾಮ ಲೆಕ್ಕಾಧಿಕಾರಿಗಳು ಸ್ಥಳ ಪರಿಶೋಧನೆ ನಡೆಸಿ ಮರು ಪೋಡಿ ಮಾಡಲು ಕ್ರಮ ಕೈಗೊಳ್ಳಬೇಕು. ಬಗರ್ ಹುಕುಂ ಸಮಿತಿಯ ಮುಂದೆ ಅರ್ಜಿ ಪರಿಶೀಲನೆಗೆ ಒಳಪಟ್ಟಾಗ ನಕ್ಷೆ, ಪೋಡಿ ಬೇಕು ಎಂದು ಪರದಾಡಬೇಡಿ. ಮುಂಚಿತವಾಗಿಯೇ ಈ ಬಗ್ಗೆ ಎಚ್ಚರಿಕೆ ವಹಿಸಿ ಎಂದು ಸೂಚನೆ ನೀಡಿದರು. ಅರ್ಜಿಗಳನ್ನು ದೀರ್ಘ ಕಾಲದವರೆಗೂ ಬಾಕಿ ಇಡುವುದು ಸರಿಯಲ್ಲ. ಆನ್‌ಲೈನ್ ಸೇವೆಯಡಿ ಕಾಲಮಿತಿಯಲ್ಲೆ ಎಲ್ಲವೂ ಇತ್ಯರ್ಥಗೊಳ್ಳಬೇಕು. ಜನ ಬಂದು ಸಲಾಂ ಹೊಡೆಯಲಿ ಎಂದು ಕಾಯುತ್ತಾ ಕುಳಿತುಕೊಳ್ಳುವುದು ಒಳ್ಳೆಯದಲ್ಲ ಎಂದು ಖಾರವಾಗಿ ಎಚ್ಚರಿಸಿದ್ದಾರೆ.

ಅಧಿಕಾರಿಗಳ ಕೆಲಸ ತೃಪ್ತಿಕರವಾಗಿಲ್ಲ

ಅರ್ಹ ಭೂ ಹೀನರಿಗೆ ಜಮೀನು ಮಂಜೂರು ಮಾಡಬೇಕು ಎಂಬುದು ಸರಕಾರದ ಮಹತ್ವಾಕಾಂಕ್ಷಿ ಯೋಜನೆ. ಇದೇ ಕಾರಣಕ್ಕೆ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬರುತ್ತಿದ್ದಂತೆ ಅಕ್ರಮ ಸಕ್ರಮ ಯೋಜನೆಯ ಅಡಿ ಬಗರ್ ಹುಕುಂ ಅರ್ಜಿ ಆಹ್ವಾನಿಸಲಾಯಿತು. ಅಲ್ಲದೆ, ಕಳೆದ ಒಂದು ವರ್ಷದಿಂದ ಸ್ವತಃ ನಾನು ಎಲ್ಲಾ ಜಿಲ್ಲೆಗಳಿಗೂ ಪ್ರವಾಸ ಮಾಡುತ್ತಾ, ಬಗರ್ ಹುಕುಂ ಸಂಬಂಧಿತ ಕೆಲಸಗಳಿಗೆ ಹೆಚ್ಚಿನ ಆದ್ಯತೆ ನೀಡಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಆದರೂ, ಕೆಲವು ಅಧಿಕಾರಿಗಳ ಕೆಲಸ ತೃಪ್ತಿಕರವಾಗಿಲ್ಲ. ಬಡವರ ರೈತರ ಪರ ಕೆಲಸ ಮಾಡಲು ಅಸಡ್ಡೆ ತೋರುತ್ತಿದ್ದಾರೆ ಎಂದು ಅಸಮಾಧಾನ ಹೊರಹಾಕಿದರು.

ರವೀಂದ್ರ ಕಲಾಕ್ಷೇತ್ರದ ಮಹಿಳಾ ವಿಶ್ರಾಂತಿ ಕೊಠಡಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕೇಂದ್ರ, ಕನ್ನಡ ಕ್ರಿಯಾ ಸಮಿತಿಯು ಕನ್ನಡ ಹೋರಾಟಗಾರ ದಿವಂಗತ ರಫಾಯಲ್ ರಾಜ್ ಅವರ ಶ್ರದ್ಧಾಂಜಲಿ ಸಭೆ ಏರ್ಪಡಿಸಿತ್ತು. ಡಾ. ಮನು ಬಳಿಗಾರ್, ಲೇಖಕಿ ರಿಟಾ ರೀನಿ, ವ.ಚ.ಚನ್ನೇಗೌಡ ಮತ್ತಿತ್ತರಿದ್ದರು.

ಮುಡಾ ಹಗರಣ: ಸಿಬಿಐ ತನಿಖೆಗೆ ಬಿಜೆಪಿ ಆಗ್ರಹ

ಹಂಪನಾ ಭಾಷಣ ದಸರಾಗೆ ಕಪ್ಪುಚುಕ್ಕೆ ಇದ್ದಂತೆ | ವಿಧಾನ ಪರಿಷತ್ ಸದಸ್ಯ ರವಿಕುಮಾರ್ ವಾಗ್ದಾಳಿ

ಬೆಂಗಳೂರು: ಮೈಸೂರು ಮುಡಾದಲ್ಲಿ ನಿವೇಶನಗಳ ಹಂಚಿಕೆ ಕುರಿತು ತನಿಖೆ ನಡೆಯಲಿ, ಮುಖ್ಯಮಂತ್ರಿ ಪ್ರಕರಣವನ್ನು ಸಿಬಿಐಗೆ ತನಿಖೆಗೆ ಒಪ್ಪಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಒತ್ತಾಯಿಸಿದರು.

ಬಿಜೆಪಿ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದಸರಾ ಉದ್ಘಾಟನೆಯ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ರಾಜೀನಾಮೆ ಕೊಡುವ ಅಗತ್ಯ ಇಲ್ಲ. ಕುಮಾರಸ್ವಾಮಿ ರಾಜೀನಾಮೆ ಕೊಡುತ್ತಾರಾ ಎಂದು ಜಿ.ಟಿ.ದೇವೇಗೌಡರು ಮಾತನಾಡಿದ್ದಾರೆ. ಜಿ.ಟಿ.ದೇವೇಗೌಡರಿಗೆ ತಾವು ಸಿದ್ದರಾಮಯ್ಯರ ಪರ, ಬೆನ್ನೆಲುಬಾಗಿ ನಿಲ್ಲದಿದ್ದರೆ ತಮ್ಮ ಸೈಟುಗಳೂ ಹೋಗಬಹುದೆಂಬ ಭಯ ಆಗಿರಬಹುದು. ಅವರ ಒಳಮನಸ್ಸು ಸಿದ್ದರಾಮಯ್ಯರು ರಾಜೀನಾಮೆ ಕೊಡಬೇಕೆಂದೇ ಇದೆ ಎಂದರು.

ಮೈಸೂರು ಅರಸರ ಸಾಧನೆ ಪ್ರಸ್ತಾಪಿಸಬೇಕಿತ್ತು: ದಸರಾ ಉದ್ಘಾಟಕ ಹಂಪ ನಾಗರಾಜಯ್ಯ ಅವರು ಸಾಹಿತ್ಯ, ದಸರಾ, ಮೈಸೂರು ರಾಜರ ಮಾದರಿ ಸಾಧನೆಗಳ ಕುರಿತು ಮಾತನಾಡಬೇಕಿತ್ತು. ಹೈದರಾಬಾದ್ ನಿಜಾಮರಿಗೆ ಹೋಲಿಸಿದರೆ ಮೈಸೂರಿನ ಒಡೆಯರ್ ಅವರ ಆಡಳಿತ ಅತ್ಯಂತ ಸುವ್ಯವಸ್ಥಿತವಾಗಿತ್ತು. ಅಭಿವೃದ್ಧಿಗೆ ಪೂರಕವಾಗಿತ್ತು. ಕೆಆರ್ ಎಸ್ ಕಟ್ಟಿದವರು ಯಾರು? ಬೆಂಗಳೂರಿಗೆ ಅನೇಕ ಕೊಡುಗೆ ಕೊಟ್ಟವರು ಯಾರು? ಹೀಗೆ ಅನೇಕ ವಿಚಾರಗಳಲ್ಲಿ ಒಡೆಯರ್ ಅವರ ಆಡಳಿತ ದೇಶಕ್ಕೆ ಮಾದರಿಯಾಗಿತ್ತು ಎಂದರು.

ಸಚಿವ ದಿನೇಶ್ ಗುಂಡೂರಾವ್ ಅವರನ್ನು ತಕ್ಷಣವೇ ಸಚಿವ ಸ್ಥಾನದಿಂದ ವಜಾ ಮಾಡಬೇಕು. ಸ್ವಾತಂತ್ರ್ಯಕ್ಕಾಗಿ ಹೋರಾಡಿ 28 ವರ್ಷ ಜೈಲುವಾಸ ಅನುಭವಿಸಿದ ಸಾವರ್ಕರ್ ಕುರಿತು ಟೀಕಿಸಿದ ದಿನೇಶ್ ಗುಂಡೂರಾವ್ ಕ್ಷಮೆ ಯಾಚಿಸಬೇಕು. ನೇತಾಜಿ ಸುಭಾಷ್‌ಚಂದ್ರ ಬೋಸ್ ಮತ್ತು ಸಾವರ್ಕರ್ ಅವರು ಕ್ರಾಂತಿಕಾರಕ ಹೋರಾಟದಿಂದ ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದರು. ಇದನ್ನು ದಿನೇಶ್ ಓದಲಿ ಎಂದು ರವಿಕುಮಾರ್ ಸಲಹೆ ನೀಡಿದರು.

ಹಂಪನಾ ಅವರು ತಮ್ಮ ಸಾಹಿತ್ಯದ ಪ್ರಶಸ್ತಿ, ಕೃತಿಗಳಿಗೆ ಕಪ್ಪು ಚುಕ್ಕಿ ಆಗುವಂತೆ ಮಾತನಾಡಿದ್ದಾರೆ. ಅವರಿಗೆ ಈ ಥರ ಭಾಷಣ ಮಾಡಲು ನಾಚಿಕೆ ಆಗಬೇಕಿತ್ತು. ಸರಕಾರದ ಬಗ್ಗೆ ಹೊಗಳುಭಟರಂತೆ ಅವರು ಭಾಷಣ ಮಾಡಿದ್ದಾರೆ. ಇದು ದಸರಾಕ್ಕೆ ಕಪ್ಪುಚುಕ್ಕೆ ಇಟ್ಟಂತೆ.

-ಎನ್.ರವಿಕುಮಾರ್ ವಿಧಾನ ಪರಿಷತ್ ಸದಸ್ಯ.

ದೇವನಹಳ್ಳಿ: ರೈಲು ನಿಲ್ದಾಣ ಕಾಮಗಾರಿ ಪರಿಶೀಲನೆ

ಬೆಂಗಳೂರು: ಬೆಂಗಳೂರಿಗೆ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಭೇಟಿ ನೀಡಿದ್ದು, ದೇವನಹಳ್ಳಿಯ ರೈಲ್ವೆ ನಿಲ್ದಾಣದಿಂದ ಕಂಟೋನ್ಮೆಂಟ್ ರೈಲು ನಿಲ್ದಾಣದವರೆಗೆ ರೈಲ್ವೆ ಇಲಾಖೆಯಿಂದ ನಡೆಸಲಾಗುತ್ತಿರುವ ಕಾಮಗಾರಿಗಳ ಪರಿಶೀಲನೆ ನಡೆಸಿದರು.

ಪರಿಶೀಲನೆ ಬಳಿಕ ಮಾತನಾಡಿದ ಅವರು, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಯಲಹಂಕವರೆಗೆ ರೈಲ್ವೆ ಲೈನ್ ಮಾಡಲಾಗುವುದು. ಬೆಂಗಳೂರು ಕಂಟೋನ್ಮೆಂಟ್ ಬಹಳ ಮಹತ್ವದ ನಿಲ್ದಾಣ. ಎಸ್‌ಎಂವಿ ಬಳಿಕ ಕಂಟೋನ್ಮೆಂಟ್, ಯಶವಂತಪುರ ರೈಲ್ವೆ ನಿಲ್ದಾಣ ಮರು ನಿರ್ಮಾಣ ಕಾಮಗಾರಿ ನಡೆಯುತ್ತಿದೆ. 18 ಸಾವಿರ ಸ್ಕ್ವೇರ್ ಮೀಟರ್ ಅಗಲೀಕರಣ ಮಾಡಲಾಗಿದೆ. ಅಂಡರ್ ಗ್ರೌಂಡ್ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗುತ್ತಿದೆ. ಡಿಸೆಂಬರ್ ಕೊನೆಗೆ ಕಾಮಗಾರಿ ಸಂಪೂರ್ಣ ಆಗಲಿದೆ ಎಂದರು.

ಮೈಸೂರು ಟು ಬೆಂಗಳೂರು ನಡುವೆ ನಮೋ ರ್‍ಯಾಪಿಡ್ ರೈಲು ಓಡಾಟ ಮಾಡುತ್ತಿದೆ. ಇದೀಗ ತುಮಕೂರು ಟು ಬೆಂಗಳೂರು ನಮೋ ರ್‍ಯಾಪಿಡ್ ರೈಲು ಆರಂಭ ಮಾಡುತ್ತೇವೆ. ಬೆಂಗಳೂರು ಸಿಟಿಗೆ 200ಕಿಮೀ ಇರುವ ಪ್ರಮುಖವಾದ ನಗರಗಳಿಗೆ ನಮೋ ರ್‍ಯಾಪಿಡ್ ರೈಲು ಸದ್ಯದಲ್ಲಿ ಆರಂಭ ಮಾಡುತ್ತೇವೆ ಎಂದು ಹೇಳಿದರು. ಕೇಂದ್ರ ರಾಜ್ಯ ಖಾತೆ ಸಚಿವ ವಿ ಸೋಮಣ್ಣ, ಸಂಸದ ಪಿಸಿ ಮೋಹನ್ ಮತ್ತು ರೈಲ್ವೆ ಅಧಿಕಾರಿಗಳು ಇದ್ದರು.

ಬೆಂಗಳೂರಿಗೆ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಭೇಟಿ ನೀಡಿದ್ದು, ದೇವನಹಳ್ಳಿಯ ರೈಲ್ವೆ ನಿಲ್ದಾಣದಿಂದ ಕಂಟೋನ್ಮೆಂಟ್ ರೈಲು ನಿಲ್ದಾಣದವರೆಗೆ ರೈಲ್ವೆ ಇಲಾಖೆಯಿಂದ ನಡೆಸಲಾಗುತ್ತಿರುವ ಕಾಮಗಾರಿಗಳ ಪರಿಶೀಲನೆ ನಡೆಸಿದರು.

ಮುಖ್ಯಮಂತ್ರಿ ಕುರ್ಚಿ ಅಲುಗಾಡುತ್ತಿದೆ: ಪಿ.ರಾಜೀವ್

ಕುರ್ಚಿ ಮೇಲೆ ಟವೆಲ್ ಹಾಕಲು ಹಲವು ಸಚಿವರ ಪ್ರಯತ್ನ

ಬೆಂಗಳೂರು: ಸಿದ್ದರಾಮಯ್ಯನವರು ಜಗ್ಗಲ್ಲ, ಬಗ್ಗಲ್ಲ ಎನ್ನುತ್ತಿದ್ದವರು ಆತ್ಮಸಾಕ್ಷಿಯ ಬಗ್ಗೆ ಮಾತನಾಡುತ್ತಿದ್ದು, ಅವರ ಕುರ್ಚಿ ಅಲುಗಾಡುತ್ತಿರುವುದನ್ನು ಅದು ತೋರಿಸುತ್ತದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಹೇಳಿದರು.

ಮಲ್ಲೇಶ್ವರದ ಬಿಜೆಪಿ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ. ರಾಜ್ಯದ ಅಭಿವೃದ್ಧಿ ಬಗ್ಗೆ ಒತ್ತು ಕೊಡಬೇಕಾದ ಸಚಿವರು ತಮ್ಮ ನಾಯಕರ ಭೇಟಿ ಕಾರ್ಯಕ್ರಮ (ಲೀಡರ್ ರನ್ ಪ್ರೋಗ್ರಾಮ್) ಇಟ್ಟುಕೊಂಡಿದ್ದಾರೆ. ಸತೀಶ್ ಜಾರಕಿಹೊಳಿ ಅವರು ಮಲ್ಲಿಕಾರ್ಜುನ ಖರ್ಗೆ ಭೇಟಿ ಮಾಡಿದ್ದಾರೆ. ಎಂ.ಬಿ.ಪಾಟೀಲ್, ಡಾ. ಪರಮೇಶ್ವರ್, ಎಚ್.ಸಿ. ಮಹದೇವಪ್ಪ ಅವರು ಕುರ್ಚಿ ಮೇಲೆ ಟವೆಲ್ ಹಾಕಲು ಪ್ರಯತ್ನ ಮಾಡುತ್ತಿರುವುದು, ಇವೆಲ್ಲವೂ ಕಾಂಗ್ರೆಸ್ಸಿನಲ್ಲಿ ಯಾವ ಕ್ಷಣದಲ್ಲಿ ಬೇಕಾದರೂ ಯಾವ ಬದಲಾವಣೆ ಬೇಕಿದ್ದರೂ ಆಗಬಹುದು ಎಂಬುದರ ಸೂಚನೆ ಎಂದರು.

ಅಭಿವೃದ್ಧಿ ಸಂಪೂರ್ಣ ನೆಲಕಚ್ಚಿ ಹೋಗಿರುವುದು ರಾಜ್ಯದ ದುರದೃಷ್ಟ. ಸಚಿವರು ತಮ್ಮ ಆಕಾಂಕ್ಷೆ ವ್ಯಕ್ತಪಡಿಸುವುದರಲ್ಲಿ, ಅದಕ್ಕೆ ಒಳಸಂಚು ರೂಪಿಸುವುದರಲ್ಲಿ ಮಗ್ನರಾಗಿದ್ದಾರೆ. ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ. ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯಿತಿ ಮುಚ್ಚಿ ಫ್ರೀಡಂ ಪಾರ್ಕಿನಲ್ಲಿ ಪ್ರತಿಭಟನೆಗೆ ಕುಳಿತಿದ್ದಾರೆ. ಪ್ರಿಯಾಂಕ್ ಖರ್ಗೆ ತಮ್ಮ ಇಲಾಖೆ ನಿರ್ವಹಿಸುವಲ್ಲಿ ಸೋತು ಹೋಗಿದ್ದು, ಇಲಾಖೆ ಬಗ್ಗೆ ಅರಾಜಕತೆ ಸೃಷ್ಟಿಸಿದ್ದಾರೆ ಎಂದು ಆರೋಪಿಸಿದರು.

ಗೃಹಲಕ್ಷ್ಮಿ ಯೋಜನೆಗೆ ಕಾಯಕಲ್ಪ ಸಿಕ್ಕಿಲ್ಲ. ಮಾಧ್ಯಮದವರು ಯಾವಾಗ ಕೇಳಿದರೂ ಇವತ್ತು- ನಾಳೆ ಹಣ ಬಿಡುಗಡೆ ಆಗಲಿದೆ ಎಂದು ಹೇಳುತ್ತ ದಿನ ದೂಡುತ್ತಿದ್ದಾರೆ. ಗೃಹಲಕ್ಷ್ಮಿಯ ಗ್ರಹ ಬಿಡಿಸಲು ನಾವು ಬೆಳಗಾವಿಯ ಲಕ್ಷ್ಮಿ ವಿನಂತಿ ಮಾಡುತ್ತೇವೆ ಎಂದರು.

ಸಚಿವರು ಸಿಎಂ ಕುರ್ಚಿಗೆ ಟವೆಲ್ ಹಾಕುವುದು, ಹೈಕಮಾಂಡ್ ಭೇಟಿ ಬಿಟ್ಟು ರಾಜ್ಯ, ಜಿಲ್ಲಾ ಪ್ರವಾಸ ಮಾಡಿ ಅಭಿವೃದ್ಧಿ ಕಡೆ ಒತ್ತು ಕೊಡಬೇಕು. ಮುಷ್ಕರ ನಿರತರ ಬೇಡಿಕೆ ಈಡೇರಿಸಿ ಜನಪರ ಕೆಲಸ ಮಾಡಬೇಕು. ಈಗ ಯಾರದೋ ಮದುವೆಯಲ್ಲಿ ಉಂಡವನೇ ಜಾಣ ಎಂಬ ಸ್ಥಿತಿ ಕಾಂಗ್ರೆಸ್ ನಿರ್ಮಿಸಿದೆ.

- ಪಿ.ರಾಜೀವ್ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ

ಮುಡಾ: ಪ್ರತಿಪಕ್ಷಗಳ ಕಿತಾಪತಿ

ಮೈಸೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ 50:50ರ ಅನುಪಾತದಲ್ಲಿ ನಿವೇಶನ ಹಂಚಿಕೆಯೇ ಕಾನೂನುಬದ್ಧ ಅಲ್ಲ ಎನ್ನುವ ಮೂಲಕ ಸಚಿವ ಚಲುವರಾಯಸ್ವಾಮಿ ಅಚ್ಚರಿ ಮೂಡಿಸಿದ್ದು, ನಿವೇಶನ ಹಂಚಿಕೆಯ ಅನುಪಾತ ಹೆಚ್ಚಾಗಿರುವ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಮುಡಾ ಹಗರಣದ ವಿಚಾರದಲ್ಲಿ ವಿರೋಧ ಪಕ್ಷದವರು ಕಿತಾಪತಿ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಅವರ ಪತ್ನಿ ನಿವೇಶನ ವಾಪಸ್ಸು ನೀಡಿದ್ದು, ತನಿಖೆ ನಿಲ್ಲಿಸಿ ಎಂದು ಹೇಳಿಲ್ಲ. ಆದರೆ ಸಿಎಂ ಪತ್ನಿ ನಿವೇಶನಗಳನ್ನು ವಾಪಸ್ ಕೊಟ್ಟಂತೆ ಎಲ್ಲರೂ ಸಹ ವಾಪಸ್ಸು ಕೊಡಬೇಕು ಎಂದ ಅವರು, ಈ ವಿಚಾರವಾಗಿ ನಾನು ಯಾರ ಹೆಸರು ಹೇಳುವುದಿಲ್ಲ. ಆದರೆ ಅಕ್ರಮವಾಗಿ, ಕಾನೂನುಬಾಹಿರವಾಗಿ ನಿವೇಶನಗಳನ್ನು ಪಡೆದಿರುವವರು ವಾಪಸ್ ನೀಡಲಿ. ಸರಕಾರ ವಾಪಸ್ ಪಡೆಯಬೇಕಾ ಎಂಬುದನ್ನು ನೋಡೋಣ ಎಂದ ಅವರು, ಸಿಎಂ ಸಿದ್ದರಾಮಯ್ಯ ಹಾಗೂ ಅವರ ಪತ್ನಿ ತಪ್ಪು ಮಾಡಿಲ್ಲ ಎಂದರು.

ಸಿಎಂ ಸ್ಥಾನ ಖಾಲಿ ಇಲ್ಲ: ಸಿಎಂ ಬದಲಾವಣೆ ಬಗ್ಗೆ ನಮ್ಮ ಪಕ್ಷದಲ್ಲಿ ಯಾವ ಚರ್ಚೆಯೂ ನಡೆದಿಲ್ಲ. ನಮ್ಮ ಸರ್ಕಾರ 5 ವರ್ಷ ಸುಭದ್ರವಾಗಿರಲಿದ್ದು, ಸಿಎಂ ಸ್ಥಾನದಿಂದ ರಾಜೀನಾಮೆ ನೀಡುವಂತೆ ಯಾರು ಕೇಳಿಲ್ಲ. ಡಿ.ಕೆ.ಶಿವಕುಮಾರ್ ಸಹ ಅದನ್ನೇ ಹೇಳಿದ್ದಾರೆ. ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರುಗಳು ಜೋಡೆತ್ತಿನಂತೆ ಸರ್ಕಾರವನ್ನು ಮುನ್ನಡೆಸುತ್ತಿದ್ದಾರೆ. ನಾನು ಸಿಎಂ ರೇಸ್‌ನಲ್ಲಿ ಇಲ್ಲ, ಸಿಎಂ ಸ್ಥಾನ ಖಾಲಿಯೂ ಇಲ್ಲ. ನನಗೆ ಒಳ್ಳೆಯ ಜವಾಬ್ದಾರಿಯನ್ನು ನೀಡಿದ್ದು, ಅದನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಿರುವೆ. ಅಲ್ಲದೇ ಖರ್ಗೆ, ಜಾರಕಿಹೊಳಿ ಅವರ ಭೇಟಿಗೆ ವಿಶೇಷ ಅರ್ಥವನ್ನು ಕಲ್ಪಿಸುವುದು ಬೇಡ ಎಂದು ಹೇಳಿದರು.

ಆ್ಯಂಬುಲೆನ್ಸ್ ಸುಗಮ ಸಂಚಾರಕ್ಕೆ ಇ-ಪಾತ್ ಆ್ಯಪ್

ಬೆಂಗಳೂರು: ನಗರದಲ್ಲಿ ವಾಹನ ದಟ್ಟಣೆಯಿಂದ ಆ್ಯಂಬುಲೆನ್ಸ್‌ಗಳ ಸಂಚಾರಕ್ಕೆ ತೊಂದರೆಯಾಗುವುದನ್ನು ತಡೆಗಟ್ಟಲು ಸಂಚಾರ ಪೊಲೀಸರು ಆ್ಯಂಬುಲೆನ್ಸ್‌ಗಳ ಸುಗಮ ಸಂಚಾರಕ್ಕಾಗಿ ಇ-ಪಾತ್ ಆ್ಯಪ್ ಸಿದ್ಧಪಡಿಸಿದ್ದಾರೆ.

ಶೀಘ್ರದಲ್ಲಿ ಪ್ರತ್ಯೇಕ ಇ-ಪಾತ್ ಆ್ಯಪ್ ಬಿಡುಗಡೆಗೆ ಬೆಂಗಳೂರು ಸಂಚಾರ ಪೊಲೀಸರು ಸಜ್ಜಾಗಿದ್ದಾರೆ. ಆ್ಯಪ್ ಬಿಡುಗಡೆಗೆ ಅಂತಿಮ ಹಂತದ ಸಿದ್ಧತೆ ನಡೆಯುತ್ತಿದೆ. ಈಗಾಗಲೇ ಖಾಸಗಿ ಆ್ಯಂಬುಲೆನ್ಸ್ ಮಾಲೀಕರು ಹಾಗೂ ಸಂಘಟನೆ ಜತೆ ಸಭೆ ನಡೆಸಲಾಗಿದೆ. ಈ ತಿಂಗಳಾಂತ್ಯದಲ್ಲಿ ಬೆಂಗಳೂರಿನ ಎಲ್ಲಾ ಆ್ಯಂಬುಲೆನ್ಸ್‌ಗಳಲ್ಲಿ ಆ್ಯಪ್ ಬಳಸುವಂತೆ ಕ್ರಮ ವಹಿಸಲಾಗಿದೆ.

ಇ-ಪಾತ್ ಆ್ಯಪ್ ಹೇಗೆ ಕೆಲಸ ಮಾಡುತ್ತೆ?: ಚಾಲಕ ಸ್ಮಾರ್ಟ್ ಫೋನ್‌ನಲ್ಲಿರುವ ಪ್ಲೇ ಸ್ಟೋರ್‌ನಲ್ಲಿ ಇ-ಪಾತ್ ಆ್ಯಪ್ ಡೌನ್ ಲೋಡ್ ಮಾಡಿಕೊಳ್ಳಬೇಕು. ಚಾಲಕ ಆ್ಯಂಬುಲೆನ್ಸ್ ಎಲ್ಲಿಂದ ಎಲ್ಲಿಗೆ ಹೋಗುತ್ತೆ ಎಂದು ಮಾಹಿತಿ ಅಪ್ ಲೋಡ್ ಮಾಡಬೇಕು. ಯಾವ ಪ್ರಾಶಸ್ತ್ಯ ಇದೆ ಎಂದು ಮಾಹಿತಿ ನೀಡಬೇಕು. ತುಂಬಾ ತುರ್ತು ಇದ್ದರೆ ಮೊದಲ ಪ್ರಾಶಸ್ತ್ಯ ಗಂಭೀರ ಅಪಘಾತ, ಹೃದಯಾಘಾತ ಸೇರಿ ತುರ್ತು ಇರುವವರಿಗೆ ಮೊದಲ ಆದ್ಯತೆ. ಅಪ್‌ಲೋಡ್ ಆದ ಮಾಹಿತಿ ಸಂಚಾರ ನಿರ್ವಹಣ ಕೇಂದ್ರ ಸಿಬ್ಬಂದಿ ಹೋಗುತ್ತದೆ. ಪರಿಶೀಲಿಸಿ ಜಿಪಿಎಸ್ ಆಧಾರದಲ್ಲಿ ಸೂಕ್ತ ರಸ್ತೆ ಸೂಚಿಸುವ ವ್ಯವಸ್ಥೆ ಮಾಡಲಾಗುತ್ತದೆ. ಸಿಗ್ನಲ್‌ಗೆ ಅಂಬ್ಯುಲೆನ್ಸ್ ಬರುತ್ತಿದ್ದಂತೆ ಮಾಹಿತಿ ತಿಳಿಯುತ್ತದೆ. ಅದರ ಆಧಾರದಲ್ಲಿ ಸುಗಮ ಸಂಚಾರಕ್ಕೆ ಪೊಲೀಸರ ವ್ಯವಸ್ಥೆ ಮಾಡಲಾಗುತ್ತದೆ.



ರಾಜ್ಯ ವಕ್ಫ್ ಬೋರ್ಡ್ ವತಿಯಿಂದ ಹಜ್ ಭವನ ಆವರಣದಲ್ಲಿ ಆಯೋಜಿಸಲಾಗಿದ್ದ ಕಾರ್ಯ ಕ್ರಮದಲ್ಲಿ ಆಂಬುಲೆನ್ಸ್‌ಗಳಿಗೆ ಸಚಿವ ಜಮೀರ್ ಅಹ್ಮದ್ ಚಾಲನೆ ನೀಡಿದರು. ಸಿಎಂ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಮುಖ್ಯ ಸಚೇತಕ ಸಲೀಂ ಅಹ್ಮದ್, ರಾಜ್ಯಸಭೆ ಸದಸ್ಯ ನಾಸೀರ್ ಹುಸೇನ್, ವಕ್ಫ್ ಬೋರ್ಡ್ ಅಧ್ಯಕ್ಷ ಅನ್ವರ್ ಬಾಷಾ ಇದ್ದರು.

ಮುಂಬೈಗೆ ಒಲಿದ ಇರಾನಿ ಕಪ್

ಶೇಷ ಭಾರತ ತಂಡದ ಜತೆ ಡ್ರಾ | ಮೊದಲ ಇನ್ನಿಂಗ್ಸ್ ಆಧಾರದ ಮೇಲೆ ಗೆಲುವು

ಲಕ್ನೋ: ಅತ್ಯಂತ ರೋಚಕ ಹಂತ ತಲುಪಿದ್ದ ಭಾರತ ಇತರರು ಮತ್ತು ಮುಂಬೈ ನಡುವಣ ಇರಾನಿ ಕಪ್ ಡ್ರಾದಲ್ಲಿ ಅಂತ್ಯ ಕಂಡಿದೆ. ಆದರೆ, ಮೊದಲ ಇನ್ನಿಂಗ್ಸ್ ಮುನ್ನಡೆ ಆಧಾರದ ಮೇಲೆ ಅಜಿಂಕ್ಯ ರಹಾನೆ ಸಾರಥ್ಯದ ಮುಂಬೈ ಪ್ರಶಸ್ತಿ ತನ್ನದಾಗಿಸಿಕೊಂಡಿತು. ಈ ಮೂಲಕ 27 ವರ್ಷದ ಬಳಿಕ ಕಪ್ ಗೆದ್ದ ಸಾಧನೆ ಮಾಡಿತು. ಇದು ಮುಂಬೈಗೆ ಒಲಿದ 15ನೇ ಟ್ರೋಫಿಯಾಗಿದೆ. ಕೊನೆಯ ಬಾರಿಗೆ ಮುಂಬೈ ಕಪ್ ಜಯಿಸಿದ್ದು 1997-98 ರ ಋತುವಿನಲ್ಲಿ.

ಲಕ್ನೋದ ಎಕಾನಾ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ನಡೆಸಿದ ಮುಂಬೈ ಸರ್ಫರಾಜ್ ಖಾನ್(222★) ಅವರ ಅಜೇಯ ದ್ವಿಶತಕ ಮತ್ತು ನಾಯಕ ರಹಾನೆ(97) ಬಾರಿಸಿದ ಅರ್ಧಶತಕದ ನೆರವಿನಿಂದ 537 ರನ್ ಬಾರಿಸಿತು. ದಿಟ್ಟ ರೀತಿಯಲ್ಲೇ ಜವಾಬು ನೀಡಿದ ಶೇಷ ಭಾರತ, 4ನೇ ದಿನದಾಟದಲ್ಲಿ(ಶುಕ್ರವಾರ) 416ಕ್ಕೆ ಆಲೌಟ್ ಆಯಿತು. ನಾಯಕ ಅಭಿಮನ್ಯು ಈಶ್ವರನ್ 191 ರನ್, ಧ್ರುವ ಜುರೆಲ್ 93 ರನ್ ಬಾರಿಸಿದರು. ಮೊದಲ ಇನಿಂಗ್ಸ್‌ನ 121 ರನ್ ಮುನ್ನಡೆ ಸಾಧಿಸಿದ ಮುಂಬೈ ಅಂತಿಮ ದಿನವಾದ ಶನಿವಾರ 8 ವಿಕೆಟ್‌ಗೆ 329 ರನ್ ಗಳಿಸಿದ್ದ ವೇಳೆ ಪಂದ್ಯವನ್ನು ಡ್ರಾ ಎಂದು ಘೋಷಿಸಲಾಯಿತು. ಡ್ರಾ ಗೊಂಡರೂ ಮೊದಲ ಇನಿಂಗ್ಸ್ ಮುನ್ನಡೆ ಆಧಾರದಲ್ಲಿ ಮುಂಬೈ ಚಾಂಪಿಯನ್ ಪಟ್ಟ ಅಲಂಕರಿಸಿತು.

ದ್ವಿತೀಯ ಇನಿಂಗ್ಸ್‌ನಲ್ಲಿ ಮುಂಬೈ ಪರ ಮಿಂಚಿದ ಬ್ಯಾಟರ್‌ಗಳೆಂದರೆ ಪೃಥ್ವಿ ಶಾ(76) ಮತ್ತು ತನುಷ್ ಕೋಟ್ಯಾನ್(114) ಅಜೇಯ ಶತಕ ಬಾರಿಸಿದರು. ಇವರ ಜತೆಗಾರ ಮೋಹಿತ್ ಅವಸ್ತಿ(51) ಕೂಡ ಅರ್ಧಶತಕ ಬಾರಿಸಿ ಅಜೇಯರಾಗಿ ಉಳಿದರು.

ಹೆಚ್ಚು ಬಾರಿ ಇರಾನಿ ಟ್ರೋಫಿ ಗೆದ್ದ ತಂಡ

1959-60ರಿಂದ ನಡೆಯುತ್ತಿರುವ ಈ ಟೂರ್ನಿಯಲ್ಲಿ ರೆಸ್ಟ್ ಆಫ್ ಇಂಡಿಯಾ 30 ಬಾರಿ ಪ್ರಶಸ್ತಿ ಗೆದ್ದು ಅಗ್ರಸ್ಥಾನ ಪಡೆದಿದೆ. ಮುಂಬೈ 15 ಪ್ರಶಸ್ತಿ ಗೆದ್ದು ದ್ವಿತೀಯ ಸ್ಥಾನದಲ್ಲಿದೆ. ಮೂರನೇ ಸ್ಥಾನ ಕರ್ನಾಟಕಕ್ಕೆ. ರಾಜ್ಯ ತಂಡ 6 ಬಾರಿ ಚಾಂಪಿಯನ್ ಆಗಿದೆ. ಉಳಿದಂತೆ ಡೆಲ್ಲಿ 3, ರೈಲ್ವೇಸ್ 2, ವಿದರ್ಭ 2, ಸೌರಾಷ್ಟ್ರ 2, ಹೈದರಾಬಾದ್, ತಮಿಳುನಾಡು ಮತ್ತು ಹರಿಯಾಣ ತಲಾ 1 ಬಾರಿ ಪ್ರಶಸ್ತಿ ಗೆದ್ದಿವೆ.

ಸಂಕ್ಷಿಪ್ತ ಸ್ಕೋರ್:

ಮುಂಬೈ 1ನೇ ಇನ್ನಿಂಗ್ಸ್ 537 ಮತ್ತು 2ನೇ ಇನ್ನಿಂಗ್ಸ್ 329/8 (ಪೃಥ್ವಿ ಶಾ 76, ತನುಷ್ ಕೋಟ್ಯಾನ್ 114★ ಮೋಹಿತ್ ಅವಸ್ತಿ 51★, ಸಾರಾಂಶ್ ಜೈನ್ 121ಕ್ಕೆ 6, ಮಾನವ್ 78 ಕ್ಕೆ 2).
ಶೇಷ ಭಾರತ ಇತರರು 1ನೇ ಇನಿಂಗ್ಸ್: 416 (ಈಶ್ವರನ್ 191, ಜುರೆಲ್ 93, ತನುಷ್101ಕ್ಕೆ 3, ಮುಲಾನಿ 122ಕ್ಕೆ 3).

ಸಮಾಚಾರ ಸಣ್ಣದಲ್ಲ

ಶ್ರೀಲಂಕಾ ವಿರುದ್ಧ ಆಸ್ಟ್ರೇಲಿಯಾಕ್ಕೆ ಜಯ

ದುಬೈ: ಆರಂಭಿಕ ಆಟಗಾರ್ತಿ ಬೆತ್ ಮೂನಿ ಅವರ ಅಮೋಘ ಬ್ಯಾಟಿಂಗ್ ಬಲದಿಂದ ಆಸ್ಟ್ರೇಲಿಯಾ ತಂಡವು ಮಹಿಳಾ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಜಯದ ಆರಂಭ ಮಾಡಿತು. ಶನಿವಾರ ದುಬೈಯಲ್ಲಿ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು 6 ವಿಕೆಟ್‌ಗಳಿಂದ ಶ್ರೀಲಂಕಾ ತಂಡವನ್ನು ಸೋಲಿಸಿತು. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ ತಂಡ 20 ಓವರ್ಗಳಲ್ಲಿ 7 ವಿಕೆಟ್ ನಷ್ಟಕ್ಕೆ 93 ರನ್ ಗಳಿಸಿತ್ತು. ನೀಲಾಕ್ಷಿ ಡಿ ಸಿಲ್ವಾ 40 ಎಸೆತಗಳಲ್ಲಿ 29, ಹರ್ಷಿತಾ ಮಾದವಿ 23 ರನ್ ಗಳಿಸಿ ತಂಡಕ್ಕೆ ಆಸರೆಯಾದರು. ಸಾಧಾರಣ ಮೊತ್ತ ಬೆನ್ನತ್ತಿದ ಆಸ್ಟ್ರೇಲಿಯಾ ತಂಡವು 14.2 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 94 ರನ್ ಗಳಿಸಿತು. ಆಸ್ಟ್ರೇಲಿಯಾ ಪರ ಬೆತ್ ಮೂನಿ 38 ಎಸೆತಗಳಲ್ಲಿ 4 ಬೌಂಡರಿ ಸಹಿತ 43 ರನ್ ಗಳಿಸಿ ಅಜೇಯರಾಗಿ ಉಳಿದರು. ಎಲ್ಲಿಸ್ ಪೆರ್ರಿ 17, ಆಶ್ಲೀಗ್ ಗಾರ್ಡನರ್ 12 ರನ್ ಗಳಿಸಿ ತಂಡಕ್ಕೆ ಆಸರೆಯಾದರು.

ಅಂಧರ ಚೆಸ್: ಜೂಲಿಯಾ ಅಗ್ರಸ್ಥಾನ

ಬೆಂಗಳೂರು: ಎರಡನೇ ಶ್ರೇಯಾಂಕದ ಸಾಲೊಮನ್ ಜೂಲಿಯಾ (ಪೋಲೆಂಡ್), ಐಬಿಸಿಎ 12ನೇ ವಿಶ್ವ ಜೂನಿಯರ್ ಅಂಧರ ಚೆಸ್ ಚಾಂಪಿಯನ್‌ಶಿಪ್‌ನ ಏಳನೇ ಸುತ್ತಿನ ನಂತರ ಆರು ಪಾಯಿಂಟ್‌ಗಳೊಡನೆ ಅಗ್ರಸ್ಥಾನ ಉಳಿಸಿಕೊಂಡಿದ್ದಾರೆ. ನಗರದ ಚಾನ್ಸರಿ ಪೆವಿಲಿಯನ್‌ನಲ್ಲಿ ನಡೆಯುತ್ತಿರುವ ಈ ಕೂಟದಲ್ಲಿ ಶುಕ್ರವಾರ, ಜೂಲಿಯಾ 26 ನಡೆಗಳಲ್ಲಿ ಭಾರತದ ಅಶ್ವಿನ್ ರಾಜೇಶ್ ವಿರುದ್ಧ ಜಯಗಳಿಸಿದರು. ಅಗ್ರ ಶ್ರೇಯಾಂಕದ ಪೋಲೆಂಡ್ನ ರೇಸಿಸ್ ಮೈಕೆಲ್ (5.5), ಭಾರತದ ತನಿಶ್ ವಾಘ್ಮಾರೆ ವಿರುದ್ಧ ಗೆಲುವು ದಾಖಲಿಸಿ ಎರಡನೇ ಸ್ಥಾನದಲ್ಲಿ ಉಳಿದುಕೊಂಡರು. ಭಾರತದ ರಾಹುಲ್ ಸಾಹ್ನಿ ಮೇಲೆ ಜಯಗಳಿಸಿದ ಕಜಕಸ್ತಾನದ ಕುವಾನ್‌ಶುಲಿ ನುರ್ಗಿಸ (5) ಮೂರನೇ ಸ್ಥಾನದಲ್ಲಿದ್ದಾರೆ. 12 ಮಂದಿ ಕಣದಲ್ಲಿದ್ದು, ಜೂಲಿಯಾ ಏಕಮಾತ್ರ ಮಹಿಳಾ ಸ್ಪರ್ಧಿ ಎನಿಸಿದ್ದಾರೆ. ವಿಶ್ವ ಮಹಿಳೆಯರ ವಿಭಾಗದಲ್ಲಿ ಝಿಲ್ಟ್‌ರ್ಸೋವಾ ಲಿಸೆಂಕೊ ಲುಬೋವ್ (ಉಕ್ರೇನ್) ಅವರ ಗೆಲುವಿನ ಸರಣಿ ಮುಂದುವರಿದಿದೆ. ಸ್ವದೇಶದ ಬೊಂದರ್ ಒಲೆನಾ ಅವರನ್ನು ಸೋಲಿಸಿ ಸತತ ಏಳನೇ ಗೆಲುವನ್ನು ಪಡೆದ ಅವರು ಸಂಭವನೀಯ 7 ಪಾಯಿಂಟ್ಸ್ ಕಲೆಹಾಕಿದ್ದಾರೆ. ಇಗೆಮನ್ ಎಮಿಲಿಯಾ (ಪೋಲೆಂಡ್) ಎರಡನೇ ಸ್ಥಾನದಲ್ಲೇ ಮುಂದುವರಿದಿದ್ದಾರೆ. ಟ್ರಿಯಾನ್ಸ್‌ಕಾ ಎಮಿಲಿಯಾ (ಪೋಲೆಂಡ್), ಭಾರತದ ಮೇಘಾ ಚಕ್ರವರ್ತಿ ವಿರುದ್ಧ ಜಯಗಳಿಸಿದ್ದು, ಐದು ಪಾಯಿಂಟ್‌ಗಳೊಡನೆ ಮೂರನೇ ಸ್ಥಾನದಲ್ಲಿದ್ದಾರೆ. 20 ಮಂದಿ ಈ ವಿಭಾಗದಲ್ಲಿ ಪಾಲ್ಗೊಂಡಿದ್ದಾರೆ.

ವಿಶ್ವ ಟೆನಿಸ್ ಲೀಗ್‌ನಲ್ಲಿ ಸುಮಿತ್ ನಗಾಲ್ ಭಾಗಿ

ಅಬುಧಾಬಿ: ಭಾರತದ ಅಗ್ರ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಮುಂಬರುವ ವಿಶ್ವ ಟೆನಿಸ್ ಲೀಗ್‌ನಲ್ಲಿ ಭಾಗಿಯಾಗಲಿದ್ದಾರೆ. ಇದರಲ್ಲಿ ವಿಶ್ವದ ಐದನೇ ಕ್ರಮಾಂಕದ ಆಟಗಾರ ಡೇನಿಯಲ್ ಮೆಡ್ವೆಡೇವ್, ಮಹಿಳಾ ವಿಭಾಗದಲ್ಲಿ ಅಮೆರಿಕ ಓಪನ್ ಚಾಂಪಿಯನ್ ಅರಿನಾ ಸಬಲೆಂಕಾ ಮತ್ತಿತರರು ಪಾಲ್ಗೊಳ್ಳಲಿದ್ದಾರೆ ಎಂದು ಸಂಘಟಕರು ಶುಕ್ರವಾರ ತಿಳಿಸಿದ್ದಾರೆ.

ವಿಶ್ವ ಕ್ರಮಾಂಕದಲ್ಲಿ 83ನೇ ಸ್ಥಾನದಲ್ಲಿರುವ ನಗಾಲ್ ಯಾವ ತಂಡಕ್ಕೆ ಆಡುತ್ತಾರೆ ಎಂಬುದು ಸ್ಪಷ್ಟವಾಗಿಲ್ಲ. ಇಲ್ಲಿನ ಇತಿಹಾದ್ ಅರೇನಾದಲ್ಲಿ ಡಿಸೆಂಬರ್ 19ರಿಂದ 22ರವರೆಗೆ ಈ ಟೂರ್ನಿ ನಿಗದಿಯಾಗಿದೆ. ಈ ಲೀಗ್‌ನಲ್ಲಿ ಇಬ್ಬರು ಒಲಿಂಪಿಕ್ ಚಿನ್ನದ ಪದಕ ವಿಜೇತರು, ಐವರು ಗ್ರ್ಯಾನ್‌ಸ್ಲ್ಯಾಮ್ ಚಾಂಪಿಯನ್‌ನರು, ಪುರುಷರ ವಿಭಾಗದ ಅಗ್ರ 12 ಆಟಗಾರರಲ್ಲಿ ಆರು ಮಂದಿ, ಮಹಿಳಾ ವಿಭಾಗದ 10 ಅಗ್ರಗಣ್ಯ ಆಟಗಾರ್ತಿಯರಲ್ಲಿ ಆರು ಮಂದಿ ಭಾಗಿಯಾಗಲಿದ್ದಾರೆ. ವಿಶ್ವದ ಅಗ್ರಮಾನ್ಯ ಆಟಗಾರ್ತಿ ಇಗಾ ಶ್ವಾಂಟೆಕ್ ಅವರೂ ಸಹ ಇದರಲ್ಲಿ ಒಳಗೊಂಡಿದ್ದಾರೆ. ಹಾಲಿ ವಿಂಬಲ್ಡನ್ ಚಾಂಪಿಯನ್ ಬಾರ್ಬೊರಾ ಕ್ರಾಜಿಕೋವಾ ಮತ್ತು ಒಲಿಂಪಿಕ್ಸ್‌ನಲ್ಲಿ ಡಬಲ್ಸ್ ಸ್ವರ್ಣ ವಿಜೇತೆ ಜಾಸ್ಮಿನ್ ಪಾವೊಲಿನಿ ಲೀಗ್‌ಗೆ ಪದಾರ್ಪಣೆ ಮಾಡಲಿದ್ದಾರೆ. ಮೆಡ್ವೆಡೇವ್ ಮತ್ತು ವಿಶ್ವ ಕ್ರಮಾಂಕದಲ್ಲಿ ಆರನೇ ಸ್ಥಾನದಲ್ಲಿರುವ ಆಂಡ್ರೆ ರುಬ್ಲೇವ್ ಅವರು ಡಬ್ಲ್ಯುಟಿಎಲ್ 2023ರ ವಿಜೇತ ತಂಡ ಈಗಲ್ಸ್‌ನ ಭಾಗವಾಗಿದ್ದರು.

ಬದ್ಧ ವೈರಿಗಳ ಸೆಣಸಾಟ

ಮಹಿಳಾ ಟಿ-20 ವಿಶ್ವಕಪ್: ಇಂದು ಭಾರತ ವಿರುದ್ಧ ಪಾಕ್ ಗೆ ಮಾಡು ಇಲ್ಲವೇ ಮಡಿ ಪಂದ್ಯ

ದುಬೈ: ಮಹಿಳಾ ಟಿ20 ವಿಶ್ವ ಕಪ್ ಟೂರ್ನಿಯ ಮೊದಲ ಪಂದ್ಯದಲ್ಲಿ ನ್ಯೂಜಿಲ್ಯಾಂಡ್ ವಿರುದ್ಧ ಹೀನಾಯವಾಗಿ ಸೋಲು ಕಂಡಿರುವ ಭಾರತ ತಂಡ ಬದ್ಧ ಎದುರಾಳಿ ಪಾಕಿಸ್ತಾನ ವಿರುದ್ಧ ಕಣಕ್ಕಿಳಿಯಲು ಸಜ್ಜಾಗಿದೆ. ಇತ್ತಂಡಗಳ ನಡುವಣ ಈ ಪಂದ್ಯ ಇಂದು (ಭಾನುವಾರ) ದುಬೈ ಇಂಟರ್ನ್ಯಾಶನಲ್ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆಯಲಿದೆ. ಪುರುಷರ ಕ್ರಿಕೆಟ್‌ನಲ್ಲಿ ಭಾರತ ಮತ್ತು ಪಾಕಿಸ್ತಾನ ತಂಡಗಳು ಎದುರಾದಾಗ ಇರುವ ಕ್ರೇಜ್ ಮಹಿಳಾ ಕ್ರಿಕೆಟ್‌ನಲ್ಲಿ ಕಂಡುಬರುವುದಿಲ್ಲ. ಕಾರಣ ಇಲ್ಲಿ ಇತ್ತಂಡಗಳದ್ದೂ ಕೂಲ್ ಗೇಮ್.

ಇಂದು ಗೆಲ್ಲಲೇ ಬೇಕು: ಮೊದಲ ಪಂದ್ಯ ಸೋತಿರುವ ಭಾರತಕ್ಕೆ ಇದು ಮಸ್ಟ್ ವಿನ್ ಗೇಮ್. ಸೋತರೆ ಸೆಮಿಫೈನಲ್ ಪ್ರವೇಶದ ಹಾದಿ ದುರ್ಗಮಗೊಳ್ಳಲಿದೆ. ಪಾಕಿಸ್ತಾನ ಮೊದಲ ಪಂದ್ಯದಲ್ಲಿ ಏಷ್ಯಾ ಕಪ್ ಚಾಂಪಿಯನ್ ಶ್ರೀಲಂಕಾಗೆ ಸೋಲುಣಿಸಿ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ. ಹೀಗಾಗಿ ಒತ್ತಡ ರಹಿತವಾಗಿ ಆಡುವುದು ಪಾಕ್ ಯೋಜನೆ. ಪುರುಷರ ಕ್ರಿಕೆಟ್‌ನಂತೆಯೇ ಮಹಿಳಾ ಕ್ರಿಕೆಟ್‌ನಲ್ಲಿಯೂ ಭಾರತ ತಂಡ ಪಾಕಿಸ್ತಾನ ವಿರುದ್ಧ ಉತ್ತಮ ದಾಖಲೆ ಹೊಂದಿದೆ. ಇದುವರೆಗೆ 15 ಟಿ20 ಪಂದ್ಯಗಳಲ್ಲಿ 12ರಲ್ಲಿ ಗೆಲುವು ಸಾಧಿಸಿದೆ. ಪಾಕ್ ಕೇವಲ ಮೂರು ಪಂದ್ಯಗಳನ್ನು ಮಾತ್ರ ಗೆದ್ದಿದೆ.

ಬ್ಯಾಟಿಂಗ್ ಚೇತರಿಕೆ ಅಗತ್ಯ: ಖ್ಯಾತ ಬ್ಯಾಟರ್‌ಗಳಾದ ಸ್ಮೃತಿ ಮಂಧಾನ, ಶಫಾಲಿ ವರ್ಮಾ, ನಾಯಕಿ ಹರ್ಮನ್ಪ್ರೀತ್ ಕೌರ್, ಜೆಮಿಮಾ ರೊಡ್ರಿಗಸ್, ರಿಚಾ ಘೋಷ್ ಕಿವೀಸ್ ವಿರುದ್ಧ ಬ್ಯಾಟಿಂಗ್ ಮರೆತವರಂತೆ ಆಡಿ ಕಳಪೆ ಪ್ರದರ್ಶನ ತೋರಿದ್ದರು. ಪಾಕ್ ವಿರುದ್ಧ ಬ್ಯಾಟಿಂಗ್ ಲಯಕ್ಕೆ ಮರಳುವ ಅನಿವಾರ್ಯತೆ ಇದೆ. ಇಲ್ಲಿಯೂ ಎಡವಿದರೆ ಸೋಲು ಕಟ್ಟಿಟ್ಟ ಬುತ್ತಿ ಎನ್ನಲಡ್ಡಿಯಿಲ್ಲ. ಜತೆಗೆ ಬೌಲಿಂಗ್ ಕೂಡ ಸುಧಾರಣೆ ಕಾಣಬೇಕು. ಅನುಭವಿ ರೇಣುಕಾ ಸಿಂಗ್ ವಿಕೆಟ್ ಕೀಳುತ್ತಿದ್ದರೂ ಕೂಡ ದುಬಾರಿಯಾಗುತ್ತಿದ್ದಾರೆ. ದೀಪ್ತಿ ಶರ್ಮಾ, ಅರುಂಧತಿ ರೆಡ್ಡಿ ತಮ್ಮ ಎಸೆತಗಳಿಗೆ ಸಾಣೆ ಹಿಡಿಯಬೇಕಿದೆ. ಕಿವೀಸ್ ವಿರುದ್ಧ ದೀಪ್ತಿ 45 ರನ್ ಬಿಟ್ಟುಕೊಟ್ಟಿದ್ದರು.

ಪಾಕಿಸ್ತಾನ ತಂಡದ ನೂತನ ನಾಯಕಿ ಫಾತಿಮಾ ಸನಾ ಬ್ಯಾಟಿಂಗ್ ಮಾತ್ರವಲ್ಲದೆ ಬೌಲಿಂಗ್‌ನಲ್ಲಿಯೂ ಅಮೋಘ ಪ್ರದರ್ಶನ ತೋರುವ ಮೂಲಕ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದಾರೆ. ಲಂಕಾ ವಿರುದ್ಧ 2 ವಿಕೆಟ್ ಜತೆಗೆ 30 ರನ್ ಚಚ್ಚಿದ್ದರು. ಅನುಭವಿ ನಿದಾ ದಾರ್, ಮುನೀಬಾ ಅಲಿ, ಗುಲ್ ಫಿರೋಜಾ ಬ್ಯಾಟಿಂಗ್ ಬಲವಾದರೆ, ಸಾದಿಯಾ ಇಕ್ಬಾಲ್, ಒಮೈಮಾ ಸೊಹೈಲ್ ಮತ್ತು ನಶ್ರಾ ಸಂಧು ಘಾತಕ ಬೌಲಿಂಗ್ ಮೂಲಕ ಎದುರಾಳಿಯನ್ನು ಕಟ್ಟಿ ಹಾಕುವಲ್ಲಿ ಸಮರ್ಥರಿದ್ದಾರೆ.

ಸಂಭಾವ್ಯ ತಂಡ

ಭಾರತ

ಶಫಾಲಿ ವರ್ಮಾ, ಸ್ಮೃತಿ ಮಂಧಾನ, ಹರ್ಮನ್‌ಪ್ರೀತ್ ಕೌರ್ (ನಾಯಕಿ), ಜೆಮಿಮಾ ರಾಡ್ರಿಗಸ್, ರಿಚಾ ಘೋಷ್ (ವಿ.ಕೀ), ದೀಪ್ತಿ ಶರ್ಮಾ, ಅರುಂಧತಿ ರೆಡ್ಡಿ, ಪೂಜಾ ವಸ್ತ್ರಾಕರ್, ಶ್ರೇಯಾಂಕಾ ಪಾಟೀಲ್, ಆಶಾ ಸೋಭಾನಾ, ರೇಣುಕಾ ಠಾಕೂರ್ ಸಿಂಗ್.

ಪಾಕಿಸ್ತಾನ

ಮುನೀಬಾ ಅಲಿ (ವಿ.ಕೀ), ಗುಲ್ ಫಿರೋಜಾ, ಸಿದ್ರಾ ಅಮೀನ್, ನಿದಾ ದಾರ್, ಅಲಿಯಾ ರಿಯಾಜ್, ಒಮೈಮಾ ಸೊಹೈಲ್, ಫಾತಿಮಾ ಸನಾ (ನಾಯಕಿ), ತುಬಾ ಹಸನ್, ನಶ್ರಾ ಸಂಧು, ಡಯಾನಾ ಬೇಗ್, ಸಾದಿಯಾ ಇಕ್ಬಾಲ್.

ವಿಟಾಕೀಸ್

ದರ್ಶನಕ್ಕೆ ಸಿದ್ಧವಾದ ಸಿಂಹರೂಪಿಣಿ

ಮಾರಮ್ಮ ದೇವಿಯ ಕುರಿತ ಸಾಮಾಜಿಕ ಹಾಗೂ ಭಕ್ತಿಪ್ರಧಾನ ಕಥೆಯ ಸಿಂಹರೂಪಿಣಿ ತೆರೆಗೆ ಸಿದ್ಧವಾಗಿದೆ. ಕೆ.ಎಂ.ನಂಜುಂಡೇಶ್ವರ ಕಥೆ ಬರೆದು ಶ್ರೀಚಕ್ರ ಫಿಲಂಸ್ ಲಾಂಛನದಲ್ಲಿ ನಿರ್ಮಾಣ ಮಾಡಿದ್ದಾರೆ. ಹಲವು ಹಿಟ್ ಸಿನಿಮಾಗಳ ಹಾಡುಗಳಿಗೆ ಸಾಹಿತ್ಯ ರಚಿಸಿರುವ ಕಿನ್ನಾಳ್‌ರಾಜ್ ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಬರೆದು ನಿರ್ದೇಶನ ಮಾಡಿದ್ದಾರೆ. ಈ ಹಿಂದೆ ಸಿಂಹರೂಪಿಣಿಯ ಟೀಸರ್ ರಿಲೀಸ್ ಆಗಿ ಮನಗೆದ್ದಿತ್ತು. ಈಗ ಹಾಡುಗಳು ಬಿಡುಗಡೆಯಾಗಿವೆ. ಹಿರಿಯ ನಟ ಸುಮನ್ ಹಾಡು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಕೃಷಂ ಪ್ರಣಯ ಸಖಿ ಖ್ಯಾತಿಯ ಗಾಯಕ ಜಸ್‌ಕರಣ್ ಸಿಂಗ್ ಚಿತ್ರದ ಹಾಡೊಂದಕ್ಕೆ ದನಿಯಾಗಿದ್ದಾರೆ. ಈ ಹಾಡು ಸಿನಿಪ್ರಿಯರ ಮನಗೆದ್ದಿದೆ.

> **ಗ್ರಾಮೀಣ ಭಾಗದಲ್ಲಿ ಹಬ್ಬ, ಉತ್ಸವಗಳಲ್ಲಿ ಮಾರಮ್ಮ ದೇವಿಯನ್ನು ಪೂಜಿಸಿ ಪ್ರಾರ್ಥಿಸಲಾಗುತ್ತದೆ. ಮಾರಮ್ಮ ದೇವಿಯ ವಿವಿಧ ಅವತಾರಗಳು ಅದರ ಹಿಂದಿನ ಉದ್ದೇಶವನ್ನು ಪಾತ್ರಗಳ ಮೂಲಕ ತೋರಿಸಲಾಗಿದೆ. ಪ್ರತಿಯೊಂದು ದೇವರಿಗೂ ಹಿನ್ನಲೆ ಇರುತ್ತದೆ. ಅಂತೆಯೇ ಮಾರಮ್ಮ ದೇವಿ ಹೇಗೆ ವಿವಿಧ ಅವತಾರಗಳಲ್ಲಿ ದರ್ಶನ ನೀಡುತ್ತಾಳೆ. ಮಾರಮ್ಮ, ಲಕ್ಷ್ಮಿ ಅವತಾರ ತಾಳಿದ್ದು ಯಾಕೆ ಎಂಬುದನ್ನು ಇಲ್ಲಿ ಹೇಳಲಾಗಿದೆ. ಅದರ ಜತೆಗೆ ಕಮರ್ಷಿಯಲ್ ಅಂಶಗಳನ್ನು ಬೆರೆಸಿ ತೆರೆಯಲ್ಲಿ ಕಟ್ಟಿಕೊಡಲಾಗಿದೆ.**
>
> **-ಕಿನ್ನಾಳ ರಾಜ್** ನಿರ್ದೇಶಕ

ಸಿಂಹರೂಪಿಣಿ ಮನೆಮಂದಿಯೆಲ್ಲಾ ಕುಳಿತು ನೋಡಬಹುದಾದ ಮನರಂಜನಾತ್ಮಕ ಸಿನಿಮಾ. ಬಹುದಿನಗಳ ಬಳಿಕ ಪೌರಾಣಿಕ ಕಥೆಯ ಚಿತ್ರವನ್ನು ತೆರೆಗೆ ತರುತ್ತಿರುವುದು ಖುಷಿ ಕೊಟ್ಟಿದೆ ಎಂದು ನಿರ್ಮಾಪಕ ಕೆ. ಎಂ.ನಂಜುಡೇಶ್ವರ ಹೇಳಿದರು. ಯಶ್‌ಶೆಟ್ಟಿ, ಅಂಕಿತಾ ಗೌಡ, ದಿವ್ಯಾ ಆಲೂರು, ನೀನಾಸಂ ಅಶ್ವಥ್, ಹರೀಶ್ ರಾಯ್, ವಿಜಯ್ ಚೆಂಡೂರು, ಯಶಸ್ವಿನಿ, ಆರವ್ ಲೋಹಿತ್, ಖುಷಿ ಬಸ್ರೂರು, ಮನಮೋಹನ್ ರೈ, ಸಾಗರ್ ತಾರಾಗಣದಲ್ಲಿದ್ದಾರೆ. ಆಕಾಶ್ ಪರ್ವ ಸಂಗೀತ ನಿರ್ದೇಶನ, ಕಿರಣ್ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಹಾಡಿನಲ್ಲಿ ಮನಗೆದ್ದ ಪಾರು

ರೋಹಿತ್ ಕೀರ್ತಿ ನಿರ್ದೇಶನದಲ್ಲಿ ಸಿದ್ಧವಾಗಿರುವ ಪಾರು ಪಾರ್ವತಿ ಚಿತ್ರದ ಹಾಡುಗಳು ಬಿಡುಗಡೆಯಾಗಿವೆ. ಲಹರಿ ವೇಲು ಚಿತ್ರದ ಹಾಡುಗಳನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಹಾರೈಸಿದರು. ಚಿತ್ರದಲ್ಲಿ ಐದು ಹಾಡುಗಳು ಹಾಗೂ ನಾಲ್ಕು ಬಿಟ್ ಸಾಂಗ್‌ಗಳಿದ್ದು ನಾಗಾರ್ಜುನ್ ಶರ್ಮ ಸಾಹಿತ್ಯ ರಚಿಸಿದ್ದಾರೆ. ಆರ್.ಹರಿ ಸಂಗೀತ ನಿರ್ದೇಶನದಲ್ಲಿ ಎಲ್ಲಾ ಹಾಡುಗಳು ಇಂಪಾಗಿ ಮೂಡಿಬಂದಿವೆ. ಬಿಗ್ ಬಾಸ್ ಖ್ಯಾತಿಯ ದೀಪಿಕಾ ದಾಸ್, ಪೂನಂ ಸರ್ ನಾಯಕ್ ಹಾಗೂ ಫವಾಜ್ ಅಶ್ರಫ್ ಪ್ರಮುಖಪಾತ್ರದಲ್ಲಿ ನಟಿಸಿದ್ದಾರೆ.

ಹಲವು ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುವ ರೋಹಿತ್ ಈ ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಇದೊಂದು ಟ್ರಾವೆಲ್, ಅಡ್ವೆಂಚರ್ ಡ್ರಾಮ ಜಾನರ್‌ನ ಚಿತ್ರವಾಗಿದ್ದು, ಇಲ್ಲಿ ಹಾಡುಗಳೇ ಪ್ರಮುಖವಾಗಿವೆ. ಪಯಣದಲ್ಲಿ ಸಾಗುವ ಸ್ಟೋರಿ ಇಲ್ಲಿದ್ದು, ಮೂರು ಮುಖ್ಯಪಾತ್ರಗಳ ಸುತ್ತ ಸಿನಿಮಾದ ಕಥೆ ಸಾಗುತ್ತದೆ.

ಬೆಂಗಳೂರು, ಗೋವಾ, ಮಹಾರಾಷ್ಟ್ರ, ರಾಜಸ್ಥಾನ ಹಾಗೂ ಉತ್ತರಕಾಂಡ್‌ನಲ್ಲಿ ಚಿತ್ರೀಕರಣ ನಡೆಸಲಾಗಿದೆ. ಶೂಟಿಂಗ್ ಮುಗಿಸಿರುವ ನಮ್ಮ ಚಿತ್ರ ಸದ್ಯ ಪೋಸ್ಟ್ ಪ್ರೊಡಕ್ಷನ್‌ನಲ್ಲಿ ಬ್ಯುಸಿಯಾಗಿದೆ ಎಂದು ನಿರ್ದೇಶಕ ರೋಹಿತ್ ಕೀರ್ತಿ ತಿಳಿಸಿದರು.

ಪಾಯಲ್ ಎಂಬ ಪಾತ್ರದಲ್ಲಿ ದೀಪಿಕಾ ದಾಸ್ ಕಾಣಿಸಿಕೊಂಡಿದ್ದಾರೆ. ನಿಜಜೀವನದಲ್ಲೂ ಅಡ್ವೆಂಚರ್ಸ್ ಹಾಗೂ ಟ್ರಾವೆಲ್‌ನಲ್ಲಿ ಆಸಕ್ತಿಯಿರುವ ದೀಪಿಕಾ ದಾಸ್ ಅವರಿಗೆ ಇದು ಹೇಳಿ ಮಾಡಿಸಿದ ಪಾತ್ರವಾಗಿದೆ.

ಇದು ನಾನು ನಟಿಸಿರುವ ಮೊದಲ ದಕ್ಷಿಣ ಭಾರತದ ಚಿತ್ರ, ನನ್ನ ಪಾತ್ರಕ್ಕೆ ಒಳ್ಳೆಯ ಸ್ಪೇಸ್ ಇದೆ. ಚಿತ್ರದಲ್ಲಿ ನಟಿಸಿದ್ದು ಖುಷಿ ಕೊಟಿದೆ ಎಂದು ನಟಿ ಪೂನಂ ಸರ್ ನಾಯಕ್ ಸಂತಸ ವ್ಯಕ್ತಪಡಿಸಿದರು. ಅಬಿನ್ ರಾಜೇಶ್ ಛಾಯಾಗ್ರಹಣ, ಸಿ.ಕೆ. ಕುಮಾರ್ ಸಂಕಲನ, ರಾಘು ಮೈಸೂರು ಕಲಾ ನಿರ್ದೇಶನ ಈ ಚಿತ್ರಕ್ಕಿದೆ. ಪಿ.ಬಿ.ಪ್ರೇಮನಾಥ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

ಶೀಘ್ರ ಸೆಟ್ಟೇರಲಿದೆ ಯುವ ಹೊಸ ಚಿತ್ರ

ದೊಡ್ಮನೆ ಮೊಮ್ಮಗ ಯುವರಾಜ್ ಕುಮಾರ್, ಯುವ ಚಿತ್ರದ ಮೂಲಕ ಚಂದನವನಕ್ಕೆ ಎಂಟ್ರಿಕೊಟ್ಟು ಆ್ಯಕ್ಷನ್, ಡ್ಯಾನ್ಸ್ ಮೂಲಕ ಗಮನಸೆಳೆದರು. ಚೊಚ್ಚಲ ಚಿತ್ರದಲ್ಲಿಯೇ ಭರ್ಜರಿ ಯಶಸ್ಸು ಪಡೆದರು. ಸದ್ಯ ಯುವ ಚಂದನವನದ ಬೇಡಿಕೆಯ ನಾಯಕ ನಟರಾಗಿದ್ದು, ಹಲವು ನಿರ್ದೇಶಕರು ಯುವ ಅಭಿನಯದ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಲು ಸಿದ್ಧವಾಗಿದ್ದಾರೆ. ಈ ನಡುವೆಯೇ ಯುವರಾಜ್ ಅವರ ಮುಂದಿನ ಸಿನಿಮಾ ಯಾವುದು ಕುತೂಹಲ ಎಲ್ಲರನ್ನೂ ಕಾಡುತ್ತಿದೆ. ಹೀಗಿರುವಾಗಲೇ ಸಂತಸದ ಸುದ್ದಿ ಹೊರಬಿದ್ದಿದೆ. ಅದು ಯುವ ರಾಜ್‌ಕುಮಾರ್ ಅಭಿನಯದ ಹೊಸ ಚಿತ್ರ ಶೀಘ್ರದಲ್ಲಿಯೇ ಘೋಷಣೆಯಾಗಲಿದೆ, ಈ ಚಿತ್ರ ಪಿಆರ್‌ಕೆ ಪ್ರೊಡಕ್ಷನ್ಸ್‌ನಲ್ಲಿ ನಿರ್ಮಾಣವಾಗಲಿದೆ ಎಂಬುದು. ಹೌದು, ಪವರ್‌ಸ್ಟಾರ್ ಪುನೀತ್ ರಾಜ್ ಕುಮಾರ್, ಪಿಆರ್‌ಕೆ ಬ್ಯಾನರ್‌ನಲ್ಲಿ ಹಲವು ಹಿಟ್ ಸಿನಿಮಾಗಳನ್ನು ನಿರ್ಮಿಸಿದ್ದರು. ಅಪ್ಪು ಅಗಲಿದ ಬಳಿಕ, ಅಶ್ವಿನಿ ಪುನೀತ್‌ರಾಜ್‌ಕುಮಾರ್ ಪಿಆರ್‌ಕೆ ಪ್ರೊಡಕ್ಷನ್ಸ್ ಜವಾಬ್ದಾರಿ ವಹಿಸಿಕೊಂಡಿದ್ದು, ಸದಭಿರುಚಿಯ ಸಿನಿಮಾಗಳನ್ನು ನಿರ್ಮಿಸುತ್ತಿದ್ದಾರೆ. ಆ ಮೂಲಕ ಹೊಸ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಈಗ ಯುವ ನಟಿಸಲಿರುವ ಹೊಸ ಚಿತ್ರವೂ ಪಿಆರ್‌ಕೆ ಪ್ರೊಡಕ್ಷನ್ಸ್‌ನಲ್ಲಿಯೇ ನಿರ್ಮಾಣವಾಗಲಿದೆ. ಈಗಾಗಲೇ ಹಲವು ಕಥೆಗಳನ್ನು ಕೇಳಿರುವ ಅಶ್ವಿನಿ ಪುನೀತ್ ರಾಜ್‌ಕುಮಾರ್ ಕಥೆಯೊಂದನ್ನು ಮೆಚ್ಚಿದ್ದು ಚಿತ್ರ ನಿರ್ಮಾಣಕ್ಕೆ ಸಮ್ಮತಿಸಿದ್ದಾರೆ ಎನ್ನಲಾಗಿದೆ. ಯುವ ಅಭಿನಯದ ಮುಂದಿನ ಸಿನಿಮಾ ಕೂಡ ಕೌಟುಂಬಿಕ ಕಥೆಯನ್ನು ಒಳಗೊಂಡಿರುವುದು ಬಹುತೇಕ ಖಚಿತವಾಗಿದ್ದು, ಸ್ಟಾರ್ ನಿರ್ದೇಶಕರು ಈ ಚಿತ್ರವನ್ನು ನಿರ್ದೇಶಿಸಲಿದ್ದಾರೆ. ಎಲ್ಲವೂ ಅಂದುಕೊಂಡಂತೆ ಆದರೆ ನವೆಂಬರ್‌ನಲ್ಲಿ ಯುವ ಅಭಿನಯದ ಹೊಸ ಚಿತ್ರ ಸೆಟ್ಟೇರಲಿದೆ. ಯುವ ಅವರನ್ನು ಮತ್ತೆ ತೆರೆಯಲ್ಲಿ ಕಣ್ತುಂಬಿಕೊಳ್ಳಲು ಅಭಿಮಾನಿಗಳು ಕಾತರರಾಗಿದ್ದಾರೆ.



ನೈಟ್‌ರೋಡ್‌ಗೆ ಮೆಚ್ಚುಗೆ

ಕಳೆದ ವಾರವಷ್ಟೇ ನೈಟ್ ರೋಡ್ ಸಿನಿಮಾ ರಿಲೀಸ್ ಆಗಿತ್ತು. ಹೆದ್ದಾರಿಯಲ್ಲಿ ನಡೆಯುವ ಅಪಘಾತದ ಹಿಂದಿನ ರೋಚಕ ಕಥೆಯನ್ನು ಚಿತ್ರ ಹೊತ್ತು ಬಂದಿತ್ತು. ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನ ಈ ಚಿತ್ರವನ್ನು ಸಿನಿಪ್ರಿಯರು ಮೆಚ್ಚಿದ್ದಾರೆ. ಮೊದಲ ವಾರ ಸುಮಾರು ಅರವತ್ತೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಿದ್ದ ನೈಟ್ ರೋಡ್ ಎರಡನೇ ವಾರದಲ್ಲಿ ಚಿತ್ರಮಂದಿರಗಳ ಸಂಖ್ಯೆಯನ್ನು ಹೆಚ್ಚಿಸಿಕೊಂಡಿದೆ. ಉತ್ತರ ಕರ್ನಾಟಕ ಭಾಗದ ಹಲವು ಚಿತ್ರಮಂದಿರಗಳಲ್ಲಿ ನೈಟ್ ರೋಡ್ ಹೌಸ್‌ಫುಲ್ ಪ್ರದರ್ಶನ ಕಾಣುತ್ತಿದೆ. ಕಳೆದ ವಾರ ಜೂ.ಎನ್‌ಟಿಆರ್ ಅಭಿನಯದ ದೇವರ ಕೂಡ ರಿಲೀಸ್ ಆಗಿತ್ತು. ಹಾಗಾಗಿ ದೇವರ ಚಿತ್ರದ ಮುಂದೆ ಹೊಸಬರ ಚಿತ್ರಗಳು ನಿಲ್ಲುತ್ತವೆಯೇ ಎಂಬ ಪ್ರಶ್ನೆಯೂ ಎದುರಾಗಿತ್ತು. ಆದರೆ ನೈಟ್ ರೋಡ್ ದೇವರನಿಗೆ ಸೆಡ್ಡು ಹೊಡೆದು ಪ್ರದರ್ಶನ ಮುಂದುವರಿಸಿದೆ. ಗೋಪಾಲ್ ಹಳೇಪಾಳ್ಯ ಈ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿದ್ದಾರೆ. ಧರ್ಮ ಪೊಲೀಸ್ ಅಧಿಕಾರಿಯಾಗಿ ನಟಿಸಿ ಪ್ರೇಕ್ಷಕರ ಮೆಚ್ಚುಗೆಗೂ ಪಾತ್ರರಾಗಿದ್ದಾರೆ. ನಟಿ ಜ್ಯೋತಿ ರೈ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಕಥೆಗೆ ತಿರುವು ನೀಡುವ ಪಾತ್ರ ಅವರದಾಗಿದೆ. ಉಳಿದಂತೆ ಗಿರಿಜಾ ಲೋಕೇಶ್, ಗೋವಿಂದೇಗೌಡ ಮುಂತಾದವರು ತಾರಾಗಣದಲ್ಲಿದ್ದಾರೆ. ಈಗಾಗಲೇ ಚಿತ್ರದ ಡಬ್ಬಿಂಗ್ ರೈಟ್ಸ್‌ಗೆ ಬೇಡಿಕೆ ಬಂದಿದ್ದು, ನೈಟ್‌ರೋಡ್ ಮುಂದಿನ ದಿನಗಳಲ್ಲಿ ಪರಭಾಷೆಗೂ ಡಬ್ ಆಗಲಿದೆ.





ಕೊಡಗು ಜಿಲ್ಲೆಯ ಪುಷ್ಪಗಿರಿ ಅರಣ್ಯ ಪ್ರದೇಶದಲ್ಲಿ ಹೊಸ ಪ್ರಭೇದದ ಇರುವೆಯೊಂದು ಪತ್ತೆಯಾಗಿದ್ದು, ಈ ಪ್ರದೇಶದಲ್ಲಿ ಇನ್ನಷ್ಟು ಸಂಶೋಧನೆಗೆ ಸ್ಫೂರ್ತಿ ನೀಡಿದೆ.

ಕೊಡಗಿನಲ್ಲಿ ಹೊಸ ಇರುವೆ!

» ಸಹನಶ್ರೀ ಆರ್.

ಸಾಮಾನ್ಯವಾಗಿ ಕಂಡುಬರುವ ಕೀಟವೆಂದರೆ ಇರುವೆ. ಆದರೆ ನಮಗೆ ಎಷ್ಟು ಬಗೆಯ ಇರುವೆಗಳು ಗೊತ್ತು? ಅದರಲ್ಲಿ ನಮಗೆ ತಿಳಿದಿರುವ ಕೆಲವು ಸಾಮಾನ್ಯ ಇರುವೆಗಳೆಂದರೆ ಕಪ್ಪು ಇರುವೆ, ಕೆಂಪು ಇರುವೆ, ಓಡುಗ, ಗೊದ್ದ, ಕೆಂಜಿಗ, ಗೂರಲ, ಹೊಟ್ಟಿರುವೆ, ಗೂನಿರುವೆ, ಮತ್ತು ಸಾಲಿರುವೆ. ಈವರೆಗೂ ಜಗತ್ತಿನಾದ್ಯಂತ ಸುಮಾರು ಹದಿನಾರು ಸಾವಿರ ಪ್ರಬೇಧದ ಇರುವೆಗಳು ಪತ್ತೆಯಾಗಿದೆ; ಕರ್ನಾಟಕದಲ್ಲಿ ಸುಮಾರು 260 ವಿಭಿನ್ನ ಪ್ರಭೇದದ ಇರುವೆಗಳು ಪತ್ತೆಯಾಗಿದೆ. ಈ ಪಟ್ಟಿಗೆ ಕೀಟಶಾಸ್ತ್ರಜ್ಞರು ಹೊಸ ಇರುವೆ ಪ್ರಬೇಧದ ಒಂದನ್ನು ಕೊಡಗಿನಲ್ಲಿ ಪತ್ತೆಮಾಡಿ ಕೊಡಗಿನ ಹೆಸರಿನಿಂದ ನಾಮಕರಣ ಮಾಡಿದ್ದಾರೆ.

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಶನ್ ಅಂಡ್ ರಿಸರ್ಚ್, ಭುವನೇಶ್ವರದ ಕೀಟಶಾಸ್ತ್ರಜ್ಞರಾದ ಬಿಕಾಶ್ ಸಾಹೂ ಮತ್ತು ಅನಿರುದ್ಧ ದತ್ತಾ ರಾಯ್, ಅವರು ಅಶೋಕ ಟ್ರಸ್ಟ್ ಫಾರ್ ರಿಸರ್ಚ್ ಇನ್ ಇಕಾಲಜಿ ಅಂಡ್ ಇನ್ವಿರಾನ್‌ಮೆಂಟ್ (ಅತ್ರೀ), ಬೆಂಗಳೂರಿನ ಕೀಟಶಾಸ್ತ್ರಜ್ಞರಾದ ಸಹನಶ್ರೀ ಆರ್ ಮತ್ತು ಪ್ರಿಯದರ್ಶನನ್ ಧರ್ಮ ರಾಜನ್ ಅವರ ಸಹಯೋಗದೊಂದಿಗೆ ಈನಿಕ್ಟಸ್ ಕೊಡಗೂನ್ಸಿಸ್ (Aenictus kodaguensis)

ಎಂಬ ಹೊಸ ಇರುವೆಯನ್ನು ಪುಷ್ಪಗಿರಿ ವನ್ಯಜೀವಿ ಅಭಯಾರಣ್ಯದಲ್ಲಿ ಪತ್ತೆ ಮಾಡಿದ್ದಾರೆ. ಪುಷ್ಪಗಿರಿ ವನ್ಯಜೀವಿ ಅಭಯಾರಣ್ಯ ಇರುವುದು ಕೊಡಗು ಜಿಲ್ಲೆಯಲ್ಲಿ, ಆದುದರಿಂದ ಸ್ಥಳದ ಗೌರವಾರ್ಥವಾಗಿ ಈ ಇರುವೆಗೆ ಈನಿಕ್ಟಸ್ ಕೊಡಗೂನ್ಸಿಸ್ ಎಂದು ಹೆಸರಿಸಲಾಗಿದೆ.

ಪುಷ್ಪಗಿರಿ ವನ್ಯಜೀವಿ ಅಭಯಾರಣ್ಯವು ವ್ಯಾಪಕ ಶ್ರೇಣಿಯ ವನ್ಯಜೀವಿಗಳಿಗೆ ಮತ್ತು ಹಲವಾರು ಸ್ಥಳೀಯ ಜಾತಿಯ ಪಕ್ಷಿಗಳು ಮತ್ತು ಉಭಯಚರಗಳಿಗೆ ನೆಲೆಯಾಗಿದೆ. ಪಶ್ಚಿಮ ಘಟ್ಟಗಳ ಮಧ್ಯ ಭಾಗದ ಈ ಪ್ರದೇಶವು ಸಾಲು ಸಾಲು ಬೆಟ್ಟಗಳು, ದಟ್ಟವಾದ ನಿತ್ಯಹರಿದ್ವರ್ಣ ಕಾಡುಗಳು, ಕಾಫಿ ತೋಟಗಳು ಮತ್ತು ನದಿಯ ಪರಿಸರ ವ್ಯವಸ್ಥೆಗಳಿಗೆ ಹೆಸರುವಾಸಿಯಾಗಿದೆ. ಕೊಡಗು ಅಪಾರ ಪರಿಸರ ಮೌಲ್ಯದ ಪ್ರದೇಶವಾಗಿದ್ದು ಹಲವಾರು ಸ್ಥಳೀಯ ಮತ್ತು ಅಪರೂಪದ ಸಸ್ಯ ಮತ್ತು ಪ್ರಾಣಿಗಳ ನೆಲೆಯಾಗಿದೆ.

ಈನಿಕ್ಟಸ್ ಕೊಡಗೂನ್ಸಿಸ್ ಒಂದು ಸಣ್ಣ ಕುರುಡು ಇರುವೆ, ಒಟ್ಟು ಉದ್ದ 3.57 ಮಿಮೀ. ಇದು ಆಯತಾಕಾರದ ತಲೆಯನ್ನು ಹೊಂದಿದೆ ಮತ್ತು ಅದರ ಸಂಪೂರ್ಣ ದೇಹವು ಸಣ್ಣಕೆತ್ತನೆಯ ವಿನ್ಯಾಸದಿಂದ ಕೂಡಿದೆ. ಈ ಇರುವೆಯು ಗಾಢ ಕಂದು ಬಣ್ಣದ್ದಾಗಿದ್ದು, ಗಮನಾರ್ಹ ಬಾಯಿ, ದವಡೆಗಳನ್ನು ಹೊಂದಿರುತ್ತದೆ. ಹೆಚ್ಚು ಚುರುಕಾಗಿರುವುದಕ್ಕೆ ಹೆಸರುವಾಸಿಯಾಗಿರುವ ಈ ಇರುವೆಗಳು ಸಾಮಾನ್ಯವಾಗಿ ಗುಂಪುಗಳಲ್ಲಿ ಆಹಾರ ಹುಡುಕುವುದು ಅಥವಾ ಬೇಟೆಯಾಡುವುದು ಕಂಡು ಬರುತ್ತದೆ.

ಈ ಇರುವೆಯು ಆಕ್ರಮಣಕಾರಿ; ಆಹಾರ ಹುಡುಕುವ ನಡವಳಿಕೆ ಮತ್ತು ಒಗ್ಗಟ್ಟಿನಲ್ಲಿ ಬಾಳುವುದಕ್ಕೆ ಹೆಸರುವಾಸಿಯಾಗಿದೆ. ಇತರ ಕೀಟಗಳನ್ನು ಬೇಟೆಯಾಡುತ್ತವೆ.

ಬಿಕಾಶ್ ಸಾಹೂ ಅವರ ಪಿಎಚ್‌ಡಿ ಸಂಶೋಧನೆಯ ಭಾಗವಾಗಿ ಕೊಡಗಿನ ಕಾಡುಗಳಲ್ಲಿ ಇರುವೆಗಳನ್ನು ಸಂಗ್ರಹಿಸುತ್ತಿದ್ದಾಗ ಈ ಹೊಸ ಇರುವೆ ಪತ್ತೆಯಾಯಿತು. ಸೂಕ್ಷ್ಮದರ್ಶಕದಲ್ಲಿ ಪುಟ್ಟ ಇರುವೆಯನ್ನು ಪರೀಕ್ಷಿಸಿ, ಈವರೆಗೆ ದಾಖಲಾಗಿದ್ದ ಇರುವೆಗಳೊಂದಿಗೆ ಹೋಲಿಸಿ ನೋಡಿದಾಗ ಕೊಡಗಿನ ಇರುವೆ ಬೇರೆ ಪ್ರಭೇದದ್ದೆಂದು ಗುರುತಿಸಲಾಯಿತು. ಈ ಹೊಸ ಇರುವೆಯು ಜಾಗತಿಕವಾಗಿ ಗುರುತಿಸಲ್ಪಟ್ಟ ಜೀವವೈವಿಧ್ಯದ ಹಾಟ್‌ಸ್ಪಾಟ್ ಆಗಿರುವ ಪಶ್ಚಿಮ ಘಟ್ಟದ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತದೆ. ಇನ್ನಷ್ಟು ಇಂತಹ ಹೊಸ ಪ್ರಭೇದದ ಕೀಟಗಳು ಪಶ್ಚಿಮ ಘಟ್ಟದಲ್ಲಿ ಇರುವ ಸಾಧ್ಯತೆಯನ್ನು ಇದು ಸೂಚಿಸುತ್ತದೆ.

ನಮ್ಮ ರಾಜ್ಯದ ಮಟ್ಟಿಗೆ ಇದೊಂದು ಮಹತ್ವದ ಸಂಶೋಧನೆ. ನಮ್ಮ ರಾಜ್ಯದ ದಟ್ಟ ಅರಣ್ಯಗಳು ಇನ್ನೂ ಪೂರ್ಣ ಪ್ರಮಾಣದ ಸಂಶೋಧನೆಗೆ ಒಳಗಾಗಿಲ್ಲ; ಇನ್ನೂ ಹೊಸ ಪ್ರಭೇದದ ಜೀವಿಗಳು ಸಸ್ಯಗಳು ನಮ್ಮ ರಾಜ್ಯದ ಕಾಡುಗಳಲ್ಲಿ ಪತ್ತೆಯಾಗುತ್ತಿರುವುದು ಇದಕ್ಕೊಂದು ಪುರಾವೆ. ಕೊಡಗಿನಲ್ಲಿ ಪತ್ತೆಯಾದ ಹೊಸ ಪ್ರಭೇದದ ಇರುವೆಯು, ಇಂತಹ ಇತರ ಸಂಶೋಧನೆಗಳಿಗೆ ಸ್ಫೂರ್ತಿ ನೀಡುವುದರಲ್ಲಿ ಸಂಶಯವಿಲ್ಲ.

ಡಾ. ಜನಾರ್ದನ ಭಟ್ ವಿರಚಿತ 'ಕನ್ನಡ ಕಾದಂಬರಿ ಮಾಲೆ'ಯಲ್ಲಿ ಭಿನ್ನವಿಭಿನ್ನ ನೂರು ಕನ್ನಡ ಕಾದಂಬರಿಗಳ ವಿಮರ್ಶಾ ಕಥನಗಳು ಸೊಗಸಾಗಿ ಅನಾವರಣ ಗೊಂಡಿರುವುದು ಗಮನಾರ್ಹ. ಬಹುಭಾಷಿಕ ಸಂವೇದನೆಯನ್ನು ಮೈಗೂಡಿಸಿಕೊಂಡಿರುವ ಡಾ. ಭಟ್ ಅವರದು ಬಹುಧಾನಕ ಪ್ರತಿಭೆ. ಇದೀಗ ಬೆಳಕು ಕಂಡಿರುವ 'ಕನ್ನಡ ಕಾದಂಬರಿ ಮಾಲೆ' ಅವರ ನೂರನೆಯ ಕೃತಿ ಎಂಬುದು ಸಹ ವಿಶೇಷ. ಈ ಗ್ರಂಥವು ದ ಸಾಹಿತ್ಯಾಸಕ್ತರಿಗೆ, ಸಂಶೋಧಕರಿಗೆ ಮತ್ತು ಸಾಮಾನ್ಯ ಓದುಗರಿಗೂ ಬಹಳ ಉಪಯುಕ್ತವಾಗಬಲ್ಲದು. ಕನ್ನಡ ವಿಮರ್ಶಾ ಕ್ಷೇತ್ರದಲ್ಲಿ ಈ ಗ್ರಂಥವನ್ನು ಒಂದು ಮೈಲಿಗಲ್ಲು ಎಂದೇ ಗುರುತಿಸಬಹುದು.

ಕನ್ನಡ ಕಾದಂಬರಿಗಳ ಬಹುರೂಪ ಬಹುಧ್ವನಿ

» ಪ್ರೊ. ಜಿ. ಎನ್. ಉಪಾಧ್ಯ, ಮುಂಬೈ

ಕಳೆದ ನಾಲ್ಕು ದಶಕಗಳಿಂದ ಕನ್ನಡ ಸಾಹಿತ್ಯವನ್ನು ಅಭ್ಯಸಿಸುತ್ತಾ, ವಿಮರ್ಶೆಗೆ ಒಳಪಡಿಸುತ್ತಾ, ವಿಮರ್ಶಾ ಲೇಖನಗಳನ್ನು ಬರೆಯುತ್ತಿರುವ ಡಾ. ಬಿ. ಜನಾರ್ದನ ಭಟ್ ಅವರು, ಈಗ ಒಂದು ಅತ್ಯಪೂರ್ವ ಎನ್ನುವ ಕೃತಿಯನ್ನು ಹೊರತಂದಿದ್ದಾರೆ. ಅಂದಾಜು ಕಳೆದ ಒಂದೂ ಕಾಲು ಶತಮಾನದಲ್ಲಿ ಕನ್ನಡದಲ್ಲಿ ಬೆಳಕು ಕಂಡ ಮಹತ್ವದ ಕಾದಂಬರಿಗಳ ವಿಮರ್ಶೆ, ವಿಶ್ಲೇಷಣೆ ಈ ಕೃತಿಯಲ್ಲಿ ನೆಲೆಪಡೆದಿರುವುದು ವಿಶೇಷ ಮತ್ತು ನೂರು ಕಾದಂಬರಿಗಳ ವಿಶ್ಲೇಷಣೆ ಈ ಕೃತಿಯಲ್ಲಿದೆ. ಈ ಕೃತಿ ರಚನೆಯ ಉದ್ದೇಶ ಹಾಗೂ ಆಶಯಗಳ ಕುರಿತು ಅವರು ಹೀಗೆ ಹೇಳಿಕೊಂಡಿದ್ದಾರೆ.

ಡಾ. ಬಿ. ಜನಾರ್ದನ ಭಟ್ ಅವರು ನಮ್ಮ ನಾಡಿನ ನಾಮಾ೦ಕಿತ ಲೇಖಕರಲ್ಲಿ ಒಬ್ಬರು. ಸೃಜನ ಸೃಜನೇತರ ಈ ಎರಡೂ ಪ್ರಕಾರಗಳಲ್ಲೂ ಸಮಾನ ಪ್ರತಿಭೆ, ಪ್ರಭುತ್ವವನ್ನು ಮೆರೆದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಅವರು ಆಂಗ್ಲ ಸಾಹಿತ್ಯವನ್ನು ಓದಿ, ಬೋಧಿಸಿಯೂ ಕನ್ನಡದ ಹಿರಿಮೆ ಗರಿಮೆಯನ್ನು ಎತ್ತಿ ಹಿಡಿಯಲು ಅವಿರತ ಪ್ರಯತ್ನಿಸುತ್ತಾ ಬಂದಿದ್ದಾರೆ. ಮಾತು ಮತ್ತು ಕೃತಿಗಳ ನಡುವೆ ವಿರೋಧಾಭಾಸ ಎದ್ದು ಕಾಣುವ ಇವತ್ತಿನ ಸಂದರ್ಭದಲ್ಲಿ ಅವರು ಒಬ್ಬ ಅಪರೂಪದ ವ್ಯಕ್ತಿಯಾಗಿ, ಲೇಖಕರಾಗಿ, ವಿಮರ್ಶಕರಾಗಿ, ಬಹು ಶ್ರುತ ವಿದ್ವಾಂಸರಾಗಿ ನಮ್ಮ ಗಮನ ಸೆಳೆಯುತ್ತಾರೆ. ಕತೆ, ಕಾದಂಬರಿ, ವಿಮರ್ಶೆ, ಅನುವಾದ, ಮಕ್ಕಳ ಸಾಹಿತ್ಯ, ಅಂಕಣ ಸಾಹಿತ್ಯ, ಗ್ರಂಥ ಸಂಪಾದನೆ, ಜೀವನ ಚರಿತ್ರೆ, ಹೀಗೆ ವಿವಿಧ ಕ್ಷೇತ್ರಗಳಲ್ಲಿ ಕೃಷಿ ಮಾಡಿ ನೂರು ಕೃತಿಗಳನ್ನು ರಚಿಸಿರುವ ಡಾ. ಭಟ್ ಅವರದು ಸಾಂಪ್ರತ ಕನ್ನಡ ಸಾರಸ್ವತ ಲೋಕದಲ್ಲಿ ವಿಶಿಷ್ಟ ಛಾಪು.

ಡಾ. ಜನಾರ್ದನ ಭಟ್ ಅವರದು ನಾನಾ ಬಗೆಯ ವ್ಯಕ್ತಿತ್ವ. ಜಾಗತಿಕ ಸಾಹಿತ್ಯವನ್ನು ಓದಿ ಅನುಭವಿಸಿ ಅಲ್ಲಿನ ವೈವಿಧ್ಯಮಯ ಅನುಭವವನ್ನು ಕನ್ನಡ ಸಹೃದಯರಿಗೆ ಭಾಷಾಂತರದ ಮೂಲಕ ಮೊಗೆ ಮೊಗೆದು ಕೊಟ್ಟ ಶ್ರೇಯಸ್ಸು ಡಾ.ಜನಾರ್ದನ ಡಾ. ಭಟ್ ಅವರಿಗೆ ಸಲ್ಲುತ್ತದೆ.

ಡಾ. ಭಟ್ ಅವರು ವ್ಯಕ್ತಿಯಾಗಿಯೂ, ಸಾಹಿತಿಯಾಗಿಯೂ ಸಾಕಷ್ಟು ಹೆಸರು ಮಾಡಿದವರು. ಸೃಜನಶೀಲ ಲೇಖಕರೂ ಬಹುಶ್ರುತ ವಿದ್ವಾಂಸರೂ ಆಗಿರುವ ಅವರ ಬರವಣಿಗೆಯಲ್ಲಿ ವೈವಿಧ್ಯತೆ ಹಾಗೂ ಪ್ರಯೋಗಶೀಲತೆ ಎದ್ದು ಕಾಣುವ ಅಂಶ. ಸಾಹಿತ್ಯ ನಿರ್ಮಿತಿ ಹಾಗೂ ಕಟ್ಟುವ ಕೈಂಕರ್ಯಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿರುವ ಡಾ. ಭಟ್ ಅವರ ಕನ್ನಡ ಪರಿಚಾರಿಕೆ ನಾಡಿಗೆ ಮಾದರಿಯಾಗಿದೆ. ಒಬ್ಬ ಉತ್ತಮ ಸೃಜನಶೀಲ ಬರಹಗಾರನಲ್ಲಿ ಇರಲೇಬೇಕಾದ ಒಳ್ಳೆಯ ಜೀವನ ದರ್ಶನವನ್ನು ನಾವು ಅವರ ಕೃತಿಗಳಲ್ಲಿ ಕಾಣಬಹುದಾಗಿದೆ. ನೂರು ವೈವಿಧ್ಯಮಯವಾದ ಕೃತಿಗಳನ್ನು ರಚಿಸಿರುವ ಅವರು ಸಾಂಪ್ರತ ಕನ್ನಡದ ಮೇಲ್ಪಂಕ್ತಿಯ ಬರಹಗಾರ, ಸಾಹಿತಿ. ಅವರ ಕೃತಿಗಳ ಸಂಖ್ಯೆ, ಗುಣ ಸತ್ವ, ಸಾರ ಎಲ್ಲ ದೃಷ್ಟಿಗಳಿಂದಲೂ ಮೇಲ್ದರ್ಜೆ ಯದಾಗಿವೆ. ಸಾಹಿತ್ಯ ವಿಮರ್ಶೆಯನ್ನು ಸಾಂಸ್ಕೃತಿಕ ಹೊಣೆಗಾರಿಕೆಯಾಗಿ ಸ್ವೀಕರಿಸಿ ಆ ದಿಸೆಯಲ್ಲಿ ಅವರು ಅಹರ್ನಿಶಿ ಬರವಣಿಗೆಯನ್ನು ಮಾಡುತ್ತಾ ಬಂದಿದ್ದಾರೆ ಎಂಬುದಕ್ಕೆ ಅವರ ನೂತನ ಕೃತಿ, ನೂರನೆಯ ಗ್ರಂಥ ಕಾದಂಬರಿ ಮಾಲೆಯೇ ಸಾಕ್ಷಿ.

ಕನ್ನಡ ಭಾಗ್ಯವಂತ ಸಾಹಿತ್ಯ, ರಾಷ್ಟ್ರಮಟ್ಟದಲ್ಲಿ ಅದಕ್ಕಿರುವ ಸ್ಥಾನಮಾನ ಬಹು ದೊಡ್ಡದು ಎಂಬುದಾಗಿ ನಾಡಿನ ಹಿರಿಯ ಸಾಹಿತಿ ಹಾಮಾನಾ ಅವರು ಹೇಳಿರುವ ಮಾತಿನಲ್ಲಿ ತಥ್ಯವಿದೆ. ಹೊಸಗನ್ನಡ ಸಾಹಿತ್ಯ ಸಾಕಷ್ಟು ಶ್ರೀಮಂತವೂ ವೈವಿಧ್ಯಮಯವೂ ಆಗಿದೆ. ಇಪ್ಪತ್ತನೆಯ ಶತಮಾನ ಕನ್ನಡ ಸಾಹಿತ್ಯದ ಮತ್ತೊಂದು ಸುವರ್ಣಯುಗ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕಾದಂಬರಿ ಸಾಹಿತ್ಯ ಪ್ರಕಾರಕ್ಕೆ ವಿಶಿಷ್ಟವಾದ ಸ್ಥಾನವಿದೆ. ಇಂದಿಗೂ ಕಾದಂಬರಿ ನಮ್ಮ ಕಾಲದ ಶಕ್ತಿಯುತ ಸಾಹಿತ್ಯ ಸಾಧನವಾಗಿರುವುದು ವಿಶೇಷ.

ಇಂಗ್ಲೀಷ್ ಸಾಹಿತ್ಯದ ಪ್ರಭಾವಕ್ಕೆ ಕನ್ನಡ ಒಳಗಾಗುವ ಮುನ್ನವೇ ಕಾದಂಬರಿ ಎನ್ನಬಹುದಾದ ಮೂರು ಕೃತಿಗಳು ರಚಿತವಾಗಿದ್ದವು ಎಂಬ ಅಭಿಪ್ರಾಯವಿದೆ. ಯಾದವನ 'ಕಲಾವತೀ ಪರಿಣಯ' (1815), ಮುಮ್ಮಡಿ ಕೃಷ್ಣರಾಜರ 'ಸೌಗಂಧಿಕಾ ಪರಿಣಯ' ಮತ್ತು ಕೆಂಪುನಾರಾಯಣನ 'ಮುದ್ರಾಮಂಜೂಷ' (1823) ಇವೇ ಈ ಮೂರು ಕೃತಿಗಳು. ಸಂಸ್ಕೃತದಲ್ಲಿರುವ ಬಾಣ ಭಟ್ಟನ ಕಾದಂಬರಿಯನ್ನು ತುರಮುರಿಯವರು 19 ನೆಯ ಶತಮಾನದಲ್ಲಿ ಕನ್ನಡಕ್ಕೆ ಅನುವಾದಿಸಿ 'ಕಾದಂಬರೀ ಕಾವ್ಯದ ಹೊಸಗನ್ನಡ ಗದ್ಯರೂಪ' ಎಂಬ ಹೆಸರಿನಲ್ಲಿ ಪ್ರಕಟಿಸಿದರು. ಕತೆ, ನಿರೂಪಣೆ ವರ್ಣನಾ ಕೌಶಲ್ಯ, ಶೈಲಿ ಮತ್ತು ರಸಾನುಭವದ ದೃಷ್ಟಿಯಿಂದ ಕಾದಂಬರಿ ಅತ್ಯಂತ ಜನಪ್ರಿಯವಾಯಿತು. ಹೀಗೆಯೇ ಮುಂದುವರಿದು ಸಂಸ್ಕೃತದ ಕಾದಂಬರಿ ಕಾವ್ಯದಂತೆ ರಮ್ಯವಾದ ಎಲ್ಲ ಕೃತಿಗಳಿಗೂ ಕಾದಂಬರಿ ಎಂಬ ನಾಮಾಂಕಿತವೇ ಉಳಿಯಿತು ಎಂಬುದಾಗಿ ತ.ಸು. ಶಾಮರಾಯ, ಶ್ರೀನಿವಾಸ ಹಾವನೂರ ಮೊದಲಾದವರು ಈಗಾಗಲೇ ಗುರುತಿಸಿದ್ದಾರೆ.

1899 ರಲ್ಲಿ ಗುಳವಾಡಿ ವೆಂಕಟರಾಯರು ಬರೆದ ಇಂದಿರಾ ಬಾಯಿ ಅಥವಾ ಸದ್ಧರ್ಮ ವಿಜಯ ಕನ್ನಡದ ಪ್ರಥಮ ಸ್ವತಂತ್ರ, ಸಾಮಾಜಿಕ ಕಾದಂಬರಿ ಪ್ರಕಟವಾಗಿ ನೂತನ ಶಕೆ ಆರಂಭವಾದುದು ಈಗ ಇತಿಹಾಸ. ಎಲ್ಲ ಸಾಹಿತ್ಯಗಳಲ್ಲಿ ಕಾದಂಬರಿ ಈಚೆಗೆ ಕಾಣಿಸಿಕೊಂಡ ಪ್ರಕಾರ, ಆದರೆ ವಿಶಿಷ್ಟವಾಗಿ ಅದ್ಭುತವಾಗಿ ಬೆಳೆದ ಪ್ರಕಾರ.

ಏಕೈಕ ಉಜ್ವಲ ಪುಸ್ತಕ!

ಭಾರತವಲ್ಲದೇ ದೇಶ ವಿದೇಶಗಳಲ್ಲೂ ಇವತ್ತಿಗೂ ಸಹ ಕಾದಂಬರಿ ಒಂದು ಜನಪ್ರಿಯ ಸಾಹಿತ್ಯ ಪ್ರಕಾರವೇ ಆಗಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಬಹಳ ಹಿಂದೆಯೇ ಡಿ. ಎಚ್. ಲಾರೆನ್ಸ್ ಕಾದಂಬರಿ ಜೀವನದ ಏಕೈಕ ಉಜ್ವಲ ಪುಸ್ತಕ ಎಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಿರುವುದು ಅವಲೋಕನೀಯವಾಗಿದೆ. ಹೆನ್ರಿ ಜೇಮ್ಸ್‌ನ ಪ್ರಕಾರ 'ಸಾಹಿತ್ಯ ಪ್ರಕಾರಗಳಲ್ಲೆಲ್ಲ ಅತ್ಯಂತ ಸ್ವತಂತ್ರವಾದುದು, ಅತ್ಯಂತ ಸ್ಥಿತಿಸ್ಥಾಪಕ ಗುಣವುಳ್ಳದ್ದು, ಅತ್ಯಂತ ಪ್ರಚಂಡವಾದುದು ಕಾದಂಬರಿ ಪ್ರಕಾರ.'



ಕಾದಂಬರಿ ಮಾಲೆ!

ಇದಕ್ಕೆ 'ಕನ್ನಡ ಕಾದಂಬರಿ ಮಾಲೆ' ಎಂಬ ಹೆಸರಿಡಲಾಗಿದೆ. 1920 ರಲ್ಲಿ 'ಮುತ್ತಿನ ಸರ' ಎಂಬ ಬಂಗಾಳಿ ಕತೆಗಳ ಅನುವಾದ ಸಂಕಲನವು ಪ್ರಕಟವಾಯಿತು. ಅದರಲ್ಲಿನ ಕತೆಗಳು ಮೊದಲೇ 'ಶ್ರೀಕೃಷ್ಣ ಸೂಕ್ತಿ' ಮತ್ತು 'ಕಂಠೀರವ' ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. ಅನುವಾದಕರು ವೆಂಕಟಾದ್ರಿ ಶಾಸ್ತ್ರಿ, 'ಮುತ್ತಿನ ಸರ' ಸಂಕಲನವನ್ನು ಅವರು 'ಕಾದಂಬರಿ ಮಾಲೆ' ಎಂದು ಕರೆದಿದ್ದಾರೆ. ಅದೇ ಪದವನ್ನು ಇಲ್ಲಿ ಬಳಸಲಾಗಿದೆ. ಇಂಗ್ಲಿಷಿನ 'ನಾವೆಲ್' ಪದ ಮತ್ತು ಆ ಪ್ರಕಾರವು ಭಾರತದ ವಿವಿಧ ದೇಶ ಭಾಷೆಗಳಲ್ಲಿ ಪರಿಚಯಿಸಲ್ಪಟ್ಟಾಗ ನಾವೆಲ್, ಉಪನ್ಯಾಸ ಮತ್ತು ಕಾದಂಬರಿ ಎಂಬ ಪದಗಳು ಬಳಸಲ್ಪಟ್ಟವು. ಕನ್ನಡದಲ್ಲಿ ವೆಂಕಟಾಚಾರ್ಯರು ತಾವು ಅನುವಾದಿಸಿದ ಬಂಗಾಳಿ ಕಾದಂಬರಿಗಳನ್ನು 'ನಾವೆಲ್ (ನಾವಲ, ನಾವೆಲ್ಲ) ಅಥವಾ 'ಉಪನ್ಯಾಸ' ಎಂದು ಕರೆದಿದ್ದರು. ತೆಲುಗಿನಲ್ಲಿ ಮೊದಲು 'ವಚನ ಪ್ರಬಂಧ' ಎಂದು ಕರೆಯಲಾರಂಭಿಸಿದ್ದರು. 'ವಿಚಿತ್ರ ನೂತನ ವಚನ ಪ್ರಬಂಧ' (1895. ತೆಲುಗಿನ 'ಕೇಸರೀ ವಿಲಾಸ'ದ ಕನ್ನಡ ಅನುವಾದ) ಎಂಬ ಪದಬಳಕೆಯೂ ಕಾಣಿಸಿಕೊಂಡಿತ್ತು. ಈಗ 'ನವಲಾ' ಎನ್ನುವ ಪದವು ನಿಂತಿದೆ. ಹಿಂದಿಯಲ್ಲಿ 'ಉಪನ್ಯಾಸ್' ಪದವು ಕಾದಂಬರಿಗೆ ಸಲ್ಲುತ್ತಿದೆ. ಕನ್ನಡದಲ್ಲಿ ನಾವೆಲ್ ಪ್ರಕಾರಕ್ಕೆ 'ಕಾದಂಬರಿ' ಎಂಬ ಹೆಸರು 1900 ರ ನಂತರ ಮರಾಠಿಯಿಂದ ಬಂದಿದೆ.

ವೆಂಕಟಾದ್ರಿ ಶಾಸ್ತ್ರಿಗಳು 'ಕಾದಂಬರಿ ಮಾಲೆ' ಎಂದು ಸಣ್ಣಕತೆಗಳನ್ನು ಕರೆದಿರುವುದು ವಿಶೇಷವಾಗಿದೆ. ಈ ಪುಸ್ತಕದಲ್ಲಿ 'ಕಾದಂಬರಿ' ಪ್ರಕಾರಕ್ಕೆ ಸೇರದ ಕೆಲವು ಗದ್ಯ ಕೃತಿಗಳನ್ನು (ಉದಾಹರಣೆಗೆ ಪಂಜೆ ಮಂಗೇಶರಾಯರ ನಾಲ್ಕು ಕತೆಗಳ ಮಾಲಿಕೆ) ಸೇರಿಸಿಕೊಂಡಿರುವುದರಿಂದ ಈ ಶೀರ್ಷಿಕೆ ಅವೆಲ್ಲವನ್ನೂ ಒಳಗೊಳ್ಳಬಹುದೆನ್ನುವುದು ನನ್ನ ಯೋಚನೆಯಾಗಿದೆ. ಹೀಗಾಗಿ ಕನ್ನಡ ಕಾದಂಬರಿಗಳ ಹುಟ್ಟು ಮತ್ತು ಬೆಳವಣಿಗೆ, ಕನ್ನಡ ಕಾದಂಬರಿಯ ಕೇಂದ್ರ, ಪರಂಪರೆಯ ಅತಿಶಯಗಳನ್ನು ಕುರಿತು ಅಧ್ಯಯನ ಮಾಡುವವರಿಗೂ ಈ ಕೃತಿ ಕೈದೀವಿಗೆಯಾಗಿದೆ.

ಕನ್ನಡದ ಮೊದಲ ಕಾದಂಬರಿ ಯಾವುದು?

ಪ್ರಸಕ್ತ ಕನ್ನಡ ಕಾದಂಬರಿ ಮಾಲೆ ಕೃತಿ ವಿಮರ್ಶೆಗೆ ಮಾತ್ರ ಸೀಮಿತವಾದುದಲ್ಲ. ನಮ್ಮ ಕಾದಂಬರಿ ಲೋಕದ ನಡಾವಳಿಯನ್ನು ಸಹ ಇಲ್ಲಿ ಕಟ್ಟಿಕೊಟ್ಟಿರುವುದು ಮಹತ್ವದ ಸಂಗತಿ. ಈ ಕುರಿತು ನಿಲುವು ನೇರ, ಸ್ಪಷ್ಟ. ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ್ ಅರಸರ ಆಸ್ಥಾನದಲ್ಲಿದ್ದ ಕೆಂಪುನಾರಾಯಣ ಶಾಸ್ತ್ರಿಗಳು 1823 ರಲ್ಲಿ ರಚಿಸಿದ 'ಮುದ್ರಾ ಮಂಜೂಷ' ಎನ್ನುವ ಕಾದಂಬರಿ ರೂಪದ ಗ್ರಂಥವೇ ಆಧುನಿಕ ಕನ್ನಡದ ಮೊದಲನೆಯ ಐತಿಹಾಸಿಕ ಕಾದಂಬರಿ ಎಂಬುದನ್ನು ಇಲ್ಲಿ ಒತ್ತಿ ಹೇಳಲಾಗಿದೆ.

ಕನ್ನಡ ಕಾದಂಬರಿ ಮಾಲೆ
(ನೂರು ಕಾದಂಬರಿಗಳ ವಿಮರ್ಶೆ)
ಲೇ: ಡಾ. ಜನಾರ್ದನ ಭಟ್
ಪ್ರ: ಶ್ರೀರಾಮ ಪ್ರಕಾಶನ,
ಮಂಡ್ಯ. 2024
9448930173
ಬೆಲೆ : ರು. 650/-



'ಮುದ್ರಾ ಮಂಜೂಷ'ವನ್ನು ಅದರ ಕೃತಿಕಾರನು ತನ್ನ ಕಾಲದ ವಿಚಾರಗಳನ್ನು ಹೊದಿಸಿ, ವಿಸ್ತರಿಸಿ, 'ಇತಿಹಾಸದ ಆಧಾರದಿಂದ' ಗದ್ಯ ಕಥಾನಕವಾಗಿ ರಚಿಸಿದುದನ್ನು ಪರಿಗಣಿಸಿ ಮೊದಲನೆಯ ಆಧುನಿಕ ಗದ್ಯ ಕೃತಿಯೆಂದು ಒಪ್ಪಬಹುದಾಗಿದೆ. ಐತಿಹಾಸಿಕ ಕಾದಂಬರಿಗಳು ಕಾಲ್ಪನಿಕವಾಗಿರಲು ಸಾಧ್ಯವಿಲ್ಲ. ಅದರಂತೆ, ಮುಮ್ಮಡಿಯವರ ಆಸ್ಥಾನದಲ್ಲಿದ್ದ ಕೆಂಪು ನಾರಾಯಣ ಶಾಸ್ತ್ರಿಗಳು ವಿಶಾಖದತ್ತನ 'ಮುದ್ರಾ ರಾಕ್ಷಸ' ಎಂಬ ಸಂಸ್ಕೃತ ನಾಟಕವನ್ನು ಆಧರಿಸಿ, ಮೈಸೂರಿನ ಆ ಕಾಲದ ರಾಜಕೀಯ ಸ್ಥಿತ್ಯಂತರಗಳನ್ನು ಧ್ವನಿಸುವಂತೆ ರಚಿಸಿದ ಬಹಳ ವಿಶಿಷ್ಟವಾದ ಕೃತಿಯಿದು ಎಂಬುದನ್ನು ಡಾ. ಭಟ್ ಸೊಗಸಾಗಿ ವಿವರಿಸಿದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಲುಪ್ತವಾಗಿ ಹೋದ ಸಂಗತಿಗಳ ಮೇಲೂ ಈ ಮೂಲಕ ಬೆಳಕು ಹಾಯಿಸಲಾಗಿದೆ.

ಇಲ್ಲಿ ಕಾದಂಬರಿ ಸಾಹಿತ್ಯ ಪ್ರಕಾರವನ್ನು ವಿವಿಧ ಕಾಲ ಖಂಡಗಳಲ್ಲಿ ಅಧ್ಯಯನದ ಅನುಕೂಲಕ್ಕಾಗಿ ವಿಂಗಡಿಸಿ ವಿವೇಚಿಸಿರುವುದು ಔಚಿತ್ಯ ಪೂರ್ಣ ಉಪಕ್ರಮ. ಕನ್ನಡ ಕಾದಂಬರಿಗಳ ಪ್ರಾರಂಭ ಕಾಲದ ಕುರಿತು ಡಾ. ಜನಾರ್ದನ ಭಟ್ ಅವರು ಅನೇಕ ಹೊಸ ಹೊಸ ಸಂಗತಿಗಳನ್ನು ಬೆಳಕಿಗೆ ಹಿಡಿದು ಮಹದುಪಕಾರ ಮಾಡಿದ್ದಾರೆ.

ಆಧುನಿಕ ಕನ್ನಡದ ಮೊದಲ ಸೃಜನಶೀಲ ಕೃತಿಗಳನ್ನಾಗಿ ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ' ಸಾಮಾಜಿಕ ಕಾದಂಬರಿ, ಮತ್ತು ಪಂಜೆ ಮಂಗೇಶ ರಾಯರ ಸಣ್ಣ ಕತೆಗಳನ್ನು ಗುರುತಿಸಲಾಗುತ್ತಿದೆ. ಆದರೆ 1848 ರಲ್ಲಿ ಪ್ರಕಟವಾಗಿದ್ದ ಮತ್ತು ಜನಪ್ರಿಯವೂ ಆಗಿದ್ದ ಮೊಗ್ಲಿಂಗರ 'ಈರಾರು ಪತ್ರಿಕೆ'ಯನ್ನು ಕನ್ನಡದ ಮೊದಲನೆಯ ಸೃಜನಶೀಲ ಕೃತಿ ಎಂದು ಕರೆಯುವುದು ಸೂಕ್ತವಾಗಿದೆ. ಎಪಿಸ್ಟಲರಿ ತಂತ್ರದ ಈ ಆಧುನಿಕ ಗದ್ಯವನ್ನು ಬಳಸಿಕೊಂಡ ಕೃತಿ ತನ್ನ ಕಾಲದ ಸಮಾಜದ ಸೂಕ್ಷ್ಮ ಚಿತ್ರಣವನ್ನು ಮಾಡಿದೆ. ಡಾ. ಹಾ. ತಿ. ಕೃಷ್ಣಗೌಡರು ಹೇಳುವಂತೆ, ಒಂದು ಸಾಮಾಜಿಕ ಕಾದಂಬರಿ ಚಿತ್ರಿಸಬಹುದಾದ ಘಟನೆಗಳೆಲ್ಲವನ್ನೂ ಈ ಕೃತಿ ಒಳಗೊಂಡಿದೆ. ಮೊಗ್ಲಿಂಗ್‌ನಿಗೆ ಸಮಾಜವನ್ನು ಕ್ಷಕಿರಣ ಬೀರಿ ನೋಡುವ, ಅದರೆಲ್ಲ ಸೂಕ್ಷ್ಮತೆಗಳನ್ನೂ ಗ್ರಹಿಸುವ ಅಪೂರ್ವ ಶಕ್ತಿ ಸಿದ್ಧಿಸಿದೆ. ಕೃಷ್ಣಗೌಡರು ಹೇಳಿರುವ ಮತ್ತೊಂದು ಮಾತು ಹೀಗಿದೆ: ... ಆಧುನಿಕ ಕನ್ನಡದ ಸೃಜನಶೀಲತೆಯು ಅರೆಗಣ್ಣು ತೆರೆದು ನೋಡುತ್ತಿರುವುದು ಈ ಕೃತಿಯ ಹೆಗ್ಗಳಿಕೆಯಾಗಿದೆ..... ಕನ್ನಡ ಸಾಹಿತ್ಯದ ಹಳೆಬೇರಿಗೆ ಹೊಸ ಚಿಗುರನ್ನು ಈ ಕೃತಿ ಮೂಡಿಸಿತು. ಈ ತಾಜಾತನ ಕನ್ನಡದ ದೃಷ್ಟಿಯಿಂದ ಚಾರಿತ್ರಿಕವಾದದ್ದು. ಹೊಸಗನ್ನಡದ ಆದ್ಯ ಕೃತಿಗಳ ಕುರಿತು ಚರ್ಚಿಸುವ ಸಂದರ್ಭದಲ್ಲಿ ಮೊಗ್ಲಿಂಗ್ ಅವರ ಈ ಕೃತಿಯನ್ನು ಚರ್ಚಿಸದೆ ಹೋದರೆ ಲೋಪವಾಗುತ್ತದೆ. ಆನಂದರಾವ್ ಕೌಂಡಿನ್ಯನ ಮತಾಂತರದ ಕಥಾನಕವನ್ನು ಸ್ವಲ್ಪ ಕಾಲ್ಪನಿಕವಾದ ಬಣ್ಣಗಳನ್ನು ಬೆರೆಸಿ ಮೊಗ್ಲಿಂಗ್ ರಚಿಸಿರುವ ಸಾಹಿತ್ಯ ಕೃತಿ 'ಈರಾರು ಪತ್ರಿಕೆ'ಯ ಬಗೆಗೆ ಚರ್ಚೆಯಾಗಬೇಕಾಗಿದೆ ಎಂಬ ಮಾತು ಕನ್ನಡ ಕಥನ ಸಾಹಿತ್ಯದ ಮರುಮೌಲ್ಯಮಾಪನಕ್ಕೂ ಒತ್ತಾಯಿಸುತ್ತದೆ.

ವರ್ಷಕ್ಕೆ 130 ಕಾದಂಬರಿ!

1885 ರಲ್ಲಿ ಬಿ. ವೆಂಕಟಾಚಾರ್ಯರು ಬಂಕಿಂಚಂದ್ರರ ದುರ್ಗೇಶ ನಂದಿನಿಯನ್ನು ಕನ್ನಡಕ್ಕೆ ಅನುವಾದಿಸಿದಾಗ ಒಂದು ಇಂಗ್ಲಿಷ್ ಮುನ್ನುಡಿಯನ್ನು ಬರೆದರು; ಅದರಲ್ಲಿ ಮೊಟ್ಟ ಮೊದಲು ನಾವೆಲ್ ಪದವನ್ನು ಬಳಸಿದರು ; ಸಾಹಿತ್ಯದ ದೃಷ್ಟಿಯಿಂದ ಕಾದಂಬರಿ ಎನ್ನಬಹುದಾದದ್ದು ಎಂ.ಎಸ್. ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹರಾಯ (1915). 1920ರಿಂದ ಇಪ್ಪತ್ತೈದು ವರ್ಷಗಳಲ್ಲಿ ಕನ್ನಡದಲ್ಲಿ ಸುಮಾರು ಎಂಬತ್ತು ಕಾದಂಬರಿಗಳು ಪ್ರಕಟವಾದವು, ಎಂದರೆ ವರ್ಷಕ್ಕೆ ಸುಮಾರು ಮೂರು. ಈಗ ಕನ್ನಡದಲ್ಲಿ ವರ್ಷಕ್ಕೆ ಸುಮಾರು 130 ಕಾದಂಬರಿಗಳು ಹೊರಬೀಳುತ್ತವೆ ಎಂಬುದಾಗಿ ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ ಕೃತಿಯಲ್ಲಿ ಎಲ್. ಎಸ್. ಶೇಷಗಿರಿ ರಾವ್ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಕ್ರೈಸ್ತ ಸಂವೇದನೆಯ ಕೃತಿಗಳು

ಭಟ್ ಅವರ ಈ ಕೃತಿಯಲ್ಲಿ ಸಂಶೋಧನೆಗೆ ಒಲಿದ ಬುದ್ಧಿ ಹಾಗೂ ಸೃಜನ ಸಾಹಿತ್ಯಕ್ಕೆ ಸ್ಪಂದಿಸುವ ಭಾವ ಕೈ ಕೈ ಹಿಡಿದು ಸಾಗಿರುವುದು ವಿಶೇಷ. ಗೋ. ನ. ಸವಣೂರ್ ಅವರು ಬರೆದ ಹೇಮಲತೆ ಪ್ರಭಾಕರ(1904) ಎನ್ನುವುದು ಕನ್ನಡದ ಆದ್ಯ ಕಾದಂಬರಿಗಳಲ್ಲಿ ಒಂದು. ಆದರೆ ಈ ಕಾದಂಬರಿಯ ಬಗೆಗೆ ಕನ್ನಡದಲ್ಲಿ ಚರ್ಚೆ ಆಗಿಲ್ಲ ಎಂದು ಬೇಸರ ವ್ಯಕ್ತಪಡಿಸುತ್ತಲೇ ಇದೊಂದು ವಾಸ್ತವ ನೆಲೆಗಟ್ಟಿನ ಕೃತಿ, ತಮ್ಮ ಕಾಲದ ಪರಿವರ್ತನೆಗಳನ್ನು ದಾಖಲಿಸಿರುವುದರಿಂದ ಸಾಹಿತ್ಯ ಚರಿತ್ರೆಯಲ್ಲಿಯೂ ಇದಕ್ಕೆ ಐತಿಹಾಸಿಕ ಮಹತ್ವವಿದೆ ಎಂಬುದನ್ನು ಮೊದಲ ಬಾರಿಗೆ ತೋರಿಸಿಕೊಟ್ಟ ಹಿರಿಮೆ ಡಾ. ಜನಾರ್ದನ ಭಟ್ ಅವರಿಗೆ ಸಲ್ಲುತ್ತದೆ. ಈ ಕೃತಿಯ ಮಹತ್ವವನ್ನು ಅವರು ಹೀಗೆ ಗುರುತಿಸಿದ್ದಾರೆ.

'ಹೇಮಲತೆ ಪ್ರಭಾಕರ' ಕನ್ನಡದ ಆದ್ಯ ಸ್ವತಂತ್ರ ಸಾಮಾಜಿಕ ಕಾದಂಬರಿಗಳಲ್ಲಿ ಗಣ್ಯವಾದ ಒಂದು ಕೃತಿಯಾಗಿದೆ. ಇದು ಕ್ರೈಸ್ತ ಮತ ಪ್ರಚಾರದ ಸನ್ನಿವೇಶಗಳನ್ನು, ಅದರ ಪ್ರಕ್ರಿಯೆ, ಪರಿಣಾಮ ಇತ್ಯಾದಿಗಳನ್ನು ದಾಖಲಿಸಿರುವ ಕಾರಣಕ್ಕೆ ಸಾಂಸ್ಕೃತಿಕ ಮಹತ್ವವನ್ನೂ ಪಡೆದಿದೆ. ಕನ್ನಡದಲ್ಲಿ ಬಂದ ಎರಡು ಸೃಜನಶೀಲ ಕ್ರೈಸ್ತ ಕಾದಂಬರಿಗಳೆಂದರೆ ರೆ. ಮೋಗ್ಲಿಂಗ್ ಅವರ 'ಈರಾರು ಪತ್ರಿಕೆ' ಮತ್ತು ಸವಣೂರರ 'ಹೇಮಲತೆ ಪ್ರಭಾಕರ'. 'ಈರಾರು ಪತ್ರಿಕೆ' ಘಟನೋತ್ತರವಾಗಿ ಮತಾಂತರದ ಸಮರ್ಥನೆಯ ಸ್ವರೂಪದಲ್ಲಿದ್ದರೆ, ಈ ಕಾದಂಬರಿ ಮತಾಂತರ ಪ್ರಕ್ರಿಯೆಯ ಒಳಗೆ ನಿಂತು ದಾಖಲಿಸಿದೆ.

ಕ್ರೈಸ್ತ ಧರ್ಮದಲ್ಲಿ ಸ್ತ್ರೀಪುರುಷ ಸಮಾನತೆ ಇದೆ, ಬಾಲ್ಯ ವಿವಾಹ ಇಲ್ಲ, ಮುದುಕರಿಗೆ ಸಣ್ಣಪ್ರಾಯದ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಡುವುದಿಲ್ಲ, ಸ್ತ್ರೀಯರ ವಿದ್ಯಾಭ್ಯಾಸವನ್ನು ಅದು ಪ್ರೋತ್ಸಾಹಿಸುತ್ತದೆ, ಆರೋಗ್ಯಕರ ಜೀವನಶೈಲಿಯನ್ನು ಪ್ರೋತ್ಸಾಹಿಸುತ್ತದೆ, ಅದರ ಧಾರ್ಮಿಕ ಚಿಂತನೆ ಉನ್ನತ ಮಟ್ಟದ್ದಾಗಿದೆ – ಮುಂತಾದ ವಿಚಾರಗಳನ್ನು ಕ್ರೈಸ್ತ ಸಾಹಿತ್ಯ ಜನಮಾನಸದಲ್ಲಿ ಗಟ್ಟಿಯಾಗಿ ನೆಲೆಯೂರಿಸಲು ಪ್ರಯತ್ನಿಸುತ್ತಿತ್ತು. ವಿವಿಧ ಬಗೆಯ ಬರಹಗಳ ಮೂಲಕ (ಪತ್ರಿಕಾ ವರದಿ, ಅನುವಾದ, ಸಂವಾದ, ಸಣ್ಣಕತೆ, ಕಾದಂಬರಿ) ಮಿಷನರಿಗಳು ಮತ್ತು ಮತಾಂತರಗೊಂಡ ಸ್ಥಳೀಯ ಕ್ರೈಸ್ತರು ಇಂತಹ ಸಾಹಿತ್ಯ ರಚನೆಯ ಕಾರ್ಯದಲ್ಲಿ ತೊಡಗಿದ್ದಿದೆ. ಮಿಷನರಿ ಸಾಹಿತ್ಯವು ಹಿಂದೂ ಸಮಾಜದ ದೋಷಗಳನ್ನು ಎತ್ತಿತೋರಿಸಿ ಸಮಾಜ ಸುಧಾರಣೆಗೆ ಕಾರಣವೂ ಆಗಿದೆ. 'ಹೇಮಲತೆ ಪ್ರಭಾಕರ' ಕಾದಂಬರಿ ಆ ಕಾಲಘಟ್ಟದಲ್ಲಿ ಬಂದ ಒಂದು ಐತಿಹಾಸಿಕ ಮಹತ್ವದ ಕೃತಿಯಾಗಿದೆ ಎಂಬುದನ್ನು ಇಲ್ಲಿ ರುಜುವಾತು ಪಡಿಸಿದ್ದಾರೆ.

ವಿಶಿಷ್ಟ ಮೌಲ್ಯಮಾಪನ

ಕನ್ನಡದ ಪ್ರಸಿದ್ಧ ಕಾದಂಬರಿಕಾರರಾದ ಗಳಗನಾಥ, ಕೆರೂರ, ಗುಲವಾಡಿ, ಕುವೆಂಪು, ಮಾಸ್ತಿ, ಕಾರಂತ, ಯು.ಆರ್. ಅನಂತಮೂರ್ತಿ, ಅನಕೃ, ಮೊಕಾಶಿ, ನಿರಂಜನ, ಭೈರಪ್ಪ, ಚಿತ್ತಾಲ, ಬಲ್ಲಾಳ, ದೇವನೂರು, ಶ್ರೀ ಕೃಷ್ಣ ಆಲನಹಳ್ಳಿ, ಲಂಕೇಶ್, ಬೋಳುವಾರು, ಮೊಗಸಾಲೆ, ಸಾರಾ ಅಬೂಬಕರ್, ಚದುರಂಗ, ಕೆ. ಸತ್ಯನಾರಾಯಣ, ಮಿತ್ರಾ ವೆಂಕಟರಾಜ್, ಕೃಷ್ಣಮೂರ್ತಿ ಹನೂರು, ಗಜಾನನ ಶರ್ಮ, ವಸುಧೇಂದ್ರ, ಶಶಿಧರ ಹಾಲಾಡಿ ಮೊದಲಾದ ಲೇಖಕರ ಕೃತಿಗಳಲ್ಲಿ ಒಡೆದುಕಾಣುವ ವಿಶೇಷಗಳನ್ನು ಲೋಕಮುಖಕ್ಕೆ ಸಶಕ್ತವಾಗಿ ತೆರೆದಿಟ್ಟಿದ್ದಾರೆ. ಕನ್ನಡ ಕಾದಂಬರಿಗಳ ಬಹು ರೂಪ ಬಹು ಧ್ವನಿಗಳನ್ನು ವ್ಯಾಪಕವಾಗಿ ಅಧ್ಯಯನಕ್ಕೆ ಗುರಿಪಡಿಸಿರುವ ಈ ವಿಮರ್ಶೆಯ ಕೃತಿ ಕನ್ನಡ ಕಾದಂಬರಿ ಲೋಕ ಇಟ್ಟ ಹೆಜ್ಜೆ ಹಾಗೂ ತೊಟ್ಟ ರೂಪದ ದರ್ಶನವನ್ನು ಮಾಡಿಕೊಡುವಲ್ಲಿ ಯಶಸ್ವಿಯಾಗಿದೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಷ್ಟೇನು ಚರ್ಚೆಗೆ ಒಳಗಾಗದ ಅನೇಕ ಚಾರಿತ್ರಿಕ ಮಹತ್ವದ ಸಂಗತಿಗಳನ್ನು ಈ ಕೃತಿ ಹೊತ್ತು ನಿಂತಿರುವುದು ಅವಲೋಕನೀಯವಾಗಿದೆ. ಅಪಾರವಾದ ಶ್ರಮ, ಅಗಾಧವಾದ ವಿದ್ವತ್ತು ಹಾಗೂ ಸೂಕ್ಷ್ಮ ಚಿಂತನೆಗಳಿಂದ ಕೂಡಿರುವ ಈ ಉದ್ಗ್ರಂಥ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಭಾಗವಾಗಿಯೇ ಓದುಗರಿಗೆ ದಕ್ಕಿರುವುದು ಕನ್ನಡದ ಭಾಗ್ಯ. ಸ್ವಾತಂತ್ರ್ಯ ಪೂರ್ವದ ಕಾದಂಬರಿಗಳನ್ನು ವಿಮರ್ಶೆಗೆ ಒಳಗು ಮಾಡುವಾಗ ಲೇಖಕರು ತೋರುವ ಸಂಯಮ, ಸದೂರ, ವಸ್ತುನಿಷ್ಠತೆ ತೀರಾ ವಿಶೇಷವಾದುದು. ಇಲ್ಲಿ ಚರ್ಚೆಗೆ ಒಳಪಟ್ಟ ಎಲ್ಲ ಕಾದಂಬರಿಗಳನ್ನು ಮರು ಓದು ಮಾಡಲು ಮತ್ತೊಂದು ಮುಕ್ತ ಅವಕಾಶವನ್ನು ಈ ಕೃತಿ ತೆರೆದಿಟ್ಟಿದೆ. ಪ್ರತಿಯೊಂದು ಕೃತಿಯಲ್ಲಿಯೂ ಹುದುಗಿರುವ ಸೃಜನಶೀಲ ಅಭಿವ್ಯಕ್ತಿಯ ನಾವೀನ್ಯವನ್ನು ಗುರುತಿಸುವ ಘನ ಪ್ರಯತ್ನ ಇಲ್ಲಿ ಯಶಸ್ವಿಯಾಗಿ ನಡೆದಿರುವುದು ಉಲ್ಲೇಖನೀಯ ಅಂಶ. ಇವು ಬಿಡಿಬಿಡಿಯಾದ ವಿಮರ್ಶೆಯ ಲೇಖನಗಳು ಅಂತ ಮೇಲುನೋಟಕ್ಕೆ ಅನಿಸಿದರೂ ಕನ್ನಡ ಕಾದಂಬರಿ ಪರಂಪರೆಯ ಸಾಧನೆಯ ಕುರಿತು ಚರ್ಚೆ ಮಾಡಲು ಬೇಕಾದ ಉಪಯುಕ್ತ ಆಕರಗಳು ಇಲ್ಲಿ ಅಡಕಗೊಂಡಿವೆ. ಇದು ಕನ್ನಡಕ್ಕೆ ಲಭಿಸಿರುವ ಗಣ್ಯ ಕೊಡುಗೆಯೂ ಹೌದು.

ಒಂದು ನೂರು ಕನ್ನಡ ಕಾದಂಬರಿಗಳೊಂದಿಗೆ ಡಾ. ಜನಾರ್ದನ ಭಟ್ ಅವರು ನಡೆಸಿರುವ ಅನುಸಂಧಾನ ಒಂದು ಅಸಾಧಾರಣ ಸಾಧನೆ. ಈ ಮೂಲಕ ಕನ್ನಡ ವಿಮರ್ಶೆಗೆ ಒಂದು ಮೌಲಿಕ ಕೃತಿ ಲಭ್ಯವಾಗಿದೆ. ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಕಳೆದ ಒಂದು ಶತಮಾನದ ಸಾಧನೆಯ ಪುನರ್ ಮೌಲ್ಯಮಾಪನವೂ ಇದಾಗಿದೆ.

ಬೆಂಗಳೂರು ಬೆಳವಣಿಗೆಯ ರಹಸ್ಯವೇನು?

ಕಳೆದ ಅರ್ಧ ಶತಮಾನದಲ್ಲಿ ಅಪಾರ ಅಭಿವೃದ್ಧಿ ಹೊಂದಿ, ತಂತ್ರಜ್ಞಾನ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ಖ್ಯಾತಿ ಪಡೆದಿರುವ ಬೆಂಗಳೂರು, ಈ ರೀತಿ ಬೆಳೆಯಲು ಮುಖ್ಯ ಕಾರಣಗಳೇನು? ಪಿಂಚಣಿದಾರರ ಸ್ವರ್ಗವಾಗಿದ್ದ ಈ 'ತೂಕಡಿಸುವ ನಗರ'ದ ಪ್ರಗತಿಯ ರಹಸ್ಯವೇನು? ಈ ವಿಷಯವನ್ನು ಚರ್ಚಿಸುವ ಪುಸ್ತಕವೇ 'ಅನ್‌ಬಾಕ್ಸಿಂಗ್ ಬೆಂಗಳೂರು'. ಮಾಲಿನಿ ಗೋಯಲ್ ಮತ್ತು ಪ್ರಶಾಂತ್ ಪ್ರಕಾಶ್ ಅವರು ಇಂಗ್ಲಿಷ್‌ನಲ್ಲಿ ರಚಿಸಿದ, ಪ್ರತಿಭಾ ನಂದಕುಮಾರ್ ಅವರು ಕನ್ನಡಕ್ಕೆ ಅನುವಾದಿಸಿದ ಈ ಪುಸ್ತಕ ಈಗ ಹೊರಬಂದಿದೆ; ಪುಸ್ತಕದ ಆಯ್ದ ಭಾಗಗಳನ್ನು ಇಲ್ಲಿ ನೀಡಲಾಗಿದೆ.

1947ಕ್ಕೆ ಪೂರ್ವದಲ್ಲಿ ಬೆಂಗಳೂರು ಒಂದು ಬ್ರಿಟಿಷ್ ಔಟ್ ಪೋಸ್ಟ್ ಆಗಿತ್ತು. ಒಂದು ಕಂಟೋನ್ಮೆಂಟ್ ನಗರ. ಸ್ವಾತಂತ್ರ್ಯ ನಂತರ, 1970ರವರೆಗೆ, ಇದೊಂದು ಆಲಸಿ ಚಿಕ್ಕ ನಗರವಾಗಿದ್ದು ನಿವೃತ್ತರ ಸ್ವರ್ಗ ಎನ್ನಿಸಿಕೊಂಡಿತ್ತು. ಎಲ್ಲ ಕಡೆಯೂ ಕೆರೆಗಳು, ಉದ್ಯಾನವನಗಳಿಂದ ಕೂಡಿ ತಂಪಾದ ಹವೆಯಿಂದಾಗಿ ಇದನ್ನು ಗಾರ್ಡನ್ ಸಿಟಿ ಎಂದೂ ಕರೆಯಲಾಗುತ್ತಿತ್ತು. ರಾಜಕೀಯ ಮತ್ತು ಆರ್ಥಿಕ ರಾಜಧಾನಿಗಳಿಂದ ಬಹುದೂರವಾಗಿ ರಾಷ್ಟ್ರಮಟ್ಟದ – ಅಥವಾ ಜಾಗತಿಕ ಮಟ್ಟದ – ಗಮನ ಸೆಳೆಯಲು ಬೆಂಗಳೂರಿಗೆ ಅಧಿಕಾರಶಕ್ತಿಯಾಗಲೀ, ಹಣವಾಗಲೀ, ಗ್ಲಾಮರ್ ಆಗಲೀ ಇರಲಿಲ್ಲ. ಸರ್ಕಾರವು ತನ್ನ ಮುಖ್ಯ ಹೈ-ಟೆಕ್ ಸಂಸ್ಥೆಗಳನ್ನು ನೆಲೆಗೊಳಿಸಲು ಪರಿಪೂರ್ಣವಾಗಿ ಸೂಕ್ತ ಗೂಡಾಗಿತ್ತು. ಹಾಗಾಗಿಯೇ ಬೆಂಗಳೂರು ಭಾರತದ ಸಾರ್ವಜನಿಕ ಉದ್ಯಮಗಳ ರಾಜಧಾನಿಯಾಗಿದ್ದು. ಸರ್ಕಾರವೇ ಅತ್ಯಂತ ದೊಡ್ಡ ಉದ್ಯೋಗದಾತ ಮತ್ತು ಹೂಡಿಕೆ ದಾರ ಆಗಿರುವಾಗ ದೇಶದ ಉದ್ದಗಲಗಳಿಂದ ಅತ್ಯುನ್ನತ ಪ್ರತಿಭಾಶಾಲಿಗಳು ಸುಭದ್ರ ಉದ್ಯೋಗ ಹುಡುಕಿಕೊಂಡು ಬೆಂಗಳೂರಿಗೆ ದೌಡಾಯಿಸಿದರು. ನಗರದ ಕಾಸ್ಮೋ ಪಾಲಿಟನ್ ಸಂಸ್ಕೃತಿ, ಬಹುಭಾಷಾ ಸಮಾಜ, ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ನೀಡಿದ ಮಹತ್ವ ಎಲ್ಲವೂ ಸೇರಿ ಬೆಂಗಳೂರಿಗೆ ವಿಶಿಷ್ಟ ಪ್ರಗತಿಪರ ಛಾಯೆಯನ್ನು ನೀಡಿತ್ತು.

1980ರ ನಂತರ, ಈ ನಿದ್ದೆಯ ನಗರ ಇದ್ದಕ್ಕಿದ್ದಂತೆ ಬಡಿದೆಬ್ಬಿಸಿದಂತೆ ನಾಟಕೀಯವಾಗಿ ಬದಲಾಯಿತು. ನಿವೃತ್ತರ ನಗರ ಇಂದು ಯುವಜನತೆಯ ನಗರವಾಗಿದೆ. ಸಾರ್ವಜನಿಕ ಉದ್ದಿಮೆಯ ರಾಜಧಾನಿ ಇಂದು ಭಾರತದ ಟೆಕ್ ರಾಜಧಾನಿಯಾಗಿದೆ. ಸಾರ್ವಜನಿಕ ಉದ್ದಿಮೆಗಳ 9 ರಿಂದ 5ರ ವರೆಗಿನ ಕಾರ್ಯಾವಧಿಯ ಉದ್ಯೋಗದ ಏಕತಾನತೆಯ ಬದಲಿಗೆ ಇಂದು ಎಗ್ರಾಬಿಗ್ರಿ ಕೆಲಸದ ಅವಧಿಗಳು, ತೀಕ್ಷ್ಣ ಏಳುಬೀಳುಗಳ ಕುದಿಯುವ ಜಗತ್ತಾಗಿದೆ. ಈ ಬೆಳವಣಿಗೆ ಸಾಧ್ಯವಾಗುತ್ತಿರುವುದು ದೇಶ ಮತ್ತು ವಿಶ್ವದಾದ್ಯಂತದಿಂದ ಕಾರ್ಮಿಕರನ್ನು ಆಕರ್ಷಿಸುವ ಅತ್ಯಾಧುನಿಕ ತಂತ್ರಜ್ಞಾನ ಕೈಗಾರಿಕೆಯ ಬೆನ್ನೆಲುಬಿನ ಮೇಲೆ. ಒಂದು ಕಾಲದ ಸ್ಥಿರ ಸರ್ಕಾರೀ ಉದ್ಯೋಗಗಳಿಗೆ ಹೆಸರಾಗಿದ್ದ ಬೆಂಗಳೂರು ಈಗ ಜಗತ್ತಿನ ಅತ್ಯುನ್ನತ ಸ್ಟಾರ್ಟ್‌ಅಪ್ ಹಬ್‌ಗಳಲ್ಲಿ ಒಂದಾಗಿದೆ. ಕಳೆದ ಎರಡು ದಶಕಗಳಲ್ಲಿ ಯಾವಾಗಲೋ ಬೆಂಗಳೂರು ಚಿಕ್ಕ ಭಾರತೀಯ ನಗರವಾಗಿದ್ದಿದ್ದು ಕ್ರಮೇಣ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಗ್ಲೋಬಲ್ ಮೆಟ್ರೊಪೊಲಿಸ್ ಆಗಿ ಬದಲಾಗಿಬಿಟ್ಟಿತು ಎನ್ನುತ್ತಾರೆ ನಿತಿನ್ ಪೈ, ತಕ್ಷಶಿಲಾ ಇನ್‌ಸ್ಟಿಟ್ಯೂಟ್‌ನ ಸಹ ಸಂಸ್ಥಾಪಕರು.

ಯಾವುದೇ ಮಾನದಂಡದಿಂದ ಅಳೆದರೂ ಬೆಂಗಳೂರು ಇಂದು ಭಾರತದ ಟಾಪ್ ಮೂರು ನಗರಗಳಲ್ಲಿ – ದೆಹಲಿ ಮತ್ತು ಮುಂಬೈ ಜೊತೆಗೆ – ಒಂದೆಂದು ಸ್ಥಾನ ಪಡೆದಿರುವುದು ಸಣ್ಣ ಸಾಧನೆ ಏನಲ್ಲ. ಅದರಲ್ಲೂ 1947ರಲ್ಲಿ ದೆಹಲಿ, ಮುಂಬೈ, ಚೆನ್ನೈ ಮತ್ತು ಕೊಲ್ಕತ್ತಾ ಭಾರೀ ಪ್ರಭಾವ ಹೊಂದಿದ್ದಾಗ ರಾಷ್ಟ್ರೀಯ ಗಣನೆಯಲ್ಲಿ ಬೆಂಗಳೂರು ಎಲ್ಲೂ ಕಾಣಿಸಿರಲೇ ಇಲ್ಲ.

1.60 ಕೋಟಿ ಜನಸಂಖ್ಯೆ!

ಕಳೆದ ನಾಲ್ಕು ದಶಕಗಳಲ್ಲಿ, ವಿಶೇಷವಾಗಿ 2000ದ ನಂತರ, ಬೆಂಗಳೂರು ಜಿಗಿದಿದೆ. ರಾಷ್ಟ್ರೀಯ ರಾಡಾರಿನಲ್ಲಿ ಬೆಂಗಳೂರು ಪದೇ ಪದೇ ಕಾಣಿಸಿಕೊಳ್ಳುತ್ತಿದೆ. 2023ರಲ್ಲಿ ಬೆಂಗಳೂರಿನ ಜನಸಂಖ್ಯೆ 13.6 ಮಿಲಿಯನ್ ಎಂದು ಹೇಳಲಾಗಿದ್ದು, ದೆಹಲಿ (32.94 ಮಿಲಿಯನ್), ಮುಂಬೈ (21. ಮಿಲಿಯನ್), ಕೊಲ್ಕತ್ತಾ (15.33 ಮಿಲಿಯನ್) ನಾಲ್ಕನೇ ಸ್ಥಾನ ಪಡೆದಿದೆ. ಆದರೆ 2023ರ ಚುನಾವಣಾ ಮತದಾರರ ಪಟ್ಟಿಯ ಮಾಹಿತಿ ಅನುಸಾರ ಬೆಂಗಳೂರಿನ ಜನಸಂಖ್ಯೆ 16 ಮಿಲಿಯನ್ ಮೀರಿದೆ.

ಎಫ್ ಡಿ ಐ (ಫಾರಿನ್ ಡೈರೆಕ್ಟ್ ಇನ್ವೆಸ್ಟ್‌ಮೆಂಟ್ಸ್) ಕಡೆ ಸ್ವಲ್ಪ ಗಮನ ಹರಿಸೋಣ. 2021-22ರಲ್ಲಿ, ಕರ್ನಾಟಕ (ಬೆಂಗಳೂರಿಗೆ ಪ್ರಾಕ್ಸಿಯಾಗಿ) ರೂ. 1,62,795 ಕೋಟಿಗಳ ಎಫ್ ಡಿ ಐ ಹೂಡಿಕೆ ಪಡೆದು ಮೊದಲ ಸ್ಥಾನದಲ್ಲಿತ್ತು. ಮಹಾರಾಷ್ಟ್ರ (ಮುಂಬೈ ಮತ್ತು ಪುಣೆ ಮುಂದಾಗಿ) ರೂ. 1,14,964 ಕೋಟಿ ಮತ್ತು ದೆಹಲಿ ರೂ. 60,839 ಕೋಟಿ ಹೂಡಿಕೆ ಗಳಿಸಿತ್ತು. ತೆರಿಗೆ ವಸೂಲಿಯಲ್ಲಿಯೂ ಇದೇ ಸ್ಥಿತಿ.



ಅನ್‌ಬಾಕ್ಸಿಂಗ್ ಬೆಂಗಳೂರು
ಇಂಗ್ಲಿಷ್ ಮೂಲ:
ಮಾಲಿನಿ ಗೋಯಲ್
ಪ್ರಶಾಂತ್ ಪ್ರಕಾಶ್
ಕನ್ನಡಕ್ಕೆ:ಪ್ರತಿಭಾ ನಂದಕುಮಾರ್
ಪ್ರ: ಅಂಕಿತ ಪುಸ್ತಕ ಬೆಂಗಳೂರು
ಬೆಲೆ ರು.695/-

2021-22ರಲ್ಲಿ ಮುಂಬೈ ನೇರ ತೆರಿಗೆ ವಸೂಲಿಯಲ್ಲಿ ರೂ. 4,48 ಲಕ್ಷ ಕೋಟಿ ದಾಖಲಿಸಿದ್ದರೆ, ಬೆಂಗಳೂರು ಎರಡನೇ ಸ್ಥಾನದಲ್ಲಿ ರೂ. 1.69 ಲಕ್ಷ ಕೋಟಿ ವಸೂಲಿ ಮಾಡಿತ್ತು. ದೆಹಲಿ ರೂ. 1.66 ಲಕ್ಷ ಕೋಟಿ ದಾಖಲಿಸಿ ಮೂರನೇ ಸ್ಥಾನ ಪಡೆಯಿತು. 2022-21ರಲ್ಲಿ ಕೋವಿಡ್-19ರ ಸಂದರ್ಭದಲ್ಲಿ ಭಾರತದ ನೇರ ತೆರಿಗೆ ವಸೂಲಿ 17.6 ಪ್ರತಿಶತ ಕುಸಿದಾಗ ಬೆಂಗಳೂರಿನ ತೆರಿಗೆ ವಸೂಲಿ 6.6 ಹೆಚ್ಚಳವಾಗಿದ್ದು ಗಮನಾರ್ಹ ಮುಖ್ಯ ಅಂಶ. ಆರ್ ಬಿ ಐ ದತ್ತಾಂಶದ ಅನುಸಾರ, ಮುಂಬೈ ಮತ್ತು ದೆಹಲಿ ನಂತರ ಬೆಂಗಳೂರಿನ ಬ್ಯಾಂಕ್ ಠೇವಣಿ ಮೂರನೇ ಅತ್ಯಧಿಕ ಠೇವಣಿ ಸ್ಥಾನದಲ್ಲಿದೆ.

ಅತಿ ಹೆಚ್ಚು ವಾಹನಗಳು

ಈ ಬೃಹತ್ ಸಂಖ್ಯೆಗಳ ಮಾಹಿತಿಯನ್ನು ಮೀರಿ ಸಣ್ಣ ಮಟ್ಟಗಳಲ್ಲಿ ನೋಡಿದರೆ, ಬೆಂಗಳೂರಿನಲ್ಲಿ 2021-22ರಲ್ಲಿ 1.02 ಕೋಟಿ ವಾಹನಗಳಿವೆ. ದೆಹಲಿ 1.22 ಕೋಟಿ ವಾಹನಗಳನ್ನು ಹೊಂದಿ ಮೊದಲ ಸ್ಥಾನದಲ್ಲಿದ್ದರೆ ಬೆಂಗಳೂರು ಎರಡನೇ ಸ್ಥಾನದಲ್ಲಿದೆ. ಗಮನಿಸಬೇಕಾದ ಮಹತ್ವದ ಸಂಗತಿ ಎಂದರೆ 2013-14ರಲ್ಲಿ ಬೆಂಗಳೂರಿನಲ್ಲಿ ಕೇವಲ 58.9 ಲಕ್ಷ ವಾಹನಗಳಿದ್ದವು.

ವಿಮಾನ ಪ್ರಯಾಣ ಟ್ರಾಫಿಕ್ ಬಗ್ಗೆ ಹೇಳಬೇಕೆಂದರೆ – ಏಪ್ರಿಲ್ 2022 ರಿಂದ ಮಾರ್ಚ್ 2023ರವರೆಗೆ ದೇಶೀಯ ಮತ್ತು ಅಂತಾರಾಷ್ಟ್ರೀಯ ವಲಯದಲ್ಲಿ ದೆಹಲಿ 65 ಮಿಲಿಯನ್, ಮುಂಬೈ 44 ಮಿಲಿಯನ್ ಹಾಗೂ ಬೆಂಗಳೂರು 32 ಮಿಲಿಯನ್‌ನಲ್ಲಿ ಮೂರನೇ ಸ್ಥಾನದಲ್ಲಿದೆ. ಬೆಂಗಳೂರಿನ ರಿಯಲ್ ಎಸ್ಟೇಟ್ ಮಾರುಕಟ್ಟೆ ಕುದಿಯುತ್ತಿದೆ. ನೈಟ್ ಫ್ರಾಂಕ್ ಇಂಡಿಯಾ ಅನುಸಾರ, 2022ರಲ್ಲಿ 14.5 ಮಿಲಿಯನ್ ಚದರ ಅಡಿ ಕಚೇರಿ ಜಾಗ ಬಾಡಿಗೆಗೆ ಲಭ್ಯವಿದ್ದರೆ, ವರ್ಷದಿಂದ ವರ್ಷಕ್ಕೆ ಶೇಕಡಾ 19ರ ದರದಲ್ಲಿ ಬೆಳೆಯುತ್ತಿದೆ. ಬೆಂಗಳೂರು ಭಾರತದ ರಿಯಲ್ ಎಸ್ಟೇಟ್ ರಾಜಧಾನಿ. ಏಷಿಯಾ ಪೆಸಿಫಿಕ್‌ನ ಬೇರೆ ಯಾವುದೇ ಸ್ಥಳದಲ್ಲಿ ಕಂಡುಬರದ ಕಟ್ಟಡ ನಿರ್ಮಾಣ ಕಾರ್ಯ ಬೆಂಗಳೂರಿನಲ್ಲಿ ನಡೆಯುತ್ತಿದೆ ಎನ್ನುತ್ತಾರೆ ಅಂಕುರ್ ಶ್ರೀವಾಸ್ತವ, ರಿಯಲ್ ಎಸ್ಟೇಟ್ ಸಮಾಲೋಚನಾ ಸಂಸ್ಥೆ ಜೆನ್ ರಿಯಲ್‌ನ ಮುಖ್ಯಸ್ಥರು. ದೆಹಲಿ ಬಿಟ್ಟರೆ ಬೆಂಗಳೂರು ದೇಶದ ಎರಡನೇ ಅತ್ಯಂತ ದೊಡ್ಡ ಐ-ಫೋನ್ ಮಾರುಕಟ್ಟೆ ಎನಿಸಿದೆ. ಭಾರತದ ಡಿಜಿಟಲ್ ವ್ಯವಹಾರದಲ್ಲಿ ಬೆಂಗಳೂರು ಮುನ್ನಡೆಯಲ್ಲಿದೆ. 2022ರ ಜನವರಿಯಿಂದ ಅಕ್ಟೋಬರ್‌ವರೆಗೆ ಒಟ್ಟು ರೂ. 3,620 ಕೋಟಿ ಮೌಲ್ಯದ 14.82 ಮಿಲಿಯನ್ ವ್ಯವಹಾರ ದಾಖಲಿಸಿದೆ.

ಯುವ, ಜನನಿಬಿಡ ದೇಶದಲ್ಲಿ – ಒಟ್ಟು 1.4 ಬಿಲಿಯನ್ ಜನಸಂಖ್ಯೆಯಲ್ಲಿ ಅರ್ಧದಷ್ಟು ಜನ ಮೂವತ್ತಕ್ಕಿಂತ ಕಡಿಮೆ ವಯಸ್ಸಿನವರು – ಬೆಂಗಳೂರು ಇನ್ನೊಂದು ಕಾರಣಕ್ಕೂ ಮಹತ್ವದ್ದೆನ್ನಿಸಿದೆ. ಇಂದು ಬೆಂಗಳೂರು ಭಾರತದ ಔಪಚಾರಿಕ ಉದ್ಯೋಗ ವಲಯದ ಅತ್ಯಂತ ದೊಡ್ಡ ಉದ್ಯೋಗ ನಿರ್ಮಿತಿಯ ನಗರವಾಗಿದೆ. ಕಳೆದ ಎರಡು ದಶಕಗಳಿಂದ, ಟೀಮ್ ಲೀಸ್ ಸರ್ವಿಸಸ್ ಎನ್ನುವ ಉದ್ಯೋಗಿಗಳ ಒದಗಿಸುವ ಸಂಸ್ಥೆಯ (ಪ್ರಸ್ತುತ ಇದರಲ್ಲಿ 2.9 ಲಕ್ಷ ಉದ್ಯೋಗಿಗಳು ದಾಖಲಾಗಿದ್ದಾರೆ) ಸಹ ಸಂಸ್ಥಾಪಕ ರಿತುಪರ್ಣ ಚಕ್ರಬೊರ್ತಿ ಮತ್ತು ಅಜಿತ್ ಐಸಾಕ್, ಕ್ವೆಸ್ ಕಾರ್ಪ್ ಎನ್ನುವ ಉದ್ಯೋಗಿಗಳ ಒದಗಿಸುವ ಸಂಸ್ಥೆಯ (ಇದರಲ್ಲಿ 4.7 ಲಕ್ಷ ಉದ್ಯೋಗಿಗಳು ದಾಖಲಾಗಿದ್ದಾರೆ) ಅಧ್ಯಕ್ಷರು, ಭಾರತದ ಉದ್ಯೋಗ ಮಾರುಕಟ್ಟೆಯ ಮೇಲೆ ನಿಕಟ ಗಮನ ಇಟ್ಟಿದ್ದಾರೆ. ಅವರು ಹೇಳುವಂತೆ ಬೆಂಗಳೂರು ಹೊಸಾ ಉದ್ಯೋಗಗಳು ಮತ್ತು ವೇತನ ಎರಡರಲ್ಲೂ ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ನಾನು 2000ದ ಮೊದಲಲ್ಲಿ ಸಂಸ್ಥೆ ಪ್ರಾರಂಭಿಸಿದಾಗ ಪರಿಸ್ಥಿತಿ ಈ ರೀತಿ ಇರಲಿಲ್ಲ. ದೆಹಲಿ ಮತ್ತು ಮುಂಬೈ ಅತ್ಯಂತ ದೊಡ್ಡ ಉದ್ಯೋಗ ಹಬ್ ಆಗಿದ್ದವು ಎನ್ನುತ್ತಾರೆ ಚಕ್ರಬೊರ್ತಿ.

ಐ ಟಿ ಕ್ಷೇತ್ರ

ಬೆಂಗಳೂರಿನ ಆರ್ಥಿಕತೆಯ ಮೇಲೆ ಐಟಿ ಕ್ಷೇತ್ರವು ಮಲ್ಟಿಪ್ಲೈಯರ್ – ಗುಣಿತ – ಪರಿಣಾಮವನ್ನು ಹೊಂದಿದೆ. ಐಟಿ ಕ್ಷೇತ್ರವು ಸೃಷ್ಟಿಸಿದ ಪ್ರತಿ ಉದ್ಯೋಗವು ಸೇವಾ ಕ್ಷೇತ್ರದಲ್ಲಿ ಐದರಿಂದ ಇಪ್ಪತ್ತು ಉದ್ಯೋಗಗಳನ್ನು ಹುಟ್ಟುಹಾಕುತ್ತಿದೆ. ನಗರದ ಸಂಭ್ರಮದ ತಾಂತ್ರಿಕ ಕ್ಷೇತ್ರವನ್ನು ಅವಲಂಬಿಸಿ ಸೇವಾ ವರ್ಗದ – ಅಡಿಗೆಯವರು, ಡ್ರೈವರ್‌ಗಳು, ಡೆಲಿವರಿ ಹುಡುಗರು, ಸೆಕ್ಯೂರಿಟಿ ಗಾಡ್‌ಗಳು, ಶೆಫ್‌ಗಳು, ಥೆರಪಿಸ್ಟ್‌ಗಳು – ಸಮಾನಾಂತರ ಆರ್ಥಿಕ ವ್ಯವಸ್ಥೆ ರೂಪುಗೊಂಡಿದೆ. (ಇದರ ಬಗ್ಗೆ ಇನ್ನಷ್ಟು ವಿವರಗಳು ತರಂಗ ಪರಿಣಾಮ : ಸಮಾನಾಂತರ ಆರ್ಥಿಕತೆ ಅಧ್ಯಾಯದಲ್ಲಿ ಹೇಳಲಾಗಿದೆ) ಸಂಸ್ಕೃತಿ ಪ್ರಭಾವದ ಮಿಶ್ರಣ – ಆಹಾರದಿಂದ ಭಾಷೆಯವರೆಗೆ – ತ್ವರಿತವಾಗಿ ಆಗುತ್ತಿದೆ. ಕಾರಣ ಭಾರತದ ಭಿನ್ನ ಭಾಗಗಳಿಂದ ಮನೆಕೆಲಸಕ್ಕಾಗಿ ಜನಗಳು ಬರುತ್ತಿರು ವುದು. ನನ್ನ ತಮಿಳು ನೆರೆಯವರು ತಮ್ಮ ಬೆಂಗಾಲಿ ಅಡಿಗೆಯವರ ಕಾರಣ ಚೋಲೆ ಭಟೂರೆ, ಪಂಜಾಬಿ ಕಡಿ ಇತ್ಯಾದಿ ಉತ್ತರಭಾರತದ ತಿನಿಸುಗಳನ್ನು ಸವಿಯುತ್ತಿದ್ದಾರೆ. ಬೆಂಗಳೂರು ಭಾರತದ ಪ್ರಥಮ ಸೇವಾ ಕೇಂದ್ರಿತ ನಗರ. ನ್ಯೂಯಾರ್ಕ್, ಲಂಡನ್, ಸಿಲಿಕಾನ್ ವ್ಯಾಲಿ ಮುಂತಾದ ನಗರಗಳು ಸೇವಾ ಕ್ಷೇತ್ರಕ್ಕೆ ಬೃಹತ್ ಮಹತ್ವ ಬರುವುದಕ್ಕೆ ಮೊದಲೇ ಶ್ರೀಮಂತವಾಗಿದ್ದವು ಎನ್ನುತ್ತಾರೆ ಅತುಲ್ ಸತೀಜ, ದ / ನಡ್ಜ್ ಇನ್‌ಸ್ಟಿಟ್ಯೂಟ್‌ನ ಸ್ಥಾಪಕರು. ಆದರೆ ಬೆಂಗಳೂರಿನ ಪಯಣ ಕೇವಲ ಈ ನಗರದ ಬಗ್ಗೆ ಮಾತ್ರವಲ್ಲ, ಅದು ವಿಶ್ವದಲ್ಲಿ ಭಾರತದ ಏಳಿಗೆಯ ಕುರಿತಾಗಿಯೂ ಹೌದು. ಟೆಕ್ ಸಿಟಿಯಾಗಿ ಬೆಂಗಳೂರು ದೇಶದ ಬ್ರಾಂಡ್‌ಗೆ ಹೊಸತೊಂದು ಆಯಾಮವನ್ನು ರೂಪಿಸಲು ನೆರವಾಗಿದೆ. ಕಳೆದ ನಾಲ್ಕು ದಶಕಗಳಲ್ಲಿ ಹಾವಾಡಿಗರ, ಆನೆಗಳ ನಾಡು ಗ್ಲೋಬಲ್ ಸಾಫ್ಟ್‌ವೇರ್ ಪವರ್ ಹೌಸ್ ಆಗಿ ಬದಲಾಗಿಬಿಟ್ಟಿದೆ. ಬಿಸಿನೆಸ್ ಜಗತ್ತಿನ ಹೊರವಲಯದ ಬಡ, ಅಭಿವೃದ್ಧಿ ಹೊಂದುತ್ತಿರುವ ದೇಶ, ಇವತ್ತು ಜಗತ್ತಿನ ಐದನೇ ದೊಡ್ಡ ಆರ್ಥಿಕತೆಯಾಗಿದೆ. ಹೆಚ್ಚಿನ ಅರ್ಥಶಾಸ್ತ್ರಜ್ಞರು ನಮ್ಮನ್ನು ಸಂಪೂರ್ಣವಾಗಿ ಹೊರಗಿನವರಂತೆ ನೋಡುತ್ತಾರೆ. ನಮ್ಮಂತಹ ಕನಿಷ್ಠ ತಲಾ ಆದಾಯದ ಬಡ ದೇಶವು ತಂತ್ರಜ್ಞಾನದಲ್ಲಿ ಇಷ್ಟೊಂದು ಪರಿಣತಿ ಹೊಂದಿರುವುದು, ಸಾಫ್ಟ್‌ವೇರ್ ಅನ್ನು ರಫ್ತು ಮಾಡುವುದು, ಡಿಜಿಟಲ್ ಪವರ್ ಹೌಸ್ ಆಗುವಂತೆಯೇ ಇಲ್ಲ ಎನ್ನುವುದು ಅವರ ಧೋರಣೆ ಎನ್ನುತ್ತಾರೆ ಮನೀಶ್ ಸಬ್ಬರ್ವಾಲ್, ಟೀಮ್ ಲೀಸ್ ಸರ್ವಿಸಸ್‌ನ ವೈಸ್ ಚೇರ್ಮನ್. 2021-22ರಲ್ಲಿ ಭಾರತವು ಸಾಫ್ಟ್‌ವೇರ್ ಸೇವೆಗಳ ರಫ್ತಿನಿಂದ 178 ಬಿಲಿಯನ್ ಡಾಲರ್‌ಗಳನ್ನು ಗಳಿಸಿದ್ದು, ಇದು ಸೌದಿ ಅರೇಬಿಯಾ 2021ರಲ್ಲಿ ಪೆಟ್ರೋಲಿಯಂ ರಫ್ತಿನಿಂದ ಗಳಿಸಿದ್ದಕ್ಕಿಂತ ಹೆಚ್ಚು. ಇಪ್ಪತ್ತೊಂದನೇ ಶತಮಾನದಲ್ಲಿ ಭಾರತದ ತಂತ್ರಜ್ಞಾನ ಉತ್ಕರ್ಷದ ಪ್ರಧಾನ ರೂವಾರಿ ಬೆಂಗಳೂರು. ಅಲ್ಲದೇ, ಐಟಿ ಸೇವೆಗಳ ರಫ್ತಿನಿಂದ ಆದಾಯ ಇಲ್ಲದೆ ಹೋಗಿದ್ದರೆ ಪ್ರಸ್ತುತ ಭಾರತದ ಚಾಲ್ತಿಖಾತೆಯಲ್ಲಿ ಕೊರತೆ ಎಷ್ಟಿರುತ್ತಿತ್ತು ಊಹಿಸಿ.

ಅದಕ್ಕೆ ಸರಿಸಮನಾಗಿ, ಬೆಂಗಳೂರು ಭವಿಷ್ಯದಲ್ಲೂ ಮಹತ್ವದ ಪಾತ್ರ ವಹಿಸಲಿದೆ. ಎಲ್ಲ ಕಡೆಯೂ ಅಡೆತಡೆಗಳಿವೆ. ಹಳೆಯ ಆರ್ಥಿಕತೆಯ ಸ್ಥಾನದಲ್ಲಿ ಹೊಸ ಆರ್ಥಿಕತೆ ಬರುತ್ತಿದೆ. ಜಾಗತೀಕರಣದ ನಕಾರ (ಡಿಗ್ಲೋಬಲೈಸೇಶನ್) ಮತ್ತು ಚೈನಾ ಪ್ರಸಂಗ, ಜಗತ್ತು ವಿಕಸನಗೊಳ್ಳುತ್ತಿರುವುದಕ್ಕೆ ವಿಭಿನ್ನ ಕ್ರಿಯಾಶೀಲತೆಯನ್ನು ಪರಿಚಯಿಸುತ್ತಿದೆ. ಡಿಜಿಟಲೀಕರಣದ ಅಲೆಯ ಮಧ್ಯದಲ್ಲೇ ವಲಯದಿಂದ ವಲಯಕ್ಕೆ ಗುರುತ್ವಾಕರ್ಷಣೆಯ ಕೇಂದ್ರ ಬದಲಾಗುತ್ತಿದ್ದಂತೇ – ಆಟೋಮೊಬೈಲ್‌ನಿಂದ ಹಣಕಾಸಿನವರೆಗೆ, ಶಿಕ್ಷಣದಿಂದ ಬಾಹ್ಯಾಕಾಶದವರೆಗೆ – ಬೆಂಗಳೂರಿನ ಟೆಕ್ ಹಬ್, ಪರಿಣಾಮಗಳನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ.

ವಿಶಿಷ್ಟ ಸನ್ನಿವೇಶಗಳು ವಿಶ್ವದ ಬಿಸಿನೆಸ್‌ನ ಹೃದಯದಲ್ಲಿ ತಂತ್ರಜ್ಞಾನವನ್ನು ಕೂಡಿಸುತ್ತಿದೆ ಮತ್ತು ಭಾರತವು ಈ ಮೆಗಾ ವರ್ಗಾವಣೆಗಳ ಹೃದಯಭಾಗದಲ್ಲಿದೆ. ಇವತ್ತು ತಂತ್ರಜ್ಞಾನ, ಕಾರ್ಯತಂತ್ರದ ಬೆಣೆಯಾಗಿದ್ದು ಅದರ ಸುತ್ತಲೂ ಜಾಗತಿಕ ನೆಲೆಯಲ್ಲಿ ಕಾರ್ಪೊರೇಟ್ ಭಾಗ್ಯ ಮರುವ್ಯವಸ್ಥೆಗೊಳಗಾಗುತ್ತಿದೆ ಎನ್ನುತ್ತಾರೆ ಕಿರಣ್ ಮಜುಂದಾರ್ –ಷಾ. ಭಾರತದ ಡಿಜಿಟಲ್ ಸಾರ್ವಜನಿಕ ಸೌಕರ್ಯಗಳನ್ನು ನೋಡಿ ಅಥವಾ ಇಂಡಿಯಾ ಸ್ಟ್ಯಾಕ್ (ಆಧಾರ್ ಮತ್ತು ಯುಪಿಐ ಒಳಗೊಂಡಂತೆ) ದೇಶವನ್ನು ದಾಪುಗಾಲಿನಲ್ಲಿ ಮುನ್ನಡೆಯುವಂತೆ ಮಾಡಿದೆ ಮತ್ತು ಜಗತ್ತಿನ ಅತ್ಯಂತ ಮುಂದುವರಿದ ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದೆ.

ಬೆಂಗಳೂರು ತನ್ನ ಶ್ರೀಮಂತ ಮತ್ತು ವೈವಿಧ್ಯಮಯ ಟೆಕ್ ಪರಿಸರ ವ್ಯವಸ್ಥೆ ಸಹಿತ, ಟೆಕ್ ಜಗತ್ತಿನಲ್ಲಿ ಆಗಲಿರುವ ಕೆಲವು ಬೃಹತ್ ಮಾರ್ಪಾಟುಗಳ ಅಧಿಕೇಂದ್ರ ವಾಗಲಿದೆ, ನಿರೀಕ್ಷಿಸಿ ಎನ್ನುತ್ತಾರೆ ನಂದನ್ ನಿಲೇಕಣಿ.

ಭಾರತದ ಭವಿಷ್ಯವನ್ನು ರೂಪಿಸುವುದು

ಬೆಳವಣಿಗೆ, ಬದಲಾವಣೆ, ಪಯಣ – ಬೆಂಗಳೂರನ್ನು ಹೇಗೆ ಅರ್ಥೈಸಿ ಕೊಳ್ಳುವುದು? ಬೆಂಗಳೂರು ಈ ನೆಲೆಗೆ ಬಂದಿದ್ದಾದರೂ ಹೇಗೆ? ಅಂತಹ ಉಜ್ವಲ ಗ್ಲೋಬಲ್ ಟೆಕ್ ಹಬ್ ಆಗಲು ಕಾರಣವೇನು? ಬೆಂಗಳೂರಿನ ಅಂತಹ ಯಾವ ವಿಶೇಷತೆ ಜಗತ್ತಿನ ತಜ್ಞ ಜನರನ್ನು ಇಲ್ಲಿಗೆ ಆಕರ್ಷಿಸುತ್ತಿದೆ? ಈ ಪಯಣ ಯಾಕೆ ಮಹತ್ವದ್ದು? ಈ ಸತತ ಬೆಳವಣಿಗೆ, ಅದು ಎಸೆಯುವ ಸವಾಲುಗಳು, ಬೆಂಗಳೂರಿನ ಡಿಎನ್‌ಎ ಅನ್ನು ಹೇಗೆ ಬದಲಿಸುತ್ತಿದೆ? ಈ ಸಂಕೀರ್ಣ ಪ್ರಶ್ನೆಗಳಲ್ಲಿ ಕೆಲವನ್ನು ಅನಾವರಣಗೊಳಿಸುವುದು ಈ ಪುಸ್ತಕದ ಆಶಯ.

ವಿಶ್ವವಾಣಿ ಅಂಕಿತ ಟಾಪ್ ಟೆನ್

1



ರಾಜಮಾತೆ ಕೆಂಪನಂಜಮ್ಮಣ್ಣಿ
(ಮಾದರಿ ಮೈಸೂರಿನ ತಾಯಿಬೇರು-ಕಾದಂಬರಿ)
ಲೇ: ಡಾ। ಗಜಾನನ ಶರ್ಮ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 495/-

2



ರೇಷ್ಮೆ ಬಟ್ಟೆ
(ಒನಪು ಬಟ್ಟೆ,ಒರಟು ದಾರಿ-ಕಾದಂಬರಿ)
ಲೇ: ವಸುಧೇಂದ್ರ
ಪ್ರ: ಛಂದ ಪುಸ್ತಕ, ಬೆಂಗಳೂರು
ಬೆಲೆ : ರೂ 450/-

3



ಶಿವನಿಗಾಗಿ ಕಾಯುತ್ತ
(ಕಾಶಿ ಜ್ಞಾನವಾಪಿಯ ಸತ್ಯದ ಅನಾವರಣ)
ಲೇ: ವಿಕ್ರಮ್ ಸಂಪತ್
ಅನು : ಜಿ.ಎಲ್.ಶೇಖರ್,
ನರೇಂದ್ರಕುಮಾರ್ ಎಸ್.ಎಸ್.
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಬೆಲೆ : ರೂ 475/-

4



ಮುಚ್ಚಿಟ್ಟ ಕರ್ನಾಟಕ ಚರಿತ್ರೆ
(ಕನ್ನಡ ಅಸ್ಮಿತೆಯ ಪುನರುತ್ಥಾನದ ಇತಿಹಾಸ)
ಲೇ: ರಾಕೇಶ್ ಶೆಟ್ಟಿ
ಪ್ರ: ನಿಲುಮೆ ಪ್ರಕಾಶನ, ಬೆಂಗಳೂರು
ಬೆಲೆ : ರೂ 350/-

5



ಹಿಮಾಲಯದ ಋಷಿಗಳ ದಿವ್ಯ ಸಂದೇಶಗಳು
(ಸಕಾಲಿಕ ಮತ್ತು ಕಾಲಾತೀತ)
ಲೇ: ಗುರು ಸಕಲಮಾ
ಪ್ರ: ಸಕಲಮಾ ಪ್ರಕಾಶನ, ಬೆಂಗಳೂರು
ಬೆಲೆ : ರೂ 399/-

6



ಕ್ಯಾಂಡೀಡ್
(ಸದ್ಗುಣ ಸಂಪನ್ನ- ಕಾದಂಬರಿ)
ಲೇ: ವೋಲ್ಟೇರ್
ಅನು : ರಾಜಣ್ಣ ತಗ್ಗಿ
ಪ್ರ: ಸೃಷ್ಟಿ ಪ್ರಕಾಶನ, ಬೆಂಗಳೂರು
ಬೆಲೆ : ರೂ 230/-

7



ಆರ್ಟಿಫಿಶಿಯಲ್ ಇಂಟೆಲಿಜೆನ್ಸ್
(ಆಧುನಿಕ ತಂತ್ರಜ್ಞಾನ ಕುರಿತ ಲೇಖನಗಳು)
ಲೇ: ಮಧು ವೈ.ಎನ್
ಪ್ರ: ನೆಲ ಮುಗಿಲು ಪ್ರಕಾಶನ, ಬೆಂಗಳೂರು
ಬೆಲೆ : ರೂ 170/-

8



ಕುಂತಿ - ಪಾಂಡು
(ಅವಘಡವಾದ ಅವಕಾಶಗಳಲ್ಲೇ ಆದರ್ಶ ಮೆರೆದವರು)
ಲೇ: ಜಗದೀಶಶರ್ಮಾ ಸಂಪ
ಪ್ರ: ಸಾವಣ್ಣ ಎಂಟರ್ ಪ್ರೈಸಸ್, ಬೆಂಗಳೂರು
ಬೆಲೆ : ರೂ 150/-

9



ಕುಡಿಯೋಣು ಬಾರಾ
(ಗುಂಡಿನ ಕುರಿತ 'ಸಾಂಸ್ಕೃತಿಕ'ಹರಟೆ)
ಲೇ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ : ರೂ 300/-

10



ತೇಜಸ್ವಿ ಪ್ರಸಂಗಗಳು
(ತೇಜಸ್ವಿ ಕುರಿತ ಲೇಖನಗಳು)
ಲೇ: ಡಾ। ಎಚ್.ಎಸ್. ಸತ್ಯನಾರಾಯಣ
ಪ್ರ: ಅಮೂಲ್ಯ ಪುಸ್ತಕ, ಬೆಂಗಳೂರು
ಬೆಲೆ : ರೂ 150/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755 ಮೊಬೈಲ್ ನಂ: 9019190502

ಅಪರಿಚಿತ ಲೋಕದ ಅನಾವರಣ

ನಾಟಕಕಾರರೆಂದೇ ಹೆಚ್ಚು ಪ್ರಸಿದ್ಧರಾಗಿರುವ ಡಿ.ಎಸ್. ಚೌಗಲೆಯವರ ಹೊಸ ಕಾದಂಬರಿ 'ಸದರ ಬಜಾರ್', ಬೆಚ್ಚಿ ಬೀಳಿಸುವ ಹೊಸ ಲೋಕವೊಂದರ ಪರಿಚಯ ಮಾಡಿಸುತ್ತದೆ. ಸಂಭಾವಿತರು ಎಂದುಕೊಂಡಿರುವ ಓದುಗ ವರ್ಗಕ್ಕೆ ತೀರಾ ಅಪರಿಚಿತ ಎನಿಸುವ, ವೇಶ್ಯಾವಾಟಿಕೆಯ ಹಿನ್ನೆಲೆಯ ಈ ಕಾದಂಬರಿಯು, ಕೆಲವು ಬಾರಿ ಹಸಿ ಹಸಿ ಎನ್ನಬಹುದಾದ ವಿವರಗಳಿಂದ, ವಿಶಿಷ್ಟ ಆಯಾಮದ ಕಥನವನ್ನು ತೆರೆದಿಡುವುದು ವಿಶೇಷ ಎನಿಸಿದೆ. ತಾವು ಯೋಚಿಸಿರುವ ಒಂದು ಬೃಹತ್ ಕಾದಂಬರಿಯನ್ನು ರಚಿಸುವ ಮುಂಚೆ, ಮಧ್ಯಮಗಾತ್ರದ 'ಸದರ ಬಜಾರ್' ರಚಿಸಿದ್ದೇನೆ ಎಂದು ಲೇಖಕರು ಹೇಳಿಕೊಂಡಿದ್ದಾರೆ. ಕನ್ನಡದ ಅಪರೂಪದ ಕಾದಂಬರಿಗಳಲ್ಲಿ ಸದರ ಬಜಾರ್ ಒಂದು ಎಂದು ಹೇಳಬಹುದು. ಈ ಕಾದಂಬರಿಯ ವೈಶಿಷ್ಟ್ಯವನ್ನು ಬೆನ್ನುಡಿಯಲ್ಲಿ ಹಿರಿಯ ವಿಮರ್ಶಕ ರಾಜೇಂದ್ರ ಚೆನ್ನಿಯವರು ಹಿಡಿದಿಟ್ಟಿರುವ ಪರಿ ಸೊಗಸಾಗಿದೆ. ''ಡಿ. ಎಸ್. ಚೌಗಲೆ ಅವರ ಕಾದಂಬರಿ 'ಸದರಬಜಾರ್' ಹಲವು ವರ್ಗಗಳ ಓದುಗರಿಗೆ ಅಪರಿಚಿತವಾದ ಸಾಮಾಜಿಕ ಲೋಕವೊಂದನ್ನು ತೆರೆದಿಡುತ್ತದೆ. ಕರ್ನಾಟಕ ಮಹಾರಾಷ್ಟ್ರಗಳ ಗಡಿಭಾಗ, ಈಚಲ್ ಕರಂಜಿ, ಅಬ್ದುಲ್‌ಲಾಟ್ ಇವು ಜವಳಿ ಉದ್ಯಮ, ಸಕ್ಕರೆ ಕಾರಖಾನೆಗಳು ಇವುಗಳಿಂದ ಬೆಳೆದ ವಿಶಾಲವಾದ ಕಾರ್ಮಿಕರ ಕಾಲನಿಗಳಂತೆ ಬೆಳೆದ ಊರುಗಳು. ಇಲ್ಲಿಗೆ ಕೆಲಸ ಹುಡುಕಿಕೊಂಡು ಬಂದವರು, ಬರಗಾಲದಲ್ಲಿ ಗುಳೆ ಹೊರಟು ಬಂದವರು, ಕುಟುಂಬ ಹಾಗೂ ಸಮಾಜಗಳ ದೌರ್ಜನ್ಯಗಳಿಂದಾಗಿ ಓಡಿ ಬಂದು ಇಲ್ಲಿ ವೇಶ್ಯೆಯರಾಗಿ ಬದುಕುತ್ತಿರುವವರು– ಇವರಲ್ಲಿ ಬಹುಪಾಲು ಕರ್ನಾಟಕದವರು, ಕನ್ನಡ ಭಾಷಿಕರು. ಗಡಿ ಭಾಗಗಳಲ್ಲಿ ಸಹಜವಾಗಿರುವ ಸಂಕರ ಭಾಷೆಯಲ್ಲಿ ಮಾತನಾಡುವವರು. ಕೆಲವರು ತಾಯಿನುಡಿಯನ್ನು ಮರೆತವರು. ಈ ಸಮಗ್ರ ಸಾಮಾಜಿಕ ಲೋಕವನ್ನು ಚೌಗಲೆಯವರು ತಮ್ಮ ವಿಶಿಷ್ಟವಾದ ಶೈಲಿಯಲ್ಲಿ ಈ ಕೃತಿಯಲ್ಲಿ ನಿರೂಪಿಸಿದ್ದಾರೆ. ಕಥನದ ಮಾದರಿ ವಾಸ್ತವ ವಾದವನ್ನು ಮೀರಿದ, 'ನ್ಯಾಚುರಲಿಸಂ' ಎಂದು ಒಂದು ಕಾಲಕ್ಕೆ ಪ್ರಸಿದ್ಧವಾದ ಮಾದರಿಯಿದು. ಶಿಷ್ಟ ಸಮಾಜವು ನೋಡಲು ಬಯಸದ ಕೊಳೆಗೇರಿಗಳ, ವೇಶ್ಯಾವಾಟಿಕೆಗಳ, ಶ್ರಮಜೀವಿ ಬದುಕಿನ ಬಡತನ, ಹತಾಶೆಗಳ ಜೊತೆಗೆ ಬದುಕಬೇಕೆನ್ನುವ ಛಲ ಇವುಗಳನ್ನು ಕೆಲವೊಮ್ಮೆ ಓದುಗರಿಗೆ ಶಾಕ್ ಆಗುವಂಥ ವಿವರಗಳು ಹಾಗೂ ಭಾಷೆಯ ಮೂಲಕ ಬಿಚ್ಚಿಡುವ ಮಾದರಿ ಇದಾಗಿದೆ. ವಿಡಿಯೋ ಕ್ಯಾಸೆಟ್‌ಗಳು ಹಳ್ಳಿಗಳಿಗೂ ಪ್ರವೇಶ ಮಾಡಿ ವಿಡಿಯೋ ಪಾರ್ಲರ್‌ಗಳಲ್ಲಿ ನೀಲಿ ಚಿತ್ರಗಳನ್ನು ತೋರಿಸುವುದರಿಂದ ಉಂಟಾದ ಬದಲಾವಣೆಗಳ ವರ್ಣನೆಯಿಂದ ಆರಂಭವಾಗುವ ಈ ಕೃತಿ ಮುಂದೆ ಶಿವೂನ ಪ್ರಜ್ಞೆಯ ಮೂಲಕ ಸಾಮಾಜಿಕ ವಾಸ್ತವಗಳ ದಾಖಲೆಯನ್ನು ಮಾಡುತ್ತದೆ. ಇದರಲ್ಲಿ ಲೈಂಗಿಕತೆ, ಸ್ಥಳೀಯ ರಾಜಕೀಯ, ಕಾರ್ಮಿಕರ ಸಂಘಟನೆಗಳು, ಸದರಬಜಾರ್‌ನಂಥ ಕೆಂಪು ದೀಪದ ನರಕಗಳು ಇವೆಲ್ಲವು ಕೃತಿಗೆ ಬಂದು ಸೇರುತ್ತವೆ. ಕೃತಿಯ ಪ್ರಭಾವಿಯಾದ ಕೇಂದ್ರ, ರೂಪಕವೆಂದರೆ 'ಸದರಬಜಾರ್'. ಮನುಷ್ಯ ಜೀವಿಗಳನ್ನು ಮಾರುಕಟ್ಟೆಯ ವಸ್ತುಗಳನ್ನಾಗಿಸುವ ಬಂಡವಾಳದ ಮೂರ್ತ ರೂಪವಾಗಿದೆ ಇದು. ಮನುಷ್ಯ ಜೀವಿಗಳ ಸ್ವಭಾವದ ಮೂಲದಲ್ಲಿಯೇ ಇರುವ ಆದಿಮ ಪ್ರವೃತ್ತಿಗಳ ಸಂಕೇತವೂ ಆಗಿದೆ. ಇದರ ಸುತ್ತ ಹಾಗೂ ಹಲವು ಊರುಗಳ ಸುತ್ತ ಚಲಿಸುವ ಈ ಕೃತಿಯಲ್ಲಿ ತಮ್ಮ ಜೀವಂತಿಕೆಯ ಮೂಲಕ ನಮ್ಮನ್ನು ಆವರಿಸಿಕೊಳ್ಳುವ ಹತ್ತಾರು ಪಾತ್ರಗಳಿವೆ. ನಿರೂಪಕನು ಕೇಳುವ ಅನೇಕ ಪ್ರಶ್ನೆಗಳಿಗೆ ನಮ್ಮಲ್ಲಿ, ನಮ್ಮ ಸಮಾಜಗಳಲ್ಲಿ ಜವಾಬು ಇಲ್ಲ ಎನ್ನುವುದೇ ಕಟು ವಾಸ್ತವವಾಗಿದೆ.'' (ಬೆನ್ನುಡಿಯಲ್ಲಿ ರಾಜೇಂದ್ರ ಚೆನ್ನಿ)



ಸದರ ಬಜಾರ್
(ಕಾದಂಬರಿ)
ಲೇ: ಡಿ.ಎಸ್. ಚೌಗಲೆ
ಪ್ರ: ವೀರಲೋಕ ಪ್ರಕಾಶನ
7022122121
ಬೆಲೆ ರು. 150/-

ತೀವ್ರ ಬರವಣಿಗೆಯ ರತ್ನ ಖಂಡ

» ಕೆ. ಸತ್ಯನಾರಾಯಣ

ಸಾಮಾಜಿಕ, ರಾಜಕೀಯ ಅನುಭವ ವಿಚಾರಗಳ ಜಗತ್ತಿಗೇ ಸೀಮಿತವಾಗಿರುವ ಕನ್ನಡ ಕಾದಂಬರಿ ಲೋಕಕ್ಕೆ ಮಹಾಬಲಮೂರ್ತಿಯವರ 'ರತ್ನಖಂಡ' ಕಾದಂಬರಿ ವಿಶಿಷ್ಟವಾದ ಇನ್ನೊಂದು ಜಗತ್ತನ್ನು ಸೇರಿಸುತ್ತದೆ. ಇಲ್ಲಿಯ ಅನುಭವ ವಲಯ, ಪಾತ್ರ ವಿನ್ಯಾಸ, ಕಾದಂಬರಿಕಾರರು ನಂಬುವ ವಿಚಾರಗಳು ಕಾದಂಬರಿಯನ್ನು ಸಮಕಾಲೀನ ಕಾದಂಬರಿಗಳಿಗಿಂತ ಭಿನ್ನವಾಗಿಸುತ್ತದೆ.

ದೀರ್ಘ ಕಾಲದ ಸಂಬಂಧವಿರುವ, ಆದರೆ ಇಡಿಯಾಗಿ ಒಬ್ಬರಿಗೊಬ್ಬರು ತೋರಿಸಿಕೊಳ್ಳಲಾಗದ ಗಿರಿಧರವ್ಯಾಸ-ಕೃಷ್ಣ ಕಾಮತರ ವೃತ್ತಿಜೀವನ, ಅಂತರಂಗದ ಬದುಕು, ಸಾಕ್ಷಾತ್ಕಾರದ ಹಂಬಲ ಕಾದಂಬರಿಯ ವಿನ್ಯಾಸವನ್ನು ರೂಪಿಸಿದೆ. ಇನ್ನೂ ಬೇರೆ ಕೆಲವು ಪಾತ್ರಗಳು ಕಾದಂಬರಿಯಲ್ಲಿ ಮೂಡಿಬಂದರೂ, ಇವರಿಬ್ಬರ ಹುಡುಕಾಟಕ್ಕೂ ಆ ಪಾತ್ರಗಳು ಪೂರಕವಾಗಿವೆಯೇ ಇವೆ. ಅಂತೆಯೇ ಪರಸ್ಪರ ಬೆಳಕು ಚೆಲ್ಲಿಕೊಳ್ಳುತ್ತವೆ. ಪಾತ್ರಗಳು ತಮ್ಮ ವರ್ತನೆ ಮತ್ತು ಮಾತುಕತೆಗಳಿಗಿಂತ ಇನ್ನೊಬ್ಬರ ಮೂಲಕವೇ ವಿನ್ಯಾಸಗೊಳ್ಳುತ್ತಾ ಹೋಗುತ್ತವೆ. ಇದು ಮುಖ್ಯ ಪಾತ್ರಗಳ ಬಗ್ಗೆಯೂ ನಿಜ, ಪೂರಕ ಪಾತ್ರಗಳ ಬಗ್ಗೆಯೂ ನಿಜ.

ವಾಸ್ತವವಾಗಿ ಸಾಮಾಜಿಕ ಪರಿಭಾಷೆಯಲ್ಲೇ ಕಾದಂಬರಿ ಬರೆಯಲ್ಪಟ್ಟಿದ್ದರೂ, ಕಾದಂಬರಿ ಮಂಡಿಸುವ, ಶೋಧಿಸುವ ವಾಸ್ತವ, ನಾವು ತಿಳಿದ ಸಾಮಾಜಿಕ ವಾಸ್ತವವಲ್ಲ. ಸಾಮಾಜಿಕ ವಾಸ್ತವ ಮತ್ತು ತರ್ಕಬದ್ಧ ದೃಷ್ಟಿಗೆ ಗೋಚರವಾಗುವ ಸತ್ಯಗಳು ಮಾತ್ರವೇ ನಿಜವಲ್ಲ, ಸಂಪೂರ್ಣವಲ್ಲ ಎಂಬ ನಂಬಿಕೆ ಲೇಖಕರಿಗಿದೆ. ಈ ನಂಬಿಕೆಯನ್ನು ಅವರು ತುಂಬು ಆತ್ಮ ವಿಶ್ವಾಸದಿಂದ ಮುನ್ನುಡಿಯಲ್ಲಿ ಬರೆದುಕೊಂಡಿದ್ದಾರೆ. ಈ ಮನಸ್ಸು ಭೂಮಿಜನ್ಯವಲ್ಲ. (ಪುಟ 35) ಜಗತ್ತಿನ ನಿಯಮದಲ್ಲಿ ಯಾವುದೋ ಅನೂಹ್ಯ ಶಕ್ತಿಯ ದಿವ್ಯವಾದ ತೇಜಸ್ಸಿನ ಭಾಗ (ಪುಟ 37) ಎಲ್ಲವೂ ಒಂದೊಂದಾಗಿ ಕೊಂಡಿ ಕಳಚಿಕೊಳ್ಳುತ್ತಾ, ಇನ್ನೂ ಏನೇನನ್ನೋ ಹೊಸದಾಗಿ ಕೊಂಡಿ ಕೂಡಿಸುತ್ತಾ (ಪುಟ 59) ಈ ನೆಲೆಯ ವಿಚಾರಗಳೇ ಕಾದಂಬರಿಯ ಗತಿಯನ್ನು ರೂಪಿಸಿದೆ.

ಲೇಖಕರು ನಂಬುವ ಅತಿಮಾನುಷ, ತರ್ಕಾತೀತ ನೆಲೆಗಳನ್ನು ಓದುಗರು ಒಪ್ಪುತ್ತಾರೋ ಬಿಡುತ್ತಾರೋ ಎನ್ನುವುದು ಮುಖ್ಯವಲ್ಲ. ಆದರೆ ಕಾದಂಬರಿಕಾರರು ಓದುಗನ ಓದು ನಿಜವಾಗುವಂತಹ ಭಾಷೆಯಲ್ಲಿ, ತೀವ್ರತೆಯಲ್ಲಿ ಈ ನಂಬಿಕೆಗಳನ್ನು ವಿಶದಪಡಿಸುತ್ತಾರೆ ಎಂಬುದು ಮುಖ್ಯ. ಬರವಣಿಗೆ ಕಾದಂಬರಿಯ ಉದ್ದಕ್ಕೂ ಒಂದೇ ಸ್ತರದ ತೀವ್ರತೆಯಲ್ಲಿರುವುದು ಈ ಕಾದಂಬರಿಯ ಇನ್ನೊಂದು ಹೆಗ್ಗಳಿಕೆ.

'ರತ್ನದ ಜಗತ್ತು ಮಾತ್ರ ನಿಗೂಢವಾದದ್ದಲ್ಲ. ಮನುಷ್ಯ ಸಂಬಂಧಗಳು, ಬಯಕೆಗಳು, ತೊಳಲಾಟಗಳು ಕೂಡ ರತ್ನಖಂಡದ ಜೀವನ ಅನುಭವಕ್ಕಿಂತ ನಿಗೂಢವಾದದ್ದು' ಎಂಬುದನ್ನು ಕಾದಂಬರಿಯೂ ಹೇಳುತ್ತದೆ. ಆದರೆ ಪ್ರತಿಯೊಂದು ಕಾದಂಬರಿಗೂ ತನ್ನದೇ ಆದ ವಿಶಿಷ್ಟ ವಲಯವೊಂದು ಬೇಕೇ ಬೇಕಲ್ಲ? ಈ 'ರತ್ನ ಪ್ರಪಂಚದ ವೃತ್ತಿ ವಿವರಗಳು, ಭೌಗೋಳಿಕ ವ್ಯಾಪ್ತಿ ನಮ್ಮ ಕಾದಂಬರಿ ಲೋಕಕ್ಕೆ ಹೊಸತು. ಹೀಗೆಂದು ಕಾದಂಬರಿಕಾರರು ಅವರ ವಿವರಗಳನ್ನೆಲ್ಲ ರೋಚಕವಾಗೇನೂ ವರ್ಣಿಸುವುದಿಲ್ಲ. ಕಾದಂಬರಿಯ ಹುಡುಕಾಟದಲ್ಲಿ ಅಗತ್ಯವಿರುವಷ್ಟು ಮಾತ್ರ ಮಂಡಿಸಿರುವುದು, ಬರವಣಿಗೆಯ ಸಂಯಮವನ್ನು ಸೂಚಿಸುತ್ತದೆ. ಕಾದಂಬರಿ ಓದಿ ಮುಗಿಸಿದ ಮೇಲೆ ರತ್ನಖಂಡದ ವಿವರಗಳಿಗಿಂತ ಪಾತ್ರಗಳ ತೊಳಲಾಟವೇ ಓದುಗರ ಮನಸ್ಸಿನಲ್ಲಿ ಉಳಿಯುವುದು ಎಂಬುದನ್ನು ಗಮನಿಸಬೇಕು.



ರತ್ನಖಂಡ (ಕಾದಂಬರಿ)
ಲೇ: ಮಹಾಬಲಮೂರ್ತಿ ಕೊಡ್ಲೆಕೆರೆ
ಪ್ರ: ಸ್ನೇಹಾ ಪ್ರಿಂಟರ್ಸ್, ಬೆಂಗಳೂರು
(98450 625545)
ಬೆಲೆ: ರು.170/-

ಪಾತ್ರವಿನ್ಯಾಸ ವಾಸ್ತವವಾಗಿ ಮನೋವೈಜ್ಞಾನಿಕ ಪಾತಳಿಯಲ್ಲೇ ಜರುಗುತ್ತದೆ. ಆದರೆ ಬದುಕಿನ ಮನುಷ್ಯರ ನಿಗೂಢತೆಯ ನೆಲೆಗಳೂ ತರ್ಕಾತೀತ. ಅತಿಮಾನುಷ ಆಶಯಗಳಿಂದಲೂ ಮೂಡಿ ಬರಬಹುದೆಂಬ ನಂಬಿಕೆ ಪಾತ್ರವಿನ್ಯಾಸವನ್ನು ಬೇರೆ ಕಾದಂಬರಿಯ ಪಾತ್ರ ವಿನ್ಯಾಸಗಳಿಗಿಂತ ಭಿನ್ನವಾಗಿಸಿದೆ. ಬರವಣಿಗೆಯಲ್ಲಿ ತೀವ್ರತೆಯಿರುವಷ್ಟೇ ಆವೇಗವೂ, ಮುನ್ನುಗ್ಗುವಿಕೆಯೂ ಇದೆ. ಕಾದಂಬರಿ ತನ್ನ ಪಯಣದ ವರ್ತುಲವನ್ನು, ಸುತ್ತನ್ನು ಬೇಗ ಮುಗಿಸಿತೇನೋ ಎಂಬ ಭಾವನೆ ಓದುಗರಲ್ಲಿ ಕಾದಂಬರಿ ಮುಗಿಸಿದ ತಕ್ಷಣ ಮೂಡುತ್ತದೆ.

ಓದುಗರಲ್ಲಿ ಮೂಡುವ ಈ ಭಾವನೆ ಕಾದಂಬರಿಗೆ ಸಾಧ್ಯವಿದ್ದ ವಿಸ್ತಾರವನ್ನು ಮಹಾಬಲಮೂರ್ತಿಯವರ ಮುಂದಿನ ಕಾದಂಬರಿ ಪಡೆದುಕೊಳ್ಳಬೇಕಾದ ವಿಸ್ತಾರವನ್ನು ಒಟ್ಟಿಗೇ ಸೂಚಿಸುತ್ತದೆ.

ಈ ಸೂಚನೆಯನ್ನು ಕಾದಂಬರಿಕಾರರು ಮನ್ನಿಸುವರೆಂದು ಆಶಿಸೋಣ. ವಿಶಿಷ್ಟ ಅನುಭವ ವಲಯ, ಪಾತ್ರ ವಿನ್ಯಾಸ ಮತ್ತು ತೀವ್ರವಾದ ಬರವಣಿಗೆಯಿಂದಾಗಿ ಓದುಗರ ಗಮನ ಸೆಳೆಯುವ ಕಾದಂಬರಿ ಇದು.

ಚೆನ್ನದ ಕಂಠದ ಗಾಯಕ

ಮೇರುಗಾಯಕರ ಸಾಲಿನಲ್ಲಿ ನಿಲ್ಲುವ ಮನ್ನಾಡೇ ನನಗೆ ಕೈಗಟುಕಿದ ನಕ್ಷತ್ರವಾಗಿದ್ದರು ಎನ್ನುವುದನ್ನು ನನ್ನ ಸೌಭಾಗ್ಯ ಎಂದೇ ಭಾವಿಸುತ್ತೇನೆ. 2007ರಲ್ಲಿ ಅವರಿಗೆ ದೇಶದ ಅತ್ಯುನ್ನತ ಪುರಸ್ಕಾರ ದಾದಾಸಾಹೇಬ್ ಫಾಲ್ಕೆ ಬಂದಿತು. ಇಡೀ ಜಗತ್ತಿನ ಮಾಧ್ಯಮವೇ ಅವರ ಮನೆ ಮುಂದೆ

ಒಡನಾಟ
» ಶ್ರೀಧರಮೂರ್ತಿ ಎನ್.ಎಸ್.

ನೆರೆದಿತ್ತು. ಆಗಲೂ ಅವರು ನಿರ್ಲಿಪ್ತರೇ, ಪ್ರತಿ ಮಾಧ್ಯಮದ ಹೆಸರು ಕೇಳಿ ಅದರ ಹಿನ್ನೆಲೆಯನ್ನು ನನ್ನಿಂದ ತಿಳಿದುಕೊಳ್ಳುತ್ತಿದ್ದ ಅನುಭವ ಯಾವತ್ತೂ ಮರೆಯುವಂತಹದಲ್ಲ, ಇಷ್ಟು ದೊಡ್ಡ ಸಾಧಕರು ಸರಳಾತಿ ಸರಳರಾಗಿರುವುದು ಸಾಧ್ಯವೆ? ಎಂಬ ಅಚ್ಚರಿ ಮೂಡಿತ್ತು. ಅವರ ಬೆಂಗಳೂರಿನ ಮನೆ 'ಶ್ರೀರಿತು ಗೋಕುಲಂ'ಗೆ ನಾನು ಲೆಕ್ಕವಿಲ್ಲದಷ್ಟು ಸಲ ಹೋಗಿದ್ದೇನೆ. ಪ್ರತಿ ಅನುಭವವೂ ವಿಶಿಷ್ಟವೇ.

ಉತ್ತರ ಕೋಲ್ಕತ್ತಾದ ಸಿಮ್ಲಾ ಸ್ಟ್ರೀಟ್‌ನ ಪೂರ್ಣಚಂದ್ರ-ಮಹಾಮಾಯಿ ದಂಪತಿ ಪುತ್ರನಾಗಿ ಮನ್ನಾಡೇ ಜನಿಸಿದ್ದು 1919ರ ಕಾರ್ಮಿಕರ ದಿನದಂದು. ಅವರ ನಿಜವಾದ ಹೆಸರು ಪ್ರಬೋಧ್ ಚಂದ್ರ. ಮನೆಯವರು ಪ್ರೀತಿಯಿಂದ ಕರೆದ ಹೆಸರು ಮನ್ನಾ, ಚಿಕ್ಕಪ್ಪ ಚಂದ್ರಡೇಯವರೇ ಅವರ ಮೊದಲ ಸಂಗೀತದ ಗುರುಗಳು. ಬಾಲ್ಯದಿಂದಲೂ ಸಂಗೀತದತ್ತಲೇ ವಾಲಿದ್ದ ಅವರು ಗುರುಗಳನ್ನು ಹಿಂಬಾಲಿಸಿ 1942ರಲ್ಲಿ ಮುಂಬೈಗೆ ಬಂದರು. ಮೊದಲಿಗೆ ಹಾಡಲು ಅವಕಾಶ ಸಿಕ್ಕಲಿಲ್ಲ. ಎಸ್.ಡಿ.ಬರ್ಮನ್ ಅವರ ಸಹಾಯಕರಾಗಿ ಕಾರ್ಯ ನಿರ್ವಹಿಸಿದರು. ಬರ್ಮನ್ ಅವರೇ ಮಷಾಲ್ ಚಿತ್ರದಲ್ಲಿ ಹಾಡುವ ಅವಕಾಶ ಕೊಟ್ಟರು. ಭಾರತೀಯ ಚಿತ್ರರಂಗದಲ್ಲಿ ಅವರು ಹೆಸರು ಮಾಡಿದ್ದು ಶ್ರೀ420 ಚಿತ್ರದ 'ಪ್ಯಾರ್ ಹುವಾ ಇಕ್‌ರಾರ್ ಹುವಾ' ಗೀತೆಯಿಂದ. ಮುಂದೆ ಸಾಲು ಸಾಲು ಯಶಸ್ವಿ ಗೀತೆಗಳು ಬಂದವು.

ಅದು ಶ್ರೇಷ್ಟ ಗಾಯಕರು ಸಕ್ರಿಯರಾಗಿದ್ದ ಕಾಲ. ಮನ್ನಾಡೇಯವರು ಎಲ್ಲಾ ಗಾಯಕರ ಜೊತೆಗೆ ಹಾಡಿದರು. ಈ ವಿಷಯದಲ್ಲಿ ಅವರದು ದಾಖಲೆಯೇ, ಲತಾ ಮಂಗೇಶ್ಕರ್

ಕೊನೆಯವರೆಗೂ ಮನ್ನಾಡೇ ಅವರ ಕಂಠ ಸೊಗಸಾಗಿತ್ತು. ಬೆಂಗಳೂರಿಗೆ ಬಂದ ನಂತರ ಕನ್ನಡ ಚಿತ್ರರಂಗ ಅವರಿಂದ ಹಾಡಿಸಬಹುದು ಎಂದು ಯೋಚನೆ ಕೂಡ ಮಾಡಲಿಲ್ಲ. ಇದು ಅವರಿಗೆ ಬೇಸರವನ್ನು ಉಂಟು ಮಾಡಿತ್ತು.

ಅವರೊಂದಿಗೆ 113 ಗೀತೆಗಳನ್ನು ಹಾಡಿರುವ ಮನ್ನಾಡೇ ಆಶಾ ಭೋಂಸ್ಲೆಯವರೊಂದಿಗೆ 128 ಯುಗಳ ಗೀತೆಳನ್ನು ಹಾಡಿದ್ದಾರೆ. ಇನ್ನೂ ವಿಶೇಷವೆಂದರೆ ಮಹಮದ್ ರಫಿಯವರೊಂದಿಗೆ 58 ಗೀತೆಗಳನ್ನು ಹಾಡಿದ ದಾಖಲೆ ಅವರದು. ಒಮ್ಮೆ ರಫಿ ಪತ್ರಕರ್ತರೊಂದಿಗೆ ಮಾತನಾಡುತ್ತಾ ''ನೀವು ನನ್ನ ಗೀತೆಗಳನ್ನು ಕೇಳುತ್ತೀರಿ, ನಾನು ಮನ್ನಾಡೇಯವರ ಗೀತೆಗಳನ್ನು ಕೇಳುತ್ತೇನೆ'' ಎಂದು ಹೇಳಿದ್ದುಂಟು.

ಶಾಸ್ತ್ರೀಯ ಸಂಗೀತದ ಆಳವಾದ ಅರಿವನ್ನು ಹೊಂದಿದ್ದ ಮನ್ನಾಡೇ ಈ ಕುರಿತು ಅಪಾರ ಗೌರವವನ್ನೂ ಹೊಂದಿದ್ದರು. ಶಂಕರ್-ಜೈಕಿಷನ್ ಅವರಿಗೆ ಈ ಕಾರಣಕ್ಕೇ ಅವರನ್ನು ಕಂಡರೆ ಅಪಾರ ಪ್ರೀತಿ. ಬಸಂತ್ ಬಹಾರ್ ಸಂಗೀತವನ್ನೇ ಆಧರಿಸಿದ ಚಿತ್ರ. ಇದರಲ್ಲಿ ಕೇತಕೀ ಗುಲಬ್ ಜೂಹಿ ಗೀತೆಯನ್ನು ಮನ್ನಾಡೇ ಭೀಮಸೇನ್ ಜೋಷಿಯವರೊಂದಿಗೆ ಹಾಡಬೇಕಿತ್ತು. ಅದೊಂದು ಸ್ಪರ್ಧೆಯ ಹಾಡು, ನಾಯಕ ಭರತ್ ಭೂಷಣ್‌ಗೆ ಹಾಡುತ್ತಿದ್ದ ಮನ್ನಾಡೇ ಇಲ್ಲಿ ಗೆಲ್ಲಬೇಕಿತ್ತು. ಭೀಮಸೇನ್ ಜೋಷಿಯವರ ಎದುರು ಗೆಲುವಿನ ಹಾಡು ಎಂದು ತಿಳಿದು ಮನ್ನಾಡೇ ಎರಡು ತಿಂಗಳು ಕಣ್ಮರೆಯಾಗಿದ್ದರು. ಕೊನೆಗೆ ಭೀಮಸೇನ್ ಜೋಷಿಯವರೇ ಪತ್ತೆ ಹಚ್ಚಿ ಕರೆತಂದು ಹಾಡಿಸಿದರು. ಗೀತೆ ಚೆನ್ನಾಗಿಯೂ ಬಂದಿತು. ಜೋಷಿಯವರು ''ನೀವೇಕೆ ಶಾಸ್ತ್ರೀಯ ಸಂಗೀತವನ್ನು ವೃತ್ತಿಯನ್ನಾಗಿ ಸ್ವೀಕರಿಸಲಿಲ್ಲ'' ಎಂದು ಕೇಳಿದ್ದು ಮನ್ನಾಡೇಯವರಿಗೆ ಬಹಳ ಪ್ರಿಯವಾದ ನೆನಪಾಗಿತ್ತು.

ಮನ್ನಾಡೇಯವರಿಗೆ ಇದ್ದ ಇನ್ನೊಂದು ಪ್ರಿಯವಾದ ನೆನಪೆಂದರೆ ಅವರ ಮುಂಬೈ ನಿವಾಸ ಆನಂದನ್ ಸಮೀಪವೇ ಅಮಿತಾಬ್ ಬಚ್ಚನ್ ಅವರ ತಂದೆ ಡಾ.ಹರಿವಂಶರಾಯ್ ಬಚ್ಚನ್ ಮನೆ. ಪ್ರತಿ ದಿನ ಅವರು ವಾಕಿಂಗ್ ಹೋಗುವಾಗ ಮನ್ನಾಡೇಯವರ ಮನೆಯ ಮುಂದೆ ನಿಂತು ರಿಯಾಜ್ ಕೇಳಿಯೇ ಹೋಗುತ್ತಿದ್ದರು. ಇಬ್ಬರೂ ಪರಸ್ಪರ ಭೇಟಿಯಾಗಿದ್ದೇ ಇಲ್ಲ. ಮುಂದೆ ಬಚ್ಚನ್ ಅವರ ಮಧುಶಾಲ ಧ್ವನಿಮುದ್ರಿಕೆಯಾದಾಗ ಸಂಗೀತ ನಿರ್ದೇಶಕ ಜೈದೀಪ್, ಮಹಮದ್ ರಫಿಯವರ ಹೆಸರನ್ನು ಸೂಚಿಸಿದರು. ಆಗ ಡಾ.ಹರಿವಂಶ್ ಖಚಿತವಾಗಿದ್ದರು. ''ಹಾಡಿಸುವುದಿದ್ದರೆ ಮನ್ನಾಡೇಯವರ ಬಳಿ ಹಾಡಿಸಿ ಇಲ್ಲದಿದ್ದರೆ ಧ್ವನಿಮುದ್ರಿಕೆಯೇ ಬೇಡ'' ಈ ಎರಡು ನೆನಪುಗಳನ್ನು ಮನ್ನಾಡೇ ನನ್ನ ಬಳಿ ಏನಿಲ್ಲವೆಂದರೂ ಹತ್ತು ಸಲ ಹೇಳಿಕೊಂಡಿದ್ದರು.

ಮನ್ನಾಡೇಯವರ ಕಂಠ ಮಂದ್ರದಂತೆ ತಾರಕಕ್ಕೂ ಒಗ್ಗುತ್ತಿತ್ತು. ಪಡೋಸನ್ ಚಿತ್ರದ ಏಕ್ ಚತುರ ನಾರ್ ಕರಕೆ ಸಿಂಗಾರ್‌ನಂತಹ ಹಾಸ್ಯದ ಗೀತೆಯಲ್ಲಿಯೂ ಅವರು ಶಾಸ್ತ್ರೀಯತೆಯ ಚೌಕಟ್ಟನ್ನು ಬಿಟ್ಟವರಲ್ಲ. ಯೇ ರಾತ್ ಭಿಗೀ ಭಿಗೀ (ಚೋರಿ ಚೋರಿ) ಎ ಹವಾ ನದೀಕಾ ಕಿನಾರ (ಘರ್ ಸಂಸಾರ್) ಗೀತೆಗಳಲ್ಲಿ ಅವರು ದೇಸಿ ನೆಲೆಗಳನ್ನು ಅದ್ಭುತವಾಗಿ ಹಿಡಿದಿದ್ದಾರೆ. ತೀಸ್ರಿ ಕಸಮ್ ಚಿತ್ರದ ಚಲತ್ ಮುಸಾಫಿರ್ ಪಕ್ಕಾ ಜನಪದ ಶೈಲಿಯ ಹಾಡು, ಇದನ್ನು ಅವರು ಮೈದುಂಬಿ ಹಾಡಿದ್ದಾರೆ. ಕಾಬೂಲಿವಾಲದ ಏ ಮೇರೆ ಪ್ಯಾರೆ ವತನ್ ಅರಬ್ಬೀ ಶೈಲಿಯ ಗೀತೆ. ಮೇರಾ ನಾಮ್ ಜೋಕರ್ ಚಿತ್ರದ ಏ ಭಾಯ್ ಜರದೇಖಕೋ ಆ ಕಾಲದ ಫ್ಯೂಷನ್ ಶೈಲಿಯ ಗೀತೆ. ಯಾವುದೇ ಮಾದರಿಯ ಗೀತೆಗೂ ಅವರ ಕಂಠ ನ್ಯಾಯವನ್ನು ಒದಗಿಸುತ್ತಿತ್ತು.

ಪ್ರೇಮ ಪ್ರಸಂಗ

ಬಂಗಾಳಿಯ ಮನ್ನಾಡೇ ಪ್ರೀತಿಸಿದ್ದು ಕೇರಳದ ಕಣ್ಣಾನೂರಿನ ಚೆಲುವೆ ಸುಲೋಚನಾ ಅವರನ್ನು. ಈ ಪ್ರೇಮಪ್ರಸಂಗವನ್ನು ಬಣ್ಣಿಸುವುದೆಂದರೆ ಅವರಿಗೆ ಎಲ್ಲಿಲ್ಲದ ಸಂಭ್ರಮ. ಸುಲೋಚನಾ ಅವರೇ 'ಸಾಕು ನಿಲ್ಲಿಸಿ' ಎಂದು ಹುಸಿ ಮುನಿಸಿನಿಂದ ಹಲವು ಸಲ ಈ ಕತೆ ಹೇಳುವಾಗ ಗದರಿದ್ದಿದೆ. ಮನ್ನಾಡೇ ಮಡದಿ ಗಾಗಿಯೇ ಮಲೆಯಾಳಂ ಕಲಿತಿದ್ದು ಮಾತ್ರವಲ್ಲ ಮಲೆಯಾಳಂ ಚಿತ್ರ 'ಚಮ್ಮೀನ್'ಗಾಗಿ ಮಾನಸ ಮೈನೆ ವರೂ ಮಧುರಂ ಗೀತೆಯನ್ನೂ ಕೂಡ ಹಾಡಿದ್ದರು. ತಮ್ಮ ಕಾರ್ಯಕ್ಷೇತ್ರ ಕೋಲ್ಕತ್ತಾವನ್ನು ಬಿಟ್ಟು ಬೆಂಗಳೂರಿಗೆ ಬಂದಿದ್ದೂ ಕೂಡ ಮಡದಿಯ ಇಚ್ಚೆಯಂತೆಯೇ!

ಕನ್ನಡದಲ್ಲಿ ಹಾಡಿದ ಗೀತೆಗಳು

ಹಿಂದಿ ಚಿತ್ರರಂಗದಲ್ಲಿ ಸಕ್ರಿಯರಾಗಿದ್ದಾಗ ಎಂಟು ಕನ್ನಡ ಚಿತ್ರಗಳಿಗೂ ಮನ್ನಾಡೇ ಹಾಡಿದ್ದರು. ಅವುಗಳಲ್ಲಿ ಕಲಾವತಿ ಚಿತ್ರದ 'ಕುಹೂ ಕುಹೂ' ಮತ್ತು ಕಲ್ಪವೃಕ್ಷ ಚಿತ್ರ 'ಜಯತೇ ಜಯತೇ' ಬಹಳ ಜನಪ್ರಿಯವೂ ಆಗಿವೆ. ಕೊನೆಯವರೆಗೂ ಅವರ ಕಂಠ ಸೊಗಸಾಗಿತ್ತು. ಬೆಂಗಳೂರಿಗೆ ಬಂದ ನಂತರ ಕನ್ನಡ ಚಿತ್ರರಂಗ ಅವರಿಂದ ಹಾಡಿಸಬಹುದು ಎಂದು ಯೋಚನೆ ಕೂಡ ಮಾಡಲಿಲ್ಲ. ಇದು ಅವರಿಗೆ ಬೇಸರವನ್ನು ಉಂಟು ಮಾಡಿತ್ತು.

ಸದಾ ಉತ್ಸಾಹದ ಬುಗ್ಗೆಯಾಗಿದ್ದ ಮನ್ನಾಡೇ 2012ರಲ್ಲಿ ಮಡದಿಯ ಅಗಲುವಿಕೆಯ ನಂತರ ಕುಗ್ಗಿದರು. ಆರೋಗ್ಯವೂ ಕೈ ಕೊಡಲು ಆರಂಭಿಸಿತು. ಈ ದಿನಗಳಲ್ಲಿ ಒಮ್ಮೆ ನನ್ನನ್ನು ಕರೆಸಿ ಒಂದು ದೀರ್ಘ ಸಂದರ್ಶನ ಕೊಡುತ್ತೇನೆ, ಅದನ್ನು ಎಲ್ಲಿಯಾ ದರೂ ದಾಖಲಿಸು ಎಂದರು. ರಾಷ್ಟ್ರಕವಿ ಕುವೆಂಪು ಅವರ ಗೀತೆಯನ್ನು ಹಾಡಿದ ಧನ್ಯತೆ ಎಂದೇ ಅವರು ಮಾತನ್ನು ಆರಂಭಿಸಿದರು. ಕನ್ನಡದ ನೆಲೆದ ಕುರಿತು ಇಲ್ಲಿಯ ಸಂಸ್ಕೃತಿಯ ಕುರಿತು ಹಲವು ಮಾತುಗಳು ಬಂದವು. ಸಂಗೀತದ ಹಸಿವು ಅವರಲ್ಲಿ ಇನ್ನೂ ತೀವ್ರವಾಗಿತ್ತು. ಸಂಗೀತ ಪ್ರಕಾರಗಳ ನಡುವೆ ಇರುವ ಹೊಂದಾಣಿಕೆ ಮತ್ತು ಭಿನ್ನತೆ ಕುರಿತು ಸಾಕಷ್ಟು ಸಂಗತಿಗಳನ್ನು ಹೇಳಿದರು. ಇನ್ನಷ್ಟು ಮಾತಾಡುವ ಉತ್ಸಾಹ ಅವರಿಗಿತ್ತು. ಆರೋಗ್ಯ ಸಹಕರಿಸುತ್ತಿರಲಿಲ್ಲ. ಇನ್ನೂ ಒಂದೆರಡು ಸಲ ಮಾತುಕತೆ ಮುಂದುವರೆದರೂ ಅವರ ಪ್ರಕಾರ ಸಂದರ್ಶನ ಪೂರ್ಣವಾಗಿರಲ್ಲಿಲ್ಲ, ಅವರ ಆರೋಗ್ಯ ಕೆಡುತ್ತಾ ಸಾಗಿದ್ದರಿಂದ ಇನ್ನು ಕಾಯುವುದು ಬೇಡ ಎಂದು ಅವರ ಕೆಲವು ಭಾಗಗಳನ್ನು ವಿಜಯ ವಾಣಿಯಲ್ಲಿ ಪ್ರಕಟಿಸಿದೆ. ಅದು ಅವರ ಕೊನೆಯ ಪ್ರಕಟಿತ ಸಂದರ್ಶನವಾಯಿತು. 2013ರ ಅಕ್ಟೋಬರ್ 24ರಂದು ಮಧುರ ಗೀತೆಗೆ ಕೊನೆಯನ್ನುವುದು ಬಂದಿತು. ಅವರು ಆಡುತ್ತೇನೆ ಎಂದು ಹೇಳಿದ್ದ ಹಲವು ಮಾತುಗಳು ಉಳಿದೇ ಹೋದವು.

ಹೊಸ ಕಥೆ
» ಸಂಧ್ಯಾ ಹೆಗಡೆ, ದೊಡ್ಡಹೊಂಡ

ದ್ವೇಷ ಮತ್ತು ಪ್ರೀತಿ

ಒಣಗತೊಡಗಿದ ಮರ ಕಂಡು ಮನಸ್ಸು ಕದಡಿತು. ಇಲ್ಲ, ಈ ದ್ವೇಷ ಸಲ್ಲ, ಪ್ರೀತಿ ಮುಖ್ಯ ಎಂದು, ಮರವನ್ನು ಪ್ರೀತಿಯಿಂದ ಸವರತೊಡಗಿದಳು. ಮರದಲ್ಲಿ ನಿಧಾನವಾಗಿ ಹಸಿರು ತುಂಬಿ ಬಂತು.

ಕತ್ರಿಗುಪ್ಪೆಯಿಂದ ಪದ್ಮನಾಭನಗರಕ್ಕೆ ಮನೆ ಬದಲಾಯಿಸುವ ಪರಿಸ್ಥಿತಿ ಗೇನೂ ವಾಣಿ ಬೇಸರ ಪಟ್ಟುಕೊಳ್ಳಲಿಲ್ಲ. ಅವಳ ಸಂಸಾರ ಆರಾಮವಾಗಿಯೇ ಪದ್ಮನಾಭನಗರಕ್ಕೆ ಬಂದಿಳಿಯಿತು. ಪರಿಸರ ಬದಲಾದದ್ದಕ್ಕೋ ಏನೋ! ಅವಳ ಮಕ್ಕಳು ಎರಡು ದಿನ ಸಪ್ಪಗಿದ್ದವು. ಆಮೇಲೆ ಇದ್ದೇ ಇದೆಯಲ್ಲ... ಮಕ್ಕಳಾಟ ಇಲ್ಲಿಯೂ ಶುರುವಾಯಿತು. ವಾಣಿ ನಿಧಾನಕ್ಕೆ ಇಲ್ಲಿಯ ಪರಿಸರಕ್ಕೆ ಹೊಂದಿಕೊಳ್ಳ ತೊಡಗಿದಳು. ಬಟ್ಟೆ-ಬರೆ, ಪಾತ್ರೆ, ಮಂಚ ಎಲ್ಲಾ ಅದರದರ ಜಾಗ ಸೇರಿ ವಿರಾಜಮಾನವಾಗಬೇಕಾದರೆ 15 ದಿನ ಬೇಕಾಯಿತು. ಮನೆ ಬದಲಾಯಿಸುವುದು ಎಂದರೆ ಸಾಮಾನ್ಯವೇ? ಎಷ್ಟೊಂದು ಸಾಮಾನು ಕಟ್ಟಬೇಕು, ತುಂಬಬೇಕು. ತಟ್ಟೆ, ಚಮಚದಂತಹ ಅಡುಗೆಮನೆಯ ಸಾಮಾನಿನಿಂದ ಹಿಡಿದು ಕಸಬರಿಗೆ, ಟಾಯ್ಲೆಟ್ ಕ್ಲೀನರ್ ನಂತಹ ತುಂಬುವ ಕೆಲಸ, ಆಮೇಲೆ ತೆಗೆದು ಇಡುವ ಕೆಲಸ. ಅಂತೂ ವಾಣಿಯ ಮನೆ ಒಂದು ಹದಕ್ಕೆ ಬಂತು. ಮಕ್ಕಳು ಅವರವರ ಪುಸ್ತಕ, ಪೆನ್ಸಿಲ್ಲು, ಬ್ಯಾಗು, ರಬ್ಬರು ಜೋಡಿಸಿಕೊಂಡರು. ಬೆಂಗಳೂರಿನ ಧಾವಂತದ ಬದುಕಿಗೆ ಮನೆಯೂ ಸಿದ್ದಗೊಂಡಿತು.

ದಿನಬೆಳಗಾದರೆ ಮಕ್ಕಳು ಶಾಲೆಗೆ ಓಡುವ, ಗಂಡನ ಆಫೀಸು, ವಾಣಿಯ ಕಾಲೇಜು ಅಂತ ಆರಂಭವಾದ ಮುಂಜಾನೆಯ ಯಂತ್ರ; ರಾತ್ರಿ ವಾಣಿಯ ಗಂಡ ಮನೆ ಸೇರಿದ ಮೇಲೆ ಊಟ ಮಾಡಿ ಮಲಗುವ ಮೂಲಕ ನಿಲ್ಲುತ್ತಿತ್ತು. ಮರುದಿನ ಮತ್ತದೇ ಪುನರಾವರ್ತನೆ. ಇದರ ನಡುವೆ ಹೊಸ ಮನೆಯಲ್ಲಿ ಕೆಲವು ಸಣ್ಣ ಪುಟ್ಟ ಖುಷಿ ಕಂಡುಕೊಂಡಿದ್ದಳು. ಸುಂದರ ಸೂರ್ಯನ ಸೊಬಗು ಸವಿಯಲು ಸದ್ದಿಲ್ಲದೆ ಟೆರೇಸ್ ಹತ್ತುತ್ತಿದ್ದಳು. ಮಕ್ಕಳು ಅವರ ಪಾಡಿಗೆ ಅವರು ಸಂಜೆಯ ಆಟದಲ್ಲಿ ಮುಳುಗುತ್ತಿದ್ದರೆ ಇವಳು ಮುಳುಗುವ ಸೂರ್ಯನನ್ನು ತನ್ನೊಳಗೆ ಮನಃಸ್ಪೂರ್ತಿಯಾಗಿ ಮುಳುಗಿಸಿಕೊಳ್ಳುತ್ತಿದ್ದಳು. ಟೆರೇಸಿಗೆ ತಾಗಿಕೊಂಡೇ ಇರುವ ತೆಂಗಿನ ಮರಗಳ ಮೇಲೆ ಕೂರುತ್ತಿದ್ದ ಗರುಡ ಮತ್ತಿತರ ಸಣ್ಣ ಪುಟ್ಟ ಪಕ್ಷಿಗಳ ಹಾರಾಟ ವಿನಾಕಾರಣ ಅವಳ ಮನಸ್ಸನ್ನು ವಿಶ್ರಾಂತ ಸ್ಥಿತಿಗೆ ಕೊಂಡೊಯ್ಯುತ್ತಿತ್ತು. ಮನೆಯ ಮೆಟ್ಟಿಲನ್ನು ಹತ್ತಿ ಟೆರೇಸಿಗೆ ಹೋದರೆ ತೆಂಗಿನ ಗರಿಗಳು ಕೈಗೆ ಸಿಗುವಂತಿದ್ದು ವಾಣಿ ಅದನ್ನು ತನ್ನ ಮಕ್ಕಳಂತೆಯೇ ನಿಧಾನ ಮುಟ್ಟಿ ಸಂತೋಷ ಪಡುತ್ತಿದ್ದಳು. ಅದರ ಮೇಲೆ ಯಾವುದಾದರೂ ಹಕ್ಕಿ ಕೂತಿದ್ದರೆ ಮಾತ್ರ ಗರಿ ಮುಟ್ಟುವ ತನ್ನ ಕೈಗಳ ಸಂತೋಷಕ್ಕೆ ತಡೆಯೊಡ್ಡುತ್ತಿದ್ದಳು. ಯಾವುದನ್ನೂ ಕೆಡಿಸದಂತೆ ಇದ್ದುದನ್ನು ಇದ್ದಂತೆ ಒಪ್ಪಿಕೊಳ್ಳುವ ಆನಂದಕ್ಕೆ ಅವಳ ಮನಸ್ಸು ಯಾವತ್ತೂ ಸಿದ್ಧವಿತ್ತು. ಹಾಗಾಗಿ ಹಕ್ಕಿಯ ಸಂತೋಷ ಇವಳ ಸಂತೋಷದ ಮುಂದುವರಿಕೆ ಯಾಗುತ್ತಿತ್ತು. 15 - 20 ನಿಮಿಷ ಈ ಸಂತೋಷವನ್ನು ಅನುಭವಿಸಿದ ವಾಣಿ ತನ್ನ ಮಕ್ಕಳನ್ನು ಕರೆದುಕೊಂಡು ಟೆರೇಸಿನಿಂದ ಕೆಳಗೆ ಇಳಿಯುತ್ತಿದ್ದಳು. ಮತ್ತೆ ಮಕ್ಕಳ ಆಟ, ಪಾಠ, ಅಡುಗೆ,......ಊಟ, ನಿದ್ದೆ.

ಈ ಮನೆಗೆ ಬಂದ ಆರು ತಿಂಗಳಲ್ಲಿ ವಾಣಿ ತೆಂಗಿನ ಮರವನ್ನು ತುಂಬಾ ಹಚ್ಚಿಕೊಂಡಿದ್ದಳು. ಅದರಲ್ಲೂ ಮೆಟ್ಟಿಲ ಉದ್ದಕ್ಕೂ ಬೆಳೆದ ತೆಂಗಿನ ಮರವನ್ನಂತೂ ಸ್ಪರ್ಶಿಸುವ ಸಂಭ್ರಮಕ್ಕೆ ಅವಳ ಮನಸ್ಸು ಯಾವತ್ತೂ ಪುಳಕಗೊಳ್ಳುತ್ತಿತ್ತು. ಅವಳ ಚಿಕ್ಕಮಗು ತೆಂಗಿನಗರಿಗಳನ್ನು ಹಿಡಿಯುತ್ತಾ ತನ್ನ ಮುಗ್ಧತೆಯನ್ನೆಲ್ಲಾ ಅದರಲ್ಲೇ ಜೋಪಾನ ಮಾಡುತ್ತಿತ್ತು. ತೆಂಗಿನ ಮರವನ್ನು ಸ್ಪರ್ಶಿಸುತ್ತಾ ಮೆಟ್ಟಿಲು ಹತ್ತಿ ನಿಧಾನ ಟೆರೇಸಿಗೆ ಹೋಗುವ ವಾಣಿಗೆ ಗಂಡ ಆಫೀಸಿನಿಂದ ಬೇಗ ಮನೆಗೆ ಬರದೇ ಇರುವ, ಮಕ್ಕಳು ರಚ್ಚೆ ಹಿಡಿಯುವ, ಬೆಂಗಳೂರಿನ ಟ್ರಾಫಿಕ್ಕಿನ ಗದ್ದಲ, ಬೆನ್ನು ನೋವು ಮುಂತಾದ ಬೇರೆ ಬೇರೆ ಕಾರಣಕ್ಕೆ ಬಂದ ಅಸಹನೆಯೂ ಆಪ್ತವಾಗಿಬಿಡುತ್ತಿತ್ತು. ಒಟ್ಟಿನಲ್ಲಿ ತೆಂಗಿನ ಮರವನ್ನು ವಾಣಿ ಮನಸ್ಸಿನೊಳಗಿನ ಶಾಂತಿಯ ಕೇಂದ್ರವನ್ನಾಗಿಸಿದ್ದಳು. ಶನಿವಾರ ಮತ್ತು ಭಾನುವಾರದ ಅಪರಾಹ್ನ ಗಂಡ ಮಾಡಿಕೊಟ್ಟ ಚಹಾದ ಬಿಸಿ, ತೆಂಗಿನ ಮರದ ಕೆಳಗೇ ಇಳಿಯುತ್ತಿತ್ತು. ಮಗನ ಮೊಟ್ಟಮೊದಲ ಹಾಲು ಹಲ್ಲು ಬಿದ್ದಾಗ ತೆಂಗಿನಮರದ ತೂತಿನಲ್ಲಿ ಹಾಕಿ 'ಆಯುಷ್ಯವನ್ನು ದಯಪಾಲಿಸು ದಯಾಮಯ ಕಲ್ಪವೃಕ್ಷವೇ' ಎಂದು ಹೇಳಿ ಮಗನ ಕೈಯ್ಯಲ್ಲಿ ಕೈ ಮುಗಿಸಿ ತಾನೂ ಕೈಮುಗಿದಿದ್ದಳು.

ಇಷ್ಟೆಲ್ಲಾ ಇದ್ದರೂ ವಾಣಿಗೆ ತೆಂಗಿನ ಮರದ ತುಂಬ ಬೆಳೆದ ಕಾಯಿಗಳ ಬಗ್ಗೆ ಆತಂಕ ಯಾವತ್ತೂ ಇತ್ತು. ಎಲ್ಲಾದರೂ ಮೆಟ್ಟಿಲು ಅಥವಾ ಟೆರೇಸಿನ ಮೇಲೆ ಕುಳಿತ ಮಕ್ಕಳ ತಲೆಯ ಮೇಲೇನಾದರೂ ಒಣಗಿದ ತೆಂಗಿನಕಾಯಿಗಳು ಬಿದ್ದುಬಿಟ್ಟರೆ ಎಂಬುದು ವಾಣಿಯ ತಲೆಬಿಸಿಯಾಗಿತ್ತು. ಅವಳ ಎರಡೂವರೆ ವರ್ಷದ ಮಗನಂತೂ ಯಾವತ್ತೂ ತನ್ನ ಆಟಿಕೆಗಳೊಂದಿಗೆ ಅಲ್ಲೇ ಆಡುತ್ತಿದ್ದ. ಟೆರೇಸಿನ ಮೇಲೆ ನಿಂತ ಕ್ಷಣಗಳಲ್ಲಿ ವಾಣಿ ನೂರು ಸಲ ಮೇಲೆ ನೋಡುತ್ತಿದ್ದಳು. ಒಣಗಿದ ಗರಿಗಳ ಕಡೆಗೂ ಗಮನ ಹೋಗುತ್ತಿತ್ತು. 'ಏನೂ ಅನಾಹುತವಾಗದಿದ್ದರೆ ಸಾಕು' ಎಂದುಕೊಳ್ಳುತ್ತಿದ್ದಳು. ರಾತ್ರಿ 10:00 ಗಂಟೆಯ ಮೇಲೆ ಬರುವ ಆಫೀಸಿನ ಮೀಟಿಂಗ್ ಕಾಲನ್ನು ಗಂಡ ಇದೇ ತೆಂಗುಗರಿಗಳ ಹತ್ತಿರ ನಿಂತು ತೆಗೆದುಕೊಳ್ಳುತ್ತಿದ್ದಾಗಂತೂ 'ದೇವರೇ' ಅಂದುಕೊಳ್ಳುತ್ತಿದ್ದಳು. ಕಾಲವೆಂದರೆ ಬೊಗಸೆಯಲ್ಲಿನ ನೀರು ತಾನೇ? ಬೆರಳ ಸಂದಿಯಲ್ಲಿ ಸೋರಿ ಹೋಗುತ್ತದೆ. ಹಾಗೆಯೇ ತೆಂಗಿನಕಾಯಿಗಳು ಆಗಲೋ ಈಗಲೋ ಬೀಳುವ ಸ್ಥಿತಿಯಲ್ಲಿ ನಿಂತವು. ಬೆಳಿಗ್ಗೆ 9:00 ಗಂಟೆಗೆ ಮನೆ ಬಿಟ್ಟರೆ ವಾಣಿಯ ಸಂಸಾರ ಮನೆ ಸೇರುವುದು ಮತ್ತೆ 6:00 ಗಂಟೆಗೇ ಆದರೂ ಇರುವಷ್ಟು ಹೊತ್ತು ಕಾಯಿ ಕೆಳಕ್ಕೆ ಬೀಳಬಾರದೆಂಬ ನಿಯಮವೇನೂ ಇಲ್ಲವಲ್ಲ.

ಒಂದು ಭಾನುವಾರ ಚಹಾದ ಕಪ್ಪು ತುಟಿ ಸೋಂಕಿ ಬಿಸಿ ಒಳಗಿಳಿಯುವ ಖುಷಿಗೆ ಮನಸ್ಸು ಸಿದ್ಧಗೊಳ್ಳುತ್ತಿರುವಾಗಲೇ ಹೊರಗೆ 'ಧಡ್' ಎಂದು ಸದ್ದು ಕೇಳಿತ್ತು. ವಾಣಿ ಮತ್ತು ಅವಳ ಗಂಡ ಇಬ್ಬರೂ ಹೊರಕ್ಕೋಡಿ ಬಂದರು. ಮಗು ತನ್ನ ಮೂರು ಚಕ್ರದ ಸೈಕಲ್ ಮೇಲೆ ಕುಳಿತು ಮೇಲಕ್ಕೆ ನೋಡಿ ಅಳಲು ಶುರು ಮಾಡಿತ್ತು. ವಾಣಿಗೆ ಜೀವವೇ ಕೈಗೆ ಬಂದ ಸ್ಥಿತಿ. ಮಗುವನ್ನು ಎತ್ತಿ ಮೊದಲು ಅಪ್ಪಿ ಸಂತೈಸಿದಳು. ಮಗುವಿನ ಟ್ರೈಸಿಕಲ್ ಹತ್ತಿರವೇ ಬಿದ್ದ ಒಣ ತೆಂಗಿನಕಾಯಿ ಅಪಾಯಕರ ಸನ್ನಿವೇಶದ ಪೂರ್ತಿ ಕಥೆ ಹೇಳುತ್ತಿತ್ತು. ವಾಣಿ ಭಯದಿಂದ ಮಗುವನ್ನು ಎದೆಗವಚಿಕೊಳ್ಳುತ್ತಾ ಗಂಡನಿಗೆ ಹೇಳಿದಳು. 'ಹೋಗಿ ಓನರ್‌ಗೆ ಹೇಳಿ, ಬೇಗ ಕಾಯಿ ಕೀಳಿಸಲು, ಇಲ್ಲ ಅಂದ್ರೆ ನಾವೇ ಕಾಯಿ ಕೀಳಿಸಿಕೊಳ್ಳೋಣ. ನಮ್ಮ ಮಕ್ಕಳು ಇಲ್ಲಿ ನೆಮ್ಮದಿಯಿಂದ ಓಡಾಡೋಕ್ಕೂ ಆಗಲ್ಲ'.

ಎರಡು ದಿನ ಬಿಟ್ಟು ಈ ಮಾತು 'ನನಗೆ ಕೇಳಿಸಿದೆ' ಎಂಬಂತೆ ಓನರ್ ಬಂದು ಕಾಯಿ ಕೀಳಿಸಿಕೊಂಡು ಹೋದ. ವಾಣಿ ಸ್ವಲ್ಪ ಹಗುರಾದರೂ ಆಗೀಗ ಒಣಗುವ ತೆಂಗುಗರಿಗಳ ಬಗೆಗಿನ ಆತಂಕ ಕಡಿಮೆಯಾಗಿರಲಿಲ್ಲ. ಹಸಿರು ತೆಂಗುಗರಿಗಳ ಅಲುಗಾಟದ ಚಲನೆ ಸಂತೋಷದ ಸಂಚಾರ ಮಾಡಿಸುವಂತೆಯೇ ಆತಂಕದ ಸಂಚಲನವನ್ನೂ ಮೂಡಿಸುತ್ತಿತ್ತು. ವಾಣಿ ಯಾವಾಗಲೂ ಗಂಡ ಮತ್ತು ಮಕ್ಕಳ ಮೇಲೆ ಒಂದು ಕಣ್ಣಿಟ್ಟೇ ಇರುತ್ತಿದ್ದಳು. ಅಡುಗೆ ಮಾಡುತ್ತಿದ್ದರೆ ಹೊರಗೆ ಒಮ್ಮೆ ಬಂದು ಹೋಗುತ್ತಿದ್ದಳು. ತೆಂಗಿನ ಮರದ ಹತ್ತಿರ ಚಪ್ಪಲಿ ಬಿಡಲೂ ಬಿಡುತ್ತಿರಲಿಲ್ಲ. ಗಂಡನ ರಾತ್ರಿಯ ಮೀಟಿಂಗ್ ಕಾಲಿನ ವೇಳೆ ವಾಣಿ 2 ಸಲ ಟೆರೇಸ್ ಹತ್ತಿ ನೋಡಿ ಬರುತ್ತಿದ್ದಳು. 'ನಿನ್ನ ತಲೆಯ ತುಂಬಾ ತೆಂಗಿನ ಮರವೇ ಬೆಳೆದುಬಿಟ್ಟಿದೆಯಲ್ಲ'' ಎಂದು ಗಂಡ ಕೇಳಿ ನಕ್ಕಿದ್ದಕ್ಕೆ; 'ಪರಿಸ್ಥಿತಿಯ ಅರ್ಥ ಆದ್ರೆ ತಾನೇ ನಿಮಗೆ' ಎಂದು ಸಿಡುಕಿದ್ದಳು.

ಬೆಂಗಳೂರು, ಅತ್ತ-ಇತ್ತ ಸುತ್ತ-ಮುತ್ತ ಓಡುತ್ತಿದ್ದ ಕಾಲದ ಜತೆ ಸ್ಪರ್ಧೆಗಿಳಿದಂತೆ ಓಡುತ್ತಿರುವ ಬದುಕು. ಜೀವಜಗತ್ತಿನ ಜೊತೆ ಸ್ಪಂದನೆಯೇ ಸತ್ತು ಹೋದಂತೆ. ಬದುಕನ್ನ ಬದುಕಲಿಕ್ಕೇ ಆಗದ ದಾಹ. ಯಾವ ದಾಹವೆಂದೂ ಗೊತ್ತಿರದ ದಾಹ. ವಾಣಿಯ ಜೀವಂತಿಕೆ ತೆಂಗುಗರಿಗಳ ಮೂಲಕ ಸಾಫಲ್ಯಗೊಳ್ಳುತ್ತಿತ್ತು. ಆದರೆ ತೆಂಗುಗರಿಗಳ ಜೀವಂತಿಕೆ ಅದರದ್ದೇ ಗರಿಗಳ ಮೂಲಕ ಆಗಾಗ ಒಣಗುಗುತ್ತಿತ್ತು. ಒಣಗಿದ್ದು ಬೀಳುವುದು ಸಹಜ ತಾನೇ. ಬೀಳುವುದು ತನ್ನ ಗಂಡ ಮತ್ತು ಮಕ್ಕಳ ಮೇಲೇ ಬಿದ್ದರೆ? ಇತ್ತೀಚೆಗೆ ತೆಂಗಿನ ಮರವನ್ನು ಸ್ಪರ್ಶಿಸುವುದು ಅಷ್ಟು ಸುಖವೆನಿಸುತ್ತಿರಲಿಲ್ಲ.

ಒಂದು ದಿನ ರಾತ್ರಿ. ವಾಣಿ ತನ್ನಿಬ್ಬರು ಮಕ್ಕಳನ್ನು ಪಾರ್ಕಿನಿಂದ ಕರೆದುಕೊಂಡು ಮನೆಗೆ ಹಿಂದಿರುಗುತ್ತಿದ್ದಳು. ಮುಖದ ಮೇಲೆ ಯಾರಾದರೂ ಬಂದು ಗುದ್ದಿದರೂ ಗುರುತಿಸಲಾಗದ ಕತ್ತಲು. ಹೀಗಿರುವಾಗ ತೆಂಗಿನ ಮರದ ಬಳಿ ಯಾರೋ ನಿಂತಂತೆ, ಸುಳಿದು ಹೋದಂತೆ,..ಭಾಸವಾಯಿತು. ವಾಣಿ ಕ್ಷಣ ಬೆಚ್ಚಿದಳು! ಅದೇಕೋ, ಅಲ್ಲಿ ನಿಂತದ್ದು, ಸುಳಿದು ಹೋದದ್ದು ಮನುಷ್ಯನಲ್ಲ ಎಂಬ ಕಲ್ಪನೆ ಬಲವಾಯಿತು. ಮಕ್ಕಳ ಮುಗ್ಧತೆಗೆ ಈ ಬರೆ ಎಳೆಯಬಹುದೇ? ಅವರ ಮುಂದೆ ಆಡಲಾಗದೇ ಉಗುಳು ನುಂಗಿ ತನಗಾದ ಅನುಭವವನ್ನು ಮುಚ್ಚಿಟ್ಟಳು. ಇಷ್ಟು ಹೊತ್ತಿನ ತನಕ ಮಾತನಾಡುತ್ತಾ ಬರುತ್ತಿದ್ದ ಅಮ್ಮ ಗಕ್ಕನೆ ಮಾತು ನಿಲ್ಲಿಸಿದ್ದೇಕೆ ಎಂದು ತಿಳಿಯದೆ ದೊಡ್ಡ ಮಗು ಕೇಳಿತು,

'ಯಾಕಮ್ಮ ಸುಮ್ಮನಾದೆ?'

'ಗುಮ್ಮ ಬರಬಹುದು, ಬೇಗ ಒಳಗೆ ನಡೆಯೋಣ, ಮೊದಲು ಕೀ ತೆಗೆಯುತ್ತೇನೆ'

ಮೊಬೈಲ್ ಬೆಳಕಿನಲ್ಲಿ ಮನೆ ಕೀ ತೆಗೆದು ಮೊದಲು ಮಕ್ಕಳನ್ನು ಒಳಗೆ ಕಳುಹಿಸಿ ಲೈಟ್ ಹಾಕಿದಳು. ಮನಸ್ಸಿನ ಭಯ ಕೊಂಚ ಕಡಿಮೆಯಾಯಿತು. ಆದರೆ ಈ ಅನುಭವದಿಂದಾದ ಆತಂಕ ಅವಳ ಮನಸ್ಸಿನ ಮೂಲೆ ಹಿಡಿದು ತಾನು ನಿರಾತಂಕ ಕೂತುಬಿಟ್ಟಿತು. ಹಗಲಿನಲ್ಲಿ ಈ ಭಾವ ಅಷ್ಟಾಗಿ ಕಾಡದಿದ್ದರೂ ರಾತ್ರಿ, ತೆಂಗಿನಮರ ಮುಟ್ಟಲು ಹೋಗುವ ವಾಣಿಯ ಆಸೆಯೇನು ಈಗ ಉಳಿದಿರಲಿಲ್ಲ. ಸಾಲದ್ದಕ್ಕೆ ರಾತ್ರಿ ಅಲ್ಲದೇ ಹಗಲಿನ ಹೊತ್ತಿನಲ್ಲೇ ಈ ಅನುಭವವನ್ನು ಫೀಲ್ ಮಾಡಲು ವಾಣಿ ಶುರುಮಾಡಿದಳು. ಈ ಅನುಭವ ಮತ್ತೆಮತ್ತೆ ಆಗೀಗ ಎನ್ನುವಂತೆ ಉಂಟಾಯಿತು. ವಾಣಿ ಇದನ್ನು ಮೊದಮೊದಲು ತನ್ನ ಭ್ರಮೆ ಎಂದೇ ಭಾವಿಸಿದಳು. ಪೂರ್ತಿ ಹಾಗೆ ಭ್ರಮೆ ಎಂದುಕೊಂಡು ಮನಸ್ಸಿನಾಚೆ ಅದನ್ನು ತಳ್ಳಿ ಬಿಡಲು ಕೂಡ ಸಾಧ್ಯವಾಗಲಿಲ್ಲ.

ಒಂದು ದಿನ ದೊಡ್ಡ ಮಗ ಬಾಲ್ ಆಡುತ್ತಾ ಟೆರೇಸಿಗೆ ಹೋದ. ವಾಣಿ ಮತ್ತು ಅವಳ ಪುಟ್ಟ ಮಗ ಮನೆಯ ಒಳಗಡೆಯೇ ಇದ್ದರು. ಬಾಲ್ ತೆಗೆದುಕೊಂಡು ಹೋದ ಹುಡುಗ ಹೋಗಿ 15 ನಿಮಿಷ ಕಳೆದಿರಬಹುದಷ್ಟೇ. ಅಮ್ಮಾ ಎಂದು ಜೋರಾಗಿ ಕಿರುಚುತ್ತಾ ಓಡಿಬಂದ. ವಾಣಿಗೆ ಮತ್ತೊಮ್ಮೆ ಎದೆ ಧಸಕ್ಕೆಂದಿತು. ಜೀವವನ್ನು ಬಾಯಲ್ಲಿ ಇಟ್ಟುಕೊಂಡು ಕೇಳಿದಳು,'ಏನಾಯ್ತೋ?' ಅಮ್ಮನನ್ನ ಅಪ್ಪಿ ಅಳುತ್ತಾ ಹೇಳಿದ,

'ಯಾರೋ ಬಂದು ನನ್ನ ತಲೆಗೆ ಹಿಂದಿನಿಂದ ಹೊಡೆದ ಹಾಗಾಯಿತು.'

ಮಗನನ್ನ ಮುದ್ದಿಸುತ್ತಾ ಅವನನ್ನು ಸಂತೈಸುವಲ್ಲಿ ಬುದ್ಧಿಯೆಲ್ಲ ಖರ್ಚಾಯಿತು. 'ನೋಡು ಕಂದಾ, ಯಾರೂ ಬಂದಿಲ್ಲ, ತೆಂಗುಗರಿಗಳ ಮೇಲೆ ಬಿಳಿ ಗರುಡ ಕೂರತ್ತಲ್ಲ, ಅದರ ಕಾಲೋ, ಕೊಕ್ಕೋ ನಿನಗೆ ತಾಗಿದೆ ಅಷ್ಟೇ. ಬಹುಶ: ಅದು ಅಲ್ಲಿ ಗೂಡು ಕಟ್ಟುತ್ತಿದೆ ಅನ್ನಿಸುತ್ತಿದೆ ಮಗೂ.'

ಮುದ್ದುಮುಖದ ಆತಂಕ ಕೊಂಚ ಕಡಿಮೆಯಾದಂತೆ ಕಂಡಿತ್ತು. ವಾಣಿ ಆಕ್ಷಣಕ್ಕೆ ಹಗುರಾದೆನೆಂದುಕೊಂಡರೂ ಟೆರೇಸಿನ ಮೆಟ್ಟಿಲು ಹತ್ತಿ ಸುತ್ತ ಕಣ್ಣಾಡಿಸಿ ಬಂದಳು. ಯಾರೂ ಬಂದ ಸುಳಿವು ಇರಲಿಲ್ಲ. ಅವತ್ತು ರಾತ್ರಿ 7 ಗಂಟೆಯ ಹೊತ್ತಿಗೆ ಗಂಡ ಮನೆಗೆ ಬಂದಾಗ ಘಟಿಸಿದ ವಿಷಯ ತಿಳಿಸಿದಳು. ಹೌದಾ, ಎಂದು ಕೇಳಿದ ಗಂಡ ಮಕ್ಕಳನ್ನು ಕರೆದುಕೊಂಡು ಪಾರ್ಕಿಗೆ ಹೋದ. ವಾಣಿ ಮನೆಯಲ್ಲಿ ಒಂಟಿಯಾದಳು. ಎಂಟು ಗಂಟೆಗೆಲ್ಲಾ ಅಡುಗೆ ಕೆಲಸ ಮುಗಿಯಿತು. ಯಾರದ್ದೋ ಫೋನ್ ಕಾಲಿನಲ್ಲಿ ಮಾತನಾಡುತ್ತಾ, ಟೆರೇಸ್ ಹತ್ತಿದಳು. ಮಾತು ಮುಗಿದರೂ ಟೆರೇಸಿನಿಂದ ಇಳಿಯುವ ಮನಸ್ಸಾಗಲಿಲ್ಲ. ಆಚೆ ಮನೆಯ, ಎದುರು ಮನೆಯ ದೀಪದ ಬೆಳಕು ತಿಂಗಳ ಬೆಳಕಂತೆ ಕಂಡರು ಇವರ ಟೆರೇಸಿಗೆ ಬೆಳಕು ಬೀರುವಷ್ಟು ಆ ಬೆಳಕು ಇರಲಿಲ್ಲ.

ಹದಿನೈದಿಪ್ಪತ್ತು ನಿಮಿಷ ಕಳೆಯಿತು. ಸರ್ರನೆ ತೆಂಗಿನ ಗರಿಗಳ ಹತ್ತಿರ ಯಾರೋ ಸರಿದ ಹಾಗೆ ವಾಣಿ ಭಾವಿಸಿದಳು. ಮೈ, ಮನಸ್ಸು ಎರಡೂ ಒಟ್ಟಿಗೇ ಬೆಚ್ಚಿದವು. ಈ ಬಾರಿ ಸರಿಯಾಗಿ ಗಮನಿಸಿದ್ದೇನೆ ಎಂದು ಅಂದುಕೊಂಡಳು. ಮನುಷ್ಯರಾರೂ ಇರಲಿಕ್ಕೆ ಸಾಧ್ಯವೇ ಇಲ್ಲ. ಮತ್ತೆ?...... ಮನಸ್ಸು ಹೇಳಿತು. ತೆಂಗಿನ ಮರವನ್ನು ದಿಟ್ಟಿಸಿ ನೋಡತೊಡಗಿದಳು. ಮರ ಏನೋ ಹೇಳುತ್ತಿರುವಂತೆ ಭಾಸವಾಯಿತು. ತಲೆತುಂಬಾ ಗರಿಕೆದರಿಕೊಂಡಿರುವ ಮರಕ್ಕೆ ಬೇರೆಯದೇ ಛಾಯೆ ಬಂತು. ನೆಗೆಟಿವ್ ಫೋರ್ಸ್, ಮನಸ್ಸು ಪಿಸುಗುಟ್ಟಿತು. ಕಣ್ಣು ಮತ್ತು ತೀಕ್ಷ್ಣವಾಯಿತು. ಧ್ವನಿ ಬಂದದ್ದು ತನ್ನೊಳಗಿನಿಂದಲೋ ತೆಂಗಿನಮರದಿಂದಲೋ ತಿಳಿಯಲಾಗಲಿಲ್ಲ. ಬಂದ ಧ್ವನಿಗೆ ಕಿವಿಯಾದಳು.

ನಿನ್ನ ಮನೆಯ ಯಾರಿಗಾದರೂ ತೊಂದರೆ ಕೊಟ್ಟೇ ಕೊಡುತ್ತೇನೆ.

ನೀನೊಂದು ಮರ, ನೀನು ಕೊಡುವ ತೊಂದರೆ ಹೇಗಿರಬಹುದು?

ತಿರಸ್ಕಾರ ವಾಣಿಯ ಇಡೀ ದೇಹದಲ್ಲಿ ವ್ಯಕ್ತವಾಯಿತು.

ಕೆದರಿದ ಗರಿಯನ್ನು ಒದರಿ ಎಲ್ಲರ ಮೈಮೇಲೆ ಬೀಳಿಸಬಲ್ಲೆ, ಕಪ್ಪಾದ ಕಾಯನ್ನು ಕೆಡವಬಲ್ಲೆ.

ಮತ್ತೆ?

ಇಷ್ಟು ಸಾಲದೆ?

ನಿನ್ನ ಕುಟುಂಬದವರನ್ನು ಬಿಡುವುದಿಲ್ಲ

ನೀನು ಹಾಗೆ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇ ಹೌದಾದರೆರೆ ನಿನ್ನನ್ನು ಈ ಕ್ಷಣದಿಂದಲೇ ನಖಶಿಖಾಂತ ಎದುರಿಸುತ್ತೇನೆ. ನನ್ನ ಕುಟುಂಬದ ಕೂದಲು ಕೊಂಕಲೂ ಬಿಡಲಾರೆ. ವಾಣಿ ಹೇಳಿದ ರಭಸಕ್ಕೆ ಮೈ ಕಂಪಿಸಿತು.

ಹಹಹಹ . ನೋಡುವ.. ನೋಡುವ ...

ಪತರಗುಟ್ಟುತ್ತಾ ವಾಣಿ ಮೆಟ್ಟಿಲಿಳಿದು ಓಡಿದಳು. ಗರಿಗಳ ನಡುವಲ್ಲಿ ಯಾರೋ ನಕ್ಕಂತೆ ಭಾಸವಾಯಿತು. ಅವತ್ತಿನಿಂದಲೇ ವಾಣಿ ಮೈಯೆಲ್ಲ ಕಣ್ಣು ಮತ್ತು ಕಿವಿ ಯಾದಳು. ಮಕ್ಕಳು ಮರದ ಹತ್ತಿರ ಸುಳಿದರೆ ತಾನು ಹಿಂದಿಂದೆ ಸುಳಿದಳು. ರಾತ್ರಿ ಮರದ ಹತ್ತಿರ ಮಾತಿಗೆ ನಿಲ್ಲಬೇಡಿ ಎಂದು ಗಂಡನಿಗೆ ಗದರಿಸಿದಳು. ಮರ ಮುಟ್ಟಿ ಪುಳಕಗೊಳ್ಳುವುದು ನಿಂತುಹೋಯಿತು. ತೆಂಗು ಗರಿಗಳ ಮೇಲೆ ಹಕ್ಕಿ ಕೂತರೆ ನಿರ್ವಿಕಾರಳಾದಳು. ಅಲ್ಪಸ್ವಲ್ಪ ಒಣಗಿದ ಗರಿಯೊಂದನ್ನು ಗಂಡನ ಕೈಯಿಂದ ಎಳೆಸಿ ಹಾಕಿದಳು. ಸಧ್ಯ ಯಾವುದೂ ಒಣಗರಿ ಇಲ್ಲ ಎಂದು ಖಾತ್ರಿಪಡಿಸಿಕೊಂಡಳು. ಪೂರ್ತಿ ಸಮಾಧಾನ ಹೊಂದಲು ಸಾಧ್ಯವಿರಲಿಲ್ಲ. ಆದರೆ ವಾಣಿ ಟೆರೇಸಿಗೆ ಹೋಗುವುದನ್ನು ನಿಲ್ಲಿಸಲಿಲ್ಲ. ಸಂಜೆಯ ಸಂತೋಷ ಅವಳಿಗೆ ತುಂಬಾ ದೊಡ್ಡದಿತ್ತು. ತೆಂಗಿನ ಮರದ ಹತ್ತಿರ ದಿನಾ ಹೇಳುತ್ತಿದ್ದಳು.

ನೀನು ಕೆಟ್ಟದ್ದನ್ನೇ ಮಾಡಲು ಬಯಸುವಿಯಾದರೆ ಅದನ್ನ.... ಅದನ್ನ ಎದುರಿಸದೇ ಹೋಗಲಾರೆ ನೆನಪಿಟ್ಟುಕೋ.

ದಿನಾ ವಾಣಿ ಮರವನ್ನು ಬುಡದಿಂದ ತಲೆ ತನಕ ಕಟುವಾಗಿ ನೋಡುತ್ತಿದ್ದಳು. 15 ದಿನ ಹೇಳಿಕೊಳ್ಳುವಂತದ್ದೇನುನೂ ನಡೆಯಲಿಲ್ಲ. ಒಂದೆರಡು ದಿನ ಮರದಿಂದ ಯಾವುದೋ ಛಾಯೆ ಹರಿದು ಹೋದಂತೆ ಭಾಸವಾದದ್ದು ಬಿಟ್ಟರೆ ವಿಶೇಷವೆನ್ನುವಂತದ್ದು ವಾಣಿಯ ಗಮನಕ್ಕೆ ಬರಲಿಲ್ಲ.

ಅವತ್ತು ಶನಿವಾರ. ಬೆಳಗಿನಿಂದಲೇ ವಾಣಿಗೆ ಏನೋ ಆತಂಕ. ಇವತ್ತೇನೋ ಘಟಿಸುತ್ತದೆ, ಏನೆಂಬುದು ತಿಳಿಯಲಿಲ್ಲ. ಬೆಳಗಿನ 'ಓಡುವಿಕೆ'ಗೆ ಓಗೊಟ್ಟಳು. ಸಂಜೆ ಮನೆಗೆ ಬಂದಾಗ ಎದೆಯೊಳಗಿನ ದನಿ ಕಿವಿಗೆ ಗಂಟೆಯ ಚುರುಕು ಮುಟ್ಟಿಸಿತು. 6:30 ರ ಸಮಯ. ವಾಷಿಂಗ್ ಮಷೀನ್ನಿನ ಬಟ್ಟೆ ತೆಗೆದು ಒಣ ಹಾಕಲು ಟೆರೇಸಿಗೆ ಹೋಗಬೇಕೆನ್ನುತ್ತಿರುವಾಗ ಮತ್ತೆ ಗಂಟೆ ಮೊರೆತದ ಸದ್ದು. ಬಟ್ಟೆ ಹಿಡಿದೇ ಹೊರಬಂದಳು. ಗಂಡ ಮತ್ತು ದೊಡ್ಡ ಮಗು ಹೊರಗಡೆ ಹೋಗಿದ್ದು ನೆನಪಾಯಿತು. ಪುಟ್ಟ ಮಗು ಮಾತ್ರ ಮೆಟ್ಟಿಲ ಮೇಲೆ ತೆಂಗಿನ ಮರದ ಕೆಳಗೆ ಆಟವಾಡುತ್ತಿತ್ತು. ಕೈಯಲ್ಲಿ ಬಟ್ಟೆ ಹಿಡಿದು ಒಂದೊಂದೇ ಮೆಟ್ಟಿಲು ಹತ್ತುತ್ತಿದ್ದಂತೆ ಒಮ್ಮೆಲೇ ಕೂಗಿದಳು.

'ಮಗಾ, ಬೇಗ ಬೇಗ ಒಳಗೆ ಹೋ'

ಮಗು ಗಾಬರಿಯಾಗಿ ಆಟಿಕೆ ಬಿಟ್ಟು ಒಳಗೆ ಹೋಯಿತು. ಒಂದೇ ಒಂದು ಕ್ಷಣ, ಇನ್ನೂ ಒಣಗಿರದ ತೆಂಗಿನ ಗರಿ ದಡಾರನೆ ವಾಣಿಯ ಬೆನ್ನ ಮೇಲೆ ಬಿತ್ತು. ಮುಗ್ಗರಿಸಿ ಬೀಳುವ ಹಂತದಲ್ಲಿದ್ದ ವಾಣಿ ತೋಲ ಸಾಧಿಸಿದಳು. ನೋವಿಗೆ ಕಣ್ಣಲ್ಲಿ ನೀರು ಉಕ್ಕಿತು. ಕೈಯಲ್ಲಿದ್ದ ಬಟ್ಟೆ ನೆಲದಲ್ಲಿ ಅನಾಥವಾಯಿತು. ತೆಂಗು ಗರಿಗಳ ನಡುವಲ್ಲಿ ಅಣಕಿಸುವ ನಿಶಬ್ದ ಶಬ್ದ. ಮರ ಮಗುವಿನ ಮೇಲೆ ತನ್ನ ಗರಿಗಳನ್ನು ಬೀಳಿಸಲು ಹೊಂಚುಹಾಕಿ ಕಾದಿತ್ತು. ಅರ್ಥವಾಯಿತು ವಾಣಿಗೆ. ಇದು ಅರ್ಥವಾದ ಮರುಕ್ಷಣ ಮಗುವಿಗೆ ಒಳಗೋಡುವಂತೆ ಜೋರಾಗಿ ಕೂಗಿದ್ದಳು.

ತನ್ನ ಯೋಜನೆ ತಪ್ಪಿ ಹೋದ ಚಿಂತೆಯಲ್ಲಿ ತೆಂಗಿನಮರ ಅಸಹಾಯಕವೆಂಬಂತೆ ನಿಂತಿತ್ತು. ವಾಣಿ ಅತ್ಯಂತ ಶಾಂತಿಯಿಂದ ನಕ್ಕು ಹೇಳಿದಳು.

ನಾನು ಗೆದ್ದೆ....

ಸಾಕಾಗಲಿಲ್ಲವೇ ಬೆನ್ನು ಮುರಿಯುವಷ್ಟಾದದ್ದು?

ಏನೆಂದಿದ್ದೆ ನೀನು? ನನ್ನ ಕುಟುಂಬದವರಿಗೆ ಹಾನಿ ಮಾಡುತ್ತೇನೆಂದಲ್ಲವೇ? ನನ್ನ ಚಪ್ಪರದ ತಂಪಿನಲ್ಲಿ ನನ್ನ ಕುಟುಂಬ ಸ್ವಸ್ಥ. ನೀನು ಗರಿಯನ್ನು ಬೀಳಿಸಹೊರಟದ್ದು ನನ್ನ ಮಗುವಿನ ಮೇಲೆ, ನಾನು ಬೀಳಿಸಿಕೊಂಡಿದ್ದು ನನ್ನ ಮೇಲೆ. ನನ್ನ ಕುಟುಂಬವನ್ನು ನೀನೇನೂ ಮಾಡಲಾರೆ. ಈ ಕ್ಷಣದಿಂದಲೇ ಸೋಲಿನ ಸುಮ್ಮಾನ ನಿನಗೆ, ಅನುಭವಿಸು...... ವಾಣಿ ನೋವಿನಲ್ಲೂ ಸಂತೋಷದಿಂದ ಬಿದ್ದ ಬಟ್ಟೆಯನ್ನು ಹೆಕ್ಕಿ ಕೆಳಗೆ ಬಂದಳು.

ಎರಡೇ ಎರಡು ದಿನ, ತೆಂಗಿನ ಮರ ಒಣಗತೊಡಗಿತ್ತು..ಒಣಗತೊಡಗಿತು.. ಒಣಗತೊಡಗಿತು.......

ಇದನ್ನು ವಾಣಿ ಸೂಕ್ಷ್ಮ ಗಮನಿಸಿದಳು. ವಾಣಿ ತನ್ನನ್ನೇ ತಾನು ಪ್ರಶ್ನಿಸಿಕೊಂಡಳು 'ತೆಂಗಿನಮರವೇಕೆ ಒಣಗುತ್ತಿದೆ? ನನ್ನನ್ನು ಸೋಲಿಸಲು ಸಾಧ್ಯವಾಗಲಿಲ್ಲವೆಂದೇ? ಅಥವಾ ನನ್ನ ಕುಟುಂಬಕ್ಕೇನೂ ಕೆಟ್ಟದ್ದು ಮಾಡಲು ಆಗಲಿಲ್ಲವೆಂದೇ? ಮರಗಳಿಗೂ ಈ ಪರಿ ದ್ವೇಷದ ಭಾವನೆಯಿರುತ್ತದೆಯೇ? ಅಥವಾ ಅದರ ಮೇಲೇನಾದರೂ ದುಷ್ಟ ಶಕ್ತಿ ವಾಸವಾಗಿದೆಯೇ? ನನ್ನ ಮೇಲೆ ಅದಕ್ಕೆ ಯಾಕಿಷ್ಟು ಕೋಪ? ಆದರೆ ಒಂದಂತೂ ಸತ್ಯ.. ನನ್ನನ್ನೇನೂ ಅದು ಮಾಡಲಾರ ದುಹೋಗಲಿ, ಮರವೇಕೆ ಒಣಗುತ್ತಿದೆ? ನನ್ನ ಹಠ ಅದನ್ನು ಒಣಗಿಸುತ್ತಿದೆಯೇ. ನನ್ನ ಪ್ರೀತಿಯನ್ನದು ಬಯಸುತ್ತಿದೆಯೇಏನೇ ಇರಲಿ, ಇವತ್ತಿನಿಂದ ಮರವನ್ನು ಮತ್ತೆ ಸವರಬೇಕು, ಕ್ಷಮಿಸಿಬಿಡುತ್ತೇನೆ ..... '

ವಾಣಿ ತೆಂಗಿನಮರಕ್ಕೆ ಹೇಳಿದಳು. 'ನಾನು ಬಯಸಿದ್ದು ನಿನ್ನ ಸೋಲು, ನೀನು ಈಗ ಅನುಭವಿಸುತ್ತಿರುವುದು ನಿನ್ನ ಸಾವು..ನಿನ್ನ ಸಾವು ನನಗೆ ಬೇಡ. ನಿನ್ನ ಪ್ರೀತಿಸುತ್ತೇನೆ, ಬದುಕಿಬಿಡು.

ವಾಣಿ ಮರವನ್ನ ಅದೇ ಹಿಂದಿನ ಪ್ರೀತಿಯಿಂದ ಸ್ಪರ್ಶಿಸತೊಡಗಿದಳು.

ಈಗ ಮರ ನಿಧಾನಕ್ಕೆ ಚೈತನ್ಯ ತುಂಬಿಕೊಳ್ಳುತ್ತಿದೆ.

ಎಲ್ಲಿಗೆ ಹೋದವು ಕಾಗೆಗಳು?

» ಸುರೇಂದ್ರ ಪೈ, ಭಟ್ಕಳ

ನಮ್ಮ ಸುತ್ತಲೂ ಕಾಗೆ ಹಾರಿಸುವವರ ಸಂಖ್ಯೆ ಹೆಚ್ಚಾದ್ದರಿಂದಲೇ ಕಾ..ಕಾ.. ಕಾ..ಕಾಗೆ ಕಾಣೆಯಾಗಿವೆ ಎಂದು ಹೇಳಬಹುದೇ?

ಪದೇ ಪದೇ ಯಾರಾದರೂ ನಮ್ಮನ್ನು ಯಾಮಾರಿಸಲು ಪ್ರಯತ್ನಪಟ್ಟಾಗ ತಕ್ಷಣವೇ ಕಾಗೆ ಹಾರಿಸಿದ್ದು ಸಾಕು ನಿಲ್ಲಿಸು ಎನ್ನುವುದುಂಟು. ಬಾಯಾರಿದ ಕಾಗೆಯು ತನ್ನ ಬುದ್ಧಿವಂತಿಕೆಯಿಂದ ಒಂದೊಂದೇ ಕಲ್ಲನ್ನು ಬಾಟಲಿಯೊಳಗೆ ಹಾಕಿ ನೀರನ್ನು ಮೇಲೆ ಬರುವಂತೆ ಮಾಡಿ ಕುಡಿದು ಹಾರಿಹೋದ ಕಥೆಯನ್ನಾದರೂ ಕೇಳಿರಬೇಕಲ್ಲ. ಮಲೆನಾಡಿನ ತಪ್ಪಲಿನಲ್ಲಿರುವ ಊರು ನನ್ನದು. ಬಾಲ್ಯದಿಂದಲೂ ಸುತ್ತಮುತ್ತಲಿನ ಪರಿಸರದಲ್ಲಿ ಪಕ್ಷಿ, ಪ್ರಾಣಿಗಳನ್ನು ನೋಡುತ್ತಾ ಬೆಳೆದವರು ನಾವೆಲ್ಲಾ. ಮುಂಜಾನೆ ಕೋಳಿಯ ಕೋ....ಕೋ... ಕೋ.. ಎಂಬ ಕೂಗು ಹಾಗೂ ಕಾಗೆಯ ಕಾ.. ಕಾ..ಕಾ..ಎಂಬ ಧ್ವನಿ ಬೆಳಗಾಯಿತು ಹಾಸಿಗೆಯಿಂದ ಎಳಿ ಎಂಬ ಸಂಕೇತ ನೀಡುತ್ತಿದ್ದವು. ಕಾಗೆಗಳು ಮನೆಯ ಹಂಚಿನ ಮಾಡಿನ ಮೇಲೋ, ಮರದ ಮೇಲೋ ಗುಂಪು ಗುಂಪಾಗಿ ಬಂದು ಕುರುತ್ತಿದ್ದವು. ರೊಟ್ಟಿಯ ಚೂರು, ದೋಸೆ, ಅವಲಕ್ಕಿಯನ್ನು ಅಂಗಳದಲ್ಲಿ ಎಸೆದರೆ ಸಾಕು, ಕಾಗೆಗಳು ಬಂದು ತಿಂದು ಹೋಗುತ್ತಿದ್ದ ಆ ಚಿತ್ರಣ ಕಣ್ಣಿಗೆ ಕಟ್ಟಿದ ಹಾಗಿದೆ. ಕಾಗೆ ಎಂಬ ಪಕ್ಷಿಯು ಪಿತೃಪಕ್ಷದಲ್ಲಿ ಶುಭ ಶಕುನ, ಇನ್ನುಳಿದ ತಿಂಗಳಲ್ಲಿ ಅಪಶಕುನದ ಪಕ್ಷಿಯಾಗಿ ಬಿಡುತ್ತದೆ. ಕಾಗೆ ಮನುಷ್ಯನ ಮೈಯನ್ನು ಸ್ಪರ್ಶಿಸಿದರೆ, ಅದೇನೋ ಅಪಶುಕನ ಜರುಗುತ್ತದೆ ಎಂಬ ನಂಬಿಕೆ. ಅದು ಯಮರಾಜನ ಸಂಕೇತವೆಂಬ ಭಾವನೆ ಇದೆ. ಪಿತೃಪಕ್ಷದ ಸಮಯದಲ್ಲಿ, ಪೂರ್ವಜರ ಆತ್ಮಗಳು ಕಾಗೆಯ ರೂಪದಲ್ಲಿ ಭೂಮಿಗೆ ಇಳಿಯುತ್ತವೆ. ಈ ಸಮಯದಲ್ಲಿ ಅವರ ಕುಟುಂಬದವರು ಪಿಂಡದಾನ, ಶ್ರಾದ್ಧ ವಿಧಿವಿಧಾನಗಳು ಮತ್ತು ತರ್ಪಣವನ್ನು ನೀಡಿದ ಬಳಿಕ ಕಾಗೆಗಳಿಗೆ ಊಟ ಹಾಕುವುದೂ ಮುಖ್ಯ ಎಂಬ ನಂಬಿಕೆ ಇದೆ. ಇದರಿಂದ ಪಿತೃಗಳು ಸಂತೋಷಗೊಳ್ಳುವರೆಂಬ ಭಾವನೆ.

ಆದರೆ ಇತ್ತೀಚಿನ ದಿನಗಳಲ್ಲಿ ಕಾಗೆಗಳೇ ಕಣ್ಮರೆಯಾಗುತ್ತಿವೆ! ಬೆಂಗಳೂರಿನಂತಹ ನಗರದಲ್ಲಿ, ಕಾಗೆಗಳು ತುಂಬಾ ಕಡಿಮೆಯಾಗಿ ಬಿಟ್ಟಿವೆ! ಇದಕ್ಕೆ ಮನುಷ್ಯನ ದಿನಚರಿಯೇ ಕಾರಣ. ಕಾಗೆಗಳಲ್ಲಿ ನಮ್ಮ ಪಿತೃಗಳನ್ನು ನೋಡುವ ನಾವು ಕಾಗೆಗಳ ಸಂತತಿಯನ್ನೇ ಭೂಮಿಯಿಂದ ಕಣ್ಮರೆಯಾಗುವಂತೆ ಮಾಡಿದ್ದೇವಲ್ಲ ಎನು ಮಾಡೋಣ ಹೇಳಿ. ಕೊನೆಗೆ ಪಿತೃಪಕ್ಷದ ಪಿಂಡದಾನವನ್ನು ಕಾಗೆಯ ಬದಲಾಗಿ, ಗೋವುಗಳಿಗೋ, ನದಿಗಳಿಗೋ ಬಿಡುವ ಬದಲಿ ವ್ಯವಸ್ಥೆಯನ್ನು ಹುಡುಕಿದ್ದೇವೆ ನಿಜ. ಆದರೆ ನೋಡ ನೋಡುತ್ತಿದ್ದಂತೆಯೇ, ನಮ್ಮ ಸುತ್ತಲಿನ ಕೊಳೆಯನ್ನು ತಿಂದು ಸ್ವಚ್ಛಗೊಳಿಸುತ್ತಿದ್ದ ಕಾಗೆಗಳನ್ನು, ಪರಿಸರ ವ್ಯವಸ್ಥೆಯ ಒಂದು ಅಂಗವಾಗಿದ್ದ ಈ ಪಕ್ಷಿಯ ಸಂತತಿಗೆ ಕುಂದುಂಟು ಮಾಡಿಬಿಟ್ಟಿದ್ದೇವೆ ಎಂಬ ಪಾಪ ಪ್ರಜ್ಞೆ ಯಾರಿಗೂ ಬಂದ ಹಾಗಿಲ್ಲ.

ಕಾಗೆ ಒಂದು ಚೊಕ್ಕಟ ಮಾಡುವ ಪಕ್ಷಿಯೂ ಹೌದು. ಸತ್ತುಬಿದ್ದ ಇಲಿಗಳನ್ನು, ಇತರ ಅಂತಹ ವಸ್ತು ಗಳನ್ನು ತಿಂದು ಶುದ್ಧ ಮಾಡುವ ಹಕ್ಕಿ ಅದು. ಆದರೆ, ಈಚಿನ ದಿನಗಳಲ್ಲಿ ಮರಗಳು ಕಡಿಮೆ ಯಾಗಿ, ಎತ್ತರದ ಮರಗಳಲ್ಲಿ ಗೂಡು ಕಟ್ಟಲು ಕಾಗೆಗಳಿಗೆ ಸಾಧ್ಯವಾಗುತ್ತಿಲ್ಲ. ಅವುಗಳ ನೈಸರ್ಗಿಕ ಆವಾಸಸ್ಥಾನಗಳು ನಾಶವಾಗುತ್ತಿವೆ. ಕಾಗೆಗಳು ಕೀಟಗಳನ್ನು ತಿನ್ನುತ್ತವೆ. ಬೆಳೆಗಳಲ್ಲಿ ಕೀಟನಾಶಕಗಳನ್ನು ಬಳಸುತ್ತಾರೆ, ಕಾಗೆಗಳು ಸತ್ತ ಕೀಟಗಳನ್ನು ತಿನ್ನುವುದರಿಂದ ಅವುಗಳ ಮೊಟ್ಟೆಗಳ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಇದರಿಂದ ಕಾಗೆಗಳ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತಿದೆ. ಕಾಗೆಗಳ ಸಂತತಿ ನಶಿಸಿಹೋದರೆ ಬೆಳೆಗಳಿಗೆ ಕೀಟಬಾಧೆ ಉಂಟಾಗಿ ಆಹಾರದ ಕೊರತೆ ಉಂಟಾಗಲಿದೆ ಎಂದು ಅಂದಾಜಿಸಲಾಗಿದೆ. ಪಿತೃಪಕ್ಷವೇನೋ ಮುಗಿದು ಹೋಯಿತು. ಆದರೆ ಕಾಗೆಯೇ ಇಲ್ಲದಿರುವಾಗ ಮಾಡಿದ ಕ್ರಿಯಾವಿಧಿಗಳ ಫಲ ನೀಡುತ್ತವೆಯೇ ಇಲ್ಲವೇ ಎಂಬುದಕ್ಕಿಂತಲೂ, ಕಾಗೆ ಇಲ್ಲದ ಜಗತ್ತು ಹೇಗಿರುತ್ತದೆ ಎಂಬ ಕಳವಳ ಅಧಿಕ ಎನಿಸಿದೆ. ಈಗ ಅಲ್ಲಲ್ಲಿ ಒಂದೊಂದು ಪ್ರದೇಶದಲ್ಲಿ ವಿರಳ ವಾಗಿ ಅವು ಇವೆ ನಿಜ; ಆದರೆ ನೂರಾರು ಸಂಖ್ಯೆಯಲ್ಲಿದ್ದ ಕಾಗೆಗಳು ಎಲ್ಲಿ ಗೆ ಹೋದವು? ನೀವೆಲ್ಲಾದರೂ ನೋಡಿದ್ದಿರಾ?

ಸುಲಲಿತ ಪ್ರಬಂಧ

» ನಳಿನಿ ಭೀಮಪ್ಪ

ಇಪ್ಪತ್ತನೆಯ ಶತಮಾನದಲ್ಲಿ ಕ್ಯಾಮೆರಾಕ್ಕೆ ದೊಡ್ಡ ಕಪ್ಪು ಗೌನು ಹಾಕಿ ಫೋಟೋ ತೆಗೆಯುತ್ತಿದ್ದರು. ಈಗ ಏನಿದ್ದರೂ ಸೆಲ್ಫಿ ಕಾಲ, ಫೋಟೋಶೂಟ್ ಕಾಲ; ಅಲ್ಲಿನ ಚಿತ್ರ ವಿಚಿತ್ರಗಳ ಕಾಲ!

ಪೋಸ್ ಪ್ಲೀಸ್



ಬೇಸಿಗೆ ರಜೆಯಲ್ಲಿ ಹೈಸ್ಕೂಲು ಓದುತ್ತಿರುವ ತಂಗಿಯ ಮಗಳು 'ಬಾ ದೊಡ್ಡಮ್ಮ ಒಂದು ಸೆಲ್ಫೀ ತಕ್ಕೊಳ್ಳೋಣಾ' ಎನ್ನುತ್ತಿದ್ದಂತೆ ಖುಷಿಯಾಗಿ ಓಡಿಹೋಗಿ ಮೂವತ್ತೆರಡು ಹಲ್ಲುಗಳನ್ನು ತೋರಿಸುತ್ತಾ ಅವಳ ಜೊತೆ ನಿಂತೆ. ಒಂದೇ ತರಹ ಪೋಸ್ ಕೊಡ್ತೀಯಲ್ಲ ದೊಡ್ಡಮ್ಮ ಎಲ್ಲ ಫೋಟೋದಲ್ಲೂ, ಕೈಯಿಂದ ಹಾರ್ಟ್ ಮಾಡಿ ನಿಂತುಕೋ ಎಂದಳು. ಎರಡೂ ಕೈಗಳ ಬೆರಳುಗಳನ್ನು ಉಪಯೋಗಿಸಿ ಹಾರ್ಟ ಮಾಡುವ ಸರ್ಕಸ್ ನೋಡಿ ಬಿದ್ದೂ ಬಿದ್ದೂ ನಕ್ಕಳು.

ಅದು ಹಳೆಯ ಕಾಲದವರ ಹಾರ್ಟ್ ದೊಡ್ಡಮ್ಮಾ, ತೋರುಬೆರಳಿನ ಮೇಲೆ ಹೆಬ್ಬೆರಳನ್ನು ಕ್ರಾಸ್ ಆಗಿ ಒಳ್ಳೆ ಚಿಟಿಕೆ ಹೊಡೆಯುವವರ ಹಾಗೆ ಇಟ್ಟು, ಇಷ್ಟೇ ನೋಡು ಎಂದಾಗ, ಎಲಾ ಎಲಾ ಅದೆಷ್ಟು ಸುಲಭವಾಗಿ ಹಾರ್ಟ್ ಮಾಡುವ ಆರ್ಟ್ ಕಂಡುಕೊಂಡಿದ್ದಾರಲ್ಲಾ ಎನಿಸಿತ್ತು. ಫೋಟೋಕ್ಕೆ ಅದೇನೇನು ಪೋಸ್ ಕೊಡುವ ಕಾಲ ಬಂದಿದೆ ನೋಡಿ.

ಹಿಂದಿನ ಕಾಲದಲ್ಲೆಲ್ಲ ಮದುವೆಯಲ್ಲೋ, ಯಾವುದಾದರೂ ಕಾರ್ಯಕ್ರಮದಲ್ಲೋ ಅಥವಾ ಸ್ಟೂಡಿಯೋದಲ್ಲೋ ಫೋಟೋ ತೆಗೆಯುತ್ತೇವೆ ನಿಲ್ಲಿ ಎನ್ನುತ್ತಿದ್ದಂತೆ, ಮಾತು ಕತೆ, ನಗು ಹರಟೆ ಎಲ್ಲ ನಿಲ್ಲಿಸಿ, ಎರಡೇಟು ಕಪಾಳಕ್ಕೆ ಹೊಡೆಸಿಕೊಂಡವರಂತೆ, ಮುಖ ಊದಿಸಿಕೊಂಡು ಗಂಭೀರವಾಗಿ ಅಟೆನ್ಷನ್ ಪೋಸ್ ಕೊಟ್ಟು, ನೆಟ್ಟ ನೋಟದಿಂದ ಕ್ಯಾಮೆರಾವನ್ನೇ ನೋಡುತ್ತಾ ಗೊಂಬೆಯ ಹಾಗೆ ನಿಲ್ಲುತ್ತಿದ್ದರು. ನಕ್ಕರೆ ಅಪರಾಧವೇನೋ ಎನ್ನುವಂತೆ ಇರುತ್ತಿತ್ತು ಮುಖಭಾವ.

ಹೆಣ್ಣುಮಕ್ಕಳಂತೂ ಎಣ್ಣೆಹಚ್ಚಿ ಬಾಚಿದ ಕೂದಲು ಒಂದೆರಡು ನೆತ್ತಿಯ ಮೇಲೆ ಎದ್ದಿದ್ದರೂ ಅದನ್ನು ತೀಡಿ ತೀಡಿ ಸಪಾಟು ಮಾಡಿ ಮಲಗಿಸುವು ದನ್ನು ಮರೆಯುತ್ತಿರಲಿಲ್ಲ. ಒಬ್ಬೊಬ್ಬರನ್ನೇ ಫೋಟೋ ಹೊಡೆಸೋಕೆ ತಂದು ನಿಲ್ಲಿಸುವ ಹೊತ್ತಿಗೆ ಕಪ್ಪೆಗಳನ್ನು ತಕ್ಕಡಿಗೆ ಹಾಕುವಂತೆ ಸಾಕುಬೇಕಾಗುತ್ತಿತ್ತು.

ಬೇಕಾದರೆ ಹಳೆಯ ಅಲ್ಬಂನಲ್ಲಿರುವ ಫೋಟೋಗಳನ್ನೊಮ್ಮೆ ತಿರುವಿ ಹಾಕಿ ನೋಡಿ, ಎಲ್ಲವೂ ಒಂದಲ್ಲಾ ಒಂದು ರೀತಿ ಫೋಟೋಬಾಂಬಿಂಗ್ ತರಹವೇ ಇರುತ್ತವೆ. ಯಾರದ್ದೋ ಫೋಟೋ ತೆಗೆಯುತ್ತಿರುತ್ತಾರೆ, ಮತ್ಯಾರೋ ಹಣಕಿ ಹಾಕುತ್ತಿರುತ್ತಾರೆ ಅಥವಾ ಕೈ, ಕಾಲು, ತಲೆ ಏನೋ ಒಂದು ಅಚಾನಕ್ಕಾಗಿ ಅಡ್ಡ ತೂರಿರುತ್ತದೆ. ಶಾಲೆಯ ಗ್ರುಪ್ ಫೋಟೋ ಕೂಡಾ ಅಷ್ಟೇ. ಒಂದು ರೀತಿಯಲ್ಲಿ ಕ್ರೈಕಟ್ ಬಾಯ್ಕುಚ್ ಎನ್ನುವ ತರಹ, ವಿದ್ಯಾರ್ಥಿಗಳು, ಶಿಕ್ಷಕರು ಎಲ್ಲರೂ ಮುಖ ಊದಿಸಿಕೊಂಡು ಥೇಟ್ ಹನುಮಂತನ ಅಪರಾವತಾರವೇ. ಹಿನ್ನೆಲೆ ಯಾವುದೇ ಇರಲಿ, ಒಂಟಿಯಾಗಿರಲಿ, ಜಂಟಿಯಾಗಿರಲಿ, ಗುಂಪಿನಲ್ಲೇ ಇರಲಿ, ಎಲ್ಲರದೂ ಅದೇ ಬಾಯಿ ಉಫ್ ಮಾಡಿರುವ ಭಂಗಿಗಳೇ.

ಈಗಿನ ಕಾಲದಲ್ಲಿ ಫೋಟೋ ಎನ್ನುತ್ತಿದ್ದಂತೆ ಗಂಭೀರವಾಗಿದ್ದವರು, ಜಗಳವಾಡುತ್ತಿದ್ದವರು ಎಲ್ಲ ಮರೆತು ಕ್ಕಿ ಕ್ಕಿ ಕ್ಕಿ ಕ್ಕೀ ಅಂತಾ ನಗುವನ್ನು ತುಂಬಿಕೊಂಡೋ, ಹಂದಿಯ ಮುಸುಡಿಯ ಹಾಗೆ ಪೌಟ್ ಮಾಡಿಕೊಂಡೋ, ವಾರೆಗಣ್ಣು, ಚೂಪುಗಣ್ಣು ಬಿಟ್ಟುಕೊಂಡೋ ನಿಂತುಬಿಡುತ್ತಾರೆ. ಜೊತೆಗೆ ಹಿಂದೆ ನಿಂತಿರುವವರು ಮುಂದಿನವರ ತಲೆಯ ಮೇಲೆ ಕೋಡು ಮೂಡಿಸುತ್ತಲೋ ಅಥವಾ ಮತ್ತೇನಾದರೂ ತರಲೆ ಮಾಡುತ್ತಲೇ ಪೋಸ್ ಕೊಡುವುದುಂಟು. ಅದರಲ್ಲೂ ಹೆಣ್ಣುಮಕ್ಕಳು ಕೂದಲು ಕಟ್ಟಿದ್ದರೆ ಅದನ್ನು ಬಿಚ್ಚಿ, ಕೊಡವಿ ಹರವಿಕೊಂಡು ಪೋಸ್ ಕೊಡದಿದ್ದರೆ ಕೆಲವರಿಗೆ ಸಮಾಧಾನವೇ ಆಗುವುದಿಲ್ಲ. ಇತ್ತೀಚಿನ ದಶಕಗಳಲ್ಲಿ ಸ್ಟೂಡಿಯೋದವರು ನಗಿಸಲು ಚೀಸ್, ಆಲ್ ದ ಬೆಸ್ಟ್ ಎಂದೆಲ್ಲ ಒಂದೇ ಬಾರಿಗೆ ಹೇಳಿಸಿ ಫೋಟೋ ಕ್ಲಿಕ್ಕಿಸುವುದುಂಟು.

ಆಧಾರ್ ಕಾರ್ಡ್ ಭಂಗಿ

ಎಲ್ಲದಕ್ಕಿಂತ ತಮಾಷೆ ಎಂದರೆ ಆಧಾರ್ ಕಾರ್ಡ್ ಭಂಗಿ. ನೀವು ಎಷ್ಟೇ ಚೆಂದ ಇರಿ, ಎಷ್ಟೇ ನೀಟಾಗಿ ರೆಡಿಯಾಗಿ ಹೋಗಿ, ಎಷ್ಟೇ ಚಂದದ ಭಂಗಿಯಲ್ಲಿ ಕುಳಿತುಕೊಳ್ಳಿ, ಅಲ್ಲಿನ ಕ್ಯಾಮೆರಾ ಮಾತ್ರ ತನಗೆ ಹೇಗೆ ಬೇಕೋ ಹಾಗೇ ಕ್ಲಿಕ್ಕಿಸುತ್ತದೆಯೋ ಏನೋ ಗೊತ್ತಿಲ್ಲ. ಆಧಾರ್ ಕಾರ್ಡ್‌ನಲ್ಲಿ ಇರುವ ವಯಸ್ಸಿಗಿಂತ ಹತ್ತು ವರ್ಷ ಹೆಚ್ಚಾಗಿ ಕಾಣುವಂತೆ ಫೋಟೋ ಪ್ರಿಂಟ್ ಆಗಿ ಬರದಿದ್ದರೆ ಕೇಳಿ. ಇನ್ನು ಮನೆಯಲ್ಲಿ ನಾಯಿ, ಬೆಕ್ಕು ಸಾಕುವವರು, ಅವುಗಳ ಜೊತೆಗೆ ಅದೇನೇನು ಭಂಗಿಯಲ್ಲಿ ಪ್ರಾಣಿಗಳ ಫೋಟೋನೂ ತೆಗೆದಿರುವುದನ್ನು ನೋಡಿದರೆ ಅವರ ಪ್ರಾಣಿಪ್ರೀತಿ ಅರಿವಾಗಬಹುದು.

ಚಾಯ್ಸ್ ಇಲ್ಲ!

ಗಂಡುಮಕ್ಕಳಿಗೆ ಪೋಸ್ ಕೊಡೋಕೆ ಅಷ್ಟೊಂದು ಚಾಯ್ಸ್ ಇರುವುದಿಲ್ಲ ಬಿಡಿ. ಒಂದೊಳ್ಳೆ ಡ್ರೆಸ್ ಹಾಕಿಕೊಂಡು, ಜೇಬಿನಲ್ಲಿ ಕೈ ಇಟ್ಟುಕೊಂಡೋ, ಗಾಗಲ್ಸ್ ಹಾಕಿಯೋ ಪೋಸ್ ಕೊಟ್ಟರೆ ಮುಗಿಯಿತು. ಜೊತೆಗೆ ಅವರು ಹೇಗೇ ನಿಂತರೂ ಒಂದೇ ರೀತಿ ಕಾಣುತ್ತಿರುತ್ತಾರೆ, ಅವರನ್ನು ನೋಡುವುದೂ ಅಷ್ಟರಲ್ಲೇ ಇದೆ ಬಿಡಿ. ಆದರೆ ಹೆಣ್ಣುಮಕ್ಕಳದು ಹಾಗಲ್ಲ. ಪೋಸ್‌ಗಳಿಗೆ ಚಾಯ್ಸೋ ಚಾಯ್ಸು. ಕಾಲು ಮುಂದಿಡುವುದೋ, ಸೊಂಟದ ಮೇಲೆ, ಗದ್ದದ ಮೇಲೆ ಕೈಯಿಟ್ಟುಕೊಂಡೋ, ಕೂದಲನ್ನು ಸರಿಸುವುದೋ, ಸೀರೆ ನೆರಿಗೆಯನ್ನು ಸರಿಪಡಿಸುವುದೋ ರೀತಿ ಕ್ಲಿಕ್ಕಿಸಿಕೊಳ್ಳುವುದು ಹೆಚ್ಚು. ಫೋಟೋ ಕ್ಲಿಕ್ಕಿಸಲು ರೆಡಿಯಾಗುತ್ತಿದ್ದಂತೆ ನೆಟ್ಟಗೆ ನಿಂತವರೆಲ್ಲ ಸೊಟ್ಟಂಬಟ್ಟ ಆಗಿ, ವೆರೈಟಿಯಾಗಿ ನಿಂತು ಪೋಸ್ ಕೊಟ್ಟುಬಿಡುತ್ತಾರೆ.

ಪ್ರಿಶೂಟ್

ಮದುವೆಗೆ ಮುಂಚೆ ಪ್ರೀಶೂಟ್‌ನ ಅವಾಂತರವಂತೂ ಹೇಳುವ ಹಾಗೆಯೇ ಇಲ್ಲ, ಅಷ್ಟರ ಮಟ್ಟಿಗೆ ಪೋಸ್‌ಗಳು ಚಿತ್ರ ವಿಚಿತ್ರವಾಗಿರುತ್ತವೆ, ಕೆಲವೊಮ್ಮೆ ಹದ್ದುಮೀರಿದ ಭಂಗಿಗಳು ನೋಡುಗರಿಗೆ ಮಜುಗರವನ್ನುಂಟು ಮಾಡುವುದುಂಟು. ಮದುವೆಯದು ಒಂದಿಷ್ಟು ಶಾಸ್ತ್ರ ಸಂಪ್ರದಾಯದಿಂದ ಕೂಡಿದ್ದರೂ, ಫೋಟೋಕ್ಕಾಗಿಯೇ ಶಾಸ್ತ್ರ ಮಾಡುತ್ತಿದ್ದಾರೇನೋ ಎನ್ನುವಂತಹ ಭಂಗಿಗಳು. ಬೇಬಿ ಬಂಪ್ ಕತೆಯೇ ಬೇರೆ. ಹಳೆಯ ಕಾಲದಲ್ಲಿ ಗರ್ಭಿಣಿ ತನ್ನ ಹೊಟ್ಟೆ ಕಾಣದಂತೆ ಎಚ್ಚರವಹಿಸಿ, ನಾಚುತ್ತಲೇ ಪೋಸ್ ಕೊಡುತ್ತಿದ್ದಳು. ಜೊತೆಗೆ ಆಕೆಯ ಪಕ್ಕದಲ್ಲಿ ಗಂಡ ನಿಂತಾಗ, ಅವನೂ ನಾಚಿ ನೀರಾಗುತ್ತಿದ್ದ. ಈಗಿನವರು ಹೊಟ್ಟೆ ಎದ್ದು ಕಾಣುವಂತಹ ಫೋಟೋಗಳು, ಹೊಟ್ಟೆಯ ಮೇಲೆ ಚಿತ್ರ ಬರೆಸಿಕೊಳ್ಳುವ ಫೋಟೋಗಳು, ಒಂದೇ ಗೌನನ್ನು ಪ್ರತೀ ತಿಂಗಳೂ ಹಾಕಿ ಒಂಭತ್ತು ತಿಂಗಳ ತನಕವೂ ವಿವಿಧ ಭಂಗಿಯ ಫೋಟೋ ಸೆಷನ್‌ಗಳು, ಜೊತೆಗೆ ಮಗುವಿನ ಅಪ್ಪನೂ ಸಹ ಹುಟ್ಟಲಿರುವ ಮಗುವಿನ ಮೇಲಿನ ಪ್ರೀತಿಯನ್ನು ವ್ಯಕ್ತಪಡಿಸುವ ಭಂಗಿಗಳು ಹೆಚ್ಚು ಟ್ರೆಂಡ್ ಆಗಿವೆ.

ಇತ್ತೀಚೆಗೆ ಪೋಸ್ಟ್ ಶೂಟ್ ಕೂಡಾ ತುಂಬ ಜನಪ್ರಿಯವಾಗುತ್ತಿದೆ. ಇವರ ಫೋಟೋಪೋಸ್‌ಗಳು ಸ್ವಲ್ಪ ಭಿನ್ನ. ಏಕೆಂದರೆ ಮದುವೆಯಾಗುವಾಗ 0–1 ಆಕಾರದಲ್ಲಿದ್ದ ಗಂಡಹೆಂಡತಿ, ರಜತ ಮಹೋತ್ಸವದ ಹೊತ್ತಿಗೆ 1–0 ಅವತಾರಕ್ಕೆ ಬದಲಾಗಿರುತ್ತಾರಲ್ಲಾ, ಹಾಗಾಗಿ ಕೈಕಾಲು ನೋಯದಂತಹ ಪೋಸ್‌ಗಳನ್ನೇ ಆರಿಸಿಕೊಳ್ಳಬೇಕು ನೋಡಿ. ಹಾಗೆಯೇ ಹಳೆಯ ಕಾಲದ ಹಾಡುಗಳನ್ನು ಆಯ್ಕೆ ಮಾಡಿಕೊಂಡು, ಅದೇ ತರಹ ಸನ್ನಿವೇಶಗಳನ್ನು ಸೃಷ್ಟಿಸಿಕೊಂಡು, ಅದೇ ಹಾಡಿನ ಭಂಗಿಯನ್ನೇ ಅನುಕರಿಸಿ ಮಾಡುವುದು ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಿದೆ.

ಹಾಗೆಯೇ ಹುಟ್ಟಿದ ಕೂಸಿನ ಫೋಟೋಶೂಟ್ ಕೂಡಾ ಮಾಡುತ್ತಾರೆ, ಅದೂ ಸಹ ವಿವಿಧ ಭಂಗಿಯಲ್ಲಿ. ಮೊನ್ನೆ ವಿದೇಶದಲ್ಲಿರುವ ಗೆಳತಿ ತನ್ನ ಮೊಮ್ಮಗುವಿನ ಫೋಟೋಶೂಟ್ ಮಾಡಿಸಿದ್ದನ್ನು ವಾಟ್ಸಪ್‌ನಲ್ಲಿ ಹಂಚಿಕೊಂಡಿದ್ದಳು. ಗೋಣು ನಿಲ್ಲದ ಎಳೆ ಕೂಸನ್ನು ಎತ್ತಿಕೊಳ್ಳುವುದಕ್ಕೇ ಸರ್ಕಸ್ ಮಾಡಬೇಕು, ಜೊತೆಗೆ ಬಟ್ಟೆ ಗಿಟ್ಟೆ ಬದಲಾಯಿಸಬೇಕೆಂದರೆ ಎಷ್ಟೊಂದು ಸಮಯ ಹಿಡಿಯುತ್ತದೆ. ಅಂಥಾದ್ದರಲ್ಲಿ ಎರಡು ಮೂರು ತಾಸಿನಲ್ಲಿ ಅದಕ್ಕೆ ಎಂಟು ಹತ್ತು ಡ್ರೆಸ್‌ಗಳನ್ನು ಫೋಟೋಗ್ರಾಫರ್‌ಗಳು ಸರಸರನೆ ಬದಲಾಯಿಸಿ, ಕೈ, ಕಾಲುಗಳನ್ನು ವಿವಿಧ ಭಂಗಿಯಲ್ಲಿ ಇರಿಸಿ, ಫೋಟೋಕ್ಕೆ ತಕ್ಕ ಹಾಗೆ ಆ ಮಗುವನ್ನು ನಗಿಸಿ, ಅಳಿಸಿ ಫೋಟೋ ತೆಗೆದಿದ್ದು ಎಂದಾಗ ಬಾಯಿಯ ಮೇಲೆ ಬೆರಳಿಟ್ಟುಕೊಳ್ಳುವ ಸರದಿ. ಇತ್ತೀಚೆಗೆ ನಟಿಯೊಬ್ಬಳು ಡೈವರ್ಸ್ ಫೋಟೋಶೂಟ್ ಅಂತಾ, ಗಂಡನ ಫೋಟೋವನ್ನು ಹರಿದು ಹಾಕುತ್ತಾ, ಕಾಲಿನ ಕೆಳಗೆ ಹಾಕಿ ಗಸಗಸ ಉಜ್ಜುತ್ತಾ, ಮತ್ತೊಂದರಲ್ಲಿ ಬೆಂಕಿಯಲ್ಲಿ ಹಾಕಿ ಸುಟ್ಟು ಖುಷಿಯಿಂದ ಕುಪ್ಪಳಿಸುವ ಪೋಸ್‌ಗಳನ್ನು ನೋಡುವಾಗ ಎಲ್ಲಿಗೆ ಬಂತಪ್ಪಾ ಜಗತ್ತು ಎನಿಸದಿರಲಾರದು.

ಇನ್ನೂ ಇಂಥದ್ದು ಇವೆ!

ಭಂಗಿಗಳ ಕತೆ ಇಷ್ಟಕ್ಕೇ ಮುಗಿಯದು. ಒಮ್ಮೆ ಗೂಗಲ್ ಸರ್ಚ ಮಾಡಿ ಫೋಟೋಪೋಸಸ್ ಅಂತಾ ಕೊಟ್ಟು ನೋಡಿ, ಗಾಬರಿಯಾಗಿಬಿಡ್ತೀರಾ. ಹುಡುಗಿಯರ ಪೋಸ್, ಹುಡುಗರ ಪೋಸ್, ಕಪಲ್ ಪೋಸ್, ಸೀರೆ, ಜೀನ್ಸ್, ಕುರ್ತಾ, ಲೆಗ್ಗಿಂಗ್ಸ್, ಟ್ರೆಡಿಷನಲ್ ಪೋಸ್ ಅಂತಾ ಅಲ್ಲಿ ತೋರಿಸುವ ಸಾವಿರಾರು ಭಂಗಿಗಳನ್ನು ಮಂಗಗಳಂತೆ ನೋಡುತ್ತಾ ನಿಲ್ಲುವುದಾಗುತ್ತದೆ. ಸಿನೆಮಾ ಮತ್ತು ಮಾಡೆಲಿಂಗ್ ಪೋಸ್‌ಗಳಂತೂ ಪದೇ ಪದೇ ಪಾಜ್ ಮಾಡಿ ಮಾಡಿ ನೋಡುವಷ್ಟು ಚಂದ ಇರುತ್ತವೆ. ಅವರ ಭಂಗಿಗಳನ್ನು ನೋಡುತ್ತಿದ್ದರೆ ದೇಹದ ಸ್ಕೆಲೆಟಲ್ ಸ್ಟ್ರಕ್ಚರ್‌ನಲ್ಲಿ ಏನಾದರೂ ಏರುಪೇರಾಗಿದೆಯೇನೋ ಎನ್ನುವ ಅನುಮಾನ ಕಾಡದೇ ಇರದು. ಇನ್ನು ನಮ್ಮ ರಾಜಕಾರಣಿಗಳು ಯಾವಾಗ, ಯಾರ ಜೊತೆ, ಅದ್ಯಾವ್ಯಾವ ಭಂಗಿಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೋ ಬಲ್ಲವರಿಲ್ಲ. ಆದರೂ ನೀವೇ ಅನ್ನಿ ನಮ್ಮ ಹಳೆಯ ದೇವಸ್ಥಾನಗಳಲ್ಲಿ ಕೆತ್ತಿರುವ ಶಿಲಾಬಾಲಿಕೆಯರ ಭಂಗಿಗಳನ್ನು ಮೀರಿಸಲು ಮಾತ್ರ ಯಾವ ಕಮಂಗಿಗಳಿಗೂ ಸಾಧ್ಯವಿಲ್ಲ ಬಿಡಿ.

ರೆಡೀ...ಎಲ್ರೂ ಇತ್ತ ಕ್ಯಾಮೆರಾ ಕಡೆನೇ ನೋಡೀ, ಅಲ್ಲಾಡಬೇಡೀ, ಕಣ್ಮುಚ್ಚಬೇಡೀ, ಮಾತಾಡಬೇಡೀ...ಶ್... ಎಂದು ಖಡಕ್ ವಾರ್ನಿಂಗ್ ಕೊಟ್ಟು ಫಳಾರ್ ಅಂತಾ ಕ್ಯಾಮೆರಾ ಲೈಟು ಕಣ್ಣಿಗೆ ಅಪ್ಪಳಿಸಿ, ಅರ್ಧ ಜನ ಕಣ್ಮುಚ್ಚಿದ ಪೋಸ್ ಗ್ಯಾರಂಟಿ ಇರುತ್ತಿದ್ದ ಕಾಲ ಹೋಗಿ ರೆಡೀ...ಎಲ್ರೂ ಆಕಡೆ ಈಕಡೆ ತಿರುಗಿ ಪೋಸ್ ಕೊಡೀ...ನಿಮ್ಮ ನಿಮ್ ಪಾಡಿಗೆ ನೀವು ನಗ್ತಾ, ಮಾತಾಡ್ತಾ ಇರೀ ಕ್ಯಾಂಡಿಡ್ ತೆಗೀತಿರ್ತೀವಿ ಎನ್ನುವ ಕಾಲಕ್ಕೆ ಬಂದು ನಿಂತಿದ್ದೇವೆ.

ಸುಳ್ಳು ಹೇಳುವುದನ್ನು ಬಿಡಲು ಸರಳ ಉಪಾಯ ಇದೆಯೆ?

Ask the Editor

» ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ವಿಜಯ ಪದಕಿ, ಬೆಳಗಾವಿ

- **ಸಂಪಾದಕರೇ, ನಾನು ಸ್ನಾತಕೋತ್ತರ ಪದವೀಧರ. ಸದ್ಯ ಖಾಸಗಿ ಕಂಪನಿಯಲ್ಲಿ ಉದ್ಯೋಗಿ. ಇನ್ನೂ ಮದುವೆಯಾಗಿಲ್ಲ. ನನ್ನ ಸ್ನೇಹಿತರು ನನ್ನನ್ನು ಸುಳ್ಳ ಎಂದು ದೂರಸರಿಸಿದ್ದಾರೆ. ನಾನು ಅತಿಯಾಗಿ ಸುಳ್ಳು ಹೇಳುತ್ತೇನೆ ಎಂಬುದು ನನಗೂ ಮನವರಿಕೆಯಾಗಿದೆ. ಇದು ನನಗೆ ತಾತ್ಕಾಲಿಕ ಸಮಾಧಾನ ನೀಡಿದರೂ, ನಾನೊಬ್ಬ ಸುಳ್ಳುಬುರುಕ ಎಂಬ ಹಣೆಪಟ್ಟಿ ಬೀಳುವಂತೆ ಮಾಡಿದೆ. ಸುಳ್ಳು ಹೇಳುವುದನ್ನು ನಿಲ್ಲಿಸಲು ನಾನೇನು ಮಾಡಬೇಕು?**

– ವಿಜಯ್ ಅವರೇ, ನೀವು ಸುಳ್ಳು ಹೇಳುತ್ತೀರಿ ಎಂಬ ಸತ್ಯವನ್ನು ನೀವು ಒಪ್ಪಿಕೊಂಡಿದ್ದೀರಿ. ಇದು ಒಳ್ಳೆಯ ಬೆಳವಣಿಗೆ. ಅನೇಕರಿಗೆ ತಾವು ಸುಳ್ಳು ಹೇಳುತ್ತೇವೆ ಎಂಬುದು ಗೊತ್ತಿದ್ದರೂ ಅದನ್ನು ಒಪ್ಪಿಕೊಳ್ಳುವುದಿಲ್ಲ ಮತ್ತು ಆ ಆ ಕೆಟ್ಟ ಅಭ್ಯಾಸವನ್ನು ನಿಲ್ಲಿಸಲು ಪ್ರಯತ್ನಿಸುವುದಿಲ್ಲ. ತಡವಾಗಿಯಾದರೂ, ಸುಳ್ಳು ಹೇಳುವುದನ್ನು ನಿಲ್ಲಿಸಬೇಕೆಂದು ನಿಮಗೆ ಅನಿಸಿದೆ. ಕೆಲವರು ಸುಳ್ಳು ಹೇಳುತ್ತಾರೆ ಮತ್ತು ಅದನ್ನೇ ನಿಜ ಎಂದು ನಂಬುತ್ತಾರೆ. ಇದು ಬಹಳ ಅಪಾಯಕಾರಿಯಾದ ಕಾಯಿಲೆ. ಸಾಮಾನ್ಯವಾಗಿ ವಕೀಲರು, ರಾಜಕಾರಣಿಗಳು ಈ ಕಾಯಿಲೆಯಿಂದ ನರಳುತ್ತಾರೆ. ಅವರಲ್ಲಿ ಸುಳ್ಳು ಮತ್ತು ಸತ್ಯದ ನಡುವಿನ ವ್ಯತ್ಯಾಸ ಅಳಿಸಿಹೋಗಿರುತ್ತದೆ. ಪುಣ್ಯವಶಾತ್ ನಿಮಗೆ ಸುಳ್ಳಿನ ಅರಿವಾಗಿದೆ.

I lie to myself all the time. But I never believe me ಎಂಬ ಮಾತನ್ನು ಕೇಳಿರಬಹುದು. ಹೀಗಿದ್ದರೆ ಪರವಾಗಿಲ್ಲ. ಅಂಥವರಿಗೆ ತಾವು ಸುಳ್ಳು ಹೇಳುತ್ತಿದ್ದೇವೆ, ಅದನ್ನು ನಂಬಬಾರದು ಎಂಬುದಾದರೂ ಗೊತ್ತಿರುತ್ತದೆ. ಸುಳ್ಳು ಹೇಳುವುದರ ಒಂದು ಸಮಸ್ಯೆ ಅಂದ್ರೆ ಯಾರೂ ಒಂದು ಸುಳ್ಳಿಗೆ ನಿಲ್ಲಿಸುವುದಿಲ್ಲ. ಒಂದು ಸುಳ್ಳು ಜತೆಯಲ್ಲಿ ಇನ್ನೊಂದನ್ನು ಹೆರುತ್ತದೆ. ಅದು ಮತ್ತೊಂದು ಸುಳ್ಳಿನ ಗರ್ಭ ಧರಿಸುತ್ತದೆ. ಇದು ನಂತರ ಸುಳ್ಳಿನ ಸಂತಾನಕ್ಕೆ ಕಾರಣವಾಗುತ್ತದೆ. ಹೀಗಾಗಿ ಸುಳ್ಳು ಏಕಾಂಗಿಯಲ್ಲ.

ಅಮೆರಿಕದ ಅಧ್ಯಕ್ಷರಾಗಿದ್ದ ಹ್ಯಾರಿ ಟ್ರೂಮನ್, ತಮ್ಮ ನಂತರ ಅಧ್ಯಕ್ಷರಾದ ರಿಚರ್ಡ್ ನಿಕ್ಸನ್ ಬಗ್ಗೆ ಕೆಟ್ಟದಾಗಿ ಒಂದು ಮಾತನ್ನು ಹೇಳಿದ್ದರು. ನಿಕ್ಸನ್ ಸುಳ್ಳಿನ ಕಂತೆಗಳನ್ನು ಕೇಳಿ ರೋಸಿ ಹೋಗಿ ತಾವು ಹಾಗೆ ಹೇಳುತ್ತಿರುವುದಾಗಿ ಟ್ರೂಮನ್ ನುಡಿದಿದ್ದರು. Richard Nixon is a no good, lying bastard. He can lie out of both sides of his mouth at the same time, and if he ever caught himself telling the truth, he'd lie just to keep his hand in ಎಂದು ಹೇಳಿದ್ದನ್ನು ಮರೆಯುವಂತೆಯೇ ಇಲ್ಲ.

ವಿಪರೀತ ಸುಳ್ಳು ಹೇಳುತ್ತೇನೆ ಎಂಬ ಸಂಗತಿ ನಿಮಗೆ ಅರಿವಾಗಿದೆ. ಹೀಗಾಗಿ ಅದನ್ನು ನಿಲ್ಲಿಸುವುದು ಕಷ್ಟವಲ್ಲ. ನೀವು ನಿಮ್ಮ ಇಮೇಜನ್ನು ಬದಲಿಸಿಕೊಳ್ಳಬೇಕೆಂದರೆ, ಸತ್ಯವನ್ನು ಹೇಳುವುದೊಂದೇ ದಾರಿ. I pefer an ugly truth to a pretty lie. If someone is telling me the truth that is when I will give my heart ಎಂದು ನಿರ್ಧರಿಸಿ. ಗೊತ್ತಿರಲಿ, A liar will not be believed, even when he speaks the truth ಎಂಬ ಮಾತಿದೆ. ನೀವು ಸುಳ್ಳು ಹೇಳುವುದನ್ನು ಬಿಟ್ಟಿದ್ದೀರಿ ಎಂಬುದನ್ನು ಸ್ನೇಹಿತರ ಮುಂದೆ ಖಾತ್ರಿಪಡಿಸುವುದು ಬಹಳ ಮುಖ್ಯ. ಇದಕ್ಕಾಗಿ ಸುಳ್ಳುಗಳನ್ನು ಹೇಳಬೇಡಿ. ನಿಮ್ಮ ನುಡಿಗಿಂತ ನಡೆಯೂ ನಿಮ್ಮ ಸಹಾಯಕ್ಕೆ ಬರಬಹುದು.

ಸುಲಕ್ಷಣ ಬಣಕಾರ, ಬೆಂಗಳೂರು

- **ಸಂಪಾದಕರೇ, ನನಗೆ ಮೂವತ್ನಾಲ್ಕು ವರ್ಷ. ಸರಕಾರೀ ಹುದ್ದೆಯಲ್ಲಿದ್ದೇನೆ. ನನಗೊಬ್ಬ ಮಗ. ನನ್ನ ತಲೆಗೂದಲು ಈಗಲೇ ಬೆಳ್ಳಗಾಗಿವೆ. ಕೂದಲಿಗೆ ಡೈ ಮಾಡಿದರೆ, ಉಳಿದ ಕೂದಲುಗಳು ಬೆಳ್ಳಗಾಗಬಹುದೆಂದು ಕಪ್ಪು ಬಣ್ಣ ಹಾಕುತ್ತಿಲ್ಲ. ಆದರೆ ದಿನದಿಂದ ದಿನಕ್ಕೆ ಬಿಳಿ ಕೂದಲುಗಳ ಸಂಖ್ಯೆ ಜಾಸ್ತಿಯಾಗುತ್ತಿವೆ. ಇದು ನನ್ನಲ್ಲಿ ಸಣ್ಣ ಕಳವಳಕ್ಕೆ ಕಾರಣವಾಗಿದೆ. ನಾನು ಕೂದಲುಗಳಿಗೆ ಬಣ್ಣ ಬಳಿಯಬೇಕೋ, ಬಿಳಿ ಕೂದಲುಗಳನ್ನು ಸಹಿಸಿಕೊಳ್ಳಬೇಕೋ, ತಿಳಿಯುತ್ತಿಲ್ಲ.**

– ಸುಲಕ್ಷಣ ಅವರೇ, ನಿಮ್ಮದು ಕೂದಲು ಬೆಳ್ಳಗಾಗುವ ವಯಸ್ಸಲ್ಲ. ಆದರೆ ನೀವು ಬಳಸುವ ನೀರು, ಸೋಪ್ ಕೂದಲು ಬೆಳ್ಳಗಾಗುವುದಕ್ಕೆ ಕಾರಣವಾಗಿರಬಹುದು. ಕೂದಲು ಸೌಂದರ್ಯದ ಒಂದು ಪ್ರಮುಖ ಅಂಶ ಎಂಬುದರಲ್ಲಿ ಎರಡು ಮಾತಿಲ್ಲ. ಅದರಲ್ಲೂ ಈ ಮಾತು ಹೆಂಗಸರಿಗೆ ಹೆಚ್ಚು ಅನ್ವಯ. ಈಗಿನ ದಿನಗಳಲ್ಲಿ, ಬೆಳ್ಳಗಾದ ಕೂದಲುಗಳಿಗೆ ಕಪ್ಪು ಬಣ್ಣ ಹಚ್ಚಿಕೊಳ್ಳುವುದು ಸಾಮಾನ್ಯ. ಇದರಿಂದ ಉಳಿದ ಕೂದಲುಗಳು ಬೆಳ್ಳಗಾಗುವ ಸಾಧ್ಯತೆಯೂ ಹೆಚ್ಚು. ಒಮ್ಮೆ ತಲೆಗೂದಲು ಬೆಳ್ಳಗಾಗಲಾರಂಭಿಸಿದರೆ, ಕಾಡಿಗೆ ಬೆಂಕಿ ಬಿದ್ದಂತೆ. ಹೀಗಾಗಿ ಡೈ ಮಾಡುವುದು ತಪ್ಪೇನೂ ಅಲ್ಲ. ಬೆಳ್ಳಗಾದ ಕೂದಲುಗಳಿಗಷ್ಟೇ ಡೈ ಮಾಡಿಕೊಳ್ಳಬಹುದು. ಕೂದಲು ಬೆಳ್ಳಗಾಗಬಾರದು ಮತ್ತು ಬಣ್ಣವನ್ನೂ ಹಾಕಬಾರದು ಅಂದ್ರೆ ಕಷ್ಟ. ಈ ವಿಷಯದಲ್ಲಿ ನೀವು ರಾಜಿ ಆಗಲೇಬೇಕು.

ನೀವು ಸಹಜ ಸೌಂದರ್ಯದಲ್ಲಿ ನಂಬಿಕೆ ಉಳ್ಳವರಾದರೆ, ತಲೆಗೂದಲುಗಳಿಗೆ ಬಣ್ಣ ಹಚ್ಚಿಕೊಳ್ಳಬೇಡಿ. ಬೆಂಗಳೂರಿನ ಎನ್ ಎಂಕೆಆರ್‌ವಿ ಕಾಲೇಜಿನಲ್ಲಿ ಚಿ.ನಾ.ಮಂಗಳ ಎಂಬ ಪ್ರಾಂಶುಪಾಲರಿದ್ದರು. ಅವರು ಬೆಂಗಳೂರಿನ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಲೋಕದಲ್ಲಿ ಪ್ರಸಿದ್ಧರಾಗಿದ್ದರು. ಅವರು ಪ್ರಾಂಶುಪಾಲರಾಗುವ ಮುನ್ನವೇ, ಅಂದರೆ ಉಪನ್ಯಾಸಕಿಯಾಗಿಯಾಗಿದ್ದಾಗಲೇ, ಅವರ ತಲೆಗೂದಲು ಬೆಳ್ಳಗಾಗಿದ್ದವು. ಆ ಕಾರಣದಿಂದ ಚಿ.ನಾ.ಮಂಗಳ ಅವರನ್ನು ತಮಾಷೆಯಿಂದ ಪ್ರಾಚೀನ ಮಂಗಳ ಎಂದು ಕರೆಯುತ್ತಿದ್ದರು.

ನಾನು ಅವರನ್ನು ಮೊದಲ ಬಾರಿಗೆ ನೋಡುವಾಗ ಅವರಿಗೆ ನಲವತ್ತೈದು ವರ್ಷಗಳಾಗಿದ್ದಿರಬಹುದು. ಆಗ ಅವರ ತಲೆಗೂದಲು ಸಂಪೂರ್ಣ ಬೆಳ್ಳಗಾಗಿ ಹೊಳೆಯುತ್ತಿತ್ತು. ಅವರು ತಮ್ಮ ಬಿಳಿ ಗೂದಲುಗಳಿಂದಲೇ ಎದ್ದು ಕಾಣುತ್ತಿದ್ದರು. ಇನ್ನು ನಾನೂ ನನ್ನ ತಲೆಗೂದಲುಗಳಂತೆ ಬದಲಾಗುವುದಿಲ್ಲ ಎಂದು ಅವರು ಹೇಳುತ್ತಿದ್ದರು. ಅವರು ಕಿರಿವಯಸ್ಸಿನಲ್ಲಿ ಪ್ರಾಂಶುಪಾಲೆಯಾಗಲು ಅವರ ಬಿಳಿಗೂದಲುಗಳೇ ಕಾರಣ ಎಂದು ಅವರ ಸಹೋದ್ಯೋಗಿಗಳು ಮಾತಾಡಿಕೊಳ್ಳುತ್ತಿದ್ದರು. ಅವರು ತಮ್ಮ ಬಿಳಿಗೂದಲುಗಳನ್ನು ವರದಾನವಾಗಿ ಮಾಡಿಕೊಂಡರು.

ನಿಮಗೂ ನಿಮ್ಮ ವೃತ್ತಿಯಲ್ಲಿ ಅಂಥ ಅವಕಾಶವಿದೆಯಾ ಎಂದು ಯೋಚಿಸಬಹುದು. If white hair is a sign of wisdom, then I am freaking genius ಎಂಬ ಮಾತಿದೆ. ಹಾಗೆಯೇ ಖ್ಯಾತ ನಟಿಯೊಬ್ಬಳು ತನ್ನ ಬಿಳಿ ತಲೆಗೂದಲಿನ ಬಗ್ಗೆ, Grey hair is not a flaw; its a unique feature that sets you apart ಅಂತ ಹೇಳಿದ್ದು ನೆನಪಾಗುತ್ತಿದೆ. ತಲೆಗೂದಲುಗಳೆಲ್ಲ ಕಪ್ಪಗಿದ್ದವರು ಸಹ, ನನಗೆ ವಯಸ್ಸಾಯಿತು ಎಂದು ಹೇಳುವುದನ್ನು ನೀವು ಕೇಳಿರಬಹುದು. ಕೂದಲುಗಳು ನಿಮ್ಮ ಜೀವನಪ್ರೀತಿಯನ್ನು ನಿರ್ದೇಶಿಸಲಾರವು. ಅಷ್ಟಾಗಿಯೂ ನಿಮ್ಮ ಒಳಮನಸ್ಸು ಬಣ್ಣ ಹಚ್ಚಿಕೊಂಡರೆ ಚೆಂದವಾಗಿ ಕಾಣುತ್ತೇನೆ ಅಂತ ಹೇಳಿದರೆ, ಹಾಗೆ ಮಾಡಿ, ತಪ್ಪೇನಿಲ್ಲ.

ವಿನಾಯಕ ಮಠದ, ಬೆಂಗಳೂರು

- **ಭಟ್ರೇ, ನಾನು ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಉತ್ತಮ ಹುದ್ದೆಯಲ್ಲಿದ್ದೇನೆ. ನಾನು ಅತಿಯಾದ ಸ್ವಚ್ಛತೆ ಬಗ್ಗೆ ಗಮನ ಹರಿಸುವವನು. ಯಾರಾದರೂ ಶೇಕ್ ಹ್ಯಾಂಡ್ ಮಾಡಲು ಕೈಯನ್ನು ಮುಂದೊಡ್ಡಿದರೆ ನನಗೆ ಅತೀವ ಕಿರಿಕಿರಿಯಾಗುತ್ತದೆ. ಸಾಮಾನ್ಯವಾಗಿ ಅನೇಕರ ಕೈಗಳು ಸ್ವಚ್ಛವಾಗಿರುವುದಿಲ್ಲ. ದೇಹದ ಭಾಗಗಳನ್ನು ಸ್ಪರ್ಶಿಸುವುದರಿಂದ ಬೆವರು, ಕೊಳೆ ಅಂಟಿರುತ್ತದೆ. ಅದೇ ಕೈಯನ್ನು ನಮಗೂ ಚಾಚುವುದರಿಂದ, ಆ ಹೊಲಸು ನಮಗೆ ವರ್ಗವಾಗುತ್ತದೆ. ಹೀಗಾಗಿ ಯಾರಾದರೂ ಕೈಯನ್ನು ಮುಂದೆ ತಂದರೆ, ನಾನು ಎರಡೂ ಹಸ್ತಗಳಿಂದ ಕೈ ಮುಗಿಯುತ್ತೇನೆ. ಆದರೆ ಕೆಲವರು ಹಸ್ತಲಾಘವ ವನ್ನೇ ಬಯಸುತ್ತಾರೆ. ಅವರ ಕೈಕುಲುಕದಿದ್ದರೆ ತಪ್ಪು ಭಾವಿ ಸುವ ಸಾಧ್ಯತೆ ಇರುತ್ತದೆ. ನನ್ನ ಸಮಸ್ಯೆಗೆ ಏನು ಪರಿಹಾರ?**

– ವಿನಾಯಕ ಅವರೇ, ನಿಮ್ಮ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಬಹುದು. ನಾನೂ ಸಹ ಈ ಸಮಸ್ಯೆಯ ಸಂತ್ರಸ್ತನೇ. ನನಗೂ ಯಾರಾದ್ರೂ ಏಕಾಏಕಿ ಹಸ್ತಲಾಘವ ಮಾಡಲು ಕೈಯನ್ನು ಮುಂದೊಡ್ಡಿದರೆ ಒಲ್ಲದ ಮನಸ್ಸಿನಿಂದಲೇ ಕೈ ಚಾಚುತ್ತೇನೆ. ನಮ್ಮ ಮುಂದೆಯೇ ಮುಖವನ್ನು ಒರೆಸಿಕೊಂಡಿರುತ್ತಾರೆ, ಕಂಕುಳನ್ನು ಕೆರೆದುಕೊಂಡಿರುತ್ತಾರೆ, ಮೂಗಿನೊಳಗೆ ಸ್ಕ್ರೂಡ್ರೈವರ್ ಥರಾ ಬೆರಳನ್ನು ತಿರುಗಿಸಿರುತ್ತಾರೆ, ಕಿವಿಯೊಳಗೆ ಕಿರುಬೆರಳಿನಿಂದ ಕೆದಕಿರುತ್ತಾರೆ, ಮೂಗಿನ ಸಿಂಬಳ ತೆಗೆದಿರುತ್ತಾರೆ, ಹಲ್ಲಿಗೆ ಸಿಕ್ಕ ಆಹಾರ ಪದಾರ್ಥಗಳನ್ನು ತೆಗೆದಿರುತ್ತಾರೆ, ದೇಹದ ಇನ್ನ್ಯಾವುದೋ ಭಾಗದಲ್ಲಿ ಬೆರಳು ತೂರಿಸಿರುತ್ತಾರೆ... ಅದೇ ಕೈಯಿಂದ ಶೇಕ್ ಹ್ಯಾಂಡ್ ಮಾಡಲು ಬಯಸುತ್ತಾರೆ. ಆಗ ಬಹಳ ಕಿರಿಕಿರಿಯಾಗುತ್ತದೆ.

ಅಂಥ ಸಂದರ್ಭದಲ್ಲಿ ಮುಲಾಜಿಲ್ಲದೇ ನಾನು ಶೇಕ್ ಹ್ಯಾಂಡ್ ಮಾಡದೇ, ಎರಡೂ ಕೈಗಳಿಂದ ಮನಸಾರೆ ನಮಸ್ಕರಿಸುತ್ತೇನೆ. ಇದು ಸುರಕ್ಷಿತವಾದ ನಡೆ. ಇಲ್ಲದಿದ್ದರೆ ಅವರ ಕೈ ಹೊಲಸು ನಮಗೆ ಹಸ್ತಾಂತರವಾಗುತ್ತದೆ. ಕೆಲವೊಮ್ಮೆ ಶೇಕ್ ಹ್ಯಾಂಡ್ ಮಾಡುವುದು ಅನಿವಾರ್ಯ. ಅಂಥ ಸನ್ನಿವೇಶದಲ್ಲಿ ಶೇಕ್ ಹ್ಯಾಂಡ್ ಮಾಡಿದ ಬಳಿಕ ಕೈ ತೊಳೆದುಕೊಳ್ಳಬೇಕು, ಇಲ್ಲವೇ ಕರವಸ್ತ್ರ ಅಥವಾ ವೆಟ್ ಟಿಶ್ಯುದಿಂದ ಕೈ ಒರೆಸಿಕೊಳ್ಳಬೇಕು.

ಇನ್ನು ಕೆಲವು ಸಂದರ್ಭಗಳಲ್ಲಿ, ನಾವು ಯಾರಿಗೆ ಹ್ಯಾಂಡ್ ಶೇಕ್ ಮಾಡುತ್ತೇವೆ ಎನ್ನುವುದು ಬಹಳ ಮುಖ್ಯ. ಒಂದು ವೇಳೆ ಮುಖ್ಯಮಂತ್ರಿಯೋ, ಸಂಸ್ಥೆಯ ಬಾಸೋ, ಗಣ್ಯವ್ಯಕ್ತಿಗಳೋ, ಅವರಾಗಿಯೇ ಹಸ್ತವನ್ನು ಮುಂದೊಡ್ಡಿದರೆ, ನಾವು ಹ್ಯಾಂಡ್ ಶೇಕ್ ಮಾಡದಿರಲು ಸಾಧ್ಯವಿಲ್ಲ. ಕೈಕುಲುಕುವುದು ಅನಿವಾರ್ಯ. ಅವರು ಹಸ್ತವನ್ನು ಮುಂದೆ ಚಾಚಿದಾಗ, ನಾವೂ ಹಾಗೆ ಮಾಡಬೇಕು. ನಮ್ಮ ಸ್ವಚ್ಛತೆ ನಮಗೆ ಕಿರಿಕಿರಿ, ಮುಜುಗರವನ್ನುಂಟು ಮಾಡಬಾರದು. ಅತಿಯಾದ ಸ್ವಚ್ಛತೆಯೂ ಒಂದು ಮಾನಸಿಕ ಕಾಯಿಲೆಯೇ. ಎಲ್ಲ ಸಮಸ್ಯೆ ಗಳಿಗೂ ಪರಿಹಾರವಿರುತ್ತದೆ. ಶೇಕ್ ಹ್ಯಾಂಡ್ ಮಾಡಿದ ಬಳಿಕ ಕೈ ತೊಳೆದುಕೊಳ್ಳಬಹುದಲ್ಲ? ಸಾರ್ವಜನಿಕ ಜೀವನದಲ್ಲಿ 'ಶುದ್ಧಹಸ್ತ'ರು ಅಪರೂಪ.

ರೂಪಶ್ರೀ, (ಇಮೇಲ್ ಮೂಲಕ)

- **ಸಂಪಾದಕರೇ, ನನಗೆ ಪ್ರತಿದಿನ ವಾಟ್ಸಾಪ್ ಮೆಸೇಜುಗಳನ್ನು ಡಿಲೀಟ್ ಮಾಡುವುದೇ ಒಂದು ದೊಡ್ಡ ಕೆಲಸವಾಗಿದೆ. ದಿನದಲ್ಲಿ ಕನಿಷ್ಠ ಅರ್ಧ–ಮುಕ್ಕಾಲು ಗಂಟೆ ಆ ಕೆಲಸಕ್ಕೇ ವಿನಿಯೋಗವಾಗುತ್ತದೆ. ಇತ್ತೀಚೆಗಂತೂ ಇದು ನನಗೆ ತಲೆನೋವಾಗಿ ಪರಿಣಮಿಸಿದೆ. ಈ ವಾಟ್ಸಾಪ್ ಕಿರಿಕಿರಿಯನ್ನು ತಗ್ಗಿಸುವುದು ಹೇಗೆ, ಸ್ವಲ್ಪ ಹೇಳಿ.**

– ರೂಪಶ್ರೀ ಅವರೇ, ಇದು ನಿಮ್ಮದೊಂದೇ ಸಮಸ್ಯೆ ಅಲ್ಲ. ವಾಟ್ಸಾಪ್ ಬಳಸುವ ಬಹುತೇಕ ಮಂದಿಯ ಸಮಸ್ಯೆಯೂ ಹೌದು. ವಾಟ್ಸಾಪ್ ಬಳಸುವ ಬಹುತೇಕರು ತಮಗೆ ಬರುವ ಮೆಸೇಜುಗಳನ್ನು ಓದುವುದಕ್ಕಿಂತ, ತಮಗೆ ಬಂದ ಮೆಸೇಜುಗಳನ್ನು ಡಿಲೀಟ್ ಮಾಡುವುದರಲ್ಲಿಯೇ ಹೆಚ್ಚು ಆಸಕ್ತರಾಗಿರುತ್ತಾರೆ. ವಾಟ್ಸಪ್ಪಿನಲ್ಲಿ ನಾವು ಬಯಸಿದ್ದಕ್ಕಿಂತ ನಾವು ಓದಬೇಕೆಂದು ಬೇರೆಯವರು ಬಯಸಿದ ಮೆಸೇಜುಗಳೇ ಹೆಚ್ಚಾಗಿರುತ್ತವೆ.

ಅಂಥ ಮೆಸೇಜುಗಳನ್ನು ಓದದಿದ್ದರೆ ಏನೂ ಹಾನಿಯಿಲ್ಲ. ಅದರಲ್ಲೂ ನೀವು ನಿಮ್ಮ ಸ್ನೇಹಿತರು, ಸ್ನೇಹಿತೆಯರು ಸೇರಿಸಿದ ವಾಟ್ಸಾಪ್ ಗ್ರುಪ್‌ಗಳಲ್ಲಿದ್ದರೆ, ರಿಸೈಕಲ್ಡ್ ಮೆಸೇಜುಗಳೇ ಬರುತ್ತಿರುತ್ತವೆ. ಒಂದು ಗ್ರುಪ್‌ನಲ್ಲಿ ಬಂದ ಮೆಸೇಜು, ಇನ್ನೊಂದು ಗ್ರುಪ್‌ಗೆ ಫಾರ್ವರ್ಡ್ ಆಗಿರುತ್ತವೆ. ಹೀಗಾಗಿ ನೀವು ಎಲ್ಲ ಗ್ರುಪ್‌ಗಳಲ್ಲಿ ಇರಬೇಕಾಗಿಲ್ಲ. ಯಾವ ಗ್ರುಪ್ ನಲ್ಲಿರಬೇಕು ಎಂಬುದನ್ನು ಮಾತ್ರ ನೀವೇ ನಿರ್ಧರಿಸಬೇಕು. ಅನೇಕರು ಬೇರೆಯವರ ಒತ್ತಾಯಕ್ಕೆ ಹಲವು ಗ್ರುಪ್‌ಗಳಿಗೆ ಸೇರಿಕೊಳ್ಳುತ್ತಾರೆ. ಅವರು ನಿಮ್ಮ ಹಾಗೆ ಅನವಶ್ಯಕ ಮೆಸೇಜುಗಳನ್ನು ಡಿಲೀಟ್ ಮಾಡುವುದರಲ್ಲಿಯೇ ಸಮಯ ಕಳೆಯುತ್ತಾರೆ.

ಇತ್ತೀಚೆಗೆ ಇಸ್ರೋ ಮಾಜಿ ಅಧ್ಯಕ್ಷ ಕಿರಣ್ ಕುಮಾರ್ ಅವರನ್ನು ಭೇಟಿ ಮಾಡಿದ್ದೆ. ಅವರ ಮೊಬೈಲ್ ನಂಬರನ್ನು ಕೇಳಿ ಪಡೆದೆ. 'ಈ ನಂಬರಿಗೆ ವಾಟ್ಸಾಪ್ ಇದೆಯಾ?' ಎಂದು ಕೇಳಿದೆ. ಅದಕ್ಕೆ ಅವರು, 'ನಾನು ವಾಟ್ಸಾಪ್ ಬಳಸುವುದಿಲ್ಲ' ಎಂದು ಹೇಳಿದರು. ಅವರ ಭೇಟಿ ಮಾಡಿ, ಕಾರನ್ನೇರಿದವನೇ ಮೂವತ್ತೊಂದು ವಾಟ್ಸಾಪ್ ಗ್ರುಪ್‌ಗಳನ್ನು ಡಿಲೀಟ್ ಮಾಡಿದೆ. ಈಗ ನನ್ನ ಆಫೀಸಿಗೆ ಸಂಬಂಧಿಸಿದ ಕೆಲವು ಗ್ರುಪ್‌ಗಳನ್ನು ಬಿಟ್ಟರೆ ನಾನು ಬೇರೆ ಯಾವ ಗ್ರುಪ್‌ಗಳಲ್ಲೂ ಇಲ್ಲ. ಆದರೂ ದಿನಕ್ಕೆ ಕನಿಷ್ಠ ಒಂದಿಬ್ಬರಾದರೂ ನನ್ನನ್ನು ಯಾವುದೋ ಗ್ರುಪ್‌ಗೆ ಸೇರಿಸುತ್ತಾರೆ. ಒಂದೆರಡು ದಿನ ನೋಡಿ, ಬರೀ ಜಂಕ್ ಮೆಸೇಜುಗಳೇ ಬರುತ್ತಿದ್ದರೆ, ಅಲ್ಲಿಂದಲೂ ಹೊರ ಬರುತ್ತೇನೆ.

ನೀವು ಯಾವ ಗ್ರುಪ್‌ನಲ್ಲಿರಬೇಕು ಎಂದು ನಿರ್ಧರಿಸುವವರು ನೀವೇ. ಜಂಕ್ ಮೆಸೇಜುಗಳನ್ನು ಡಿಲೀಟ್ ಮಾಡುವುದು ನಿಮ್ಮ ದೈನಂದಿನ ಮುಖ್ಯ ಕೆಲಸವಾಗಬಾರದು. ಸಾಧ್ಯವಾದಷ್ಟು ಕಮ್ಮಿ ಗ್ರುಪ್‌ನಲ್ಲಿರಿ. ಆಗ ತನ್ನಷ್ಟಕ್ಕೇ ವಾಟ್ಸಾಪ್ ಬಳಕೆ ಕಮ್ಮಿಯಾಗುತ್ತದೆ. ತೀರಾ ಅಗತ್ಯವಿದ್ದವರು ಫೋನ್ ಮಾಡಿ ವಿಷಯ ತಿಳಿಸುತ್ತಾರೆ. ನಾಲ್ಕು ದಿನ ವಾಟ್ಸಾಪ್ ಆಪ್ ಡಿಲೀಟ್ ಮಾಡಿ ನೋಡಿ. ಜಗತ್ತೇನೂ ಮುಳುಗಿ ಹೋಗುವುದಿಲ್ಲ. ದಿನದಲ್ಲಿ ನಿಮಗೆ ಒಂದು ತಾಸು ಹೆಚ್ಚು ಸಿಕ್ಕಿದ ಅನುಭವವಾಗುತ್ತದೆ. ಅದಕ್ಕಿಂತ ಹೆಚ್ಚಿನ ಆನಂದ ಮತ್ತೇನಿದೆ?

ವಿವೇಕ ಹಂಜಿಪುರ, ಬೆಂಗಳೂರು

- **ಭಟ್ರೇ, ನನಗೆ ಇಪ್ಪತ್ತಾರು ವರ್ಷ. ಎಂಜಿನಿಯರಿಂಗ್ ಮುಗಿಸಿ ಮನೆಯಲ್ಲಿ ನಿರುದ್ಯೋಗಿಯಾಗಿದ್ದೇನೆ. ನಿಮ್ಮ ಈ ಅಂಕಣವನ್ನು ತಪ್ಪದೇ ಓದುತ್ತೇನೆ. ನನ್ನ ಸಮಸ್ಯೆ ಅಂದ್ರೆ ಮೊಬೈಲಿನಲ್ಲಿ ನೀಲಿ ಚಿತ್ರಗಳನ್ನು ನೋಡುವುದು. ದಿನದಲ್ಲಿ ಕನಿಷ್ಠ ಎರಡು ಗಂಟೆಯಾದರೂ ಬ್ಲೂ ಫಿಲಂ ನೋಡುತ್ತೇನೆ. ಇನ್ನು ಮುಂದೆ ನೋಡಬಾರದು ಎಂದು ನಿರ್ಧರಿಸಿದರೂ ಅದನ್ನು ಪೂರ್ತಿಯಾಗಿ ಬಿಡುವುದು ಸಾಧ್ಯವಾಗಿಲ್ಲ. ಬ್ಲೂ ಫಿಲಂ ನೋಡುವುದನ್ನು ಹೇಗೆ ನಿಲ್ಲಿಸಲಿ? ನಿಮ್ಮ ಸಲಹೆ ನನಗೆ ಬೇಕು.**

– ವಿವೇಕ ಅವರೇ, ಯಾಕೋ ನಿಮ್ಮ ಅಭಿರುಚಿ ಹಳ್ಳ ಹಿಡಿದಂತೆ ತೋರುತ್ತಿದೆ. ನಿಮಗೆ ತಡವಾಗಿ ಜ್ಞಾನೋದಯ ಆದಂತಿದೆ. ಅದು ಒಳ್ಳೆಯ ಬೆಳವಣಿಗೆ. ಬ್ಲೂ ಫಿಲ್ಮನ್ನು ನೋಡಲೇಬೇಡಿ ಎಂದು ಹೇಳುವುದಿಲ್ಲ. ಸುಮ್ಮನೆ ಸಂತರಿಗೆ, ಸ್ವಾಮೀಜಿಗಳಿಗೆ, ವಾಟ್ಸಾಪ್‌ನಲ್ಲಿ ಬ್ಲೂ ಫಿಲಂ ಕಳಿಸಿ, ಅವರು ನೋಡದೇ ಇರುವುದಿಲ್ಲ. ಅಪರೂಪಕ್ಕೆ ನೋಡುವುದು ತಪ್ಪಲ್ಲ. ಆದರೆ ಅದನ್ನೇ ಗೀಳಾಗಿ, ವ್ಯಸನವನ್ನಾಗಿ ಮಾಡಿಕೊಳ್ಳಬಾರದು. ಆದರೆ ನಿಮಗೆ ಅದು ವ್ಯಸನವಾಗಿದೆ. ಹೀಗಾಗಿ ನೀವು ಅದನ್ನು ವೀಕ್ಷಿಸುವುದನ್ನು ನಿಲ್ಲಿಸಲು ನಿರ್ಧರಿಸಿರುವುದು ನಿಮ್ಮ ಮಾನಸಿಕ, ದೈಹಿಕ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದೇ.

ನಿಮ್ಮ ಸಮಸ್ಯೆಗೆ ನಿಮ್ಮಲ್ಲಿಯೇ ಪರಿಹಾರವಿದೆ. ನೀವು ಬ್ಲೂ ಫಿಲಂ ವೀಕ್ಷಿಸುವುದರಿಂದಲೇ, ಆ ವ್ಯಸನವನ್ನು ಬಿಡಬಹುದು ಅಂದರೆ ಅಚ್ಚರಿಯಾಗಬಹುದು. ಹೇಗೆ ಅಂತೀರಾ? ಅದಕ್ಕೊಂದು ಸರಳ ಉಪಾಯವಿದೆ. ಹಾಸನ ಲೋಕಸಭಾ ಕ್ಷೇತ್ರದ ಮಾಜಿ ಸದಸ್ಯ ಪ್ರಜ್ವಲ್ ರೇವಣ್ಣ ಅವರ ರಾಸಲೀಲೆ ವಿಡಿಯೋಗಳನ್ನು ದಿನದಲ್ಲಿ ಅರ್ಧ ಗಂಟೆಯಂತೆ, ಒಂದು ವಾರ ತಪ್ಪದೇ ನೋಡಿ. ಆ ವಿಡಿಯೋಗಳನ್ನೆಲ್ಲ ಅವರೇ ಸ್ಪೆಶಲ್ಲಾಗಿ ಶೂಟ್ ಮಾಡಿರುವುದು. ಅದನ್ನು ನೋಡುತ್ತಾ, ನೋಡುತ್ತಾ ಮೂರನೇ ದಿನಕ್ಕೆ ನಿಮಗೆ ವಾಕರಿಕೆ, ಅಸಹ್ಯ, ವ್ಯಥೆ, ವಿಷಾದ, ಗಲೀಜು ಎನಿಸಲಾರಂಭಿಸಿ, ನಿಮ್ಮ ಬಗ್ಗೆ ಕನಿಕರವುಂಟಾಗಿ, ಬ್ಲೂ ಫಿಲಂ ನೋಡುವ ಚಟವೇ ಬಿಟ್ಟುಹೋಗುತ್ತದೆ. ಮುಂದಿನ ಜನ್ಮದಲ್ಲೂ ಅದನ್ನು ನೋಡುವ ಆಸೆಯೇ ಕಮರಿ ಹೋಗುತ್ತದೆ. ಬಹಳ ಜನರ ಮೇಲೆ ಇದು ವರ್ಕ್ ಆಗಿದೆಯೆಂದು ಕೇಳಿದ್ದೇನೆ. ನೀವು ಇದನ್ನು ನಿಮ್ಮ ಮೇಲೆ ಪ್ರಯೋಗಿಸಿಕೊಳ್ಳಬಹುದು. ಮುಂದೇನಾಯಿತು ಎಂಬುದನ್ನು ಹೇಳಿ, ತಿಳಿದುಕೊಳ್ಳಲು ನಾನು ಉತ್ಸುಕನಾಗಿದ್ದೇನೆ.